ಆಜೀವ ಮಧುಸ್ಮೃತಿ

ಪ್ರೊ. ಸಿ. ಮಹಾದೇವಪ್ಪ

Δ:412
35P5M

ಬೆಂಗಳೂರು ಸಂಶೋಧನ ಕೋಟಿ
"ಶಾರದಾ ನಿವಾಸ"
ನಂ. 197. 5ನೇ ಮುಖ್ಯರಸ್ತೆ, ವ್ಯೆಯ್ಯಾಲಿಕಾವಲ್,
ಬೆಂಗಳೂರು-3 ☎ : 080-23368617, 0120-2910304

CC-0. Jangamwadi Math Collection. Digitized by eGangotri

Δ:412 7164
33P5M
Mahadevappa, C
Ajiva madhusmriti

CC-0. Jangamwadi Math Collection. Digitized by eGangotri

3385M

SHRI JAGADGURU VISHWARADHYA JNANAMANDIR
(LIBRARY)
JANGAMAWADIMATH, VARANASI

Please return this volume on or before the date last stamped
Overdue volume will be charged 1/- per day.

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

ಬೆಂಗಳೂರು ಸಂಶೋಧನ ಕೋಟಿ
ಆಜೀವ ಪುರುಷರತ್ನ
ಸುವರ್ಣಸಂಪುಟ

ಐವತ್ತೈದು ವರ್ಷಗಳ ಯಶಸ್ವೀ ಸಾಧನೆಯ
ಉತ್ತುಂಗ
ಸಂಶೋಧನ ಪ್ರಕಟನ ಗ್ರಂಥ

2005

CC-0. Jangamwadi Math Collection. Digitized by eGangotri

ಪ್ರೊ. ಸಿ. ಮಹಾದೇವಪ್ಪ (84)

ಸಂಶೋಧಕ–ಸಂಪಾದಕರು

CC-0. Jangamwadi Math Collection. Digitized by eGangotri

ಆಜೀವ ಮಧುಸ್ಮೃತಿ

ಪ್ರೊ. ಸಿ. ಮಹಾದೇವಪ್ಪ

ಬೆಂಗಳೂರು ಸಂಶೋಧನ ಕೋಟಿ
ನಂ.197, 5ನೆಯ ಮುಖ್ಯರಸ್ತೆ, ವೈಯ್ಯಾಲಿಕಾವಲ್
ಬೆಂಗಳೂರು 560 003

Ph.

080 23368617 / 0120 2910304

CC-0. Jangamwadi Math Collection. Digitized by eGangotri

Δ: 412
33P5M

ÁJÍVA MADHUSMRITI --ಆಜೀವ ಮಧುಸ್ಮೃತಿ-- an epitome of Fundamental Research on Kannada Vacana Literature tracing and unearthing the fountain-head of the spiritual doctrine of meditation on Space or Sunya, Linga-centric axiom propagated by Gosala Ganacarya and perceived by Ajiva Ganas from 6th century B.C. and onwards as Lingayatas or Veerasaivas of India and elsewhere, authored by Prof. C. Mahadevappa, BangaloreResearch Corner.

First Edition : 2005

No. of Copies : 1000

No. of Pages : xlix + 119= 168

Hard bound book Price : Rs. 80/- $ 3

® All rights Reserved

© Registered by Prof. C. Mahadevappa.

No part of this book may be reproduced or transmitted in any manner or form or by any means, electronic or mechanical including photocopying, recording or by any information storage and retrieval system without the written permission of the writer-cum-publisher of this book, Prof. C. Mahadevappa and even after his death also without the prior permission from his legal heirs in their order.

ISBN 81-901411-3-9

Printed at : Geetanjali Graphics, Bangalore-74
Ph. 23604087

JAGADGURU VISHWARADHYA
JNANA SIMHASAN JNANAMANDIR
LIBRARY
Jangamawadi Math, Varanasi

CC-0. Jangamwadi Math Collection. Digitized by eGangotri

ಪರಿವಿಡಿ

1.	ನೆನಪು	vi
2.	ಮೊದಲ ಮಾತು	vii
3.	ಉದ್ಧೃತಗಳ ಕನ್ನಡ ಅನುವಾದ	xvi - xviii
4.	ಪ್ರಸ್ತಾವನೆ	xix - xlvii
5.	ಸಂಕ್ಷಿಪ್ತಗಳ ಸೂಚಿ	xlviii
6.	ಆಜೀವಕರ ಶೂನ್ಯಧ್ಯಾನ ಪರಂಪರೆ →	xlix
	ಆಜೀವಕರ ಶೂನ್ಯಧ್ಯಾನ ಪರಂಪರೆ	1-30
7.	ಶರಣರ ಬಯಲತತ್ತ್ವ, ಅದರ ಮೂಲಸೆಲೆ	31-78
8.	ಟಿಪ್ಪಣಿ	79-82
ಅನುಬಂಧ ೧		
9.	ಆಜೀವ-ಶಿವಕಾಯ	83-84
ಅನುಬಂಧ ೨		
10.	ಜೈನ ವೀರಶೈವ ಸಮಯಸಮಾಗಮ	85-94
	ಆಕರಗಳು	95
ಅನುಬಂಧ ೩		
11.	ಉದೆಗ	96-105
12.	ಹಿನ್ನೆಲೆ	106-107
13.	ಜ್ಞಾನಸಾರ ಕಾವ್ಯಸೂಕ್ತಿ ಮುಕ್ತಾವಳಿ	108-112
14.	ಜಗಜ್ಜೀವದೇವಾಂತರಂಗ	113-114
15.	ಸಂಬಂಧಗ್ರಂಥಸೂಚಿ	115-118
16.	ಪರಿಚಯಪತ್ರ ...	119

***

CC-0. Jangamwadi Math Collection. Digitized by eGangotri

ನೆನಪು

ಕ್ರಿ.ಪೂ.6ನೇ ಶತಮಾನದ 'ಆಜೀವಕಧರ್ಮವನ್ನು ಪ್ರತಿನಿಧಿಸಿದ ...ಗಣಾಚಾರ್ಯನೂ ತೀರ್ಥಕರನೂ ಆಗಿದ್ದ ಇವನು[ಮಕ್ಖಲಿಗೋಸಾಲ]ಬೋಧಿಸಿದ ಶೂನ್ಯಧ್ಯಾನ ವಿಧಾನವನ್ನೇ ಅಲ್ಲಮರು ಪುರಸ್ಕರಿಸಿದರಾಗಿ ವೀರಶೈವಧರ್ಮ ಇದನ್ನು ಅಳವಡಿಸಿಕೊಂಡಿತು ಎಂಬುದನ್ನು[ಪ್ರಭುಗೀತೆಯ] ಪೀಠಿಕೆ ವಿವರಿಸುತ್ತದೆ. ಇದು ಹೊಸವಿಚಾರವೂ ಹೌದು; ಸಂಶೋಧಕರಿಗೆ ಹಸಿರುಹೊನ್ನೂ ಹೌದು.ಮಹಾದೇವಪ್ಪ ನವರು ಸೂಚಸಿರುವದಿಶೆಯಲ್ಲಿ ಇನ್ನಷ್ಟು ಅಧ್ಯಯನ, ಸಂಶೋಧನೆ, ವಿವೇಚನೆಗಳು ನಡೆದಲ್ಲಿ ಕನ್ನಡ ನಾಡಿನ ಧಾರ್ಮಿಕ ಇತಿಹಾಸ ದಲ್ಲಿರುವ ಕೊರತೆ ತುಂಬಿಕೊಳ್ಳುತ್ತದೆ' ಎಂಬ ಪೂಜ್ಯ ಪ್ರಾಧ್ಯಾಪಕ ಸಾ.ಕೃ ರಾಮಚಂದ್ರರಾವ್ ಅವರ ಸದಾಶಯವನ್ನು ಈಡೇರಿಸುವ ಹೊಣೆಗಾರಿಕೆಯ ಪುಣ್ಯವನ್ನು ಪ್ರಭುದಂಡೇಶರ ಮಹತ್ತ್ವದ ಸ್ವಾನುಭವ ಗೀತಪ್ರಬಂಧಗಳೇ ಕರುಣಿಸಿರುವುದೊಂದು ಸೌಭಾಗ್ಯ.

ಆಜೀವಕರ ಧಾರ್ಮಿಕ ಕಾರ್ಯಕ್ಷೇತ್ರಗಳಲ್ಲಿ ಒಂದಾದ ಮಗಧದ ಚಂಪಾನಗರಿಯಲ್ಲಿ ರಾಜ ಅಜಾತಶತ್ರು ಏರ್ಪಡಿಸಿದ ಆರುಹಿರಿಯರ "ವಿದ್ವತ್ ಸಭೆ"ಯ ಪರ್ಯಾಯ ಪರೀಕ್ಷೆ.ಆ ಚಾರಿತ್ರಕಘಟನೆಯ ಯಥಾರ್ಥತೆಗೆ ಪ್ರಭುವಾಣಿಯು ಬೆಡಗಿನ ಸಾಹಿತ್ಯಾಧಾರದ ಮುದ್ರೆಯನ್ನೊತ್ತಿದೆ. ಆರುಹಿರಿಯರ "ಪುರುಷ ರತ್ನ" ಗೋಸಾಲನ ಬಯಲಬ್ರಹ್ಮಾನಂದದ ನಿಲವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದೆ. ಆಜೀವಕರ ಶೂನ್ಯಧ್ಯಾನ ಪರಂಪರೆ ಹಾಗೂ ಶರಣರ ಬಯಲತತ್ತ್ವದ ಮೂಲಸೆಲೆಯ ನೆಲೆಯತ್ತ ಮನಸೆಳೆದಿರುವ ಈ 'ಆಜೀವಮಧುಸ್ಮೃತಿಶ್ರೀ'ಯನ್ನಲಂಕರಿಸಿರುವ ತಮ್ಮ ಮೊದಲಮಾತು; ಅದರಲ್ಲಿ ವಿಶ್ವದ ಮೂಲ ತತ್ತ್ವವಾದ ಬಯಲಭಾವನೆಯ ಬಗೆಗೆ ಪಾಳಿ, ಮಾಗಧಿ, ಟಿಬೆಟ್ ಚೀನೀಭಾಷೆಗಳಲ್ಲಿ ಪ್ರಕಟಗೊಂಡಿರುವ ಗುರುಗೋಸಾಲನ ಶೂನ್ಯತತ್ತ್ವವಿವೇಚನೆಯನ್ನು ವಿಶದಪಡಿಸಿ ಗ್ರಂಥಸ್ಥ ವಸ್ತುವಿನ ಬಯಲ ಬೆಳಗಿನ ಬೆಳಗನ್ನು ಮನದುಂಬಿಸಿರುವ ಪೂಜ್ಯ ಪ್ರೊ। ಡಾ।ಸಾ.ಕೃರಾಮಚಂದ್ರರಾವ್ ಅವರ ಪೂರಕ ಚದೈಶ್ವರ್ಯದುಪ ಕೃತಿಯುನ್ನು ನೆನೆದು ಸಲ್ಲಿಸಿದ ಕೃತಜ್ಞತೆಯ ನಮನಗಳು.ಗೀತಾಂಜಲಿ ಗ್ರ್ಯಾಫಿಕ್ಸ್ ಮಾಲಿಕರು ಶ್ರೀ ನಾಗಸುಂದರ್ ಅವರಿಗೆ ಅಭಿನಂದನೆಗಳು..

CC-0. Jangamwadi Math Collection. Digitized by eGangotri

ಮೊದಲ ಮಾತು

ಇದೊಂದು ಪ್ರೌಢಗ್ರಂಥ, ಗಹನವಾದುದು. ಆದರೂ ಗಣನೀಯವಾದುದು. ಗುಹೆಯೊಳಗೆ ಅಡಗಿರುವ ಬಯಲೆಂಬ ತತ್ತ್ವದ ನೆಲೆಯನ್ನು ಮಾತುಗಳಿಂದ ಕಂಡರಿಸುವ ಪ್ರಯತ್ನ ಬಲು ಪುರಾತನವಾದುದು. ವೇದವಾಙ್ಮಯದಲ್ಲೇ ಇದು ಕಾಣುತ್ತದೆ. ಅದಕ್ಕೂ ಮುಂಚನದೆಂಬ ಸೊಲ್ಲೂ ಅಲ್ಲೇ ಇದೆ. ಇಂದಿನ ವಿಜ್ಞಾನಯುಗದ ಸಂಶೋಧನೆ-ವಿವೇಚನೆಗಳಲ್ಲೂ ಇದೇ ಪ್ರಮುಖ ವಿವರವಾಗಿ ತೋರಿಕೊಳ್ಳುತ್ತದೆ. 'ಮಹತೋ ಮಹೀಯಾನ್' ಆಗಿರುವುದನ್ನರಸುವ ಕಾಸ್ಮಾಲಜಿಯಾಗಲಿ, 'ಅಣೋರಣೀಯಾನ್' ಆಗಿರುವುದನ್ನು ಅವಲೋಕಿಸುವ ನ್ಯೂರಾಲಜಿಯಾಗಲಿ ಬಟ್ಟಬಯಲೇ ಗಟ್ಟಿಯಾದ ತತ್ತ್ವವೆಂಬುದನ್ನು ಕಂಡುಕೊಳ್ಳುತ್ತಿದೆ. ನಮ್ಮ ವಿಚಾರಧಾರೆಯಲ್ಲಿ ಇದನ್ನೇ ಆಕಾಶವೆಂದರು, ಬ್ರಹ್ಮವೆಂದರು, ಶೂನ್ಯವೆಂದರು, ಲಿಂಗವೆಂದರು, ಬೋಧಿಯೆಂದರು, ಪೂರ್ಣವೆಂದರು, ಕೈವಲ್ಯವೆಂದರು.ಇರುವುದು ಬೇರೆ, ತೋರಿಕೊಳ್ಳುವುದು ಬೇರೆ ಎಂದಾಗ ದ್ವೈತ; ಎರಡೂ ಒಂದೇ ಎಂದಾಗ ಅದ್ವೈತ. ಎರಡು ವ್ಯವಹಾರದಲ್ಲಿ, ಒಂದು ಪರಮಾರ್ಥದಲ್ಲಿ. ಬಯಲು ಎರಡಕ್ಕೂ ಆಸರೆಯೇ. ತೋರಿಕೆಯ ಒಳಗೆ ಇಣುಕಿ ನೋಡಿದಾಗ ಇರುವುದು ಬಯಲೇ.ಇದರ ಚೌಕಟ್ಟಿನಲ್ಲೇ ನಮ್ಮ ನಾಡಿನ ಎಲ್ಲ ಧರ್ಮಗಳೂ ದರ್ಶನಗಳೂ ತಲೆಯೆತ್ತಿಕೊಂಡು ನಿಂತಿವೆಯೆಂಬುದನ್ನು ಕಂಡುಕೊಳ್ಳುವ ಅಗತ್ಯ ನಮಗೆ ಈಗೀಗ ಅರಿವಿಗೆ ಬರುತ್ತಿದೆ. ಹಲವು ಎಂಬುದರ ಅಡಿಗಲ್ಲು ಬಯಲು ಎಂಬುದು ವೇದಾಂತದಲ್ಲೂ ವಿಜ್ಞಾನದಲ್ಲೂ ಸಮನಾಗಿಯೇ ಸಿದ್ಧವಾಗುತ್ತಿದೆ.

ಪ್ರಸ್ತುತ ಗ್ರಂಥ ಇದನ್ನು ಮನವರಿಕೆ ಮಾಡಿಕೊಡುತ್ತದೆ. ಇದನ್ನು ಬರೆದ ಪ್ರೊ. ಸಿ. ಮಹಾದೇವಪ್ಪನವರು ಈ ವಿಚಾರವಾಗಿ ಬರೆಯಲು ಅಧಿಕಾರವುಳ್ಳವರು. ಆಳವಾದ ಅಧ್ಯಯನ ಅವರ ಸ್ವತ್ತು; ವಿಸ್ತಾರವಾದ ವಿವೇಚನೆ ಅವರ ಸ್ವಭಾವ; ಸತ್ಯದ ಅನ್ವೇಷಣೆ ಅವರ ವ್ರತ. ಐವತ್ತಕ್ಕೂ ಮೀರಿ

CC-0. Jangamwadi Math Collection. Digitized by eGangotri

ವರ್ಷಗಳಲ್ಲಿ ಅವರು ಎಡೆಬಿಡದ ಚಿಂತನಕಾಯಕವನ್ನು ಕೈಗೊಂಡಿದ್ದಾರೆ. ವಸ್ತುನಿಷ್ಠವಾದ ಸಂಶೋಧನೆ ಅವರದ್ದು. ಅದರಲ್ಲಿ ನಿಶಿತತೆಯಿದೆ, ಉತ್ಸಾಹವಿದೆ, ಊರ್ಜೆಯಿದೆ. ಕ್ರಿ.ಪೂ. ಆರನೆಯ ಶತಮಾನದಲ್ಲಿ ಆಗಿಹೋದ ಮಸ್ಕರಿಗೋಶಾಲನಿಂದ ಪ್ರವರ್ತಿತವಾದ ಆಜೀವಸಂಪ್ರದಾಯವು ಶಿವಮತದ ಶೂನ್ಯಧ್ಯಾನವನ್ನು ಇಷ್ಟಲಿಂಗಪೂರ್ವಕವಾಗಿ ಮಾಡುವುದಕ್ಕೆ ಹಿನ್ನೆಲೆಯಾಯಿತು ಎಂಬ ವಿಚಾರ ಇಲ್ಲಿ ಹಾಸುಹೊಕ್ಕಾಗಿ ಬಂದಿದೆ. ಅದಕ್ಕೆ ಪೂರಕವಾಗಿ ಆಜೀವಸಂಪ್ರದಾಯದ ತೀರ್ಥಕರನೆನಿಸಿದ ಗೋಶಾಲನನ್ನೊಳಗೊಂಡಂತೆ 'ಆರು ಹಿರಿಯರ' ಪ್ರಸ್ತಾಪವೂ ಬಂದಿದೆ. ಶಿವಶರಣರ ಬಯಲತತ್ತ್ವಕ್ಕೂ ಗೋಶಾಲನ ಶೂನ್ಯಧ್ಯಾನ ಪರಂಪರೆಗೂ ಇರುವ ನಂಟನ್ನು ತಿಳಿಯ ಹೇಳಿ 'ಆರು ಹಿರಿಯರ' ವಿಚಾರವಾಗಿರುವ ಕಗ್ಗಂಟನ್ನು ಬಿಡಿಸಿದ್ದಾರೆ. ಬೆಡಗಿನ ವಚನಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡಿ, ಹೊಸಬೆಳಕನ್ನು ಇಲ್ಲಿ ಚೆಲ್ಲಿದ್ದಾರೆ. ಶಿವಯೋಗದ ಮೂಲ ನೆಲೆಯೇನೆಂಬುದನ್ನು ಮನಗಾಣಿಸಿದ್ದಾರೆ. ಹರದನಹಳ್ಳಿ ಶೂನ್ಯಸಿಂಹಾಸನವನ್ನೇರ್ಪಡಿಸಿದ ಗೋಸಲ ಯತಿಯ (ಹದಿನಾಲ್ಕನೆಯ ಶತಮಾನದವರು) ಪರಂಪರೆಯ ಸಿದ್ಧಲಿಂಗೇಶ್ವರರನ್ನು ಕುರಿತ ಪುರಾಣಕರ್ತರು ಆ ಶಿವಸಿದ್ಧೇಶ್ವರ ಗುರುವನ್ನು ನಿರ್ಮಲಜೀವಿತೇಶ್ವರ, ಜಗಜ್ಜೀವಸ್ವರೂಪಿ ಎಂದೂ ಶಿವನನ್ನು ಕುರಿತು 'ಜೀವಜೀವ' ಎಂದೂ ಶಿವಕವಿಗಳು ಕರೆದು ಆಜೀವಮತವನ್ನು ಪುರಸ್ಕರಿಸಿದ್ದನ್ನು ನೆನಪಿಗೆ ತಂದುಕೊಡುತ್ತಾರೆ. ಎಲ್ಲ ಜೀವರೂ ದಿಟವಾಗಿ ಶಿವನೇ ಎಂದು ನಂಬಿದಾಗ ಸಮರಸದೃಷ್ಟಿ. 'ಆಜೀವ' ಎನ್ನುವ ಮಾತಿಗೆ ಸಮಸ್ತಜೀವವೆಂಬರ್ಥವನ್ನು ಕಾಣಿಸಿದ್ದಾರೆ.

ಇದು ಆಧ್ಯಾತ್ಮಿಕವಾಗಿ ಎಷ್ಟು ಪ್ರಸಕ್ತವೋ ಸಾಮಾಜಿಕವಾಗಿಯೂ ಅಷ್ಟೇ ಪ್ರಸ್ತುತವಾದುದು. 'ತನಗೆ ಒಳ್ಪಂ ಬೇಳ್ಪುದು ಒಳ್ಪಂ ಬಗೆವುದು ಸಕಲ ಪ್ರಾಣಿಗೆ.' ಎಂಬ ತತ್ತ್ವವು ಆಧ್ಯಾತ್ಮಿಕ-ಸಾಮಾಜಿಕ ದೃಷ್ಟಿಗಳೆರಡನ್ನೂ ಬೆಸೆಯುವ ನಿಲುವು. ಪ್ರೊ. ಮಹಾದೇವಪ್ಪನವರಿಗೂ ಅಧ್ಯಾತ್ಮದಲ್ಲಿನ ಒಲವು,

CC-0. Jangamwadi Math Collection. Digitized by eGangotri

ಸಮಾಜಿಕವಾದ ಕಳಕಳಿ ಎರಡೂ ಬಲವಾಗಿರುವುದರಿಂದ ಈ ಗ್ರಂಥ ವಿಶಿಷ್ಟವಾಗಿದೆ. ಅವರು ವಿದ್ವಾಂಸರಷ್ಟೇ ಅಲ್ಲ, ಸಂಶೋಧಕರು, ಸಂಶೋಧಕರಷ್ಟೇ ಅಲ್ಲ, ಸೃಜನಶೀಲ ಬರಹಗಾರರು. ಅನುವಾದಲ್ಲಿಯೂ ಸಿದ್ಧಹಸ್ತರು; ಸಂಘಟನೆಯಲ್ಲೂ ಗಟ್ಟಿಗರು. ಇತಿಹಾಸದ ಹಂದರದ ಮೇಲೆ ತಾತ್ವಿಕ ಚಿಂತನೆಯ ಬಳ್ಳಿಯನ್ನು ಹಬ್ಬಿಸುವುದು ಅವರಿಗೆ ಒಲಿದಿರುವ ಜಾಣ್ಮೆ. 'ಆರು ಹಿರಿಯರ' ವಿಚಾರವಾಗಿ ಇವರು ಮುಟ್ಟಿರುವ ನಿರ್ಣಯವೇ ಇದಕ್ಕೆ ಸಾಕ್ಷಿ. ಸಮರ್ಥವಾದ ಸಾಮಗ್ರಿಗಳನ್ನು ಬಳಸಿಕೊಂಡು, ಸಮಂಜಸವಾಗಿ ವಿಚಾರಮಾಡಿ, ಸರ್ವಸಮ್ಮತವಾಗಬಹುದಂಥ ನಿರ್ಣಯಕ್ಕೆ ಬರುವುದು ಇವರ ಸ್ವಭಾವದಲ್ಲಿಯೇ ಇದೆ. ಗ್ರಂಥದ ಪ್ರೌಢಿಮೆ ಮತ್ತು ವೈಶಿಷ್ಟ್ಯ ಇರುವುದು ಇದರಲ್ಲಿಯೇ. ಸ್ವಾರಸ್ಯವೆನಿಸುವ ಅನೇಕ ವಿಚಾರಗಳನ್ನು ಪ್ರಾಮಾಣಿಕವಾಗಿ ವಿವೇಚನೆ ಮಾಡಿ, ವಿಮರ್ಶಿಸಿ, ಸ್ಪಷ್ಟವಾಗಿ ನಿರೂಪಿಸಿರುವುದಲ್ಲದೆ ಹೊಸ ಆಯಾಮವೊಂದರ ಬಾಗಲನ್ನು ತೆರೆದಿಟ್ಟಿದ್ದಾರೆ, ಹೊಸದೊಂದು ದೃಷ್ಟಿಯನ್ನು ಹರಿಸಿದ್ದಾರೆ, ಚಿಂತನೆಗೆ ಹೊಸದೊಂದು ದಾರಿಯನ್ನು ತೋರಿಸಿದ್ದಾರೆ.

ಈ ಗ್ರಂಥದಲ್ಲಿ ಮತ್ತೆ ಮತ್ತೆ ಕಾಣಸಿಕೊಳ್ಳುವ ಪುರಾತನನೊಬ್ಬ ಗೋಶಾಲ. ಅವನಿಗೆ ಜೈನಗ್ರಂಥಗಳಲ್ಲಿ 'ಮಂಖಲಿ'ಯೆಂದೂ, ಬೌದ್ಧಗ್ರಂಥಗಳಲ್ಲಿ [<=>]'ಮಕ್ಖಲಿ' ಯೆಂದೂ ವಿಶೇಷಣಗಳಿವೆ. ಅವನು ಆಜೀವಕರೆಂಬ ಪಂಗಡದ ಗಣನಾಯಕನಾಗಿದ್ದವನು. ಶ್ರಾವಸ್ತಿಯು ಈ ಪರಂಪರೆಯ ಕೇಂದ್ರವಾಗಿದ್ದಿತು. ಜೈನರ "ಸೂಯಗಡಂಗ"(ಸೂತ್ರಕೃತಾಂಗ), ಭಗವತೀಸೂತ್ರ, ಔಪಪಾದಿಕಸೂತ್ರಗಳಲ್ಲಿ ಇವನ ಪ್ರಸ್ತಾಪ ಬರುತ್ತದೆ. ಬೌದ್ಧರ ಸಂಯುತ್ತನಿಕಾಯ, ಅಂಗುತ್ತರ ನಿಕಾಯ, ಮಹಾಸಚ್ಚಕಸುತ್ತ, ಸಾಮಞ್ಞಫಲಸುತ್ತಗಳಲ್ಲೂ ಬುದ್ಧಘೋಷನ ಸುಮಂಗಲವಿಲಾಸಿನೀ ಮೊದಲಾದ ಟೀಕಾಗ್ರಂಥಗಳಲ್ಲಿಯೂ ಇವನು ಉಲ್ಲೇಖಗೊಂಡಿದ್ದಾನೆ. ಗೌತಮಬುದ್ಧನ ಮತ್ತು ಮಹಾವೀರನ ಸ್ವಾಮಿಯ ಹಿರಿಯ ಸಮಕಾಲಿಕರೂ 'ಗಣ'ಗಳೂ

CC-0. Jangamwadi Math Collection. Digitized by eGangotri

'ಗಣಾಚಾರ್ಯ'ರೂ 'ತೀರ್ಥಕರ'ರೂ ಆದ ಆರು(ಕಕುಧ-ಕಚ್ಚಾಯನ, ಪೂರಣ-ಕಸ್ಸಪ, ಸಂಜಯ ಬೆಲಟ್ಠಪುತ್ತ, ಅಜಿತ ಕೇಶಕಂಬಲಿ, ಮಕ್ಖಲಿಗೋಸಾಲ, ನಿಗಂಠ-ನಾತಪುತ್ತ) ಹಿರಿಯರಲ್ಲಿ ಗೋಶಾಲ ಸೇರಿದ್ದಾನೆ; ಹಿರಿಯರಲ್ಲಿ ಹಿರಿಯ ಅವನು. ಅವನ ಪ್ರಖ್ಯಾತಿಯು ವಿಸ್ತೃತವಾಗಿದ್ದಿತಲ್ಲದೆ, ಅವನ ಉಪದೇಶವೂ ವ್ಯಾಪಕವಾಯಿತು. ಈ ಆರು ಮಂದಿಯಲ್ಲಿ ಕೆಲವರ ಉಲ್ಲೇಖ ಉಪನಿಷತ್ತುಗಳಲ್ಲಿಯೇ ಬರುತ್ತದೆ.(ಕಬಂಧ ಕಾತ್ಯಾಯನನದ್ದು ಪ್ರಶ್ನೋಪನಿಷತ್ತಿನಲ್ಲಿರುವಂತೆ), ಕೆಲವರದ್ದು ವೇದದಲ್ಲಿಯೇ ಇದೆ(ಕಶ್ಯಪನದು, ಸಂಜಯನದು). ಎಂದಮೇಲೆ ದಿಟವಾಗಿ ಇವರೆಲ್ಲ ಪುರಾತನರು. ಇವರ ಚಿಂತನೆಯೇ ಭಾರತದರ್ಶನ-ಧರ್ಮಕ್ಕೆಲ್ಲ ಮೂಲ ಆಕರ. ಇವರ ಯಶಸ್ಸು ಬುದ್ಧ ಮಹಾವೀರರ ಕಾಲಕ್ಕೂ ಉಳಿದುಕೊಂಡು ಬಂದಿದ್ದಿತು. ಪ್ರಸಕ್ತ ಆರು ಹಿರಿಯರು ಕೆಲವರ ಹೆಸರುಗಳಲ್ಲಿ ಆ ಆದ್ಯರ ಪ್ರಭಾವ ಅಚ್ಚೊತ್ತಿರುವುದು ಎದ್ದುತೋರುತ್ತದೆ ಅವರ ಚಾರಿತ್ರದ ಹಿನ್ನೆಲೆಯ ಪ್ರಭಾವವುಳ್ಳ ಈ ಆರು ಹಿರಿಯ 'ಪುರಾತನರು' ಎಲ್ಲ ಕಾಲಕ್ಕೂ ಪ್ರಸಕ್ತರಾದರು. ಅಶೋಕನ ಕಾಲದಲ್ಲಿಯೂ ಬಳಕೆಯಲ್ಲಿದ್ದ ಶ್ರಮಣ- ಆಜೀವಕ-ಬ್ರಾಹ್ಮಣ ಪರಂಪರೆಗೆ ಆದ್ಯರಾದವರು ಈ ಆರು ಹಿರಿಯರು. ಕರ್ಮಕಾಂಡವನ್ನು ಹಿಡಿದವರು ಬ್ರಾಹ್ಮಣರು; ಜ್ಞಾನಕಾಂಡ ಒಲಿದದ್ದು ಶ್ರಮಣರಿಗೆ.

ಇವರಲ್ಲಿ ಜೀವದ ಹೆಗ್ಗಳಿಕೆಯನ್ನು ತಿಳಿಯಹೇಳಿದ 'ಆಜೀವಕ'ನೆಂದರೆ ಗೋಶಾಲ. ಹಿರಿಯರೆಲ್ಲ ನಂಬಿದ್ದ ನಾಲ್ಕು ಸತ್ಯಗಳು ಕಾಯ(ಎಂದರೆ ಶರೀರ), ಸುಖ, ದುಃಖ ಮತ್ತು ಜೀವ.ಜೀವವನ್ನೇ ಆತ್ಮನೆಂದರು(ಅರ್ಧಮಾಗಧಿಯಲ್ಲಿ 'ಅಪ್ಪಾ'), ಮಾಗಧಿಯಲ್ಲಿ 'ಅತ್ತಾ'); ಮಹೀದಾಸ ಐತರೇಯನು ಇದನ್ನೇ ಪ್ರಾಣನೆಂದನು, ಉದ್ದಾಲಕನು ಜೀವಾತ್ಮನೆಂದನು. ಅಜಿತ ಕೇಶಕಂಬಲಿಯಾದರೋ ಕಾಯ ಜೀವಗಳಲ್ಲಿ ಭೇದವೆಣಿಸಲಿಲ್ಲ (ಅವನದ್ದು 'ತಂ ಜೀವ ತಂ ಸರೀರವಾದ'). ನಿಗ್ಗಂಠ-ನಾತಪುತ್ತನು ಜೀವ-ಕಾಯಗಳು ಬೇರೆ ಬೇರೆಯೆಂದನು(ಅವನದ್ದು 'ಅನ್ನಜೀವ ಅನ್ನಶರೀರ ವಾದ). ಎಲ್ಲವೂ ಜೀವವೇ, ಜಡವೂ ಜೀವವೇ;

CC-0. Jangamwadi Math Collection. Digitized by eGangotri

ಇರುವ ವಸ್ತುಗಳಲ್ಲೆಲ್ಲ ಜೀವವೆಂಬ ತತ್ತ್ವವೇ ಇರುವುದು ಎಂದು ಸಾರಿದವನು ಗೋಶಾಲ. 'ಸಬ್ಬೇ ಸತ್ತಾ ಸಬ್ಬೇ ಪಾಣಾ ಸಬ್ಬೇ ಭೂತಾ ಸಬ್ಬೇ ಜೀವಾ' ಎಂದು ಅವನು ಹೇಳಿದನೆಂದು ಪಾಳಿಗ್ರಂಥ ಉಲ್ಲೇಖಿಸುತ್ತದೆ. ಔಪನಿಷದ ದರ್ಶನದ 'ಸರ್ವಂ ಖಲ್ವಿದಂ ಬ್ರಹ್ಮ', 'ಪ್ರಾಣೋ ವಿರಾಟ್' ಮೊದಲಾದ ನಿಲುವಿಗೆ ಹಿನ್ನೆಲೆಯೇ *ಗೋಶಾಲಪ್ರವರ್ತಿತ* ಮತವಿದ್ದಿತೋ?

ಮತ್ತೆ ಕಠೋಪನಿಷತ್ತಿನಲ್ಲಿ ಬರುವ 'ಸಸ್ಯಮಿವ ಪಚ್ಯತೇ ಸಸ್ಯಮಿವಾ ಜಾಯತೇ ಪುನಃ' ಎಂಬ ಒಕ್ಕಣೆಗೂ, ಗೋಶಾಲನ 'ತಿಲಪುಪ್ಫಜೀವ ಉದ್ದಾಇತ್ತಾ ಉದ್ದಾಯಿತ್ತಾ ...ಅಜ್ಝತ್ತಿಎ ಜಾವ ಸಮುಪ್ಪಜ್ಜಿತ್ಥ, ಏವಂ ಖಲು ಸಬ್ಬ ಜೀವಾವಿ ಪವುಟ್ಟ ಪರಿಹಾರಂ ಪರಿಹರಂತಿ' ಎಂಬ ನಿರೂಪಣೆಗೂ ಎಷ್ಟು ಹೊಂದಾಣಿಕೆ ಯಿದೆಯೆಂಬುದನ್ನು ಗಮನಿಸಬಹುದು. ಗೋಶಾಲನದು ಜೈನಗ್ರಂಥಗಳ ಪ್ರಕಾರ 'ಪವುಟ್ಟಪರಿಹಾರ ವಾದ', ಎಂದರೆ ಪರಿಣಾಮ ವಾದ. ಎಲ್ಲವೂ ಸ್ವಭಾವಸಿದ್ಧವಾಗಿ ಬದಲಾಗುತ್ತವೆ. ಹುಟ್ಟುವುದು, ಸಾಯುವುದು ಸಹಜವಾದುದೇ; ಇದನ್ನೇ ಸಂಸಾರವೆಂದು ಕರೆಯುವುದು. ಬದಲಾಗುವುದು (ಪರಿಣತಿ) ಎಂದರೆ ಒಂದು ಅನೇಕವಿಧವಾಗಿ ತೋರಿಕೊಳ್ಳುವುದು (ಬುದ್ಧಘೋಷನ ಮಾತಿನಲ್ಲಿ 'ನಾನಾಪ್ಪಕಾರತ್ತಂ ಪತ್ತಾ'). ಉಪನಿಷತ್ತಿನ 'ಬಹುಸ್ಯಾಂ ಪ್ರಜಾಯೇಯ' ಎನ್ನುವ ಕಾಮನೆ. ಈ ಪರಿಣಾಮದ ಉದ್ದೇಶ ಜೀವವು ಮತ್ತೆ ತನ್ನ ಸ್ವರೂಪವನ್ನು ಪಡೆದುಕೊಳ್ಳುವುದೇ (ಎಂದರೆ ಆತ್ಮಸಾಕ್ಷಾತ್ಕಾರವೇ). ಇದನ್ನು ಗೋಶಾಲ'ಸಂಸಾರಶುದ್ಧಿ'ಯೆಂದು ಕರೆದನೆಂದು ಮಜ್ಝಿಮ-ನಿಕಾಯ, ಮಹಾಬೋಧಿಜಾತಕ ಮೊದಲಾದ ಬೌದ್ಧ ಗ್ರಂಥಗಳಲ್ಲಿ ಉಲ್ಲೇಖವಿದೆ. ಸಂಸಾರದಿಂದ ಶುದ್ಧಿ(ಎಂದರೆ ದುಃಖದ ಪರಿಹಾರ). 'ಸಂಧಾವಿತ್ತಾ ಸಂಸರಿತ್ತಾ ದುಕ್ಖಸ್ಸಂತಂ ಕರಿಸ್ಸಂತಿ' ಎಂದು ಜೈನರ ಭಗವತೀಸೂತ್ರದ ನಿರೂಪಣೆ. ('ಅನುಪುವ್ವೇಣಂ ಖವಯಿತ್ತ, ಪಚ್ಛಾ ಸಿಜ್ಝಂತಿ ಬುಜ್ಝಂತಿ, ಜಾವ ಅಂತಂ ಕರೇಂತಿ').

ಜೈನರು ಗೋಶಾಲನ ಮತವೆಂದು ಹೇಳುವ ಪರಿಣಾಮವಾದಕ್ಕೂ, ಬೌದ್ಧರು ಸೂಚಸುವ ಸಂಸಾರಶುದ್ಧಿ

CC-0. Jangamwadi Math Collection. Digitized by eGangotri

ಯೆಂಬ ಗೋಶಾಲನ ಮತಕ್ಕೂ ಹಿನ್ನೆಲೆಯಲ್ಲಿರುವ ತತ್ವತ್ರಯ 'ನಿಯತಿ-ಸಂಗತಿ-ಭಾವಪರಿಣತಾ'. ವಿಶ್ವಕ್ಕೆ ಒಂದು ವ್ಯವಸ್ಥೆಯಿದೆ, ಯಾವುದೇ ಕ್ರಿಯೆಗಾಗಲಿ, ಯಾವುದೇ ಮಾರ್ಪಾಡಿಗಾಗಲಿ, ಹುಟ್ಟಿಗಾಗಲಿ ಸಾವಿಗಾಗಲಿ ಬೇರೆ ಬೇರೆ ಕಾರಣವೆಂದಿರದು. ವಿಶ್ವದ ನಿಯತಿ(ಎಂದರೆ ದೃಷ್ಟ, ದೈವ, ಪೂರ್ವಕೃತ ಹೇತು) ಎಲ್ಲವನ್ನೂ ನಡಸುತ್ತದೆ. ದಾರದ ಉಂಡೆಯನ್ನು ಕೆಳಗೆ ಬೀಳಿಸಿದಾಗ ದಾರವಿದ್ದಷ್ಟೂ ದೂರ, ಎಳೆ ಎಳೆಯಾಗಿ ಬಿಡಿಸಿ ಕೊಂಡು ಹೋಗುವಂತೆ ನಿಯತಿಯ ಕೆಲಸ. ಯಾವುದೇ ಪ್ರಾಣಿ ಏನನ್ನೇ ಮಾಡಲಿ, ಏನನ್ನೇ ಅನುಭವಿಸಲಿ, ಎಷ್ಟೇ ಅರಿತು ಕೊಳ್ಳಲಿ, ಹೇಗೇ ಸಾಯಲಿ ಇವೆಲ್ಲ ನಿಯತಿಯ ಪ್ರಕಾರವೇ. ಜೈನರ ಉವಾಸಗದದಸಾಓ ಮತ್ತು ಬೌದ್ಧರ ಶ್ರಾಮಣ್ಯ ಫಲಸೂತ್ರಗಳಲ್ಲಿ ಇದು ಗೋಸಾಲನ ಮತವೆಂದು ಹೇಳಿದೆ.

ಇದರಿಂದಾಗಿ ಒಂದು ಹಲವಾಗುವುದು, ಬೇರೆ ಬೇರೆ ಬಗೆಗಳಾಗುವುದು, ಬೆಳೆಯುವುದು, ಇಳಿಯುವುದು, ಕಾಲದೇಶಗಳಲ್ಲಿ ಪರಿಚ್ಛನ್ನವಾಗುವುದು ಇವೆಲ್ಲ ಸಂಗತಿಯ (ಸಂಗಇ, ಪರಿಯಾಯ ಎಂಬ ಮಾತುಗಳನ್ನು ಸೂತ್ರಕೃತಾಂಗ ವೆಂಬ ಗ್ರಂಥ ಬಳಸುತ್ತದೆ) ವಿವರಗಳು. ಭಾವವೆಂದರೆ ಸ್ವಭಾವ('ಭಾವೋ ತಿ ಸಭಾವೋ' ಎಂದು ಬುದ್ಧಘೋಷನ ವಿವರಣೆ), ಒಂದೊಂದು ಜೀವಕ್ಕೂ ಇರುವ ಸಹಜವಾದ ಗುಣ. 'ಸ್ವಾಭಾವಿಕಂ ಜಗದಿದಂ' ಎನ್ನುವ ವಿವರಣೆಯೂ ಇದೆ. ಪರಿಣತಿ(ಎಂದರೆ ಬದಲಾಗುವುದು) ನಿಯತಿ, ಸಂಗತಿ, ಭಾವ ಎಂಬ ಮೂರು ಉಪಾಧಿಗಳನ್ನವಲಂಬಿಸುತ್ತದೆ.

ಆದರೆ ಗೋಶಾಲನು 'ಇಲ್ಲದಿರುವುದರಿಂದ ಇರುವುದು ಬರಲಾರದು'(ನೋಎ ಉಪ್ಪಜ್ಜಯೇ ಅಸಂ) ಎಂದು ನಂಬಿದ್ದವನು. ಈ ಅಭಿಪ್ರಾಯವನ್ನು ಜೈನರ ಸೂತ್ರ-ಕೃತಾಂಗದಲ್ಲಿ 'ಸತೋ ನತ್ಥಿ ವಿನಾಸೋ, ಅಸತೋ ನತ್ಥಿ ಸಂಭವೋ' (ಇರುವುದಕ್ಕೆ ವಿನಾಶವಿಲ್ಲ, ಇಲ್ಲದಿರುವುದಕ್ಕೆ ಹುಟ್ಟುಎಂಬುದು ಇಲ್ಲ) ಎಂದು ಕಾಣಿಸಿದೆ. ಭಗವದ್ಗೀತೆಯಲ್ಲಿ ರುವ'ನಾಸತೋ ವಿದ್ಯತೇ ಭಾವಃ ನಾಭಾವೋ ವಿದ್ಯತೇ ಸತಃ'

CC-0. Jangamwadi Math Collection. Digitized by eGangotri

ಎನ್ನುವ ಮಾತಿನ ಛಾಯೆಯೇ ಇದು. ಗೋಶಾಲನು ಹೇಳುವ 'ಜೀವ'(ಎಂದರೆ ಆತ್ಮ, ಬ್ರಹ್ಮ, ಶೂನ್ಯ, ಲಿಂಗ) ಒಂದೇ 'ಸತ್'; ಪರಿಣಾಮದಲ್ಲಿ ಬರುವುದೆಲ್ಲಾ 'ಅಸತ್'. 'ಸತ್'(ಎಂದರೆ ಇರುವುದು)ಎಂಬುದಕ್ಕೆ ಸಾವಿಲ್ಲ. 'ಅಸತ್'(ಎಂದರೆ ಇಲ್ಲದಿರುವುದು) ಹುಟ್ಟುತ್ತದೆ, ಸಾಯುತ್ತದೆ. ಅಷ್ಟುಮಾತ್ರವಲ್ಲ, ಅದಕ್ಕೆ ಹುಟ್ಟುವುದು(ಜೀವೇಯಂ), ಸಾಯುವುದು(ಮರಣಂ) ಇವುಗಳ ಜೊತೆಯಲ್ಲಿ ಲಾಭ, ನಷ್ಟ, ಸುಖ, ದುಃಖ ಇವೂ ಇರುತ್ತವೆ. ಇವು ಆರು ನಿಯತವಾದ, ಆದರೆ ಪರಸ್ಪರ ವಿರುದ್ಧವಾದ ಪ್ರಸಂಗಗಳು ಎಂದು ಭಗವತೀಸೂತ್ರದಲ್ಲಿ ಗೋಶಾಲನ ಮತವನ್ನು ವಿವರಿಸುವಾಗ ಹೇಳಿದೆ. ಇವು ಎಲ್ಲ ಪ್ರಾಣಿಗಳಿಗೂ ಸಮಾನವಾದುವೇ.

'ಸವ್ವೇಸಿಂ ಪಾಣಾಣಇಂ, ಸವ್ವೇಸಿಂ ಭೂಯಾಣಇಂ, ಸವ್ವೇಸಿಂ ಜೀವಾಣ ಇಂ ಸವ್ವೇಸಿ ಸತ್ತಾಣಇಂ ಇಮಾಇಂ ಸನಇಕ್ಕಮಣ ಆಇಂ ವಾಗರಣಾ ಇಂ ವಾಗರಇ -ತಂ ಲಾಭಂ ಅಲಾಭಂ ಜೀವೇಯಂ ಮರಣಂ' (ಭಗವತೀಸೂತ್ರ. 15.1)

ಪರಮಾರ್ಥಸಾಧನೆಯಲ್ಲಿ ಶೀಲಶುದ್ಧಿಯು ಮೊದಲಹೆಜ್ಜೆಯೆಂದು ಕಾಣಿಸಿದ ಹಿರಿಯ ಗೋಶಾಲ. ಗೌತಮಬುದ್ಧನಾಗಲಿ ಮಹಾವೀರನಾಗಲಿ ಇದನ್ನು ಒಪ್ಪಿಕೊಂಡುದನ್ನು ಗಮನಿಸಬೇಕು. ವಿಶುದ್ಧಿಮಾರ್ಗದ ಮೊದಲಲ್ಲೇ ಬರುವ 'ಸೀಲೇ ಪತಿಟ್ಠಾಯ' ಎಂಬ ಬುದ್ಧವಚನ ಒಂದು ನಿದರ್ಶನ. ಸಾಧನೆಯಲ್ಲಿ ಕಾಯಭಾವನೆ(ಶಾರೀರಕವಾದ ಸಂಯಮ) ಮತ್ತು ಚಿತ್ತಭಾವನೆ(ಮಾನಸಿಕವಾದ ವಿಕಸನ) ಎರಡೂ ಕೂಡಿಕೊಳ್ಳಬೇಕೆಂಬುದು ಗೋಶಾಲನ ಅಭಿಮತ.ಎರಡೂ ಕೂಡಿಕೊಂಡಾಗಲೆ ಶೂನ್ಯಧ್ಯಾನವು ಸಾಧ್ಯವಾಗುವುದು. ಕಾಯವರ್ಗೀಕರಣ ಮಾಡುವಾಗ ಲೇಶ್ಯದ ದಾರಿಯನ್ನು ಹಿಡಿದು, ಚಿತ್ತವು ಕಪ್ಪಗಿರುವುದು(ಕೃಷ್ಣ) ವ್ಯವಹಾರದ ನೆಲೆಯೆಂದೂ ಸಾಧನೆಯ ಫಲವಾಗಿ ಚಿತ್ತವು ಬಿಳುಪಾಗುವುದು(ಶುಕ್ಲ) ಪರಮಾರ್ಥದ ಗುರುತೆಂದೂ ತಿಳಿಯ ಹೇಳಿದನು. ಚಿತ್ತವು ಬಿಳಿಯ ಬಣ್ಣಕ್ಕೆ ತಿರುಗಿದಾಗ ಅದು ತಿಳಿಯಾಗುತ್ತದೆ; ಸಂಸ್ಕಾರಗಳು, ವಾಸನೆಗಳು, ಕ್ಲೇಶಗಳು

CC-0. Jangamwadi Math Collection. Digitized by eGangotri

ಮರೆಯಾಗುತ್ತವೆ. ಕೃಷ್ಣಲೇಶ್ಯದಲ್ಲಿ ಪ್ರವೃತ್ತಿ, ಶುಕ್ಲಲೇಶ್ಯದಲ್ಲಿ ನಿವೃತ್ತಿ. ಇದು ಪರಿವರ್ತನೆಯ ಕ್ರಮ. ಕೃಷ್ಣವರ್ಣದಿಂದ ಶುಕ್ಲವರ್ಣಕ್ಕೆ ತಿರುಗುವುದು ಪರಿವರ್ತನೆ. ಶುಕ್ಲವರ್ಣಕ್ಕೆ ತಿರುಗಿದಾಗ ಸಂಸಾರಶುದ್ಧಿ. 'ಅರಿದಲ್ಲಿ ಪರಮ, ಮರೆದಲ್ಲಿ ಜೀವ' ಎನ್ನುವ ಮಾತು ಮೈದುಂಬುವುದು ಈ ನೆಲೆಯಲ್ಲಿ.

ಚಿತ್ತವು ಪರಿಣತಿಯ ದಾರಿಯನ್ನು ಬಿಟ್ಟು ಶೋಧನದ ದಾರಿಯನ್ನು ಹಿಡಿಯುವುದು ಚಿತ್ತಕ್ಕೆ ಸ್ವಭಾವಸಿದ್ಧವಾದುದೇ; ನಿಯತಿಯೂ ಹೌದು. ನಾನಾಪ್ರಕಾರವಾಗುವ ಪ್ರವೃತ್ತಿ ವ್ಯವಹಾರಕ್ಕೆ ಎಡೆಮಾಡಿಕೊಡುತ್ತದೆ; ಎಲ್ಲ ವಿಕಲ್ಪಗಳನ್ನೂ ದೂರಮಾಡಿ, ಚಿತ್ತದಲ್ಲಿರುವ ನಿಯತಿ, ಸಂಗತಿ, ಭಾವಗಳತ್ತ ಒಳಮುಖಮಾಡಿದಾಗ ಚಿತ್ತವಿಕಲ್ಪ ಶೂನ್ಯವಾಗುತ್ತದೆ. ಅದೇ ಸಂಸಾರಶುದ್ಧಿ. ಶೂನ್ಯಧ್ಯಾನದಲ್ಲಿ ಶೂನ್ಯದತ್ತ ಸರಿಯುವ ಪ್ರಯತ್ನಸಾಗುತ್ತದೆ. ಇದು ಎಲ್ಲಜೀವಿಗಳಿಗೂ ಸಹಜವಾಗಿಯೇ ಇರುವುದು. ಎಚ್ಚರದಲ್ಲಿದ್ದು ಅನಂತರ ನಿದ್ರೆ ಮಾಡುವುದಿದ್ದಂತೆ. ನಿದ್ರೆಯಲ್ಲಿ ಶೂನ್ಯತೆಯ ಅನುಭವವಿರುವುದು ಸಂಸಾರ ಶುದ್ಧಿಯಲಿಂಗ(ಎಂದರೆ ಗುರುತು).ಜೀವವು ಬಯಲಾಗುವುದೇ ಶೂನ್ಯಧ್ಯಾನ. ಬಯಲ ಕಾಂಬುದಕ್ಕೆ ತೆರೆಯ ತೆಗೆಯ ಬೇಕೆಂಬುದು ಅನುಭಾವಿಗಳ ಕರೆ. ಬೌದ್ಧ-ಜೈನ ಆಕರಗಳಲ್ಲಿ ಈ ಬಗೆಯ ಧ್ವನಿ ತೋರಿಕೊಳ್ಳುತ್ತದೆ.

ಪ್ರೊ. ಮಹಾದೇವಪ್ಪನವರು ಆಳವಾದ ಅಧ್ಯಯನ-ವಿವೇಚನೆಗಳ ಪ್ರವಾಹದಲ್ಲಿ ಮಿಂದು, ವೀರಶೈವವೆಂಬ ದಾರ್ಶನಿಕಪ್ರಕಾರಕ್ಕೆ ಗೋಶಾಲನ ಹಿನ್ನೆಲೆಯನ್ನು ಹೊರ-ತೆಗೆದಿದ್ದಾರೆ. ಅವರು ತೋರಿಸಿರುವ ದಾರಿಯನ್ನು ಹಿಡಿದು ಇತರ ಧರ್ಮ-ದರ್ಶನಗಳ ಮೇಲೂ ಗೋಶಾಲನ ಪ್ರಭಾವವಿರುವುದನ್ನು ಗುರುತಿಸುವುದು ಸಾಧ್ಯವಾದೀತು. ಅದೊಂದು ಹೊಸ ಬೆಳಕು, ಹೊಸ ನೋಟ. 'ಆರುಹಿರಿಯರು' ನಮ್ಮ ನಾಡಿನ ಎಲ್ಲ ಚಿಂತನೆಗಳ ಹಿನ್ನೆಲೆಯಲ್ಲಿ ಹೇಗಿದ್ದಾರೆ ಎಂಬ ಅರಿವು ಮೂಡಿದಾಗ, ದರ್ಶನಗಳ ನಡುವೆ ಸಮನ್ವಯ, ಧರ್ಮಗಳ ನಡುವೆ ಸಾಮರಸ್ಯ ಒದಗಿಬಂದೀತು.

CC-0. Jangamwadi Math Collection. Digitized by eGangotri

ಅಂತೂ ಪ್ರೊ. ಮಹಾದೇವಪ್ಪನವರು 'ಕನ್ನಡದೊಳ್- ಭಾವಿಸಿದ ಜನಪದ'ದ ಸಾಂಸ್ಕೃತಿಕ ಅಧ್ಯಯನಕ್ಕೆ ನೀಡಿರುವ ಕೊಡಗೆ ವಿಶಿಷ್ಟವಾದುದು. ಇದೊಂದು ಅವರು ಮಾಡಿರುವ ಉಪಕಾರ. ಅರಿತಜನ, ಅರಿಯಬಲ್ಲ ಜನ, ಅರಿಯಬಯಸುವ ಜನ ಅವರಿಗೆ ಕೃತಜ್ಞರಾಗಿರಬೇಕು.

ಸಾ. ಕೃ ರಾಮಚಂದ್ರ ರಾವ್

8-2-05

....

ವಿದ್ಯಾಲಂಕಾರ, ಶಾಸ್ತ್ರಚೂಡಾಮಣಿ, ಸಂಗೀತಕಲಾರತ್ನ, ವಾಚಸ್ಪತಿ, ವೇದರತ್ನ

ಪ್ರೊ॥ ಡಾ॥ ಸಾ. ಕೃ ರಾಮಚಂದ್ರ ರಾವ್

305 6ನೇ ಕ್ರಾಸ್ ಮೊದಲ ಬ್ಲಾಕ್, ಜಯನಗರ,

ಬೆಂಗಳೂರು 560011

ಸಂಶೋಧನೆಯ ನಿಜದ ನಿಲವು

'ಎಲ್ಲಾ ತಪ್ಪು ಗ್ರಹಿಕೆಗಳಿಗೂ ಮನದ ಬಾಗಿಲನ್ನು ಮುಚ್ಚದ ಪಕ್ಷದಲ್ಲಿ ನಿಮಗೆ ನಿಜದರಿವಿನ ಬಾಗಿಲು ತೆರೆದುಕೊಳ್ಳುತ್ತದೆ' ಎಂಬುದು ಕವಿವರೇಣ್ಯ ಟ್ಯಾಗೂರ್ ಅವರ ಮಾತುಗಳಿವು:

"If you shut the door to all errors, truth will be shut out." -- Tagore D.H. 25-2-2005

***

"ಸಂಶೋಧನೆಯೆಂದರೆ ಜನರ ಮನಸ್ಸಿನಲ್ಲಿರುವ ತಪ್ಪುತಿಳಿವಳಿಕೆ ಹೋಗಲಾಡಿಸಿ ಅವರಲ್ಲಿ ಚಿಂತನೆ, ಜ್ಞಾನ ಮೂಡಿಸುವುದು. ಯಾವುದೇ ಸಂಸ್ಥೆಗಳಿಂದ ಸಂಶೋಧನೆಯಾಗುವುದಿಲ್ಲ. ಬದಲಾಗಿ ವ್ಯಕ್ತಿಗತ ಸಾಮರ್ಥ್ಯ, ಸಂಸ್ಕಾರ, ತವಕ, ನಿಷ್ಠೆಯಿಂದ ಸಂಶೋಧನೆಯಾಗುತ್ತದೆ."

—ವಾಚಸ್ಪತಿ ಪ್ರೊ. ಎಸ್.ಕೆ. ರಾಮಚಂದ್ರರಾವ್

ಸಂಯುಕ್ತ ಕರ್ನಾಟಕ ಪು. 3 16. 5. 2003

ಶ್ರೀಶ್ರೀಶ್ರೀ

CC-0. Jangamwadi Math Collection. Digitized by eGangotri

ಉದ್ಧೃತಗಳ ಕನ್ನಡ ಅನುವಾದ

1 'ತಂ ಜೀವ ತಂ ಸರೀರವಾದ'

ಜೀವವೇ ಶರೀರ, ಶರೀರವೇ ಜೀವ ಎನ್ನುವ ವಾದ.

2. 'ಸಬ್ಬೇ ಸತ್ತಾ ಸಬ್ಬೇ ಪಾಣಾ ಸಬ್ಬೇ ಭೂತಾ ಸಬ್ಬೇ ಜೀವಾ'

ಎಲ್ಲ ಜೀವಿಗಳೂ, ಎಲ್ಲ ಪ್ರಾಣಗಳೂ ಇರುವ ಎಲ್ಲ ವಸ್ತುಗಳೂ, ಎಲ್ಲವೂ ಜೀವಗಳೇ.

3. 'ಸಸ್ಯಮಿವ ಪಚ್ಯತೇ ಸಸ್ಯಮಿವಾ ಜಾಯತೇ ಪುನಃ'

ಸಸ್ಯದಂತೆ ಮನುಷ್ಯರು ಸಾಯುತ್ತಾರೆ, ಸಸ್ಯಗಳಂತೆಯೆ ಮತ್ತೆ ಹುಟ್ಟುತ್ತಾರೆ

4. 'ತಿಲಪುಪ್ಫಜೀವ ಉದ್ದಇತ್ತಾ ಉದ್ದಯಿತ್ತಾ ...ಅಜ್ಝತ್ತಿಎ ಜಾವ ಸಮುಪ್ಪಜ್ಜಿತ್ಥ, ಏವಂ ಖಲು ಸಬ್ಬ ಜೀವಾವಿ ಪವುಟ್ಟ ಪರಿಹಾರಂ ಪರಿಹರಂತಿ'

ಎಳ್ಳು ಹೂವಿನ ಜೀವವನ್ನು ಕತ್ತು ಕತ್ತು ಮೇಲೆ ಎತ್ತಿಹಾಕದರೂ,, ಎಳ್ಳುಗಿಡಗಳು ಮತ್ತೆ ಮತ್ತೆ ಚಿಗುರೊಡೆದು ಕಾಣಸಿಕೊಳ್ಳುತ್ತವೆ. ಇದು ಪರಿಣಾಮದಲ್ಲಿಯ ಪ್ರವೃತ್ತಿಯನ್ನು ಸೂಚಸುತ್ತದೆ.

5. 'ನಾನಾಪ್ಪಕಾರತ್ತಂ ಪತ್ತಾ'

ಅನೇಕ ಬಗೆಯಾಗಿ ಮಾರ್ಪಡುವಿಕೆ-

6. 'ಬಹುಸ್ಯಾಂ ಪ್ರಜಾಯೇಯ'

ನಾನು ಅನೇಕವಾಗಿ ತೋರಿಕೊಳ್ಳುತ್ತೇನೆ. – ಪ್ರಜಾಪತಿಯ ಎಣಿಕೆ.

7. 'ಸಂಧಾವಿತ್ವಾ ಸಂಸರಿತ್ವಾ ದುಕ್ಖಸ್ಸಂತಂ ಕರಿಸ್ಸಂತಿ'

ಸಂಸಾರದಲ್ಲಿ ತಿರುಗಾಡಿ ತಿರುಗಾಡಿ, ಹಾಗೆಯೇ ದುಃಖವನ್ನು ಕೊನೆಗಾಣಸಿಕೊಳ್ಳುತ್ತಾರೆ.

8. ('ಅನುಪುವ್ವೇಣಂ ಖವಯಿತ್ತ, ಪಚ್ಛಾ ಸಿಜ್ಝಂತಿ ಬುಜ್ಝಂತಿ, ಜಾವ ಅಂತಂ ಕರೇಂತಿ').

ಹಿಂದಣ ಕರ್ಮಗಳನ್ನು ಸವೆಯಿಸಿ, ಅನಂತರ ತಿಳಿದುಕೊಂಡು ಸಂಸಾರದ ಕಡೆಯನ್ನು ಮಾಡುತ್ತಾರೆ.

 CC-0. Jangamwadi Math Collection. Digitized by eGangotri

9.(ನೋಎ ಉಪ್ಪಜ್ಜಯೇ ಅಸಂ)

ಅದು ಎಂದಿಗೂ ಹೊಸದಾಗಿ ಹುಟ್ಟಲಾರದು:
(ಮೊದಲು ಇದ್ದದ್ದೇ ಮಾರ್ಪಡುತ್ತದೆ).

10.'ಸತೋ ನತ್ಥಿ ವಿನಾಸೋ, ಅಸತೋ ನತ್ಥಿ ಸಂಭವೋ'

ಇರುವ ವಸ್ತುವಿಗೆ ನಾಶವೆಂಬುದಿಲ್ಲ;
ಇಲ್ಲದಿರುವ ವಸ್ತುವಿಗೆ ಹುಟ್ಟೆಂಬುದಿಲ್ಲ.

11.'ಸವ್ವೇಸಿಂ ಪಾಣಾಣಇಂ, ಸವ್ವೇಸಿಂ ಭೂಯಾಣಇಂ, ಸವ್ವೇಸಿಂ ಜೀವಾಣಇಂ ಸವ್ವೇಸಿ ಸತ್ತಾಣಇಂ ಇಮಾಇಂ ಸನಇಕ್ಕಮಣ ಆಇಂ ವಾಗರಣಾ ಇಂ ವಾಗರಇ -ತಂ ಲಾಭಂ ಅಲಾಭಂ ಜೀವೇಯಂ ಮರಣಂ' (ಭಗವತೀಸೂತ್ರ. 15.1)

ಎಲ್ಲ ಪ್ರಾಣಗಳಲ್ಲೂ ಎಲ್ಲ ಭೂತಗಳಲ್ಲೂ ಎಲ್ಲ ಜೀವಗಳಲ್ಲಿಯೂ ಸಮನಾದ ದೃಷ್ಟಿಯನ್ನು ಹೊಂದಿರುವುದು, ಲಾಭ-ನಷ್ಟ, ಬದುಕು-ಸಾವುಗಳನ್ನು ಸಮನಾಗಿಯೇ ಕಾಣುವುದು,

12.'ಸೀಲೇ ಪತಿಟ್ಠಾಯ'

ಬೋಧಿಯನ್ನು ಬಯಸುವವನು
ಮೊದಲು ಶೀಲದಲ್ಲಿ ನೆಲೆಯಾಗಿ ನಿಲ್ಲಬೇಕು.-

–ಸಾಕ್ರಾ. 8/2/05

''ಅಣೋರಣೀಯಾನ್ ಆಗಿರುವುದನ್ನು ಅವಲೋಕಿಸುವ ನ್ಯೂರಾಲಜಿ"(ನೋ. ಮೊದಲ ಮಾತು.ಪು.vii)–ಕುರಿತಂತೆ:

'ಭೌತಿಕವಸ್ತುಸತ್ಯದ ಸಾರಸ್ವರೂಪವಿರುವುದು ಅದರ ಭೌತಾತೀತ ಲಕ್ಷಣದಲ್ಲಿ. ಅದು ಶೂನ್ಯ ಇಲ್ಲವೆ ಬಯಲ ತತ್ತ್ವದಿಂದ ಹೊರಬಂದ ಶಕ್ತಿ ಹಾಗೂ ಕಂಪನಗಳನ್ನು ಒಳಗೊಂಡದ್ದು. ಇಂದ್ರಿಯಗಳ ಅನುಭವಗಳು ಕಲಿತು ಬಂದವುಗಳು. ನಾವು ಕಾಣುವ ಭೌತಿಕದೃಷ್ಟಿಯ ವಸ್ತುಸತ್ಯ ವೆಂಬುದು ಸೋಪಾಧಿಕವಾದುದು; ಒಂದು ಕಟ್ಟುಪಾಡಿಗೆ ಸಿಕ್ಕಿಬಿದ್ದಿರುವಂಥದು. ಆ ಕಾರಣ ನಾವು ನಮ್ಮ ಒಳಗಣ್ಣಿನಿಂದ ನಿಜಸ್ಥಿತಿಯನ್ನು ಅರಿಯುವ ಅಗತ್ಯವಿದೆ. ವಾಸ್ತವಿಕತೆಯನ್ನು ಅರಿಯಲು ಹೊರಇಂದ್ರಿಯಗಳ ಬಳಕೆ ಮಾಡಿದಾಗ ವಸ್ತು ಗಳನ್ನು ಭೌತದೃಷ್ಟಿಯಿಂದ ನೋಡುವ ಹಾದಿಹಿಡಿಯುತ್ತೇವೆ. ಪರಮಾಣುಗಳು ಹೇಗೆ ವರ್ತಿಸುತ್ತವೆಯೆಂದು ತಿಳಿದುಕೊಂಡಲ್ಲಿ 'ಜೀವ'ನನ್ನು ಅರಿಯಬಲ್ಲೆವೆಂಬ ವಿಚಾರದೃಷ್ಟಿ ಅದು.

CC-0. Jangamwadi Math Collection. Digitized by eGangotri

‘ಜೀವ’ನನ್ನುಹಾಗೆ ಕಾಣುವುದಂತು ಭೌತಿಕದೃಷ್ಟಿಕೋನಕ್ಕೇ ಅಧೀನಗೊಳಿಸಿದಂತೆ. ಅದರ ಪ್ರತಿಪಾದಕರು ನ್ಯೂಟನ್ ಡೆಕಾರ್ಟೆಯಾದರೆ ಹೆರಾಕ್ಲಿಟಸ್ ಎಣಿಸಿದಂತೆ ಎರಡನೆಯ ಬಾರಿಗೆ ತಾನುಅದೇ ನದಿಯೊಳಗೆ ಪ್ರವೇಶಿಸಲಾಗದು. ಏಕೆಂದರೆ ಎಡೆಬಿಡದೆ ಸದಾ ಪರಿವರ್ತನೆ ನಡೆಯುವುದೇ ಅದಕ್ಕೆ ಕಾರಣ. ಉದಾಹರಣೆಗೆ ಉಸಿರಾಡುವಾಗ ನಾವು 1023 ಅಣುಗಳನ್ನು ಒಳಕ್ಕೂ ಅಷ್ಟೇ ಸಂಖ್ಯೆಯ ಅಣುಗಳನ್ನು ಹೊರಕ್ಕೂ ಕಳುಹಿಸುತ್ತೇವೆ. ನಮ್ಮ ಸ್ಥೂಲ ಹಾಗೂ ಸೂಕ್ಷ್ಮ ಶರೀರಗಳು ಸತತವಾಗಿ ಪುನರ್ನವೀಕೃತವಾಗುತ್ತಲಿರುತ್ತವೆ. ಒಂದು ವರ್ಷ ತೀರುವುದಕ್ಕಂತಲೂ ಮುಂಚತವಾಗಿಯೇ ನಮ್ಮ ಶೇ. 98 ಭಾಗದ ಅಣುಗಳ ಸ್ಥಾನದಲ್ಲಿ ಬೇರೆಯವು ಬಂದಿರುತ್ತವೆ. ನಮ್ಮ DNA (ಡಿ.ಎನ್.ಎ.) ಪ್ರತಿ ಆರು ವಾರಗಳಿಗೊಮ್ಮೆ ಹೊಚ್ಚ ಹೊಸದಾಗ ತೊಡಗುತ್ತದೆ. ಎಂದಬಳಿಕ ಯಾವ ಅಣುಗಳ ಮೂಲಕ ನಾವು ಅಭಿವ್ಯಕ್ತಗೊಳ್ಳುವೆವೋ ಅವುಗಳ ಜೀವಿತಾವಧಿಗಳಿಗಿಂತಲೂ ಹೆಚ್ಚು ಕಾಲ ಬಾಳಿಬದುಕರುತ್ತೇವೆ. ಶರೀರದ ಶೇ.99.9 ಭಾಗ “ಆಭೂ”ಪ್ರದೇಶ ಎಂದರೆ ಶೂನ್ಯವು ನಾವು ಜನ್ಮಧರಿಸಿ ಬಂದಿರುವ ನಿರಾಕಾರ ಪರವಸ್ತು. ಆ ಆತ್ಮವಸ್ತು ಅಭೌತಿಕ, ಸರ್ವಸಾಕ್ಷ, ಒಳಗಣ್ಣು ತಿಳಿವು ಇಲ್ಲವೆ ಸಹಜಾಣು(>ನು)ಭಾವ, ಇದ್ದೂ ಇಲ್ಲದ ಅನಿಶ್ಚಯದೊಡಗೂಡಿ ಸುಖಿಯೆನಿಸಿದುದು. ಅದರ ಎಲ್ಲ ಕ್ರತುಶಕ್ತ ಸಮಷ್ಟ್ಯಾತ್ಮಕ ವಾದುದು. ಭೌತಿಕ ಶರೀರದ ಸಾವು ಆತ್ಮದ ಒಟ್ಟಾರೆಯ ಸೃಷ್ಟಿಕ್ರಿಯೆ. ದೈವೀಶಕ್ತಿಯ ಸಹಯೋಗ ಹೊಂದಿಯೇ ಆತ್ಮವು ಆ ಸೃಷ್ಟಿಕಾರ್ಯದಲ್ಲಿ ತೊಡಗುತ್ತದೆ’ ಎಂಬುದು ಮಾತಾಡುವ ಮರ(ಆಲ)ದ ಮರೆಯಲಾಗದ ಶಿವಸೌಖ್ಯದ ಗೂಢ ಬಯಲತತ್ತ್ವಾಲೋಚನೆಯು ಆತ್ಮವಿಚಾರಕ್ಕೆ ಶ್ರೀ ದೀಪಕ್‌ಛೋಪ್ರ ಅವರ ಮೂಲ ಲೇಖವನ್ನು ನೋಡಿ↓*

....

* ಟೈಮ್ಸ್ ಆಫ್ ಇಂಡಿಯ ಪು.12 ಶುಕ್ರವಾರ, ಫೆಬ್ರುವರಿ 11, 2005

CC-0. Jangamwadi Math Collection. Digitized by eGangotri

ಪ್ರಸ್ತಾವನೆ

''ಆಜೀವ ಮಧುಸ್ಮೃತಿ”–ಶಿವಾನುಭಾವಿ ಶರಣರ ಪರಂಪರೆಯ ಶೂನ್ಯ ಅರ್ಥಾತ್ ಬಯಲತತ್ತ್ವಾನುಭವದ ವಚನಗಳ ವಿವೇಚನೆ ಹಾಗೂ ವಿಶ್ಲೇಷಣೆಯನ್ನು ಕುರಿತ ಸಾರಸಂಗ್ರಹ ಗ್ರಂಥ. ಆ ಪರಂಪರೆ ತನ್ನ ಆರುಮೂಲದ ತತ್ತ್ವದರ್ಶನದ ಮಾರ್ಗವನ್ನು ಯಾವಾಗ, ಯಾವ ಗಮನೀಯ ಘಟ್ಟದಿಂದ ಹಿಡಿದು ಸಾಗಿಬಂದಿದೆ ಎಂಬುದರ ಆಳವಾದ ಅಧ್ಯಯನದ ನಿರ್ಣಯವನ್ನು ಹೊರಗಾಣಿಸುವ ವಿಮರ್ಶಾತ್ಮಕ ಕೃತಿ. ಪೂರ್ವಜರ ಆಧ್ಯಾತ್ಮಿಕ ಅನುಸಂಧಾನದ ಸಾಧನೆಗೆ ಹಿಡಿದ ಕೈಗನ್ನಡಿ. ಬಲು ದೀರ್ಘಕಾಲದ ಚಿಂತನೆಯ ತಪಃಫಲ ವಾಗಿ ಮನಗಂಡ ವಿಚಾರೋದಯದ ಸತ್ಯಸಂಗತಿಯ ಇತಿಹಾಸದ ಅಜ್ಞಾತ ಪುಟಗಳು ಈ ಸಂಕ್ಷಿಪ್ತ ಸಂಶೋಧನ ಗ್ರಂಥದಲ್ಲಿ ಮೊತ್ತಮೊದಲಿಗೆ ಮೈದೋರಿ ಇಂದಿನ ಹಾಗೂ ಮುಂದಿನ ಜನಾಂಗದ ಪ್ರಜ್ಞಾಮತಿಗಳಿಗೆ ಲಭ್ಯವಾಗುವಂತಿರು ವುದು ಒಂದು ಸುದೈವ.

“ಎಲ್ಲ ಬಲ್ಲವರಿಲ್ಲ, ಬಲ್ಲವರು ಬಹಳಿಲ್ಲ, ಬಲ್ಲಿದರು ಇದ್ದು ಬಲವಿಲ್ಲ” ಎಂಬ ಸರ್ವಜ್ಞನ ನುಡಿ ಎಲ್ಲ ಕಾಲಕ್ಕೂ ಎಲ್ಲ ಬುದ್ಧಿಜೀವಿಗಳಿಗೂ, ಶರಣಜೀವನಾದರ್ಶದ ತತ್ತ್ವಾನು ಷ್ಠಾನ ತತ್ಪರರಿಗೂ ಅನ್ವಯಿಸುವ ಅನುಭವೋಕ್ತಿ. ಪೂರ್ವಜರ ಆತ್ಮನಿಷ್ಠ ತತ್ತ್ವಜ್ಞಾನಾಚರಣೆಯ ಬಗೆಗೆ ಅಶ್ರದ್ಧೆ, ಅನಾದರ, ಲಿಂಗ ಮೆಚ್ಚ ಅಹುದಹುದೆನಬೇಕೆಂಬ ಸತ್ಯವನ್ನು ಎತ್ತಿಹಿಡಿ ಯಲಾರದ, ಶರಣರ ಛಲವಿಲ್ಲದ ಜಡಜೀವರ, ನಾಡ ನುಡಿ, ಆದರ ಏಳಿಗೆಗೆ ಹೆಮ್ಮೆ ಪಡದ ಹೃದಯದಾರಿದ್ರ್ಯಪೀಡಿತ ಅಸಂಘಟಿತ ಸಮಾಜ ತನ್ನ ಆತ್ಮಶ್ರೇಯಸ್ಸು, ಲೋಕಮನ್ನಣೆ –ಈ ಎರಡನ್ನೂ ಎಂದೆಂದಿಗೂ ಗಳಿಸಲಾರದು. ಸಮಾಜ ತನ್ನ ಪೂರ್ವಜರ ಆತ್ಮಸಂಪತ್ತಿನ ಮಹತ್ತ್ವವನ್ನರಿಯದೆ, ಅದನ್ನು ಕಟ್ಟಿಕೊಂಡು ನಮಗೇನು ಎಂಬ ನಿರ್ಲಕ್ಷ್ಯ, ಸ್ವ-ಪ್ರತಿಷ್ಠೆ, ಹಣಗಳಿಕೆಗಳನ್ನು ಬಿಟ್ಟು ಧರ್ಮದ ಬಗೆಗೆ ಏನನ್ನೂ

Jangamwadi Math Collection. Digitized by eGangotri

ಅರಿಯಲೂ ಬಯಸದೆ ಅಸಡ್ಡೆ ತೋರುವ ನಿಸ್ತೇಜ ಜನಾಂಗವೆಂದಿಗೂ ರಾಷ್ಟ್ರದಲ್ಲಿ ಒಂದು ಬಲಿಷ್ಠಜನ ವರ್ಗವೆನಿಸದೆ ಇತರರ ದೃಷ್ಟಿಯಲ್ಲಿ ನಗಣ್ಯರೆನಿಸಿಕೊಳ್ಳದೆ ವಿಧಿಯಿಲ್ಲ. ಕನ್ನಡದೊಳ್-ಭಾವಿಸಿದ ಜನಪದದ ಶರಣು ಶರಣೆಂಬ ಸಂಸ್ಕೃತಿಗೆ ಹೆಸರಾಂತ ಕನ್ನಡಿಗರ "ಕನ್ನಡ"ಶಬ್ದಕ್ಕೆ ತೆಲುಗು ಕೋಶದಲ್ಲಿ ಉಪೇಕ್ಷೆ, ಉದಾಸೀನ(Disregard, neglect) ಎಂದೇ ಅರ್ಥವಿರುವುದಕ್ಕೆ ನಮ್ಮನ್ನು ನಾವು ಗೌರವಿಸದ, ಪರದೇಶೀಯ ನಡವಳಿಯ ಸೋಗಿನ ಶ್ರೀಮಂತಿಕೆ, ವಿದ್ಯಾಭಿಮಾನರಾಹಿತ್ಯ ಅನಾದರಗಳೇ ಕಾರಣವಲ್ಲದೆ ಮತ್ತೇನು?

ಪ್ರಸ್ತುತ ''ಆಜೀವ ಮಧುಸ್ಮೃತಿ''ಯಲ್ಲಿ ಕಲ್ಯಾಣದ ಭಕ್ತಭಂಡಾರಿ ಬಸವೇಶ್ವರರು ತಮ್ಮ ಮಹಾಮನೆಯ ಅನುಭವಮಂಟಪದಲ್ಲಿ ಸ್ಥಾಪಿಸಿದ ಶೂನ್ಯಸಿಂಹಾಸನದ ಮೊತ್ತಮೊದಲ ಪೀಠಾಧ್ಯಕ್ಷರಾದ ಪರಮಜಂಗಮ ಮೂರ್ತಿ ಅಲ್ಲಮಪ್ರಭುದೇವರು ನಡಸಿದ ಷಟ್ಸ್ಥಲಾಂತರ್ಗತ ನೂರೊಂದು ಸ್ಥಲದ "ಶೂನ್ಯಸಂಬೋಧೆ"ಯ ತತ್ವಾನುಷ್ಠಾನ ನಿರತರಾಗಿದ್ದ ಶಿವಶರಣರ ಅಂತರಂಗಧ್ಯಾನದ ವಂಶಪರಂಪರಾಗತ ಅನುಭಾವ ಪ್ರವಾಹದ ಉಗಮ ಎಲ್ಲಿಂದ, ಹೇಗೆ, ಯಾವಾಗ ಎಂಬ ವಾಸ್ತವ ಮಾಹಿತಿಯ ಸಂಗತಿಗಳ ನಿಕರವೂ ಪ್ರಮುಖವೂ ಆದ ಹಜ್ಜೆಯ ಗುರುತುಗಳ ನಿರೂಪಣೆಯಿದೆ.

ಈ "ಆಜೀವ ಮಧುಸ್ಮೃತಿ" ಆ ಎಲ್ಲ ವಿಚಾರಗಳನ್ನು ಪ್ರಸ್ತಾಪಿಸುವ ಮೊದಲು ಸ್ವಾಯತ್ತ ಸಂಶೋಧನ ಗ್ರಂಥ ಪ್ರಕಟನೆಯ ಘಟಕವು ಕಳೆದ ಐವತ್ತೈದು ವರ್ಷಗಳ ಸುದೀರ್ಘ ಕಾಲದಲ್ಲಿ ಸದ್ದುಗದ್ದಲವಿಲ್ಲದೆ ತಾನು ಏನು ಸಾಧಿಸಿದೆ ಎಂಬುದರ ಸಿಂಹಾವಲೋಕನದ ಕಿರುಪರಿಚಯವನ್ನು ಮಾಡಿಕೊಟ್ಟಿದೆ. ಯಾರ ತೆರಿಗೆಯಹಣದಿಂದ ವಿದ್ಯಾವಂತರಾದವರು ಜ್ಞಾನಾರ್ಜನೆ ಮಾಡಿದರೂ, ಆ ಸಾರ್ವಜನಿಕರಿಗೆ ವಿದ್ಯಾವಂತನಾದವನು ತನ್ನ ಕ್ಷೇತ್ರದ ಸಾಧನೆಯ ಪರಿಚಯವನ್ನು ಮಾಡಿಕೊಡುವುದು ಕರ್ತವ್ಯವೆಂದು ಭಾವಿಸಿ ಈ ಸುವರ್ಣಸಂಪುಟದಲ್ಲಿ ಅದರ ಮಾಹಿತಿಯನ್ನು ದಾಖಲಿಸಿದೆ.

CC-0. Jangamwadi Math Collection. Digitized by eGangotri

ಮೈಸೂರು ವಿಶ್ವವಿದ್ಯಾನಿಲಯದ ತುಮಕೂರು ಪ್ರಥಮದರ್ಜೆ ಕಾಲೇಜಿನಲ್ಲಿ ಸ್ವಾಯತ್ತ ಸಂಶೋಧನ ಘಟಕವಾಗಿ ಅಸ್ತಿತ್ವಹೊಂದಿ, ವಿಧಿವತ್ತಾಗಿ ಸನ್ 1960 ಅಕ್ಟೋಬರ್ 29 ರ ಶನಿವಾರದಂದು, ಅದು ಪ್ರಸ್ತುತ ಗ್ರಂಥಕರ್ತನ ಜನ್ಮವಾರವೂ ಆಗಿರುವುದು ಕಾಕತಾಳೀಯ ವೆನ್ನಬಹುದು, ದೇವರಾಯನ ದುರ್ಗದ ನಾಮದ ಚಿಲುಮೆಯಲ್ಲಿ ತನ್ನ **"The Unknown Pages in the History of Kannada Literature--1** ಎಂಬ ಪ್ರಕಟನೆಯ ಬಿಡುಗಡೆ ಯಿಂದ ಪ್ರವಹಿಸತೊಡಗಿದ ಸಂಶೋಧನೆ ಹಾಗೂ ಅದರ ಪ್ರಕಟನೆ ಇಲ್ಲಿಯ ತನಕ ನಿರಂತರವಾಗಿ ನಡೆದುಕೊಂಡು ಬಂದು ನಾಡಿನ, ನುಡಿಯ ಇತಿಹಾಸದ ಮುನ್ನಡೆಗೆ ತನ್ನದೇ ಆದ ಕಾಣಕೆಯನ್ನಿತ್ತು ಹಜ್ಜೆಗೆ ಹಜ್ಜೆ ಕೂಡಿಸಿದೆ. ಈಗಾಗಲೆ ಇದರ ಅರಿವು ಜನತೆಯ ಹಾಗೂ ವಿದ್ವನ್ಮಂಡಲಿಯ ಗಮನವನ್ನು ಸೆಳೆದಿದೆ ಎಂಬುದೇ ಸಂತೋಷದ ವಿಷಯ.

ಈ ಸ್ವಾಯತ್ತ ಘಟಕದ ಸ್ಥಾಪನೆಗಿಂತಲೂ ಬಲು ಹಿಂದೆಯೇ 1949ರಲ್ಲಿಯೇ ರಚಿತವಾದ ಕೃತಿ " College Translation." ಆ ಬಳಿಕ 1954ರಲ್ಲಿ ಹರಿಹರಕವಿ ವಿರಚಿತ "ಮನುಚೋಳರಗಳೆ" ಸಮೇತ ಕವಿ ಮಲ್ಲಣಾರ್ಯನ ಭಾವಚಿಂತಾರತ್ನವೂ 1956 ರಲ್ಲಿ ಆಂಗ್ಲಕವಿ ಷೆಲ್ಲಿಯ "A Defence of Poetry"ಎಂಬ ವಿಮರ್ಶಗ್ರಂಥವೂ ಪ್ರಕಟವಾದುವು. 1958ರಲ್ಲಿ ಸಂಪಾದನೆಯ ಶ್ರೀ ಚನ್ನಂಜೇದೇವರು ಸೇರಿಸಿದ "ಶಂಕರದೇವರ ಕಂದ"ವೂ ತುಮಕೂರಿನಲ್ಲಿ ಬೆಳಕುಕಂಡಿತು. ಅಜ್ಞಾತವಾಗಿದ್ದ ಸುಮಾರು ಇಪ್ಪತ್ತು ಶತಕಗಳ ಉಪಲಬ್ಧ ಪದ್ಯಗಳಲ್ಲಿ ಮಾದರಿಯಾಗಿ ಕೊಟ್ಟ ವೃತ್ತಗಳನ್ನುಳ್ಳ ಪೀಠಿಕೆಸಹಿತ ಚಂದ್ರಕವಿ ವಿರಚಿತ ಶಂಕರಶತಕಗ್ರಂಥ 1965ರಲ್ಲಿ ಚಿಕ್ಕಮಗಳೂರು ಕಾಲೇಜಿನಲ್ಲಿ ಪ್ರಕಟಗೊಂಡಿತು. ಪ್ರಥಮದರ್ಜೆ ಕಾಲೇಜಿನ ಪ್ರಿನ್ಸಿಪಾಲ್ ಹುದ್ದೆಯಿಂದ 1977ರಲ್ಲಿ ನಿವೃತ್ತಿ ಹೊಂದಿದ ಮೇಲೆ 1996ರಲ್ಲಿ ಬಹು ದೀರ್ಘಕಾಲದ ಸಂಶೋಧನೆಯ ಫಲವಾಗಿ ಉದಯಾದಿತ್ಯಾಲಂಕಾರ ಮತ್ತು ಮುಕ್ತಸೋಪಾನವೆಂಬ ಗೋರಕ್ಷಶತಕ ಎಂಬ ಎರಡು

 Jangamwadi Math Collection. Digitized by eGangotri

ಗ್ರಂಥಗಳು ಬೆಂಗಳೂರಿನಲ್ಲಿ ಮುದ್ರಣಗೊಂಡು ಬಿಡುಗಡೆಯಾದವು. ಶತಶತಮಾನಗಳಿಂದ ಯಾರ ಕಣ್ಣಿಗೂ ಬೀಳದೆ ಅಜ್ಞಾತವಾಗಿದ್ದ ಮಗ್ಗೆ ಮಾಯಿದೇವರ "ಪ್ರಭುಗೀತಾ" ಗ್ರಂಥ ಸಂಪಾದಕರ ಸುದೀರ್ಘ ಆಂಗ್ಲ ಪೀಠಿಕೆಯಿಂದ ಕೂಡಿದ ಅಲ್ಲಮಪ್ರಭುವಿನ ಕನ್ನಡ ವಚನಗಳ ನಾಗರಲಿಪಿಯ ಸಂಸ್ಕೃತ ವ್ಯಾಖ್ಯಾನಗ್ರಂಥ ಭಾರತದ ಗೌರವಾನ್ವಿತ ಉಪರಾಷ್ಟ್ರಪತಿ ಸನ್ಮಾನ್ಯ ಶ್ರೀ ಭೈರೋನ್‌ಸಿಂಗ್ ಶೇಖಾವತ್ ಅವರಿಂದ 24- 12- 2002 ರಂದು ದೆಹಲಿಯಲ್ಲಿ ಬಿಡುಗಡೆಯಾಯಿತು. ಅದೇ2002ರಲ್ಲಿ ಹೆಚ್ಚಿನ ಆಕರ ವಿಷಯಗಳನ್ನುಳ್ಳ ಪೀಠಿಕೆಯಿಂದ ಕನ್ನಡ ಲಿಪಿಯ ಪ್ರಭುಗೀತೆಯನ್ನೂ ಕನ್ನಡಿಗರ ಸೌಕರ್ಯಕ್ಕಾಗಿ ಹೊರತರಲಾಯಿತು. ಈಚೆಗೆ 2004ರ ಪ್ರಕಟನೆಯಾಗಿ ಕಾವೇರಿ-ಕಪಿಲಾ ಸಂಗಮದ ಸೀಮಾಪ್ರದೇಶದ ಕರ್ನಾಟಕದ ಅಪ್ರಕಟಿತ ರಾಜವಂಶವೊಂದರ "ಅರುವತ್ತುಮೂವರ ಚಾರಿತ್ರ"ವೆಂಬ ಆರಾಧ್ಯದೇವವಿರಚಿತ ಅತ್ಯಪೂರ್ವ ಕೋವಾಸೂತ್ರ ಕಾವ್ಯಪ್ರಕಾರದ ಷಟ್ಪದಿಗ್ರಂಥವನ್ನು ಪ್ರಕಟಿಸಲಾಗಿದೆ. ಈ ಮಧ್ಯೆ ಅನೇಕ ಅಮೂಲ್ಯವಾದ ಸಂಶೋಧನ ಲೇಖನಗಳನ್ನು ನಾಡಿನ ನಾನಾ ವಿದ್ವತ್ಪತ್ರಿಕೆಗಳು ಪ್ರಕಟಿಸಿವೆ.

"Research Corner," in other words "summit of Research" ಅರ್ಥಾತ್ ಸಂಶೋಧನೆಯ ಉತ್ತುಂಗಾಗ್ರ ಇಲ್ಲವೆ ತುತ್ತತುದಿ ಎಂಬರ್ಥದ ಶೀರ್ಷಿಕೆಯ ಈ ಸ್ವಾಯತ್ತ ಘಟಕದ ಪ್ರಕಾಶಿತ ಗ್ರಂಥಗಳ ಸಾಹಿತ್ಯ ಸಂಶೋಧನೆಯ ನೆಲಬೆಲೆಗಳನ್ನು ಮನಗಂಡ ನಾಡಿನ ವಿದ್ವಾಂಸರ ಅಭಿಪ್ರಾಯಗಳನ್ನು ಓದುಗರ ಗಮನಕ್ಕೆ ಅರ್ಧಶತಮಾನದ ಈ ತನ್ನ ಸುವರ್ಣಸಂಪುಟದಲ್ಲಿ ಒಂದೆಡೆ ಸಂಕ್ಷಿಪ್ತವಾಗಿ ಯಾದರೂ ನಿವೇದಿಸದಿದ್ದಲ್ಲಿ ಕರ್ತವ್ಯ ಲೋಪವಾಗದಿರದೆಂದು ಭಾವಿಸಿ ಅವುಗಳನ್ನು ಕೊಡಲಾಗಿದೆ. ಆ ದಿಸೆಯಲ್ಲಿ "College Translation"ಗ್ರಂಥ ಪೂಜ್ಯ ಗುರುವರ್ಯ ರಾಷ್ಟ್ರಕವಿ ಕುವೆಂಪುಅವರಿಂದ "The first of its kind in Kannada" ಎಂದು ಮೆಚ್ಚುಗೆಗಂಡದ್ದು ಅದರ ಸಾರ್ಥಕತೆಯನ್ನು ಸಾರಿದೆ.

CC-0. Jangamwadi Math Collection. Digitized by eGangotri

The Hindu 1949:

The Review On College Translation

"The book is designed for the use of students in colleges and consists of English prose from a varied writers both Indian and English. The Passages are set as exercises in translation and the writers range from Dr. Johnson to G.K Chesterton, Sir James Jeans and Aldus Huxley among theEnglish and Swami Vivekananda to Nehru, Krishna Hutheesingh and Radhakrishnan. There is thus almost infinite variety in subject-matter as well as in style and vocabulary. The author has shown considerable care and taste in the choice of pieces presented and" "...he has shown commendable enterprise and, may we say, a grasp of the real problem to be faced in attempting to teach the art of translation in college classes," S.R

ಆವರೆಗೂ ಭಾಷಾಂತರಪಠ್ಯಗ್ರಂಥರಚನೆಯನ್ನು ಯಾರೂ ಮಾಡದೆಹೋದುದರ ಕಡೆಗೆ ಓದುಗರ ಗಮನವನ್ನು ಸೆಳೆದ ಬಳಿಕ "ಆ ಕೊರತೆಯನ್ನು ಶ್ರೀ ಮಹಾದೇವಪ್ಪನವರು ನೀಗಿದ್ದಾರೆ. ಅವರು ಅದಕ್ಕಾಗಿ ಪಟ್ಟಿರುವ ಶ್ರಮ ಅಂಥ ಕೆಲಸವನ್ನು ಕೈಕೊಂಡವರಿಗಲ್ಲದೆ ಇತರರಿಗೆ ವೇದ್ಯವಾಗದು. ಹೀಗೆ ಶ್ರಮಿಸುವ ಸಂಕಲ್ಪವೇ ಕಡಮೆಯಾಗಿದ್ದರಿಂದ ಇಂಥ ಗ್ರಂಥ ಇದುವರೆಗೆ ಬರಲಿಲ್ಲ. ಪ್ರಕೃತಗ್ರಂಥ ವಿದ್ಯಾರ್ಥಿವೃಂದಕ್ಕೆ ಬೇಕಾದದ್ದು ಎಂಬುದು ನಿಜ."–ಹೀಗೆಂದು ಬರೆದು ತಿಳಿಸಿದವರು ಪೂಜ್ಯಶ್ರೀ ಪ್ರೊ.ಡಿ.ಎಲ್.ನರಸಿಂಹಾಚಾರ್ಯರು.

1954 ರ ಭಾವಚಿಂತಾರತ್ನದ ಬಗ್ಗೆಯೂ ಅವರೇ ತಿಳಿಸಿರುವ ಮಾತುಗಳಿವು: "I am facinated by the intro-

CC-0. Jangamwadi Math Collection. Digitized by eGangotri

duction to the work. To find out the sources of the story the way in which you have brought together all the information in Tamil and Telugu is praise worthy." "I can say with confidence that here you have broken new ground and achieved something more than that of other previous workers in the field.**One step further is all that one can be expected of scholarship.**" "...The glossary and notes are evidences of the enormous labour you have done with love."

Extract from Foreword to "A Defence of Poetry"

" The gifted translator must have a mind which is at once receptive and creative.Sri. C. Mahadevappa is one of those rare persons who have this two-fold capacity. He has brought to the task of translating Shelley's Defence of Poetry, a rare combination of energy, industry and intellectual honesty. He has given us a translation which is at once forceful, scholarly and true to the spirit of the original." "...It were well if more people would follow the lead of Sri. C. Mahadevappa and give the best that has been thought and said in English language." ---ಕವಿ ಷೆಲ್ಲಿಯ ಏಕೈಕ ಗದ್ಯಕೃತಿಯಾದ "A Defence of Poetry" ಎಂಬ ಕಾವ್ಯವಿಮರ್ಶೆಯ ಅನುವಾದ ಗ್ರಂಥವಾದ 1956 ರ 'ಕಾವ್ಯಸಮರ್ಥನೆ'ಗೆ ಪೂಜ್ಯ ಗುರುವರ್ಯರಾದ ಪ್ರೊ. ವಿ. ಎ. ತ್ಯಾಗರಾಜನ್ ಅವರು ನೀಡಿರುವ ಅಮೂಲ್ಯವಾದ ಅಭಿಪ್ರಾಯದ ಅಲ್ಲಲ್ಲಿನ ನುಡಿಗಳ ಮೇಲಣ ಉಲ್ಲೇಖ ಗ್ರಂಥದ ಮೌಲ್ಯವನ್ನು ಮನಗಾಣಿಸಿದೆ.

CC-0. Jangamwadi Math Collection. Digitized by eGangotri

1958ರ "ಶಂಕರದೇವರ ಕಂದ"ದ ಮುನ್ನುಡಿಯಲ್ಲಿ ಶ್ರೀ ಉರವಕೊಂಡ ಜಗದ್ಗುರು ಮಹಾಸ್ವಾಮಿಗಳವರ ಅನಿಸಿಕೆಯಿದು: "ಗ್ರಂಥವು ಕಿರಿದಾಗಿದ್ದರೂ ಅತ್ಯಂತ ಹಿರಿದಾದ ಭಾವವನ್ನೊಳಗೊಂಡ ಅತಿ ಅತಿ ಪವಿತ್ರಕೃತಿಯಾಗಿದೆ. ಕವಿಯ ಹೃದಯಾನುಭವದ ಸರಳವೂ ಸುಂದರವೂ ಆದ ರಸನಿರೂಪಣೆ ಅಚ್ಚುಮೆಚ್ಚಾಗಿದೆ. ಭಕ್ತಿಯ ಹೊನಲು ಹರಿದಿದೆ. ಅವ್ಯಕ್ತವಾಗಿದ್ದ ಈ ಪ್ರಾಚೀನ ಕೃತಿಯನ್ನು ಸಂಶೋಧಿಸಿ ಪ್ರಕಟಿಸಿದ ಶ್ರೀ ಮಹಾದೇವಪ್ಪನವರು ಕನ್ನಡ ನಾಡಿಗೆ ದೊಡ್ಡ ಸೇವೆ ಯನ್ನು ಸಲ್ಲಿಸಿದ್ದಾರೆ." "ಜೀವನವನ್ನು ಉನ್ನತಗೊಳಿಸುವ ಅಂಶಗಳು ಮುಖ್ಯವಾಗಿ ಎರಡು; ಒಂದು ಸ್ಫೂರ್ತಿ, ಇನ್ನೊಂದು ಪ್ರಯತ್ನ. ಸ್ಫೂರ್ತಿಯೇ ಅದೆಷ್ಟೋ ಸಲ, ಪ್ರಯತ್ನಕ್ಕೆ ಕಾರಣ ವಾಗುವುದರಿಂದ ಅದರ ಸ್ಥಾನ ಪ್ರಯತ್ನಕ್ಕಿಂತ ಹಿರಿದು. ಸ್ಫೂರ್ತಿಯಿಂದಲೇ ಜೀವನೋತ್ಸಾಹದ ಕಾರಂಜಿ ಚಿಮ್ಮ ಬಲ್ಲುದು. ವಿಹಿತವಾದ ಮಾರ್ಗದಲ್ಲಿ ಪ್ರವಹಿಸಿದ ಜೀವನೋ ತ್ಸಾಹವು ಉನ್ನತಿಗೆ ಕಾರಣವಾಗುತ್ತದೆ. ಸ್ಫೂರ್ತಿಯ ಕಾರ್ಯ ವಿದ್ಯುತ್ತಿನಂತೆ. ಮಹಾಪುರುಷರು ಪಡೆದ ಪ್ರೇರಣೆ ಅವರವರ ಮಟ್ಟಿಗೆ ಉಳಿಯದೆ ಇಡಿಯ ನಾಡಿಗೆ ಹರಡುತ್ತದೆ. ಮಹಾವ್ಯಕ್ತಿಯೊಬ್ಬನು ಹಿರಿಯ ಗುರಿಯತ್ತ ಸಾಗಿದಾಗ ಆವನ ಭಾವಭಾವನೆಗಳು ಇಡಿಯ ಜನಾಂಗದ ಭಾವಭಾವನೆಗಳನ್ನು ಉದ್ದೀಪ್ತಗೊಳಿಸುತ್ತವೆ" ಎಂದು ಹೇಳಿ ಶ್ರೀ ಜಗದ್ಗುರುಗಳು ಮುನ್ನುಡಿಯಲ್ಲಿ ಗ್ರಂಥದ ಬಗೆಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ.

1965 ಚಂದ್ರಕವಿವಿರಚಿತ ಅಪ್ರಕಟಿತ ಶಂಕರಶತಕದ ಪೀಠಿಕೆಯಲ್ಲಿ ಅಜ್ಞಾತವಾಗಿದ್ದ 20 ಶತಕಗಳ ಉಪಲಬ್ಧ ವೃತ್ತಗ ಳಲ್ಲಿ ಕೆಲವನ್ನು ಉದ್ಧರಿಸಲಾಗಿತ್ತು. ಆ ಎಲ್ಲ ಶತಕಗಳ ಪದ್ಯಗಳಲ್ಲಿ ಕೆಲವನ್ನು ತ್ರೈವಾರ್ಷಿಕ ಯೋಜನೆಯ ಪುಸ್ತಕಮಾಲೆಯ 1974ರ ಕರ್ಣಾಟಕ ಕವಿಚರಿತೆಯ ಮುದ್ರಣದ ಅನುಬಂಧ ೧ ರಲ್ಲಿ ಚಾಮರಾಜ ಪೇಟೆ, ಕನ್ನಡ ಸಾಹಿತ್ಯ ಪರಿಷತ್ತು, ಬಳಸಿಕೊಂಡಿರುವುದು ತಿಳಿದುಬಂದಿದೆ. ಹಾಗೆ ಮಾಡಿಕೊಳ್ಳುವು

CC-0. Jangamwadi Math Collection. Digitized by eGangotri

ದರಿಂದ ತನ್ನ ಮುದ್ರಣಗ್ರಂಥಕ್ಕೆ ಪೂರಕ ಸಂಶೋಧನಾತ್ಮಕ ವಸ್ತುವನ್ನು ಸಂಗ್ರಹಿಸಿಕೊಟ್ಟಿದ್ದೇವೆ, ಅದು ಗರಿಗಟ್ಟಿದೆ ಎಂದಿರಬಹುದು. ಆದರೆ ಸ್ವತಂತ್ರವಾದ ಸ್ವಾಯತ್ತ ಘಟಕ ವೊಂದರ ಅನೇಕ ವರ್ಷಗಳ ಬೌದ್ಧಿಕಶ್ರಮದ ಫಲವಾಗಿ ಗಳಿಸಿದ ಗ್ರಂಥಸ್ವಾಮ್ಯದ ಸಾಹಿತ್ಯಸಂಶೋಧನ ಸಾಮಗ್ರಿಯನ್ನು ಒಂದು ಸಾರ್ವಜನಿಕ ಸಂಸ್ಥೆ ಅನುಮತಿಯಿಲ್ಲದೆ ಬಳಸಿಕೊಂಡಿರುವು ದಲ್ಲದೆ ಆ ಮೂಲಪ್ರಕಟನ ಸ್ವಾಯತ್ತ ಘಟಕದ ಹೆಸರನ್ನೂ ಕಾಣಸದೆ ಅದಕ್ಕೆ ಸಲ್ಲಬೇಕಾದ ನ್ಯಾಯಯುತವಾದ ಗೌರವವನ್ನು ತೋರಿಸದಿರುವುದು ನಮ್ಮ ಕನ್ನಡ ನಾಡಿನ ಸಂಸ್ಕೃತಿಗೆ ನಾವು ನೀಡುವ ಮನ್ನಣೆಯೆ? ಹೊಸ್ತಿಲನ್ನು ಪೂಜಿಸಿಯಾದ ಮೇಲೆ ಅದಕ್ಕೆವಂದನೆಯನ್ನು ಸಲ್ಲಿಸಿದಮೇಲಾದರೂ, ಅದನ್ನು ದಾಟುವ ಪರಿಪಾಟ ಸಹ್ಯ, ಸಹಜ. ದೇಹಲೀದೀಪಾಂಕುರಜ್ಯೋತಿ ಯಂತಹ ಮೂಲ ವೃತ್ತಗಳ ಕರ್ತರಾದ ಕವಿಗಳ ವಿಶ್ವಚೇತನ ಆಗ ತಮಗೆ ಅಂದಿನ ಪರಿಷತ್ತಿನಿಂದ ಮಾನ್ಯತೆ ಸಂದಂತೆ ಎಂದುಕೊಳ್ಳಬಹುದಿದ್ದಿತು. ಆದರೆ ಇದು ದುರುಪಯೋಗದ ದೂರೂ ಅಲ್ಲ, ದೂಷಣೆ ಮೊದಲೇ ಅಲ್ಲ; ಆತ್ಮಚಿಂತನೆಯ ಕೊಡುಗೆಯಷ್ಟೆ.

"ಕನ್ನಡಸಾಹಿತ್ಯ ಚರಿತ್ರೆಯ ಅಜ್ಞಾತಪುಟಗಳು-1" ಎಂಬುದರಲ್ಲಿ ಕಾಣಸದ ಇನ್ನೆರಡು ಗ್ರಂಥಗಳಲ್ಲಿ ಒಂದು ಉದಯಾದಿತ್ಯಾಲಂಕಾರ, ಮತ್ತೊಂದು ಸಂಶೋಧನಕೋಟಿ ಓಲೆ ಭಂಡಾರದ ಪ್ರತಿಯ ಆಧಾರದಿಂದ ಸಂಪಾದಿಸಿಸಂಶೋಧ-ನಾತ್ಮಕ ಲೇಖಗಳನ್ನೊಳಗೊಂಡ ಗೋರಕ್ಷಶತಕ-ಈ ಎರಡೂ ಪ್ರಕಟನೆಗೊಂಡದ್ದು 1996ರಲ್ಲಿ. ನನ್ನ ಗುರುಗಳೂ ಕರ್ನಾಟಕ ವಿಶ್ವವಿದ್ಯಾಲಯದ ಸಂಸ್ಕೃತ ಪ್ರಾಧ್ಯಾಪಕರೂ ಆಗಿದ್ದ ಡಾ। ಕೆ. ಕೃಷ್ಣಮೂರ್ತಿಗಳು ಅಲಂಕಾರಗ್ರಂಥಕ್ಕೂ ಕುಂಡಲಿನೀ ಯೋಗತಜ್ಞರಾದ ಡಾ। ನೀಲಕಂಠಸ್ವಾಮೀಜೀ ಅವರು ಗೋರಕ್ಷಶತಕವೆಂಬ ಯೋಗಗ್ರಂಥಕ್ಕೂ ಮುನ್ನುಡಿಯನ್ನಿತ್ತು ಉಪಕರಿಸಿದ್ದಾರೆ.

"ಉದಯಾದಿತ್ಯಾಲಂಕಾರದ ಹಿಂದಿನ ಕೆಲವು ಪ್ರಸಿದ್ಧ ಆವೃತ್ತಿಗಳಲ್ಲಿ ಕಂಡುಬಾರದ ಆರಂಭದ ಹಾಗೂ

CC-0. Jangamwadi Math Collection. Digitized by eGangotri

ಅಂತ್ಯದ ಪದ್ಯಗಳನ್ನು ವಿಶೇಷ ಅಧ್ಯಯನಕ್ಕೆ ಹಿಂದಿನ ಇಲ್ಲವೆ ಇಂದಿನ ವಿದ್ವಾಂಸರು ಯಾರೂ ಗುರಿಪಡಿಸಿಯೇ ಇಲ್ಲ. ಪ್ರೊ. ಸಿ. ಮಹಾದೇವಪ್ಪನವರ ಸೂಕ್ಷ್ಮಗ್ರಾಹಿಯಾದ ಪರಿವೀಕ್ಷಣೆಯಲ್ಲಿ ಗ್ರಂಥಕಾರನ ಕಾಲ, ದೇಶ, ವ್ಯಕ್ತಿತ್ವಗಳನ್ನು ಹಾಗೂ ಶಾಸ್ತ್ರದ ಹಿರಿಮೆಯನ್ನು ಕುರಿತಂತೆ ಐತಿಹಾಸಿಕ ಮಹತ್ವದ ಅನೇಕ ಸಂಗತಿಗಳು ಪ್ರಪ್ರಥಮವಾಗಿ ವ್ಯಕ್ತವಾಗಿವೆ.ಸಭಾಷ್ಯಾರತ್ನಮಂಜೂಷಿಕಾ ಛಂದೋವಿಚತಿಯಲ್ಲಿ ಲಕ್ಷ್ಯವಾಗಿ ರಚಿತವಾದ "ಸಲಕ್ಷಣವಿಲಿಪ್ತಃ...."ಎಂಬ ಈ ರಾಜರಮಣೀಯ ವೃತ್ತ ಹಾಗೂ ಕಾವ್ಯಾವಲೋಕನದ "ವರಗೋಮೇದಕ ವಿಸ್ಫುರತ್..."ಎಂಬ ನಾಗವರ್ಮನ ಪದ್ಯದಲ್ಲಿ ಅಡಗಿರುವ ಶ್ಲೇಷಾಲಂಕಾರವನ್ನು ಬಹು ಸೂಕ್ಷ್ಮ ದೃಷ್ಟಿಯಿಂದ ಗುರುತಿಸಿ ಅದರಲ್ಲಿ ಅಡಗಿರುವ ಉದಯಾದಿತ್ಯನ ಪ್ರಶಂಸೆಯ ರಹಸ್ಯವನ್ನು ಹೊರಗೆಡಹಿ ವಿವರಿಸಿರುವ ಮಾನ್ಯ ಸಂಪಾದಕರ ಪ್ರತಿಭೆಗೆ ನಾನು ಮಾರುಹೋಗಿದ್ದೇನೆ. ಉದಯಾದಿತ್ಯನು ವೀರಶೈವ ಕವಿಯೆಂಬುದು ಈ ಶೋಧನೆಯಿಂದ ಸ್ಫುಟವಾಗು ತ್ತದೆ. ಇವರೇ ಉದಾಹರಿಸಿರುವ ಷಡಕ್ಷರದೇವನ ಪದ್ಯವು ಸಹಾಯಕ ಸಾಕ್ಷ್ಯವನ್ನು ಒದಗಿಸಿದೆ. "...ಅನೇಕ ಹಸ್ತಪ್ರತಿಗ ಳಿಂದ ಶಾಸ್ತ್ರೀಯವಾಗಿ ಪಾಠಾಂತರ ವನ್ನು ವ್ಯವಸ್ಥಿತವಾದ ರೀತಿಯಲ್ಲಿ ಒದಗಿಸಿರುವುದರಿಂದ ಈ ಸಂಪಾದನಗ್ರಂಥಕ್ಕೆ ವಿದ್ವನ್ಮಾನ್ಯತೆ ವ್ಯಾಪಕವಾಗಿ ದೊರೆಯುವುದರಲ್ಲಿ ಸಂಶಯವಿಲ್ಲ." ಈ ಬಗೆಯಲ್ಲಿ ಗ್ರಂಥವಿಮರ್ಶೆಯನ್ನು ಮಾಡಿರುವ ಡಾ। ಕೆ. ಕೃಷ್ಣಮೂರ್ತಿ ಗಳಿಗೆ ನನ್ನ ವಂದನೆಗಳು.

ಗೋರಕ್ಷಶತಕದ ಮುನ್ನುಡಿಯಲ್ಲಿ "ಈ ಅನುವಾದದ ಸಂಕ್ಷಿಪ್ತ ಸಮೀಕ್ಷೆಯನ್ನು ಕುರಿತು ವಿವೇಚಿಸುವ ಮೊದಲು ಗ್ರಂಥಸಂಪಾದನೆಯ ಬಗೆಗೆ ಒಂದು ಮಾತು. ಆ ಕೆಲಸ ಸುಲಭ ವೇನಲ್ಲ. ಅಲ್ಲದೆ ಶುಷ್ಕವೂ ಆದುದೇನಲ್ಲ ಎಂಬುದರ ಅರಿವು ನಮಗಿರುವುದಗತ್ಯ. ಶಾಸ್ತ್ರೀಯ ವಿಷಯಗಳನ್ನು ಅದರಲ್ಲಿಯೂ ಯೋಗಶಾಸ್ತ್ರದ ಅನುಭಾವಿಕ ಸತ್ಯಸಾಧನೆಯ ಸ್ವರೂಪದ ಗಾಢವಾದ ಅರಿವನ್ನು ಮನನಮಾಡಿ ಅನುವಾದ ಮಾಡಲು

CC-0. Jangamwadi Math Collection. Digitized by eGangotri

ತೊಡಗಿದಾಗಲೇ ಗ್ರಂಥಸಂಪಾದನ ಕಾರ್ಯ ಯಶಸ್ವಿಯಾಗುವುದು. ಶಾಸ್ತ್ರಗ್ರಂಥದ ಅನುವಾದ ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಆದ ಕೇವಲ ಭಾಷಾ ಪರಿವರ್ತನೆ ಮಾತ್ರ ವಲ್ಲ. ಅದು ಗುರುಪಾರಂಪರ್ಯದಿಂದ ಆಗಮಜ್ಞಾನದೊಡನೆ ಬಂದ ಆತ್ಮಾನುಭೂತಿಯ ಆವಿಷ್ಕಾರವೂ ಹೌದು. ನಾಥ ಸಿದ್ಧಾಂತದ ಸಂಸ್ಕೃತಗ್ರಂಥದ ಮೂಲಕ್ಕೆ ಯಥಾರ್ಥವಾಗಿ ಈ ಕನ್ನಡ ಅನುವಾದವಿದೆ. ಸರಳವೂ, ಸುಲಭವೂ ಆದ ವಿಷಯನಿರೂಪಣೆ ಮನಮುಟ್ಟುವಂತಿರುವುದು ಇದರ ವೈಶಿಷ್ಟ್ಯ. ಗೋರಕ್ಷನಾಥರ ಅನುಭಾವದ ಎತ್ತರವನ್ನೂ ಅದರ ಆ ಭವ್ಯದರ್ಶನದ ಲಾಭವನ್ನು ಈ ಅನುವಾದಕೃತಿಯಿಂದ ಪಡೆಯಬಹುದಾಗಿದೆ." "ಸಹೃದಯ ಕನ್ನಡಿಗ ಮುಮುಕ್ಷುಗಳು ಈ ಮುಕ್ತಿಸೋಪಾನದ ಮೆಟ್ಟಿಲುಗಳನ್ನು ಸಾವಧಾನವಾಗಿ ಹತ್ತಿ ಜೀವನವನ್ನು ಸಾರ್ಥಕಗೊಳಿಸಿಕೊಳ್ಳುವಂತಾಗಲಿ ಎಂದು ಹಾರೈಸುತ್ತೇವೆ. ಶ್ರಮವಹಿಸಿ ಗ್ರಂಥಸಂಪಾದನ ಮಾಡಿ ಕನ್ನಡಿಗರ ಹಸ್ತಕ್ಕಿತ್ತ ಲೇಖಕರಿಗೆ ಜನತೆ ಆನಂದಬಾಷ್ಪದ ಉಡುಗೊರೆಯನ್ನು ಕೊಡುವಂತಾಗಲಿ...." ಡಾ। ನೀಲಕಂಠಸ್ವಾಮೀಜಿ ಅವರ ಸವಿನುಡಿಗಳ ಸದಭಿಪ್ರಾಯ.

ಪ್ರೊ. ಜಿ. ವೆಂಕಟಸುಬ್ಬಯ್ಯನವರು 8.9.1998ರ ಪತ್ರಮುಖೇನ "ಗೋರಶತಕದ ಎಲ್ಲ ಪಾರಿಭಾಷಿಕ ಶಬ್ದಗಳ ಸರಳ ವಿವರಣೆ ಹೃದ್ಯವಾಗಿದೆ. ಒಟ್ಟು ಗ್ರಂಥಸಂಪಾದನೆ, ಅರ್ಥ ವಿವರಣೆ ಅನುಬಂಧ-ಎಲ್ಲಸಮಗ್ರವಾಗಿ ಪ್ರೌಢವಾಗಿವೆ. ಉದಯಾದಿತ್ಯಾಲಂಕಾರದಲ್ಲಿದ್ದ ಕೆಲವು ಸಮಸ್ಯೆಗಳನ್ನು ನೀವು ಬಿಡಿಸಿ ಸ್ಪಷ್ಟಪಡಿಸಿದ್ದೀರಿ. ಇವೆರಡೂ ದೊಡ್ಡ ವಿದ್ವಾಂಸರು ಮಾಡುವ ಕೆಲಸ..."ಎಂದು ಆ ಗ್ರಂಥಗಳ ಸಂಪಾದನಪ್ರಕ್ರಿಯೆಯ ಬಗೆಗೆ ಮೆಚ್ಚುಗೆ ಹಾಗೂ ಹೆಮ್ಮೆಯನ್ನು ವ್ಯಕ್ತಪಡಿಸಿದ್ದಾರೆ.

ಅಜ್ಞಾತಗ್ರಂಥಗಳ ಪಟ್ಟಿಯ ಬಹು ಮುಖ್ಯವೂ ಅಪೂರ್ವವೂ ಆದ ಗ್ರಂಥಗಳಲ್ಲಿ "ಪ್ರಭುಗೀತಾ" ಒಂದು. ಶೂನ್ಯಸಿದ್ಧಾಂತ ಇಲ್ಲವೆ ಬಯಲತತ್ತ್ವವೇ ಮೂರ್ತಿವೆತ್ತ ಅಲ್ಲಮಪ್ರಭುದೇವರ ವಚನಗಳ ಸಂಸ್ಕೃತ ವ್ಯಾಖ್ಯಾನರೂಪ

CC-0. Jangamwadi Math Collection. Digitized by eGangotri

ಗ್ರಂಥವದು. ಆ ಗ್ರಂಥದಲ್ಲಿ ಉಕ್ತವಾದ ಶ್ಲೋಕಗಳಲ್ಲಿ ವ್ಯಕ್ತವಾದ ಶಿವಯೋಗದ ಸಹಜಾನಂದಾನುಭವದ ಪರಿಣಾಮಸುಖವನ್ನು ಪಡೆದುಕೊಂಡ ವಾರಣಾಸಿಯ ಡಾ. ವಾಗೀಶ ಗುರೂಜಿ ಹಾಗೂ ಕೆನಡಾದೇಶದ ಯೋಗಿವರ್ಯರೊಬ್ಬರ ಆತ್ಮೀಯ ಪ್ರತಿಕ್ರಿಯೆಯ ನುಡಿಗಳಿಗೆ ನೋಡಿ:

ಧ್ಯಾನಯೋಗಿಳ ಆಧ್ಯಾತ್ಮಿಕ ಅನುಭವಗಳನ್ನು ಕುರಿತ ತಮ್ಮ 'ವಾಗ್ಯೋಗ ಕುಂಡಲಿನಿ'ಯಲ್ಲಿ ಕೆಲವರು ಇಡಾ-ಪಿಂಗಳ ಮಧ್ಯನಾಡಿಯಾದ ಸುಷುಮ್ನೆಯ ಸಂಬಂಧವನ್ನುಳ್ಳ ಭ್ರೂಮಧ್ಯದ ಆಜ್ಞಾಚಕ್ರದಲ್ಲಿ ವಾಯುವೀಧಾರಣ ಮಾಡಿದಾಗ ಕಣ್ಣೀರು ಏಕೆ ಬರುತ್ತದೆ ಎಂಬ ಬಗೆಗೆ ಪೂಜ್ಯ ವಾಗೀಶ ಗುರೂಜಿ ಪ್ರಭುಗೀತೆಯ ಪ್ರಾಣಲಿಂಗಿಸ್ಥಲದ 333, 334 ಮತ್ತು 335 ಈ ಮೂರು ಶ್ಲೋಕಗಳ ಪ್ರಸ್ತಾಪ ಮಾಡುತ್ತ ಅವುಗಳ ಈ ಅನುವಾದವನ್ನು ಅಲ್ಲಿ ಕೊಟ್ಟಿದ್ದಾರೆ:

"When the air gives Ida and pingala up and it moves from Sushumna to the third eye, two a leaf (a two leaf)lotus, then eyes become full of tears with bliss. Internal soul appears with its own shining in the third eye between eye brow."

This is the quote from Canadian Yoga teacher over which the Prabhugeeta is quoted:

" During my Vagyoga meditation I was able to move energy systematically through the chakras of particular significance were sensitive at the left side of my neck, my ear and my throat. There resulted in a spontaneous flow of tears unmotivated by emotions."

ಹೀಗೆ ಕೃತಿ ತನ್ನ ಸೀಮಾತೀತ ಘನತೆಯ ಅಸ್ತಿತ್ವವನ್ನು, ಕನ್ನಡ ನಾಡಿನ ಗಡಿಯನ್ನು, ಏಕೆ, ಇಡೀ ರಾಷ್ಟ್ರದ ಸೀಮೆಯನ್ನೇ

Jangamwadi Math Collection. Digitized by eGangotri

ದಾಟಿ ದೂರ ದೂರದ ಆಚೆಯ ತೀರಕ್ಕೂ ಹೋಗಿ ನೆಲೆಗೊಳಿಸಿಕೊಂಡಿದೆ. ಯೋಗಿಶ್ವರರ ಹೃದಯವನ್ನು ಸೂರೆಗೊಳ್ಳುವ ಮೂಲಕ ತನ್ನ ಜಾಗ್ರತ್ ಜಗದ್ವ್ಯಾಪಕತ್ವವನ್ನು ಗಳಿಸಿಕೊಂಡಿರುವ ಹಾಗೂ ವಿಶ್ವದ ಮೂಲಸಿದ್ಧಾಂತವಾದ ಆತ್ಮನಿಷ್ಠ ಗಗನತತ್ತ್ವಪ್ರತಿಪಾದಕ ದಾರ್ಶನಿಕ ಗ್ರಂಥವಾಗಿದೆ.

ಆತ್ಮಸಂಸ್ಕೃತಿಯ ವಿಕಾಸಕ್ಕೆ ಅವರಿವರೆಂಬ ಕಾಲ, ದೇಶ, ದೂರ. ಬಣ್ಣ, ಲಿಂಗ, ಜಾತಿ, ವರ್ಣ, ಆಶ್ರಮ, ಕುಲ ಗೋತ್ರ ಗುಣಾದಿಗಳ ಭೇದಗಳಾವುವೂ ಎಂದಿಗೂ ಅಡ್ಡಿಯಾಗವು. ನಿಜಭಾವದ ಸರ್ವಾತ್ಮೈಕತೆಗೆ ಅಡ್ಡಗೋಡೆಯೆಂಬುದೇ ಇಲ್ಲ. ಅನುಭಾವಿಕ ಆತ್ಮವಿಕಾಸಕ್ಕೆ ಹೆಸರಾದ ಈ ಸ್ವದೇಶೀ ಕೃತಿ ಸರ್ವದೇಶೀಯ; ವಿಶ್ವವಿಖ್ಯಾತ ಸಂಸ್ಕೃತಛಂದೋಬಂಧವನ್ನು ತಾಳಿ ಬಯಲಬೆಳಗನ್ನು ಬೀರಿದ ಮಹತ್ ತತ್ತ್ವಚಿಂತಕ ಕೃತಿ. ಕನ್ನಡ ನಾಡಿನ ಆತ್ಮಸಂಪತ್ತು. ಅಂತಹ ಭಾಗ್ಯವನ್ನು ಪಡೆದಿದ್ದೂ ಅದನ್ನರಿಯದ, ಅನುಭವಿಸದ ಬಾಳು ಬೆಳಗುವುದಾದರೂ ಹೇಗೆ? ಇಂದು ಕಾಣದ ಮುಕ್ತಿ ಮತ್ತಿನ್ನೆಂದಿಗೂ ಇಲ್ಲವೆಂಬುದೇ ಶರಣರ ಜೀವನ್ಮುಕ್ತಿಯ ಸಂದೇಶ. ಸರ್ವಭವದಿಂದ ಬಂದ ಆತ್ಮವಸ್ತುವನ್ನು ಬಿಟ್ಟು ಮತ್ತೇನನ್ನು ತಾನೆ ತಿಳಿಯುವುದು? ಸರ್ವಕಾರಣ ತನುವಾದ ಭಾವಲಿಂಗವನ್ನು, ತಾತ್ತ್ವಿಕ ಮಹಾಲಿಂಗವೆಂದು, ಬಯಲೆಂದು ಕರೆದಿದ್ದಾರೆ. ಒಳಹೊರಗೆಂಬ ಉಭಯವಿಲ್ಲದ ಆ ಬಯಲನ್ನು ಬಿಟ್ಟು ಆತ್ಮವಸ್ತುವುಂಟೆ? ಆ ಬಯಲೇ ಪರಾತ್ಪರ ವಸ್ತು (Supreme Soul), ಅಚಲಾತ್ಮ, ಕದಲಿ. ಆ ಪರಾತ್ಪರವಸ್ತುವಿನ ನೆನಹೇ ಅರ್ಥಾತ್ ಜ್ಞಾನರತ್ನದ ಬೆಳಗೆ ಶೂನ್ಯಕ್ಕೆ ಒಡಲು. ವಾಙ್ಮನಕ್ಕೆ ಅಗೋಚರ. ಆತ್ಮ ತಾನಾದ ವಸ್ತು ನೀರು ನೀರು ಕೂಡಿದಂತೆಎಂಬುದು ಶರಣರ ಎಣಿಕೆ. "ತನ್ನಲ್ಲಿ ಹುಟ್ಟಿದ ನೆನಹಿನ ಬಿನ್ನಣವನೇನೆಂಬೆನ್ನೈ ರಾಮನಾಥ" ಎಂಬ ಅಚ್ಚರಿಯ ಅನುಭವವಾದರೋ ವಿಶ್ವಚೈತನ್ಯ ಚೇತನದ ಪ್ರಜ್ಞಾಂತರಂಗದ ಅನುವಂಶೀಯ ಆಧ್ಯಾತ್ಮಿಕ ನುಡಿಗಡೆಗೊಡದ ಮಿಡಿತ.

CC-0. Jangamwadi Math Collection. Digitized by eGangotri

"ಕಾಯಜೀವವೆರಡೂ ಕೂಡಿ ಕಂಡ ಜ್ಞಾನರತ್ನದ ರತಿ ಬೇರೆ" ಎಂಬ ಉದ್ಗಾರ ಶರಣರದು.

2001ರ ಆಂಗ್ಲಪೀಠಿಕೆಯ ದೇವನಾಗರಿ ಲಿಪಿಯ ಪ್ರಭುಗೀತಾ ಗ್ರಂಥವು ನಿವೃತ್ತ ಸರ್ವೋಚ್ಚನ್ಯಾಯಮೂರ್ತಿ ಶ್ರೀ ರಂಗನಾಥಮಿಶ್ರರ ಮತ್ತು ಆಹ್ವಾನಿತ ಸಭಿಕರ ಸಮ್ಮುಖದಲ್ಲಿ ಭಾರತದ ಗೌರವಾನ್ವಿತ ಉಪರಾಷ್ಟ್ರಪತಿ ಶ್ರೀ ಭೈರೋನ್ ಸಿಂಗ್ ಶೇಖಾವತ್ ಅವರಿಂದ ಬಿಡುಗಡೆಯಾಯಿತು. ಮಠಗಳನ್ನು ನೆನೆದಾಗ ಭಗವದ್ಗೀತೆಯೂ, ಆ ಭಗವದ್ಗೀತೆಯನ್ನು ನೆನೆದಾಗ ಪ್ರಭುಗೀತೆಯೂ ನೆನಪಿಗೆ ಬಂದು ಮನಸೆಳೆಯುತ್ತದೆಯೆಂದು ಅವರು ಕೃತಿಯನ್ನು ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು. ಸನ್ಮಾನ್ಯ ಶ್ರೀ ನ್ಯಾಯಮೂರ್ತಿ ರಂಗನಾಥಮಿಶ್ರರು ಇಡೀ ದೇಶದಲ್ಲಿರುವ ಮಠಗಳಲ್ಲಿ ಅರ್ಧಕ್ಕಿಂತಲೂ ಹೆಚ್ಚು ಲಿಂಗಾಯತ ಮಠಗಳು ಕನ್ನಡ ನಾಡಿನಲ್ಲಿದ್ದು ಶಿಕ್ಷಣಕ್ಷೇತ್ರದಲ್ಲಿ ಅಪಾರ ಸೇವಾಕಾರ್ಯದಲ್ಲಿ ತೊಡಗಿವೆ ಎಂದು ಸ್ಮರಿಸಿದರು. ದಕ್ಷಿಣ ಉತ್ತರಗಳೆರಡನ್ನೂ ಒಂದೆಡೆಗೆ ತಂದು ರಾಷ್ಟ್ರದ ಅಖಂಡತೆಗೆ ಸಂಕೇತವಾಗಿರುವ ಗ್ರಂಥ ಪ್ರಭುಗೀತೆಯೆಂದು ಕೊಂಡಾಡಿದವರು ಗುಜರಾತಿನ ಮಾನ್ಯಶ್ರೀ ಮೋಹನ್‌ಪ್ರಕಾಶ ಅವರು. ಅಲ್ಲಮ ಪ್ರಭುದೇವರ ಶಿವಸಂಬಂಧವಾದ ಗ್ರಂಥವನ್ನು ಬಿಡುಗಡೆ ಮಾಡುತ್ತಿರುವವರು ಸನ್ಮಾನ್ಯ ಭೈರೋನ್ ಸಿಂಗ್ ಶೇಖಾವತ್ -ಇದೆಂತಹ ಶಿವ-ಭೈರವರ ದೈವೀಯೋಗದ ಸಂಬಂಧ ಎಂದು ಸೋಜಿಗಗೊಂಡ ಅವರ ಸಂತೋಷದಲ್ಲಿ ಸಭಿಕರೆಲ್ಲರೂ ಹರ್ಷೋಲ್ಲಾಸದಿಂದ ಪಾಲ್ಗೊಂಡರು. ರಾಷ್ಟ್ರದ ರಾಜಧಾನಿ ದೆಹಲಿಯಲ್ಲಿ 24. 12. 2002ರ ಅಂದಿನ ಶುಭದಿನ ಅತ್ಯದ್ಭುತ ಮಹತ್‌ಕೃತಿಯೊಂದು ಐದುಶತಮಾನಗಳ ತನ್ನಅಜ್ಞಾತವಾಸದಿಂದ ಬಿಡುಗಡೆಯನ್ನು ಹೊಂದಿ ಲೋಕಕ್ಕೆ ಹೊಸಬೆಳಕನ್ನು ಬೀರತೊಡಗಿದುದು 12,15ನೆಯ ಶತಮಾನಗಳ ಕನ್ನಡನಾಡಿನ ಪ್ರಭುದ್ಧರ ಅನುಗ್ರಹದಿಂದಲೆ. ಆ ಬಗೆಗೆ ರಾಷ್ಟ್ರದ ಗೌರವಾನ್ವಿತಉಪರಾಷ್ಟ್ರಪತಿ ಶ್ರೀಭೈರೋನ್ ಸಿಂಗ್ ಶೇಖಾವತ್ ಅವರು ಅಂದಿನ "ಪ್ರಭುಗೀತಾ ಲೋಕಾರ್ಪಣ ಸಮಾರಂಭ"ದಲ್ಲಿ

CC-0. Jangamwadi Math Collection. Digitized by eGangotri

ಸಭಿಕರನ್ನು ಕುರಿತು ಸಮಯಸ್ಫೂರ್ತಿಯಿಂದ ಮಾಡಿದ ಹಿಂದಿಭಾಷಣದ ಅಲ್ಲಲ್ಲಿನ ಉಲ್ಲೇಖಗಳ ಆಂಗ್ಲ ಅನುವಾದವಿದು:-

"Respected former Chief Justice of India, Mr. Ranganath Misraji. Prof. C. Mahadevappaji and my friend, Mr. Mohan Prakashi and the audience.

I consider it a privilage to release *PRABHU GEETA*, the Sanskrit rendering of the vachanas of Allama Prabhu, the leading light of social and literary movement of Sharanas in Karnataka. I have released many books in the past, but it is for the first time that I am releasing a book like *Prabhu Geeta*.

Sanskrit rendering of 800-year-old Allama Prabhu's vachanas, is no ordinary feat. Only a person whose soul is the abode of God can do it. I am happy that Prof. Mahadevappa has brought out the book rendered into Sanskrit by Magge Mayideva, the Veerashaiva scholar of Vijayanagar period for the benefit of English knowing public.

The book has great deal of details about Allama Prabhu---his vachanas and philosophy that are all relevant to the present day society. Whatever information I could gather about the book, Allama Prabhu considers Shunya [Space/ Bayalu] as truth and truth as Shiva. (*Allama Prabhu ne shunya ko satya mante huein aur satya ko shiv mante huein aur ees prakar satya ko shiva manate huein ess prakar ka ek vishleshan kiya)*. I have read Srimad Bhagavad Gita and also Ramayan. Henceforth, I shall read Prabhu Geeta along with these two books as we can discover the valued contribution of bringing unity in Indian cultural diversity. I am happy that this book has brought out with the help of palm-leaf manuscripts *(tadapatras)*.

CC-0. Jangamwadi Math Collection. Digitized by eGangotri

Bhagavan Sri Krishna says"I am omnipresent, Bhagavan is Ishwar and I am Ishwar" *(Sab kuch main hoon, Bhagavan Ishwar hai aur woh Ishwar main hoon).* Adi Shankara set up Mutts in the four directions of the country to show to the world that Bhagavan Shiva is present everywhere. Through this book you have attempted to make the world understand *(sakshatkar)* the Omnipresent Lord. Unity exists among the believers whether it is the devotees of Lord Rama, Krishna and Shiva. Never can the believers of Rama, Krishna and Shiva disrespect one another. If you visit my pooja room you will find Bhagavan Krishna, Bhagavan Ram, Ganeshji so also Shivji and as Mohan Prakashji mentioned, you will find Bhairav Nath also. you can imagine how diverse is our rich cultural heritage.

As referred by Justice Ranganatha Misraji, we have not estimated the value of our culture and traditions. I agree with him that the Government spends crores of rupees on many heads. If one fourth of this money is spent on research of our ancient culture and traditions, India can be a world leader. He also referred to people experiencing "stress' because of changing lifestyles. This stress can be relieved by neither medicines nor health but only through peace of mind. This can be attained through the medium of books. This is the reason that search for such hidden treasure continues. In India, there is no dearth of old manuscripts and inscriptions on *tamrapatras*. The owners and custodian of these cultural treasures are not prepared to share these documents but will not mind it losing in the process. Even if they give these manuscripts, they will part it to those people who will sell the treasure for income and money gains. I can't guess the motives of Prof. Mahadevappa in bringing out the book. I should concede that he has done a wonder by bringing out the

CC-0. Jangamwadi Math Collection. Digitized by eGangotri

book and we all shall together share the benefits of this wonderful work.

I am Shiva worshipper and as rightly described by Mr. Mohan Prakash, Bhairav Nathji has a place before Lord Shiva. But I am a worshipper of different kind. I strrongly feel that Lord Shiva has the intrinsic strength and capacity to punish the wrong and at the same time the magnanimity to forgive as well.

I wish to say that as a society we may have done so many things but we have forgotten to serve the cause of our culture. Today, we see so many distortions in the society and this malady seems to be unending. we will be able to see the solutions through revival of cultural traditions.

In Jaisalmer fort, in my home state of Rajasthan, there are umpteen number of *tamrapatras* scattered around in the area. The owners of these are not ready to even allow photocopying of these documents despite best of efforts. They just keep them, may be they worship the same, some persons may read them but nobody tries to understand their meaning. Several idols are buried underground; these are lying in such places that one cannot think of. These idols are spirited away and are sold for hefty amounts in the western countries. A German took such idols to his drawing room and compiled information on the origin, architecture, history and other background of these idols. That gentleman came out with a book of seven volumes. I own five of them. This foreign-born author belonging to some other religion made an indepth study of the astonishing, fantastic and accurate details. I can tell with confidence not many scholars can match this understanding and knowledge about these idols lying in the state of disuse. Idols of India can speak and the stones of India can express and represent the country

CC-0. Jangamwadi Math Collection. Digitized by eGangotri

and its culture. We can discover our culture through stones, idols and tamrapatra inscriptions and books in the form of *tadapatras.* They can inspire us in the present world but the life today revolves around money or lack of it.

We are really grateful to you for coming out with *Prabhu Geeta*, the shaivik alternative for the Gita to guide the society. Till today, I used to study Gita, henceorth, I shall also read *Prabhu Geeta;* Let me promise you that I shall remember you when I read *Prabhu Geeta;* it will remind me of the vachanas of *Allama Prabhu and Shankaracharya and* his Mutts and Lord Shiva. When we think of Shiva, we shall remember you. Let me congratulate you for this great task of bringing out this book.

Thank you.

2002ರಲ್ಲಿ ಹೆಚ್ಚಿನ ಸಂಗತಿಗಳಿಂದಕೂಡಿದ ಕನ್ನಡ ಪೀಠಿಕೆ ಹಾಗೂ ಲಿಪಿಯಿಂದ ಅದೇ ಗ್ರಂಥ ಕನ್ನಡಿಗರ ಕೈ ಸೇರುವಂತಾಯಿತು. ಆ ಎರಡು ಗ್ರಂಥಗಳಿಗೂ ಕ್ರಮವಾಗಿ ಆಂಗ್ಲ, ಕನ್ನಡ ಭಾಷೆಗಳಲ್ಲಿ ಮುನ್ನುಡಿಯನ್ನಿತ್ತು ಅವುಗಳ ಉಪಯುಕ್ತತೆಯನ್ನು ಎತ್ತಿಹಿಡಿದಿರುವವರು ನಾಡಿನ ಅಗ್ರಗಣ್ಯ ವಿದ್ವಾಂಸರಾದ ಪರಮಪೂಜ್ಯ ವೇದರತ್ನ ಪ್ರೊ. ಸಾ. ಕೃ. ರಾಮಚಂದ್ರ ರಾವ್ ಅವರು. ನನ್ನ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಅವರಿಗೆ ಸಮರ್ಪಿಸ ಬಯಸುತ್ತೇನೆ.

2004ರ ಇತ್ತೀಚೆಗಷ್ಟೆ ಸಂಶೋಧನಕೋಟಿಯು ತಾಡೋಲೆಪ್ರತಿಯ ಆಧಾರದಿಂದ ಪ್ರಕಟಿಸಿರುವ ಆರಾಧ್ಯದೇವನ "ಅರುವತ್ತುಮೂವರ ಚಾರಿತ್ರ"ಗ್ರಂಥದಲ್ಲಿನ ಸಂಗೀತಶಾಸ್ತ್ರದ ಪಾರಿಭಾಷಿಕ ಪದಗಳ ಅರ್ಥಗಳನ್ನು ನಿರ್ದೇಶಿಸಬೇಕೆಂದು ಪ್ರಾರ್ಥಿಸಿದಾಗ ಅದಕ್ಕೆ ಒಪ್ಪಿ ನೀಡಿದುದಕ್ಕಾಗಿ ಸಂಗೀತಕಲಾನಿಧಿ ಸನ್ಮಾನ್ಯ ಡಾ. ಆರ್.ಕೆ. ಶ್ರೀಕಂಠನ್ ಅವರಿಗೆ ನನ್ನ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಈ ಮೂಲಕ ಸಲ್ಲಿಸುತ್ತಿದ್ದೇನೆ. ಸ್ವಾಯತ್ತ ಸಂಶೋಧನ ಕೋಟಿಯ ಐದೂವರೆ ದಶಕಗಳ ಈ ಮಧ್ಯೆ, ಸಂಶೋಧನಾತ್ಮಕ ಅನೇಕ ಲೇಖನಗಳನ್ನು ಪ್ರಸಿದ್ಧಿಪಡಿಸಿರುವ ಎಲ್ಲ ವಿದ್ವತ್ ಪತ್ರಿಕೆಗಳಿಗೆ ಘಟಕ ಋಣ.

CC-0. Jangamwadi Math Collection. Digitized by eGangotri

ಶ್ರೀಜಗದ್ಗುರು ಮುರುಘರಾಜೇಂದ್ರಬೃಹನ್ಮಠ (ಚಿತ್ರದುರ್ಗ) ದತ್ತಿ ಅಂಗವಾಗಿ 2000ರ ಪ್ರಕಟಣೆಯಲ್ಲಿ "ಪ್ರಸ್ತುತ ಪ್ರೊ. ಸಿ. ಮಹಾದೇವಪ್ಪ ಅವರು ಸಿದ್ಧಪಡಿಸಿರುವ "ವೀರಶೈವ ಸಾಹಿತ್ಯ ಮತ್ತು ಇತರ ಲೇಖನಗಳು" ಎಂಬ ಈ ಕೃತಿಯು ವೀರಶೈವ ಸಾಹಿತ್ಯಕ್ಷೇತ್ರದಲ್ಲಿನ ಕೆಲವು ಮಹತ್ತರವಾದ ವಿಚಾರಗಳನ್ನು ತಿಳಿಸುವಲ್ಲಿ ಯಶಸ್ವಿ ಗ್ರಂಥವೆನಿಸಿದೆ" ಎಂದು ಕನ್ನಡಸಾಹಿತ್ಯಪರಿಷತ್ತಿನ ಅಂದಿನ ಅಧ್ಯಕ್ಷರಾಗಿದ್ದ ಶ್ರೀ ಎನ್. ಬಸವಾರಾಧ್ಯರು ಆ ಗ್ರಂಥದ ಮುನ್ನುಡಿಯಲ್ಲಿ ತಮ್ಮ ಅಭಿಪ್ರಾಯವನ್ನು ಪ್ರಕಟಿಸಿರುತ್ತಾರೆ. ಇದಲ್ಲದೆ ಸ್ವಾಯತ್ತ ಘಟಕದ ಉಳಿದೆಲ್ಲ ಗ್ರಂಥಪ್ರಕಟನೆಗಳನ್ನು ಸಾಂಗವಾಗಿ ಓದಿ ತಮ್ಮ ಅಭಿಪ್ರಾಯಗಳನ್ನು ನೀಡಿರುವ ನಾಡಿನ ಸಮಸ್ತ ಗುರುವೃಂದಕ್ಕೂ ಗಣ್ಯ ವಿದ್ವಾಂಸರಿಗೂ ಪ್ರೋತ್ಸಾಹಿಸಿದ ಸಾಹಿತ್ಯಮಿತ್ರರಿಗೂ ಮತ್ತೊಮ್ಮೆ ನನ್ನ ವಿನಮ್ರ ನಮನಗಳು.

"ಸ್ವಾಯತ್ತಘಟಕವಾದ 'ಸಂಶೋಧನಕೋಟಿಯು" ನಾಡಿಗೆ ಸಲ್ಲಿಸಿದ ಸಾಹಿತ್ಯ ಸಂಶೋಧನೆ ಹಾಗೂ ಪ್ರಕಟನೆಗಳ ಜನೋಪಯೋಗ ಹಾಗೂ ಸಾಹಿತ್ಯಚರಿತ್ರೆಯ ಸಂವರ್ಧನೆಗೆ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ಘಟಕದ ಗ್ರಂಥಗಳ ಸಂಪಾದಕರನ್ನು ಸನ್ಮಾನಿಸಿದ ಪ್ರತಿಷ್ಠಿತ ಸಾಹಿತ್ಯಾಭಿಮಾನ ಸಂಘ-ಸಂಸ್ಥೆಗಳ ಆದರಾಭಿಮಾನಕ್ಕೆ ಕೃತಜ್ಞತೆಯನ್ನು ಈ ಸುವರ್ಣ ಸಂಪುಟದಲ್ಲಿ ದಾಖಲ್ಲಿಸುವುದು ಆದ್ಯ ಕರ್ತವ್ಯವೆಂದು ಮನಗಂಡು ಕಾಣಿಸಲಾಗಿದೆ.

ಅಖಿಲ ಭಾರತ ಶರಣಸಾಹಿತ್ಯ ಪರಿಷತ್ತಿನ ಬೆಂಗಳೂರು ನಗರ ಜಿಲ್ಲಾ ಪ್ರಥಮ ಶರಣ ಸಾಹಿತ್ಯಸಮ್ಮೇಳನದ ಅಧ್ಯಕ್ಷರಾಗಿ 3.1.1999 ರಂದು ಆಶಯ ಭಾಷಣವನ್ನು ಮಾಡಿದ ಸಂದರ್ಭದಲ್ಲಿ ಸಂಶೋಧನ ಕೋಟಿಯ ಸಂಪಾದಕರು ರಾಷ್ಟ್ರಕವಿ ಕುವೆಂಪು ಅವರಿಂದ ಹಿಡಿದು ಅನೇಕ ವಿದ್ವಾಂಸರಿಂದ "ಮುಕ್ತಕಂಠದಿಂದ ಪಡೆದ ಪ್ರಶಂಸೆ"ಯನ್ನು ಉಲ್ಲೇಖಿಸಿ ಪರಿಚಯಿಸಿದವರು ಶ್ರೀ ಎಚ್. ಎಸ್ ಸಿದ್ಧಗಂಗಪ್ಪನವರು; ಶ್ರೀಯುತರನ್ನು ಅವರು ಶ್ರೇಷ್ಠಸಂಶೋಧಕ, ವಿದ್ವಾಂಸ ಎಂದು

CC-0. Jangamwadi Math Collection. Digitized by eGangotri

ಗುರುತಿಸಿದ ಗೌರವ ಕನ್ನಡನಾಡಿನ ವಿದ್ವಾಂಸರೆಲ್ಲರಿಗೆ ಸಂದ ಗೌರವವೆಂದು ಪ್ರಸ್ತುತ ಗ್ರಂಥಕರ್ತರು ಭಾವಿಸಿದ್ದಾರೆ.

22.03.1999 ರಂದು ಶ್ರೀ ಶಿವಕುಮಾರಸ್ವಾಮೀಜೀಸ್ ಏಕತಾ ಚಾರಿಟಬಲ್ ಟ್ರಸ್ಟ್ (ರಿ) ಬೆಂಗಳೂರು ಶ್ರೀಶಿವಕುಮಾರಸ್ವಾಮಿ ನಾಸಿಮಠ್ ಅವರ ಅಧ್ಯಕ್ಷತೆಯಲ್ಲಿ ಕನ್ನಡಸಾಹಿತ್ಯ, ಸಂಶೋಧನಕ್ಷೇತ್ರಕ್ಕೆ ನೀಡಿದ ಅಪಾರ ಕೊಡುಗೆಯನ್ನು ಗಮನಿಸಿ ಭಾರತದ ಸರ್ವೋಚ್ಚನ್ಯಾಯಾಲಯದ ನಿವೃತ್ತನ್ಯಾಯಮೂರ್ತಿ ಶ್ರೀ ರಂಗನಾಥಮಿಶ್ರ ಅವರ ಪವಿತ್ರಹಸ್ತದಿಂದ ಸಂದ "ಏಕತಾ ಸಾಹಿತ್ಯ ಪುರಸ್ಕಾರ"

"ಡಾ। ಆರ್. ಸಿ. ಹಿರೇಮಠ ಸ್ಮಾರಕ ಕನ್ನಡ ಸಾಹಿತ್ಯ ಸಂಶೋಧನಾ ಪ್ರಶಸ್ತಿ.'' ಶ್ರೀ ಬಾ. ಸಾಮಗ ಸಂಪಾದಕತ್ವದ ದೆಹಲಿ ಕನ್ನಡಿಗ ಮಾಸಪತ್ರಿಕೆ ಯೋಜಿಸಿದ ಹದಿನಾರನೆಯ ರಾಷ್ಟ್ರೀಯ ಕನ್ನಡ ಸಮ್ಮೇಳನದಲ್ಲಿ 3.4.1999ರಂದು ಶ್ರೀಯುತ ಎ.ವಿ ಗೋಕಾಕ ಅವರು ಸನ್ಮಾನಿಸಿ ನೀಡಿದ ಪ್ರಶಸ್ತಿಪತ್ರ.

ಕೆಮ್‌ವೆಲ್ ಅಂತಾರಾಷ್ಟ್ರೀಯ ಕಾರ್ಖಾನೆ, ಪೀಣ್ಯ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ 25.11.2000 ರಂದು ಗೌರವಿಸಿ ನೀಡಿದ ಸನ್ಮಾನ.

ವೀರಶೈವ ವಿಚಾರವೇದಿಕೆಯು 8.2.2003 ರಂದು ಆಚರಿಸಿದ ಮಾಜಿ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪನವರ ಜನ್ಮಶತಮಾನೋತ್ಸವ ಸಂದರ್ಭದಲ್ಲಿ ವಿದ್ವಾಂಸರು, ಸಾಹಿತಿಗಳು ಎಂದು ಗುರುತಿಸಿ ನೀಡಿದ ಸನ್ಮಾನ.

ತುಮಕೂರು ಶ್ರೀ ಟಿ.ಎಸ್ ರೇವಣ್ಣ ಶ್ರೀಮತಿ ರೇವಮ್ಮ ಧರ್ಮದತ್ತಿ ಸಂಸ್ಥಾಪಕರ ಸ್ಮರಣೆಯ ದಿನಾಂಕ 2.10.2003ರ ಸಮಾರಂಭದಲ್ಲಿ ಡಾ. ಎ.ಎಸ್ ವಿಜಯಕಾಂತ್ ಅವರ ಅಧ್ಯಕ್ಷತೆಯಲ್ಲಿ ಸಂದ ರಜತಗೌರವ ಸಮರ್ಪಣೆ.

ಶ್ರೀ ಜಗದ್ಗುರು ವಿಶ್ವಾರಾಧ್ಯ ಜ್ಞಾನಪೀಠ,ಜಂಗಮವಾಡಿ ಮಠ, ವಾರಣಾಸಿ. ಕಾಶೀಜ್ಞಾನಸಿಂಹಾಸನಾಧೀಶ್ವರ ಶ್ರೀಶ್ರೀಶ್ರೀ ಜಗದ್ಗುರು ಡಾ। ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರ ಅಮೃತಹಸ್ತದಿಂದ ದಿನಾಂಕ 11.12.2003 ರಂದು ವಿದ್ವತ್-

CC-0. Jangamwadi Math Collection. Digitized by eGangotri

-ಸನ್ಮಾನ ಫಲಕ ನೀಡಿ ಪ್ರಭುಗೀತಾ ಸಂಶೋಧಕ-ಸಂಪಾದಕ ಪ್ರೊ.ಸಿ. ಮಹಾದೇವಪ್ಪನವರನ್ನು ಗೌರವಿಸಲಾಯಿತು.

ದಿನಾಂಕ 10. 1. 2004ರಂದು ಶ್ರೀಮತ್ಕಾಶೀ ಜಗದ್ಗುರು ವಿಶ್ವಾರಾಧ್ಯ ಜ್ಞಾನಸಿಂಹಾಸನ ಮಹಾಪೀಠದ ವತಿಯಿಂದ ಶಿವಕಮಲಸಾಹಿತ್ಯ ಪ್ರಶಸ್ತಿಸಹಿತ ಗೌರವಧನ ಪ್ರದಾನ ಮತ್ತು.

ಡಾ। ಬಿ. ಶಿವಮೂರ್ತಿಶಾಸ್ತ್ರಿಪ್ರತಿಷ್ಠಾನದ ಅಧ್ಯಕ್ಷರಾದ ಪ್ರೊ. ಎನ್ ಬಸವಾರಾಧ್ಯರಿಂದ ಗೌರವ ಸಮರ್ಪಣೆ.

ಶ್ರೀ ಜಗದ್ಗುರು ತೋಂಟದಾರ್ಯ ಜಾತ್ರಾ ಮಹೋತ್ಸವ ಸಮಿತಿ ಶ್ರೀ ತೋಂಟದಾರ್ಯ ಮಠ, ಗದಗ ದಿನಾಂಕ ೧೫ ನೇ ಏಪ್ರಿಲ್ ೨೦೦೪ರಂದು

"ನಾಡಿನ ಖ್ಯಾತ ವಿದ್ವಾಂಸ, ಶ್ರೇಷ್ಠ ಸಂಶೋಧಕ, ಆದರ್ಶ ಪ್ರಾಧ್ಯಾಪಕ, ಸೃಜನಶೀಲ ಅನುವಾದಕ, ಸಂಘಟನಾ ಶಿಲ್ಪಿ ಪ್ರೊ. ಸಿ. ಮಹಾದೇವಪ್ಪ ಅವರಿಗೆ ಪ್ರೀತಿ-ಗೌರವದೊಂದಿಗೆ ಅರ್ಪಿಸಿದ ಅಭಿನಂದನಾ ಪತ್ರ'' ಶ್ರೀಮಠದ ಭವ್ಯ ಭಕ್ತಸಭಾ ಮಂದಿರದಲ್ಲಿ ಪರಮಪೂಜ್ಯ ಕನ್ನಡದ ಕಣ್ಮಣಿಗಳಾದ ಜಗದ್ಗುರು ಸಿದ್ಧಲಿಂಗ ಮಹಾಸ್ವಾಮಿಗಳ ದಿವ್ಯಹಸ್ತದಿಂದ ಸನ್ಮಾನ ಪೂರ್ವಕ ಗೌರವಪತ್ರವನ್ನುಪಡೆದ ಸಂಶೋಧಕ-ಸಂಪಾದಕರು ಪೂಜ್ಯಶ್ರೀಗಳವರಲ್ಲಿ ಸಲ್ಲಿಸುವ ಕೃತಜ್ಞತೆಯ ವಂದನೆಗಳು.

ಅತ್ತಿಮಬ್ಬೆ ಪ್ರತಿಷ್ಠಾನ ಟ್ರಸ್ಟ್ (ರಿ) ಸಂಸ್ಥಾಪಕ ನಿರ್ದೇಶಕರು ಪಿ, ಮನೋಹರಿ ಪಾರ್ಥಸಾರಥಿ, ಅತ್ತಿಮಬ್ಬೆ ಲೇಖಕಿಯರ ಪರಿಷತ್ತು ಅವರಿಂದ 25. 1. 2004 ರಂದು ಪ್ರೊ. ಸಿ. ಮಹಾದೇವಪ್ಪನವರಿಗೆ ''ರನ್ನ ಸಾಹಿತ್ಯ ಪ್ರಶಸ್ತಿ'' ಪ್ರದಾನ. ಅವರ ಆತ್ಮೀಯತೆಗೆ ಅನಂತ ನಮನಗಳು.

ಪ್ರಸ್ತುತ "ಆಜೀವ ಮಧುಸ್ಮೃತಿ"ಯಲ್ಲಿ ಚಾರಿತ್ರಕ ಮಹತ್ವವನ್ನುಳ್ಳ ಆರು ಹಿರಿಯರ ಬಗೆಗೆ ಕನ್ನಡ ವಚನ ಸಾಹಿತ್ಯ ವಿಮರ್ಶೆಯ ಗ್ರಂಥಗಳಲ್ಲಿ ಈ ತನಕ ಕಂಡುಬಂದಿರುವ ಚಿಂತನೆ ಹಿಡಿದಿರುವ ದಾರಿಯನ್ನು ಗುರುತಿಸುತ್ತ ಅದರ ನೈಜ ಸ್ವರೂಪ ವೇನೆಂಬುದರ ಬಗೆಗಿನ ಐತಿಹಾಸಿಕ ಹಾಗೂ ತಾತ್ವಿಕ

CC-0. Jangamwadi Math Collection. Digitized by eGangotri

ಸಂಗತಿಗಳನ್ನು ಮನಗಾಣಿಸಿದೆ ಎಂಬುದನ್ನು ಗಮನಿಸಬಹುದು. "ಆರು ಹಿರಿಯರು" ಎಂಬುದು ಪ್ರಥಮತಃ ಪ್ರಭುದೇವರ ವಚನಗಳನ್ನು ಸಂಕಲನಗೊಳಿಸಿರುವ ಮಹಾಲಿಂಗದೇವರ ಟೀಕನ ಓಲೆ ಗ್ರಂಥದಲ್ಲಿ ಬರುತ್ತದೆ. ಸಂಕಲಿತ ವಚನಗಳ ಟೀಕಾಕಾರರಾದ ಅವರು ಬೆಂಗಳೂರು ಹೊಸಕೋಟೆ ತಾಲ್ಲೋಕು ವಾಗಟ(ವ್ಯಾಪ್ರುತಟಾಕ) ಇಲ್ಲವೆ ಹುಲಿಗೆರೆಯವರು. ಅವರ ಆ ಗ್ರಂಥದ ಅಧಿಕೃತ ಓಲೆಪ್ರತಿ ಕಟ್ಟಿಗೆಹಳ್ಳಿ ಸಿದ್ಧಲಿಂಗಸ್ವಾಮಿಗಳಿಗಾಗಿ ಲಿಖಿತವಾಯಿತೆಂದು ತಿಳಿದು ಬರುತ್ತದೆ. ಆ ಟೀಕನ ಗ್ರಂಥದ ರಾ.ಸಾ. ಫ.ಗು. ಹಳಕಟ್ಟಿಯವರ 1931ರ ಮುದ್ರಣದ ವಚನ ೧೧೨ರಲ್ಲಿ "ಆರು ಹಿರಿಯರೆಲ್ಲರನು" ಎಂದು ಸ್ಪಷ್ಟವಾಗಿ ಲಿಖಿತವಾಗಿರುವುದನ್ನೂ ಕಾಣಬಹುದು. ಆ ಗ್ರಂಥದ ಬಹುಭಾಗವನ್ನು ಬರೆಯಿಸಿ ತಿದ್ದಿ ಅಚ್ಚಿಗೆ ಸಿದ್ಧಗೊಳಿಸುವಲ್ಲಿ ನೆರವಾದವರು ಡಾ। ಎಸ್. ಸಿ. ನಂದಿಮಠ ಅವರು ಎಂಬುದನ್ನು ಅದರ ಪ್ರಸ್ತಾವನೆಯಲ್ಲಿ ಡಾ। ಹಳಕಟ್ಟಿಯವರೇ ಓದುಗರ ಗಮನಕ್ಕೆ ತಂದಿರುತ್ತಾರೆ.

ಅಲ್ಲಿಂದೀಚೆಗೆ ನಳಿನೀಶಂಕರ ಪ್ರಕಾಶನ, ಮೈಸೂರು ಹೊರತಂದ 1960ರ "ಅಲ್ಲಮನ ವಚನ ಚಂದ್ರಿಕೆ" ವಚನ285ರಲ್ಲಿ (1); ಕರ್ನಾಟಕ ಸರ್ಕಾರ ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ 1993ರ "ಅಲ್ಲಮಪ್ರಭುದೇವರ ವಚನ ಸಂಪುಟ"ದ ವಚನ ೨೮೫ರಲ್ಲಿ (2); ಅದೇ ಕರ್ನಾಟಕ ಸರ್ಕಾರ ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ 1993ರ ಮುದ್ರಣ "ಚೆನ್ನಬಸವಣ್ಣನವರ ವಚನಸಂಪುಟ"ದ ವಚನ ೪೧೨ರಲ್ಲಿ(3) ಮತ್ತು ಮೈಸೂರು ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆಯ 1998ರ ಮುದ್ರಣ "ಅಲ್ಲಮ ಪ್ರಭುದೇವರ ವಚನ-ನಿರ್ವಚನ ಸಂಪುಟ ೧"ರ ಪ್ರಾಣಲಿಂಗಿಸ್ಥಲ ವ.೨೮೫ರಲ್ಲಿ (4); ಕರ್ನಾಟಕ ವಿಶ್ವ ವಿದ್ಯಾಲಯಂದ 1965ರ "ಷಟ್ಸ್ಥಲಚಕ್ರವರ್ತಿ ಚನ್ನಬಸವಣ್ಣನವರ ವಚನಗಳು" ಎಂಬ ಗ್ರಂಥದ "ಪ್ರಾಣಲಿಂಗವ ಸುಯಿಧಾನವ ಮಾಡು ಮಗನೆ" ಎಂದು ಆರಂಭವಾಗುವ ವಚನದಲ್ಲಿ ಬರುವ 'ಉ'ಪ್ರತಿಯ 'ಆರು' ಎಂಬ ಪಾಠವನ್ನು ಅಡಿಗೀಟನಲ್ಲಿಟ್ಟು ಮೂಲಪಠ್ಯ

CC-0. Jangamwadi Math Collection. Digitized by eGangotri

ಸ್ಥಾನದಲ್ಲಿ "ಆ"ಎಂದೂ, "ಹಿರಿಯರೆಲ್ಲರನೂ" ಎಂಬುದಕ್ಕೆ ಬದಲಾಗಿ "ಹಿರಿಯರಿಗೆ" ಎಂಬ ಸ್ವಕಲ್ಪಿತ ಪಾಠವನ್ನಿಟ್ಟಿರುವುದು ವಚನ ೯೨೫ರಲ್ಲಿ ಮಾತ್ರ(5) ಕಂಡುಬರುತ್ತದೆ. ಉಳಿದೆಲ್ಲಾ ಸಂಪಾದಿತ ಗ್ರಂಥಗಳಲ್ಲಿ "ಅರುಹಿರಿಯರೆಲ್ಲರನೂ"ಎಂಬುದೇ ವಚನದ ಪಠ್ಯಭಾಗದಲ್ಲಿದೆ. ಈ ಮಾರ್ಪಾಟಿಗೆ "ಆರು ಹಿರಿಯರು'' ಎಂಬ ಮೂಲಪಾಠ ಸುಲಭವಾಗಿ ಅರ್ಥವಾಗದಿದ್ದುದರಿಂದ ಕಠಿನಪಾಠವಾದುದು ಮೊದಲ ಕಾರಣವಾದರೆ, ಆ ಕಠಿನಪಾಠದ ಚಾರಿತ್ರಿಕ ಹಿನ್ನೆಲೆ ಗೋಪ್ಯವಾಗಿಯೇ ಉಳಿದುಕೊಂಡಿದ್ದುದೇ ಎರಡನೆಯ ಕಾರಣವೆನ್ನಬಹುದು. ಫಲಿತಾಂಶ ಏನೆಂದರೆ ಮೂಲಪಾಠ ಹೋಗಿ ಭಿನ್ನಪಾಠವೊಂದು ಪ್ರಚುರಗೊಂಡು ಅದೇ ಮೂಲ ಪಾಠದ ಪಟ್ಟವನ್ನು ಏರಿತು. ಇನ್ನೂ ಹೆಚ್ಚಿನ ವಿಶ್ಲೇಷಣೆಗೆ ಇಲ್ಲಿ ಎಡೆಯಿಲ್ಲವೆಂದು ಭಾವಿಸಿ ಸತ್ಯಸ್ಯ ಸತ್ಯ ಸಂಗತಿಯನ್ನು ಮಾತ್ರ ಎಚ್ಚರಿಕೆಯಿಂದ ಸಮಸ್ತವಾಚಕರ ಗಮನಕ್ಕೆ ತರಲಾಗಿದೆ.

ಈಗ್ಗೆ ಎರಡುಸಾವಿರದ ಆರುನೂರು ವರ್ಷಗಳ ಹಿಂದೆ ಇದ್ದ ಆ ಆರು ಹಿರಿಯರು, ಅವರು ಪ್ರತಿಪಾದಿಸಿದ ಮತತತ್ತ್ವವನ್ನು 11, 12ನೆಯ ಶತಮಾನಗಳ ಹಿಂದಿನಿಂದಲೂ ಶಿವಶರಣರೆಲ್ಲರೂ ಆಚರಿಸಿಕೊಂಡು ಬಂದ ಬಗೆಯನ್ನು ವಿಶದಪಡಿಸುವ ಕಾರ್ಯವನ್ನು ಪ್ರಸ್ತುತ"ಆಜೀವ ಮಧುಸ್ಮೃತಿ" ನಡಸಿದೆ. ಕ್ರಿ.ಪೂ. 6ನೆಯ ಶತಮಾನದಲ್ಲಿ ಮಗಧದೇಶದ ರಾಜನಾದ ಅಜಾತಶತ್ರುವು ಪ್ರಸಿದ್ಧರಾಗಿದ್ದ ಆತ್ಮಜ್ಞಾನಿಗಳೂ ವಿಭಿನ್ನ ಪಂಥಗಳ ಗಣಾಚಾರ್ಯರೂ ಆದ ಆರುಹಿರಿಯರನ್ನು ರಾಜಧಾನಿಯಾದ ಚಂಪಾನಗರಿಯಲ್ಲಿ ನಡಸಿದ ಆ ಪ್ರಾಜ್ಞರ ಸಭೆಯಲ್ಲಿ ಅವರವರ ಮತಾಚರಣೆಯ ಸ್ವರೂಪವನ್ನು ಪರೀಕ್ಷಿಸಿದನೆಂಬ ಘಟನೆಯು ಐತಿಹಾಸಿಕ ದಾಖಲೆಗಳಲ್ಲಿ ಗ್ರಂಥಸ್ಥವಾಗಿ ಪ್ರಕಟಗೊಂಡಿದೆ. ಆ ಆರುಹಿರಿಯರಲ್ಲಿ ಆಜೀವ ಶಿವಮತದ ಗಣಾಚಾರ್ಯನಾದ ಗೋಸಾಲನೂ ಹೆಸರುವಾಸಿಯಾದ ಧೀರ ಜಂಗಮಮೂರ್ತಿಯೆಂಬುದೂ ಜೈನ ಬೌದ್ಧ ಗ್ರಂಥಗಳಲ್ಲಿ ಸುಸ್ಪಷ್ಟವಾಗಿ ನಿರೂಪಿಸಲ್ಪಟ್ಟ ಸಂಗತಿಯೆ. ಆತನು ಆಜೀವ ಶಿವಮತದ ಶೂನ್ಯಧ್ಯಾನವನ್ನು ಇಷ್ಟಲಿಂಗಪೂರ್ವಕ

CC-0. Jangamwadi Math Collection. Digitized by eGangotri

ವಾಗಿ ಮಾಡುವಂತೆ ಬೋಧಿಸಿ ಅಪಾರಸಂಖ್ಯೆಯಲ್ಲಿ ಅನುಯಾಯಿಗಳನ್ನು ಹೊಂದಿದ್ದನು ಎಂಬುದನ್ನು ವಿದ್ವಾಂಸರು ಬಹಿರಂಗಪಡಿಸಿದ್ದಾರೆ. ಆತನ ಪ್ರಭಾವದ ಮಹಿಮೆಯಿಂದ ಆಜೀವ ಶಿವಧರ್ಮೀಯರು ಮೌರ್ಯವಂಶೀಯ ಚಕ್ರವರ್ತಿಗಳಿಂದ ದಾನಾರ್ಹರಾಗಿ ಪೂಜ್ಯಸ್ಥಾನವನ್ನು ಹೊಂದಿದ್ದರು.

ಗೋಸಾಲಪ್ರತಿಪಾದಿತ ಶೂನ್ಯ ಇಲ್ಲವೆ ಬಯಲ ತತ್ತ್ವವನ್ನು ಆಜೀವಶಿವಶರಣರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಬಂದಿದ್ದುದನ್ನು ಅವರ ಅನುಭವದ ವಚನಗಳಿಂದಲೇ ಅರಿಯಬಹುದು. ಶೂನ್ಯವನ್ನು ಕುರಿತು ವಿಚಾರ ಮಾಡಿರುವ ಅವರ ಬಗೆ ಬಲು ನೇರ, ಸರಳ ಹಾಗೂ ಅತಿಸುಲಭವಾಗಿ ಮನಸ್ಸಿಗೆ ಹಿಡಿಸುವಂಥದು ಎಂಬುದನ್ನು ಮುಂದಿನ ವಚನಭಾಗದಲ್ಲಿ ಗಮನಿಸಬಹುದು:

"ಅರಿದಲ್ಲಿ ಪರಮ, ಮರೆದಲ್ಲಿ ಜೀವನೆಂಬುದು.
ಆ ಉಭಯವ ಸಂಪಾದಿಸುವುದು ಅರಿವೊ, ಮರವೊ?
ಬಯಲ ಮರೆಮಾಡಿ ತೆರೆಗಟ್ಟಲಿಕ್ಕೆ
ಅವರೊಳಗಾದ ದೃಷ್ಟವ ಕಾಬುದು.
ತೆರೆಯ ತೆಗೆಯಲಿಕ್ಕೆ ಬಯಲ ಕಾಬುದು.
ದೃಕ್ಕಂಗೆ ದೃಶ್ಯ ಒಂದೊ ಎರಡೊ ಎಂಬುದು ತಿಳಿದಲ್ಲಿ
ಸದ್ಯೋಜಾತಲಿಂಗದ ಕೂಟ." (ಅನುಭಾ.ವ.೧೨೬)

ಅವಸರದ ರೇಚಣ್ಣನ ಈ ವಚನದ 'ಬಯಲೆ ರೂಪಾಯಿತ್ತು, ನಿರ್ವಯಲೆ ನಿರೂಪಾಯಿತ್ತು'ಎಂಬ ಅನುಭವದ ಸತ್ಯದ ಏಕತೆಯನ್ನು "ತೆರೆ ದರುಶನ ಉಭಯವಡಗಿತ್ತು ಚನ್ನಬಸವಣ್ಣಪ್ರಿಯಮಲ್ಲಿಕಾರ್ಜುನಲಿಂಗವನರಿದಲ್ಲಿ"(ಅನುಭಾ. ವ.೧೩೧) ಎಂಬ ಪ್ರಸಾದಿಭೋಗಣ್ಣನ ನುಡಿಗಳಲ್ಲಿ ಕಾಣುತ್ತೇವೆ. ತೆರೆ ಮತ್ತು ದರುಶನವೆಂಬ, ಜೀವಪರಮನೆಂಬ, ಒಳಹೊರಗೆಂಬ ಉಭಯ ನಷ್ಟವಾದುದೆ, ತನ್ನ ತಾನಾದ ನಿಲವೇ ಶೂನ್ಯವೆಂದು ಮನದಟ್ಟಾಗುತ್ತದೆ. ತೆರೆಯರೂಪಾದ ಬಯಲೆ, ಆ ತೆರೆ ತೆಗೆದು ಹೋದಾಗ ಎಂದರೆ ಆಕಾರವಡಗಿದ ನಿಲವೆ ನಿರ್ವಯಲೆನಿಸಿ ನಿರೂಪಾಯಿತು, ನಿರಾಕಾರವಾಯಿತು ಎಂಬುದು ಸ್ಪಷ್ಟ.

CC-0 Jangamwadi Math Collection. Digitized by eGangotri

"ಕುಂಭಘಟಕ್ಕೆ ಒಳಗೂ ಬಯಲು, ಹೊರಗೂ ಬಯಲು; ಮೀರಿ ತಾ ನೋಡಿದಲ್ಲಿಯೂ ಬಯಲು. ಶುಕ್ಲ ಶೋಣಿತದಿಂದಾದ ಘಟಕ್ಕೆ ಬಯಲೆಂಬುದಕ್ಕೆ ತೆರಪಿಲ್ಲ, ಚೇತನಕ್ಕೆ ಒಳಗಾಗಿಪ್ಪುದಾಗಿ; ....ಪಂಚತತ್ತ್ವಂಗಳು ತತ್ತ್ವವನೆಯ್ದಿದಲ್ಲಿ ಆತ್ಮಂಗೆ ಬಂಧಮೋಕ್ಷವೆಂಬ ಅಂದವಾವುದು? ಉಂಟೆಂಬುದು ತನ್ನಿಂದ; ಇಲ್ಲಾ ಎಂಬುದು ತನ್ನಿಂದ. ತನ್ನಿಂದನ್ಯವಪ್ಪುದೊಂದೂ ಇಲ್ಲವಾಗಿ– ಸ್ಥಾಣುಚೋರನಂತೆ, ರಜ್ಜುಸರ್ಪದಂತೆ –ತಿಳಿದು ನೋಡಲಿಕ್ಕೆ ಮತ್ತೇನೂ ಇಲ್ಲ. ಕಾಮಧೂಮಧೂಳೇಶ್ವರನೆಂಬಲ್ಲಿ ಏನೂಇಲ್ಲ!"(ಅನುಭಾ. ೧೩.೨) ತಿಳಿದು ನೋಡಿದಾಗ ಇರುವುದು ಒಂದೇ; ತಿಳಿದು ನೋಡುವಾತ ತನ್ನಿಂದ ಅನ್ಯವಾದ ಬೇರೊಂದಿಲ್ಲ. ಆದ ಕಾರಣ ತಾನೇ ಆ ಜ್ಞಾತೃಜ್ಞಾನಜ್ಞೇಯ ಮೂರೊಂದಾದ ಪರವಸ್ತು(Supreme Soul)ಎಂಬುದರ ನಿರ್ದೇಶವಿದೆ. ಪಂಚಭೂತಾತ್ಮಕವಾದ ದೇಹ ಪಂಚಭೂತಗಳಲ್ಲಿ ಅಡಗಿದ ಮೇಲೆ ಬಂಧ ಮೋಕ್ಷಗಳ ಪ್ರಶ್ನೆ ಮತ್ತೆಲ್ಲಿ?

ವಸ್ತು ಉಂಟು, ಇಲ್ಲ ಎಂಬುದರ ಅರಿವಿಗೆ ತನ್ನನ್ನು ಬಿಟ್ಟು ಅನ್ಯವೆಂದೆನಿಸಿದುದು ಬೇರೊಂದಿಲ್ಲವಾದ ಕಾರಣ ತಾನೇ ಆ ಅರಿವಿಗೆ ಅಧಿಷ್ಠಾನ. ಎಂದ ಬಳಿಕ ರಜ್ಜುಸರ್ಪ ಒಂದೇ ಆಗಿ ಬೇರೊಂದಿಲ್ಲವಾಗಿ ಅದನ್ನು ಅರಿತುಮರೆತವನು ತಾನಲ್ಲದೆ ತನ್ನಿಂದ ಅನ್ಯವಿಲ್ಲವೆಂಬುದೇ ಪರಮಸತ್ಯ. ಪ್ರಾರಬ್ಧ , ಸಂಚಿತ, ಆಗಾಮಿಯ ಅದ್ವೈತ ಸಾಹಿತ್ಯವಾದ ಬಳಿಕ ಸಂದೇಹ ಭ್ರಾಂತಿಯೆಲ್ಲಿಯದೋ? ಎಂಬುದು ಶರಣರ ಮರುಪ್ರಶ್ನೆ. ಉಂಟು ಇಲ್ಲ ಎಂಬ ಪ್ರಸಾದ ಸಾಹಿತ್ಯವಾದ ಬಳಿಕ ಭೋಗ ಉಪಭೋಗಗಳೆಲ್ಲಿಯವೊ? ತನ್ನಿಂದನ್ಯವಿದೆಯೆಂಬ ವಾದಿಯ ಮತನಿರಸನದಲ್ಲಿ ತನ್ನ ಬಿಟ್ಟು ದೇವನಿಲ್ಲ, ಮಣ್ಣ ಬಿಟ್ಟು ಮಡಕೆಯಿಲ್ಲ ಎಂಬುದೇ ನಿಜದ ನಿಲವು."ಬಯಲೊಳಕೊಂಡ ಜ್ಯೋತಿಯಂತೆ ಕೂಡಲಚೆನ್ನಸಂಗಯ್ಯ, ನಿಮ್ಮ ಶರಣರ ಪರಿ" ಎಂಬ ಚನ್ನಬಸವಣ್ಣನವರ ಮಾತಿನಲ್ಲಿ ಶರಣರು ಬೇರೆಯಲ್ಲ ಜ್ಯೋತಿರ್ಲಿಂಗ ಬೇರೆಯಲ್ಲ ಎಂಬ ದೃಢನಿಶ್ಚಯದ ದೃಷ್ಟಿಯಿದೆ.

CC-0. Jangamwadi Math Collection. Digitized by eGangotri

ಜೀವನೇ ದೇವ, ಜೀವನನ್ನು ಬಿಟ್ಟು ದೇವನಿಲ್ಲ; ಆ ಜೀವಶಿವನನ್ನು ಇಷ್ಟಲಿಂಗನಿಷ್ಠೆಯಿಂದ ಆ ಅಂತರಾತ್ಮ ಶೂನ್ಯನಾಮ ಶಿವನನ್ನು ಸಾಕ್ಷಾತ್ಕರಿಸಿಕೊಂಡು ಜೀವನ್ಮುಕ್ತನಾಗಿ, ಜೀವಶಿವೈಕ್ಯ ಸಮರಸಸುಖಿಯಾಗಿ ನಿಜನಿತ್ಯತ್ವವನ್ನು ಹೊಂದಬೇಕೆಂಬುದೇ ಆಜೀವಕ ಶಿವಧರ್ಮದ ಗುರಿ. ಲಿಂಗಶಾಸ್ತ್ರಗಳು ಆಜೀವ ಮತದಾಚರಣೆಯಲ್ಲಿ ಪ್ರತ್ಯೇಕವಲ್ಲದ ಕಾರಣ"ಲಿಂಗಜೀವಿ ಮತ"ದ ಪ್ರಾಣಲಿಂಗಿಯೆನಿಸಿ, ತಾನೇ ತನ್ನಲ್ಲಿ ತಾನಾಗುವಾತ ಲಿಂಗನಿಷ್ಠ-ಆಸ್ತಿಕನೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

"ಆತ್ಮಾದಿ ಷಡ್ಭೂತಂಗಳು ಆಚಾರಾದಿ ಮಹಾಲಿಂಗಂಗಳೊಳಗೆ ಲೀನವಾಗಲು, ಆ ಆರು ಲಿಂಗಂಗಳೆ ಈ ಮೂರುಲಿಂಗಂಗಳೊಳಗೆ ಬೆರೆದು ಇಷ್ಟವೇ ಪ್ರಾಣವಾಗಿ, ಭಾವಸಂಗದೊಳಗೆ ಪರವಶಮಾಗಿ ತಾನು ತಾನಾಗಿ, ತನ್ನಿಂದನ್ಯವೇನೂ ಇಲ್ಲದೆ ನಿಬ್ಬೆರಗಾಯಿತ್ತು ಕಾಣಾ, ಮಹಾಘನ ದೊಡ್ಡದೇಶಿಕಾರ್ಯಗುರು ಪ್ರಭುವೆ" ಎಂದು ಮುಮ್ಮಡಿಕಾರ್ಯೇಂದ್ರನು ಕರ್ಮಾಚರಣೆಯ ತನುಗುಣವಿಲ್ಲದ ಶುದ್ಧಾತ್ಮನೇ ವಿರಕ್ತ; ಕರ್ಮಲೇಪವಿಲ್ಲದಾತನೇ ಜೀವನ್ಮುಕ್ತನೆಂಬುದನ್ನು ಸಾರಿದ್ದಾನೆ. ಜ್ಞಾನತೂರ್ಯಾವಸ್ಥೆಯನ್ನು ಹೊಂದಿದಲ್ಲಿ ಮಹಾಲಿಂಗನಾದ ನೀನೊಬ್ಬನಲ್ಲದೆ ಮತ್ತಾರೂ ಇಲ್ಲದೆ, ನೀನೇನೀನಾಗಿರ್ಪ ನಿಜಸುಖಿ ಎಂದು ಇಷ್ಟಲಿಂಗವನ್ನು ಸಂಬೋಧಿಸಿರುವುದರಲ್ಲಿ ತಾನಲ್ಲದನ್ಯವಿಲ್ಲವೆಂಬ ಶರಣರ ನಿಲವಿನಲ್ಲಿ ಗೋಸಾಲಪುರುಷರತ್ನದಲ್ಲಡಗಿದ ನಿಃಶಬ್ದಮಾತ್ರ ಶೂನ್ಯಪರ್ಯಾಯನಾಮ ಶಿವನಿರುವನು ಎಂಬುದನ್ನು ಕಾಣಬಹುದು.

ಬಸವಪ್ರಭುದಂಡೇಶರ ಆತ್ಮದೊಳಗಣ ಅಣುಭಾವದೀಪ್ತಿಯ ವಚನಾನುಭಾವದ ಪ್ರವಾಹವು ಲಿಂಗಕ್ಷೇತ್ರವಾದ ತನ್ನೊಳಗೆ ಭೂವ್ಯೋಮಪಾತಾಳಗಾಮಿ ಗಂಗೆಯಾಗಿ ಹರಿದು ಸಚ್ಚಿದಾನಂದ ರೂಪದ ತಾತ್ವಿಕ ಮಹಾಲಿಂಗವೆಂಬ ತ್ರಿವೇಣಿಸಂಗಮದಲ್ಲಿ ತಾನು ಮುಳುಗಿ ಮುನ್ನಿನಂತೆಯೇ ತನ್ನ ತಾನಾದೆನೆಂದು ಸ್ತುತಿಸಿರುವಲ್ಲಿ ಶಿವಾ-

CC-0. Jangamwadi Math Collection. Digitized by eGangotri

-ನುಭಾವವು ಕ್ರಮವಾಗಿ ಭಕ್ತ ಜ್ಞಾನ ಆನಂದರೂಪಿ ಬಸವೇಶ ಚನ್ನಬಸವಣ್ಣ ಪ್ರಭುದೇವರ ಸ್ವಾನುಭಾವ ಪರಂಪರಾಗತವಾಗಿ ಹರಿದುಬಂದಿರುವುದರ ದ್ಯೋತಕವಾಗಿದೆ ಎಂಬುದು ಮುಮ್ಮಡಿಕಾರ್ಯೇಂದ್ರನ ಮುಂದಿನ ವಚನದಿಂದ ಎದ್ದು ತೋರುತ್ತದೆ:

"ಸತ್ಯಸ್ವರೂಪಮಾದ ಬಸವೇಶ್ವರನೇ ಭಕ್ತನು, ಜ್ಞಾನಸ್ವರೂಪಮಾದ ಚೆನ್ನಬಸವೇಶ್ವರನೇ ಗುರುವು, ಆನಂದಸ್ವರೂಪಮಾದ ಅಲ್ಲಮಪ್ರಭುವೇ ಜಂಗಮ. ಇಂತಪ್ಪ ಗುರು ಜಂಗಮ ಭಕ್ತರೆಂಬ ಮಹಾನದಿಗಳು ತ್ರಿಪಥಗಾಮಿಗಳಾಗಿ ಮಚ್ಛರೀರವೆಂಬ ಕಾಶೀಕ್ಷೇತ್ರದಲ್ಲಿ ಪರಿದು ಪವಿತ್ರಮಂ ಮಾಡಿ, ನನ್ನ ಹೃದಯವೆಂಬ ಮಣಿಕರ್ಣಿಕಾಸ್ಥಾನದೊಳ್ಳೂರೊಂದಾಗಿ ಕೂಡಲು, ಸತ್ಯವೇ ಕಂಠ, ಜ್ಞಾನವೇ ಗೋಮುಖ, ಆನಂದವೇ ಗೋಳಾಕಾರಮಾಗಿರ್ಪ ಮಹಾಲಿಂಗವೆಂಬ ತ್ರಿವೇಣೀಸಂಗಮ ದಲ್ಲಿ ನಾಂ ಮುಳುಗಿ, ನಿರ್ವಾಣದಲ್ಲಿ ಮುನ್ನಿನಂತಿರ್ದೆನು ಕಾಣಾ ಮಹಾಘನ ದೊಡ್ಡದೇಶಿಕಾರ್ಯಗುರು ಪ್ರಭುವೆ. ॥೮೦॥

"ಮುಮ್ಮಡಿಕಾರ್ಯಕ್ಷಿತೀಂದ್ರ ವಿರಚಿತಮಾದ ರೇವಣ ಸಿದ್ಧೇಶ್ವರ, ಮರುಳಸಿದ್ಧೇಶ್ವರೈಕೋರಾಮ ಪಂಡಿತಾರ್ಯಾಲ್ಲಮ ಪ್ರಭು, ಚೆನ್ನಬಸವೇಶ್ವರಾದಿ ಪೂಜ್ಯಪಾದ ವಿರಚಿತ ಸಕಲಗ್ರಂಥಸಾರಭೂತಮಾದ ವೀರಶೈವಸಿದ್ಧಾಂತರೂಪ ವೇದಸಂಜೀವಿನಿ"ಎಂದು(ಪು.೭೧೬)

ಹೆಸರಿಸಿರುವುದರ ಅಂತರಾರ್ಥವನ್ನು ಒಳಹೊಕ್ಕು ನೋಡುವುದಗತ್ಯ.ಅದು ವೇದದ ಕರ್ಮಕಾಂಡವನ್ನು ದೂರೀಕರಿಸಿ ಜ್ಞಾನಕಾಂಡಕ್ಕೆ ಮರುಜೀವ ಕೊಟ್ಟಿರುವುದರ ಸಂಕೇತ ಎಂಬುದನ್ನು ನಾವು ಗಮನಿಸುವು ದಗತ್ಯ. ಚರಾಚರ ಜಗಜ್ಜೀವರ ಜನನದಿಂದ ಮೊದಲ್ಗೊಂಡು ತನ್ನ ತಾನಾಗುವ ಮುನ್ನಿನ ನಿರ್ವಾಣ ಎಂದರೆ ಲಿಂಗೈಕ್ಯದವರೆಗಿನ ತತ್ತ್ವ ರಹಸ್ಯದ ವಿವೇಚನೆ ಆ ಗ್ರಂಥದಲ್ಲಿದೆ. ಆಜೀವಶಿವಮತದ ಸ್ವರೂಪವನ್ನು ಆಚಾರ್ಯ ಪರಂಪರೆಯ ಹಾಗೂ ಬಸವಪ್ರಭು ದಂಡೇಶಾದಿ ಶಿವಶರಣರ ಏಕೈಕ ಶಾಸ್ತ್ರಪರಿಭಾಷೆಯಿಂದ ಪ್ರಕಟಿಸಿದುದಾಗಿರುವುದರ ಸತ್ಯಸಂಗತಿಯನ್ನು

CC-0. Jangamwadi Math Collection. Digitized by eGangotri

ಲಿಂಗವಂತರಾದವರೆಲ್ಲರೂ ಮನಗಾಣುವುದಗತ್ಯ. ಕವಿ ಮುಮ್ಮಡಿಕಾರ್ಯೇಂದ್ರನು ಜೀವನೇ ಪರಮನಾಗುವ ನೆಂಬುದನ್ನು ಸಿದ್ಧಪಡಿಸಿರುವ ಬಗೆಯನ್ನು ನೋಡಿ:

"ಶಬ್ದಮಧ್ಯದಲ್ಲಿರ್ಪ ಅರ್ಥವೇ ಜೀವನು, ತಮೋ ರೂಪಮಾಗಿಹನು. ಜ್ಞಾನಮಧ್ಯದಲ್ಲಿರ್ಪ ಅರ್ಥವೇ ಪರಮನು, ಸತ್ಯಸ್ವರೂಪಮಾಗಿಹನು. ಜ್ಞಾನಶರೀರದಲ್ಲಿರ್ಪ ಪರಮಾರ್ಥ ಭಾವವೆಂಬ ಹಸ್ತದಲ್ಲಿ ಬುದ್ಧಿಯೆಂಬ ತ್ರಿಗುಣಾತ್ಮಕಮಪ್ಪ ಮುಮ್ಮೊನೆಯಲಗಂ ಪಿಡಿದು, ಆ ಶಬ್ದಶರೀರಮಂ ಭೇದಿಸಿ ತನ್ಮಧ್ಯದಲ್ಲಿರ್ಪಅರ್ಥವನ್ನು ಆ ಜ್ಞಾನವುಗ್ರಹಿಸಿದಲ್ಲಿ ಜ್ಞಾನಾರ್ಥ ದೊಳಗೆ ಬೆರೆದು, ಎರಡೂ ಒಂದಾಗಿ, ಆ ಅರ್ಥವೇ ಸತ್ಯವಾಗಿ ಆನಂದಮಯಮಪ್ಪುದು.ಜ್ಞಾನವು ಗ್ರಹಿಸದೇ ಬಿಟ್ಟರೆ ಶಬ್ದಾರ್ಥ ವೇ ದುರರ್ಥಮಾಗಿ, ಸೃಷ್ಟಿ ಸ್ಥಿತಿ ಸಂಹಾರಂಗಳಲ್ಲಿ ಕೋಟಲೆ ಗೊಳುತ್ತಿರ್ಪುದೇ ಜೀವನು, ಅದೇ ಪರಮನು: ತತ್ಪರಿಗ್ರಹವೇ ಐಕ್ಯಮಾದಲ್ಲಿ: ಎರಡೂ ಒಂದೇ ಆಗಿರ್ಪುದು ಕಾಣಾ ಮಹಾಘನದೊಡ್ಡದೇಶಿಕಾರ್ಯಗುರು ಪ್ರಭುವೇ." ॥೫೦॥

ಜೀವನೇ ಪರಮನಾಗುವಲ್ಲಿ ಅಂಗಲಿಂಗಸಮರಸಸಂಗದ "ನಿರ್ಮಲನ" ಸಹಜ ಸ್ವರೂಪದ ನಿರೂಪಣೆಯನ್ನು ಈ ಮೇಲಣ ವಚನದಲ್ಲಿ ಕಾಣಬಹುದಾಗಿದೆ.

ಈ ಸಂದರ್ಭದಲ್ಲಿ ತತ್ತ್ವಚಿಂತಕರಾದ ದೀಪಕ್ ಛೋಪ್ರಾ ಅವರು ವಿಶ್ವವಿರಚನೆಯ ಶೂನ್ಯಸ್ಥಿತಿಯನ್ನು, ಅರ್ಥಾತ್ ಚಿದಾತ್ಮನೇ ನಿತ್ಯನೆಂಬುದನ್ನು ಕುರಿತುಮಾಡಿರುವ ಗಾಢವೂ ಗೂಢವೂ ಆದ ವಿವೇಚನೆಯನ್ನು ಸ್ಮರಿಸಬಹುದು. ಕಾರ್ಯಕ್ಷಿತೀಂದ್ರನಾದ ಮಹಾಘನ ದೊಡ್ಡದೇಶಿಕಾರ್ಯನ ಮೇಲಣ ಶಬ್ದದೊಳಗಣ ಜ್ಞಾನಾರ್ಥವೇ ಸತ್ಯಸ್ವರೂಪವೆಂಬು ದನ್ನು ಅದು ಪುಷ್ಟೀಕರಿಸುತ್ತದೆಯೆಂಬುದು ಗಮನಾರ್ಹವೂ ಔಚಿತ್ಯಪೂರ್ಣವೂ ಆದ ಅಂಶ:

"The space between thoughts is the transformation vortex or the ground of being. The whole universe is an 'on/off' phenomenon. The soul occu-

CC-0. Jangamwadi Math Collection. Digitized by eGangotri

pies the 'off' space. In the presence of one's soul everything comes and goes. **Thoughts come and go. Only the soul remains.''**

ಯಾವ ಆರು ಹಿರಿಯರನ್ನು ಶಿವಾತ್ಮಾ ಮಗ್ಗೆ ಮಾಯಿದೇವರು ಆರ್ಯ ಮಹಾಪುರುಷರೆಂದು ಕರೆದಿರುವರೋ ಅವರನ್ನು ಮುಮ್ಮಡಿ ಕಾರ್ಯಕ್ಷತೀಂದ್ರನ ವೇದಸಂಜೀವಿನಿ ವಚನಗಳ "ಮಹಾಘನ ದೊಡ್ಡದೇಶಿಕಾರ್ಯಗುರು ಪ್ರಭುವೆ" ಎಂಬ ಅಂಕಿತದಲ್ಲಿ ಆತನು ತನ್ನ ದೊಡ್ಡದೇಶಿಕಗುರುವನ್ನು "ಆರ್ಯಗುರು"ಎಂದು ಕರೆದಿರುವುದನ್ನು ಗಮನಿಸದೆ ಹೋದರೆ ಅಲ್ಲಮಪ್ರಭು ಚನ್ನಬಸವಣ್ಣನವರೇ ಮೊದಲಾದ ಶರಣರು ಮನಗಂಡ ಆರುಹಿರಿಯರ ಸಂಪ್ರದಾಯದ ಅನುಯಾಯಿಗಳು ತಮ್ಮ ಅಸ್ತಿತ್ವದ ಮೂಲವನ್ನೇ ಅರಿಯದವರಾಗುತ್ತಾರೆಂದು ಹೇಳಬೇಕಾಗಿಲ್ಲ.ಅಚ್ಚಾಗಿರುವ ಕನ್ನಡ ಮತ್ತು ಸಂಸ್ಕೃತಿಇಲಾಖೆಯ ರ್ಗಿಕರ ಬಸವೋತ್ತರಯುಗದ ಸಂಕೀರ್ಣ ವಚನಸಂಪುಟ: ಎಂಟರ ಪ್ರಸ್ತುತವಚನಕಾರನ ಎಲ್ಲ ವಚನಗಳಲ್ಲಿಯೂ ಅಂಕಿತವು ಸಮಸ್ತಪದವಾಗಿದೆಯೇ ಹೊರತು ಎಲ್ಲಿಯೂ ಅದರ ರಹಸ್ಯಗರ್ಭಿತವಾದ ಪದದ ವಿಭಾಗವಿಲ್ಲ. ಇದರಿಂದ ಯಾವ ಲಿಂಗವಂತಧರ್ಮದ ಆಧ್ಯಾತ್ಮಿಕ ಮಹತ್ವಪೂರ್ಣ ಗಗನತತ್ತ್ವ ಪ್ರತಿಪಾದಕ ಗೋಸಾಲಗಣಾಚಾರ್ಯನುಂಟೋ,ಯಾವಾತ ನನ್ನು ಪ್ರಭುಚನ್ನಬಸವಣ್ಣನವರು ತಮ್ಮ ವಚನಗಳಲ್ಲಿಆರು ಹಿರಿಯರು ಎಂದು ಕರೆದು ಪ್ರಕಟಿಸಿರುವರೊ, ಅವರನ್ನೇ ಪ್ರಭುಗೀತೆಯಲ್ಲಿ ಮಗ್ಗೆಮಾಯಿದೇವರು ಆರ್ಯ ಮಹಾಪುರುಷ ರೆಂದು ತಿಳಿಸಿಕೊಟ್ಟಿರುವರೋ ಆ ಆಚಾರ್ಯರ ಐತಿಹಾಸಿಕ ಅಸ್ತಿತ್ವವನ್ನೇ ಅರಿತಿಲ್ಲವೆಂದಾಗುತ್ತದೆ. ಹಾಗೂ ಆ ಪರಂಪರೆ ಯನ್ನು ಮುಂದುವರಿಸಿಕೊಂಡು ಬಂದ 'ಆರ್ಯಗುರು'ವನ್ನು ಇಲ್ಲಿ ಕವಿಯು ನಿರ್ದೇಶಿಸಿರುವುದರಬಗೆಗೂ ಯಾವ ಕಲ್ಪನೆಯೂ ಇಲ್ಲದಿರುವುದು ಮುದ್ರಿತ ವಚನಾಂಕಿತದಿಂದ ವೇದ್ಯವಾಗುತ್ತದೆ. ಪದವಿಭಾಗ ಇರಬೇಕಾದೆಡೆಯಲ್ಲಿ ಇರದೇ ಹೋದರೆ, ಆ ಶಬ್ದಾರ್ಥವುಜ್ಞಾನಾರ್ಥವನ್ನು ಹೊಗದಿದ್ದರೆ ದುರರ್ಥವಾಗುತ್ತದೆ ಎಂಬುದಕ್ಕೆ ಪಂಪಕವಿಯ ಆಶಯಕ್ಕೆ ವಿರುದ್ಧವಾದ ಓದುಗನ

CC-0. Jangamwadi Math Collection. Digitized by eGangotri

ಓದಿನ "ಆರಂಕುಶ"ವೆಂಬ ಸ್ವಕಲ್ಪಿತ ಸಮಸ್ತಪದವೇ ಸಾಕ್ಷ್ಯ. ನೋ: "ಹಸ್ತಪ್ರತಿಲೇಖನದಲ್ಲಿ ಬಿಂದು ಅಥವಾ ಸೊನ್ನೆಯ ಪಾತ್ರ" ಲೇಖಕ:ಇದೇಗ್ರಂಥದ ಕರ್ತ. ಕ.ಸಾ.ಪ.ಸಂಪುಟ.೭೭. ೧೯೯೯ ಪು.೧-೨೨).

ಪ್ರಸ್ತುತ "ಆಜೀವಮಧುಸ್ಮೃತಿ" ಆರು ಹಿರಿಯರ ಶೂನ್ಯಧ್ಯಾನ ಪರಂಪರೆ ಮತ್ತು ಶರಣರ ಬಯಲತತ್ತ್ವ, ಅದರ ಮೂಲ ಸೆಲೆಯನ್ನು ಹೊರಗೆಡಹಿರುವ ಬೆಡಗಿನ ವಚನಗಳ ಆಳವಾದ ಅಧ್ಯಯನದ ಫಲವಾಗಿ ಲಿಂಗವಂತ ಧರ್ಮದ ಮೂಲ ಚೂಲಗಳ ಸಂಶೋಧನೆಯ ನಿರ್ದಿಷ್ಟ ಸಂಗತಿಗಳ ವ್ಯಾಪಕವಾದ ವಿವರವನ್ನು ವಚನಸಾಹಿತ್ಯವೇ ಗರ್ಭೀಕರಿಸಿ ಕೊಂಡಿದೆ ಎಂಬುದನ್ನು ಸಾದರಪಡಿಸಿದೆ. ಮೂಲ ಗ್ರಂಥಾಧಾರಗಳ ಉಲ್ಲೇಖಗಳಿಂದ ಶಿವಶರಣರ ಆಚರಣೆಯ ಮಹತ್ತ್ವವನ್ನು ಮಗಧದೇಶದ ರಾಜಧಾನಿ ಚಂಪಾನಗರಿಯಲ್ಲಿ ಅಜಾತಶತ್ರು ಮಹಾರಾಜನು ನಿಯೋಜಿಸಿದ್ದ ಸಭಾಮಧ್ಯೆ ಸ್ವಾನುಭಾವಜ್ಞಾನಿಗಳ ಪರೀಕ್ಷೆಯಲ್ಲಿ ಪರಬ್ರಹ್ಮವನ್ನು ಮೀರಿದ ತನ್ನ ತೂರ್ಯಾನಂದದ ನಿಲವಿನಿಂದ ಸೋಜಿಗಗೊಳಿಸಿದ ಮಹಾಘನ ಜಂಗಮಮೂರ್ತಿಯೇ ಗೋಸಾಲ ಗಣಾಚಾರ್ಯ; ಆತನು ಬೋಧಿಸಿದ ಇಷ್ಟಲಿಂಗನಿಷ್ಠ ಬಯಲತತ್ತ್ವವೇ ಶಿವಶರಣರ ಜೀವಜೀವಾಳವೆಂಬುದನ್ನು ವಿಶದಪಡಿಸುತ್ತ ಸಂಶೋಧನೆಯು ತನ್ನ "ಕೋಟ"(Summit) ಎಂಬ ಶಬ್ದದ ಉದ್ದಿಷ್ಟಾರ್ಥಕ್ಕೆ ತಕ್ಕಂತೆ ಉತ್ತುಂಗ ಸಾಹಿತ್ಯಕ, ಧಾರ್ಮಿಕ ಮತ್ತು ಐತಿಹಾಸಿಕ ಸಂಶೋಧನೆಯ ಸಾಕಾರಸಿದ್ಧಿಯ ಕುರುಹೂ ಆಚಾರ್ಯ ಆರ್ಯಗುರು ಹಾಗೂ ವಿರಕ್ತಾಗ್ರಗಣ್ಯ ಸಮಾಯುಕ್ತವೂ ಆದ ಈ "ಆಜೀವಮಧುಸ್ಮೃತಿ"ಗ್ರಂಥದ ಪ್ರಸ್ತಾವನೆಗೆ ಹರಗುರುವಿದ್ವಜ್ಜನ ವಿಧೇಯನ ನಮನಗಳೊಡನೆ ವಿರಾಮ ಕೊಡಬಯಸುವ

ಪ್ರೊ. ಸಿ ಮಹಾದೇವಪ್ಪ.

ಸದಾ ಶಿವಸನ್ಮತಿ ನಮ್ಮನ್ನಾಳಲಿ
ಓಂ

Jangamwadi Math Collection. Digitized by eGangotri

ಸಂಕ್ಷಿಪ್ತಗಳ ಸೂಚಿ

ಅನುಭಾ.	ಅನುಭಾವಜ್ಞಾನಸಾರಾಮೃತ ಸಂಪಾದನೆಯ [ಸ್ತೋತ್ರ
ಕ.	.ಕನ್ನಡ
ಕಹಸೂ	ಕನ್ನಡಹಸ್ತಪ್ರತಿಗಳವರ್ಣನಾತ್ಮಕಸೂಚೀ,ಮೈವಿ.
ಉ.ಕಾ.	ಉದ್ಭಟಕಾವ್ಯ
ಕ.ವಿ.	ಕರ್ನಾಟಕ ವಿಶ್ವವಿದ್ಯಾಲಯ
ಕಾಶಕೃ	ಕಾಶಕೃತ್ಸ್ನ ಶಬ್ದಕಲಾಪ ಧಾತುಪಾಠಃ
ಗ್ರಂ.	ಗ್ರಂಥ, ಗ್ರಂಥಮಾಲೆ.
ತ. / ತೆ.	ತಮಿಳು / ತೆಲುಗು
ದೀ.ಬೋ.	ದೀಕ್ಷಾಬೋಧೆ
ನೋ.	ನೋಡಿ
ಪ.	ಪದ್ಯ
ಪು.	ಪುಟ
ಪ್ರ.	ಪ್ರಕಟನೆ;, ಪ್ರಯೋಗ; ಪ್ರಕಾಶಕರು.
ಪ್ರ.ಗೀ.	ಪ್ರಭುಗೀತೆ
ಬೆ.ಸಂ.ಕೋ.	ಬೆಂಗಳೂರು ಸಂಶೋಧನಕೋಟಿ
ರಾ.ವಿ.	ರಾಜಶೇಖರವಿಲಾಸ
ಲಿಂ.ಸ್ತೋ.	ಲಿಂಗಸ್ತೋತ್ರದ ವಚನಗಳು
ವ./ ವೃ	ವಚನ / ವೃತ್ತ
ವೈಚೆ.ಗ್ರಂ.ವೈರಾಗ್ಯ	ಚೆನ್ನಬಸವಸ್ವಾಮಿ ಗ್ರಂಥಮಾಲಾ-3 ೧೯೬೫
ಶ.ದೀ.	ಶಬ್ದಾರ್ಥದೀಪಿಕೆ
ಶಿವಾಕೋ,	ಶಿವಾನುಭವಕೋಶ
ಸಪುವ.	ಸರ್ವ ಪುರಾತನರ ವಚನಗಳು
ಸವಸಂ	ಸಮಗ್ರ ವಚನ ಸಂಪುಟ ೨
ಸಂ.	ಸಂಪಾದಕ; ಸಂಪಾದನೆ; ಸಂಪುಟ; ಸಂಧಿ.
ಸ.ಸಿ.ಶಿಖಾ.	ಸಟೀಕಾಸಿದ್ಧಾಂತಶಿಖಾಮಣಿ(2004)-ಸೋಸಲೆ ರೇವಣಾರಾಧ್ಯ ವಿರಚಿತ ಸಂ. ಡಿ. ಸಿದ್ದಗಂಗಯ್ಯ
ಹೋ.	ಹೋಲಿಸಿ
Tyrs.	2500 years of Buddhism **G.O.I.P. 1956**

***

CC-0. Jangamwadi Math Collection. Digitized by eGangotri

ಆಜೀವ ಮಧುಸ್ಮೃತಿ

೧. ಆಜೀವಕರ ಶೂನ್ಯಧ್ಯಾನ ಪರಂಪರೆ→

CC-0. Jangamwadi Math Collection. Digitized by eGangotri

ಆಜೀವ ಮಧುಸ್ಮೃತಿ

೧. ಆಜೀವಕರ ಶೂನ್ಯಧ್ಯಾನ ಪರಂಪರೆ

ಪ್ರಾಗ್ಯೈತಿಹಾಸಿಕ ಕಾಲದ ಜಾಗ್ರತ್ ಜಗತ್ತಿನ ಆಧ್ಯಾತ್ಮಿಕ ಚಿಂತನೆಯ ಕಾತರ ಹಾಗೂ ಬೌದ್ಧಿಕ ಕಲಹಗಳ ಕ್ರಿ.ಪೂ. 6ನೆ ಶತಮಾನ ಗಮನಾರ್ಹವಾದುದು. ವೇದಗಳ ಕಾಲಕ್ಕಿಂತ ಪೂರ್ವದಿಂದಲೂ ಭರತಖಂಡದಲ್ಲಿ ಪ್ರಚುರವಾಗಿದ್ದ 363 ಧಾರ್ಮಿಕ ಪಂಥಗಳಲ್ಲಿ ಆಗಮಚೋದಿತ ಆಜೀವಕ ಮತವೂ ಒಂದು. ಪ್ರಾಚೀನ ಜೈನ ಗ್ರಂಥಗಳಲ್ಲಿ ಆಜೀವಕ ಧರ್ಮ ಹಾಗೂ ಅದರ ಪ್ರವರ್ತಕನಾದ ಗೋಶಾಲನ ಬಗೆಗೆ ಪ್ರಸ್ತಾಪಿಸಿರುವುದನ್ನು ಕಾಣಬಹುದು. ಮಗಧ (ದಕ್ಷಿಣಬಿಹಾರ್) ದೇಶದ ಗೋಶಾಲನಿಂದ ಪ್ರವರ್ತಿತರಾದ ಆಜೀವಕರು ಪಾಪಕಾರ್ಯಗಳನ್ನು ಖಂಡಿಸಿದವರೆಂದು ಪ್ರಖ್ಯಾತರಾಗಿದ್ದರು. ಶೈವದರ್ಶನಕಾರ ಪಾಣಿನಿ (ಕ್ರಿ.ಪೂ.೫00) ತನ್ನ ಅಷ್ಟಾಧ್ಯಾಯೀ ವ್ಯಾಕರಣಸೂತ್ರದಲ್ಲಿ (Bk.iv CH 35)ಗೋಶಾಲನ ಹೆಸರನ್ನು ಹೇಳಿದ್ದಾನೆ. ಆತನ ಆದಿನಾಮದ ಮಕ್ಖಲಿ/'ಮಸ್ಕರಿ' ಸಂಸ್ಕೃತ ಪದದ ವ್ಯುತ್ಪತ್ತಿಯನ್ನು ಮಹಾಭಾಷ್ಯಕಾರನೂ, ದಾರ್ಶನಿಕ ಹಾಗೂ ಯೋಗ ಶಾಸ್ತ್ರಜ್ಞನೂ ಆದ ಪತಂಜಲಿಮಹರ್ಷಿ(ಕ್ರಿ.ಶ. ೧೫೦) "ಮಾ "ಕೃತ ಕರ್ಮಾಣಿ, ಮಾ ಕೃತ ಕರ್ಮಾಣಿ" —"ಪಾಪಕರ್ಮವನ್ನು ಮಾಡಬೇಡಿರಿ, ಪಾಪಕರ್ಮವನ್ನು ಮಾಡಬೇಡಿರಿ" ಎಂಬ ಅರ್ಥವುಳ್ಳದ್ದೆಂದು ವಿವರಿಸಿದ್ದಾನೆ. ಗೋಶಾಲನು ಯಜ್ಞ ಯಾಗಾದಿಗಳಲ್ಲಿ ಆಗುತ್ತಿದ್ದ ಪ್ರಾಣಹಿಂಸೆಯನ್ನು ಪ್ರಬಲವಾಗಿ ವಿರೋಧಿಸುತ್ತಿದ್ದನೆಂಬುದು ದೃಢಪಡುತ್ತದೆ. ಗೋಬಹುಲ ನೆಂಬ ಬ್ರಾಹ್ಮಣನ ಗೋಶಾಲಾ ನಿವಾಸದಲ್ಲಿ ಜನಿಸಿದುದರಿಂದ ಗೋಶಾಲನೆಂಬ ಹೆಸರೇ ರೂಢಿಗೆ ಬಂದಿದ್ದಿತೆಂದು ಗ್ರಂಥಗಳ ಉಲ್ಲೇಖವಿದೆ. ಕೆಳದಿ ಸಹ್ಯಾದ್ರಿಕಟಕ ಷಡ್ಸ್ಥೇಶದ ಕುಮ್ಮಿಕಾ

CC-0. Jangamwadi Math Collection. Digitized by eGangotri

(ಕುಮ್ಮ) ಪುರದ ಕಾಶೀ-ಕಾಂಡ ಚನ್ನವೀರ ಕವಿ(ಸು.೧೫೦೦) ತನ್ನ "ಕಾಶಕೃತ್ಸ್ನಶಬ್ದಕಲಾಪ ಧಾತುಪಾಠ" ಪು.೮೮ ರಲ್ಲಿ "ಮಕ"ಧಾತುವಿನ ಮಂಡನೇ, ತೊಡಿಗೆಯೊಳ್ ಎಂಬ ಅರ್ಥದ ಮಂಖ್/ ಮಂಕ್-(ಮಕ್ಪ) ಮಂಖಲಿ (ಮಕ್ಪಲಿ) ಮೂಲದ "ಮಂಕುಃ" ನಾಮಪದಕ್ಕೆ "ಉನ್ಮತ್ತವೇಷಶರಣಂ" ಎಂದು ಅರ್ಥವಿದೆಂಬುದನ್ನು ತೋರಿಸಿರುತ್ತಾನೆ. ಅದರಿಂದ ಶೂನ್ಯಧ್ಯಾನಪ್ರತಿಪಾದಕನಾದ ಗೋಶಾಲನ (ಕ್ರಿ. ಪೂ.....544 ಮರಣ) ಜೀವಶಿವಯೋಗದ ತುರೀಯಾವಸ್ಥೆಯನ್ನು ಆತನ ಆದಿನಾಮ"ಮಂಙ್ಕಲಿ" ಶಬ್ದವು ಸೂಚಸುತ್ತದೆಯೆಂಬುದು ಸ್ವಯಂವೇದ್ಯ. ಇನ್ನಿತರ ವ್ಯಾಕರಣಗ್ರಂಥಗಳಲ್ಲಿ ಕಂಡುಬರದ ಬಹುಸೂಕ್ಷ್ಮವೂ ವಿಶಿಷ್ಟವೂ ಆದ ಧಾತುಗಳನ್ನು ಕೊಟ್ಟಿರುವ ಕಾಶಕೃತ್ಸ್ನನು ಪಾಣಿನಿ(ಕ್ರಿ.ಪೂ. ೫೦೦)ಗಿಂತಲೂ ಪೂರ್ವದವನು. ಆತನು ತಿಳಿಸಿರುವ 'ಮಕ'ಧಾತುವಿನ ಮೂಲಾರ್ಥಸಂಬಂಧ ವಾದ "ಮಂಙ್ಕುಃ/ ಮಂಕುಃ ಪದದ ಗೂಢಾರ್ಥವು ಶರಣಧರ್ಮದ ಪ್ರಾಚೀನತೆಯನ್ನು ಎತ್ತಿಹಿಡಿದಿದೆ. ಆಗಮಚೋದಿತ ಷಟ್ಸ್ಥಲ-ಸಿದ್ಧಾಂತದ ಗಗನ ಇಲ್ಲವೆ ಶೂನ್ಯಧ್ಯಾನ ಪ್ರತಿಪಾದಕ ತಪಸ್ವಿ ಗೋಶಾಲನ ಕಾಲದ ಶರಣಧರ್ಮದ ಶಿವಮತ ಕ್ರಿ. ಪೂ. 6ನೆಯ ಶತಮಾನಕ್ಕಿಂತಲೂ ಹಿಂದಿನಿಂದ ತನ್ನ ಅಸ್ತಿತ್ವದ ಇತಿಹಾಸವನ್ನು ಹೊಂದಿದೆ ಯೆಂಬುದು, ಕ್ರಿ.ಶ.12ನೆಯ ಶತಮಾನಕ್ಕೆ ಸಂದ, ಪಾಣಿನಿ ಮುನಿವರನ ದೀರ್ಘಾಂತರಂಗ ಪ್ರಜ್ಞೆಯ ಕೊಡುಗೆಯೇ ದಿಟ. ವೀರಮಾಹೇಶ್ವರತಂತ್ರ ಟೀಕಾಕಾರನೂ, ವೀರಶೈವ ಕವಿಯೂ ಆದ ಚನ್ನವೀರ ಮಾಹೇಶ್ವರನ ಆಳವಾದ ಪ್ರಾಚೀನ ಶಬ್ದಾರ್ಥಪ್ರಜ್ಞೆಯು, ಗುಬ್ಬಿ ಮಲ್ಲಣಾರ್ಯನು ಒಂದೆಡೆ ಹೇಳಿರುವಂತೆ "ದೇವ-ಧರ್ಮಾರ್ಥದಾ ವಿಶೇಷಜ್ಞ ಸತ್ಕವಿ, ಋಷಿ ಕುಲೋದ್ಭವಂ" ಎಂಬುದನ್ನು ಸಮರ್ಥಿಸಿ ಅದಕ್ಕೆ ಕನ್ನಡಿಯನ್ನು ಹಿಡಿದಿದೆ. ಹೀಗೆ ವಿಶಿಷ್ಟ ಶಬ್ದಾರ್ಥಭಂಡಾರದ ಮುದ್ರೆಯನ್ನು ಒತ್ತಿದ ಗೂಢಾರ್ಥಭಂಡಾರತ್ವವನ್ನೇ

CC-0. Jangamwadi Math Collection. Digitized by eGangotri

ಹೊರತಂದು ಉಪಕಾರಮಾಡಿರುವ ಚನ್ನವೀರಕವಿಯಿಂದ ಲಿಂಗವಂತಧರ್ಮದ ಅರ್ಥಾತ್ ಶರಣಧರ್ಮದ ಪ್ರಾಚೀನತೆಯ ಬಗೆಗೆ, ಕೆಲವೆಡೆ ಅಕಾರಣವಾಗಿ ಭುಗಿಲೆಬ್ಬಿಸಿದ ವಿವಾದಕ್ಕೆ ತೆರೆ ಎಳೆದಂತಾಗಿದೆ. ಅಲ್ಲದೆ ಇನ್ನು ಮುಂದೆ ಪಂಗಡ ಒಳಪಂಗಡಗಳ ಕ್ಷುದ್ರವಿಭಜನ ಶಕ್ತಿ ತನ್ನ ಕರಾಳ ಹಸ್ತದಿಂದ, ಆನೆ ತನ್ನ ತಲೆಯ ಮೇಲೆ ತಾನೇ ಮಣ್ಣೆರಚಿಕೊಂಡಂತಾಗದೆ, ಕುಲಕ್ಕೆ ಕೊಡಲಿ ಕಾವಾಗದೆ, ಸುವ್ಯವಸ್ಥೆಯ ಸಂಘಟಿತ ಲಿಂಗವಂತ ಸಮಾಜ ರಚನೆಗೆ ಆರ್ಥಿಕ, ಆಗಮಿಕ, ಧಾರ್ಮಿಕ, ಸಾಂಸ್ಕೃತಿಕ ಹಾಗೂ ನಿರ್ಮಲ ಚಾರಿತ್ರಿಕ ರಾಜಕೀಯ ಸದೃಢತೆಗೆ ದಾರಿಮಾಡಿಕೊಟ್ಟು ಇಡೀ ಸಮಾಜಕ್ಕೆ ಸಹಜವಾಗಿ ಸಲ್ಲಬೇಕಾದ ಹಕ್ಕು, ಸ್ಥಾನಮಾನಗಳೊಡನೆ ತಲೆಯೆತ್ತಿ ಬಾಳಲು ಎಡೆಯಾಗುವುದೆಂದು ಆಶಿಸಬಹುದಾಗಿದೆ. ಗುಂಪುಗಾರಿಕೆಯ ತಂಡವಾಗದ ನಿಸ್ವಾರ್ಥಮಯ ಸಂಘಟನೆಯೇ ಬಾಳು, ಸಂಘರ್ಷವೇ ಹಾಳು ಎಂಬ ಅನುಭವದಿಂದ ಪಾಠ ಕಲಿಯುವುದು ವಿವೇಕಿಗಳಾದವರ ಲಕ್ಷಣ.

"ದೇವರು ಇದ್ದಾನೊ ಇಲ್ಲವೊ "ಇಷ್ಟ"ಪೂರ್ವಕವಾಗಿ ಶೂನ್ಯಧ್ಯಾನಮಾಡಬೇಕು" ಎಂದು ಉಪದೇಶಿಸಿದ ಗೋಶಾಲನು ಷಟ್ಸ್ಥಲಸಿದ್ಧಾಂತದ ಇಷ್ಟಲಿಂಗ ಪೂಜಾಚರಣೆಯ ಅನುಷ್ಠಾನ -ನಿಷ್ಠನಾಗಿದ್ದನೆಂಬುದು, ಆತನ ಉಪದೇಶದಿಂದಲೇ, ವ್ಯಕ್ತವಾಗುತ್ತದೆ. ಆ ಗುರು-ಶಿಷ್ಯಸಂಬಂಧದ ಈ ಆಧ್ಯಾತ್ಮಿಕ ಅನುಷ್ಠಾನದ ಪರಂಪರೆ ಕ್ರಿಯಾತ್ಮಕವಾಗಿ ತನ್ನ ಸಾತತ್ಯವನ್ನು ಆಗಮಮಾರ್ಗದಿಂದ ಗೋಪ್ಯವಾಗಿಯೇ ಸಾಗಿಸಿಕೊಂಡು ಬಂದದ್ದೆಂಬ ಸತ್ಯದ ಹಾಗೂ ಆತ್ಮರಕ್ಷಣೆಯ ತಳಹದಿಯ ಮೇಲೆ ನಮ್ಮ ತತ್ತ್ವಾಲೋಚನಾ ಕ್ರಮ ನಿಲ್ಲುವುದರ ಅಗತ್ಯತೆಯನ್ನು ಮರೆಯಲಾಗದು. ಕ್ರಿ.ಪೂ. ೬ನೇ ಶತಮಾನದ ಅಂದಿನ ದಿನಗಳಲ್ಲಿ ಪ್ರಸಿದ್ಧರಾಗಿದ್ದ ಆರು ಹಿರಿಯರಲ್ಲಿ ಗೋಶಾಲನು ಒಬ್ಬನಾಗಿ ಗಣಾಚಾರ್ಯನಾಗಿದ್ದನೆಂಬುದು ಪ್ರಚಲಿತವಾಗಿದ್ದ ಗ್ರಂಥಸ್ಥ(Tyrs) ಆಧಾರಗಳಿಂದ ದೃಢಪಟ್ಟಿದೆ. ಸಾಧುಸಮ್ಮತ ಯತೀಶ್ವರನೂ ಗುರೂತ್ತಮನೂ ಆಗಿದ್ದನೆಂದು

CC-0. Jangamwadi Math Collection. Digitized by eGangotri

ಪ್ರಸಿದ್ಧಿ. ಹೇಮಚಂದ್ರನ(ಕ್ರಿ.ಶ.1089-1172) ಹೇಳಿಕೆಯಲ್ಲಿ ಗೋಶಾಲನು ಮಾಗಧ ಅರ್ಥಾತ್ 'ಕವಿ'ಯಾಗಿದ್ದನೆಂಬ ಎಣಿಕೆಗೆ ದೃಷ್ಟಾಂತವಾಗಿ ಆತನ ಅನುಭಾವಿಕ ಬೆಡಗಿನ ನುಡಿಯನ್ನು ನೆನಪು‡ ಮಾಡಿಕೊಳ್ಳಬಹುದು.

ಕ್ರಿ.ಶ. ೨ನೇ ಶತಮಾನದ್ದೆಂದು ಹೇಳಲಾದ ನಾಟ್ಯಶಾಸ್ತ್ರದ ಕರ್ತನಾದ ಭರತಮುನಿಯ ಸಮಕಾಲೀನನಾದ ನಂದಿಯ "ಅಭಿನಯದರ್ಪಣ"ದಲ್ಲಿ ಹೆಸರಿಸಿರುವ ಹಸ್ತಾಭಿನಯಗಳಲ್ಲಿ ಎಡಗೈಯನ್ನು ಹರಡಿರುವ "ಅರ್ಧಚಂದ್ರಹಸ್ತ," ಅದರಲ್ಲಿ ಶಿಖರಾಕಾರವಾದ ಬಲಗೈಮುಷ್ಟಿಯಿಡುವ "ಶಿಖರಹಸ್ತ;" ಅದರ ಅಭಿನಯದಿಂದ ಕೂಡಿದ "ಶಿವಲಿಂಗಹಸ್ತಾಭಿನಯ" ಇವು ಉಲ್ಲೇಖನಾರ್ಹ.*

ಹೀಗೆ ಎಡಗೈಯ್ಯಲ್ಲಿ ಇಷ್ಟಲಿಂಗವನ್ನಿಟ್ಟು ಪೂಜಿಸುವ ಶರಣರ ಅರ್ಥಾತ್ ಲಿಂಗವಂತರ ಸಂಸ್ಕೃತಿಗೆ ತನಗಿಂತಲೂ ಹಿಂದಿನಿಂದ ಆಚರಣೆಯಲ್ಲಿ ಬಂದಿದ್ದ ಪೂಜಾವಿಧಾನವನ್ನೇ ಗೋಶಾಲಗುರು ಶೂನ್ಯಧ್ಯಾನಸಾಧನವಾಗಿ ಬೋಧಿಸಿದನೆಂಬುದು ಗಮನಾರ್ಹ. "ಶಿವಧರ್ಮ"ದಲ್ಲಿ ಉಲ್ಲೇಖವಾಗಿರುವಂತೆ ಪಾಣಿನಿ(ಕ್ರಿ.ಪೂ.೫೦೦), ಕಣಾದ, ಕಪಿಲ ಗೌತಮರೇØ ಮೊದಲಾದ ಶೈವದಾರ್ಶನಿಕರು ವೀರಶೈವಧರ್ಮದ ಆಚರಣೆಯ ಪ್ರಧಾನ ಅಂಗಗಳಲ್ಲೊಂದಾದ ಅಷ್ಟಾವರಣದ ಲಿಂಗಧಾರಣ, ಅರ್ಚನ, ಧ್ಯಾನ, ಪ್ರಸಾದಸೇವನಾದಿಗಳ ಕ್ರಮ ಹಾಗೂ ತತ್ತ್ವ

---

‡ ನೋ: ಪ್ರಭುಗೀತಾ ಪೀಠಿಕಾ xxxviii - xliii

* ನೋ: ಆಸ್ಥಾನ್ ವಿದ್ವಾನ್ ನಂಜುಂಡಾರಾಧ್ಯರ ಲೇಖನ "ವಿಭೂತಿ."

Ø ಪಾಣಿನಶ್ಚ ಕಣಾದಶ್ಚ ಕಪಿಲೋ ಗೌತಮಾದಯಃ।
ಪ್ರಸಾದಸೇವನಾದ್ಧ್ಯಾನಾದರ್ಚನಾದ್ಧಾರಣಾದಪಿ ॥
ಜಾತಾ ದರ್ಶನಕರ್ತಾರಃ ಶ್ರಾವಯಂತಿ ಜಗತ್ರಯಂ।
ವೀರಶೈವಚಿಂತಾಮಣಿ ನಂ. 34 ಪು. 38

CC-0. Jangamwadi Math Collection. Digitized by eGangotri

ಪ್ರಚಾರವನ್ನು ಮಾಡಿ ಜಗತ್ರಯಕ್ಕೆ ಬೋಧಿಸಿದರು ಎಂಬುದರಿಂದ ಕ್ರಿ.ಪೂ. ೫೦೦ಕ್ಕೂ ಮೊದಲು ಗೋಶಾಲನಿಗಿಂತಲೂ ಹಿಂದಿನಿಂದಲೂ ಶಿವಮತದ ಲಿಂಗಧಾರಣಪದ್ಧತಿ ಖಗೋಳಶಾಸ್ತ್ರದ ಕೆಲವರ ಎಣಿಕೆಯಂತೆ ವೇದಗಳಕಾಲ (ಕ್ರಿ.ಪೂ.4000-1000)ದಲ್ಲಿಯೇ ಇದ್ದಿತೆಂದು ತಿಳಿದುಬರುತ್ತದೆ.

ಗಣಾಚಾರ್ಯ ಗೋಶಾಲನ ಪ್ರಭಾವದಿಂದ ಪ್ರಖ್ಯಾತರಾದ ಆಜೀವಕ ಯತಿಗಳ ಮಳೆಗಾಲದ ಆಶ್ರಯಕ್ಕಾಗಿ ಕ್ರಿ.ಪೂ. ೩ನೇ ಶತಮಾನದಲ್ಲಿ ಮೌರ್ಯಚಕ್ರವರ್ತಿ ಅಶೋಕ ಹಾಗೂ ಅವನ ಮೊಮ್ಮಗನಾದ ದಶರಥನು ಬಿಹಾರದ ಗಯಾಸಮೀಪದ ಬರಬರ ಗಿರಿಯೊಳಗೆ ಕಲಾಮಯವಾದ ಗುಹಾಲಯಗಳನ್ನು ಕೆತ್ತಿಸಿ ಕೊಟ್ಟಿರುವ ಸಂಗತಿ ಆಜೀವಕಮತದ ಗಣ್ಯಸ್ಥಾನದ ಐತಿಹಾಸಿಕ ಮಹತ್ವದ ಶಿಲಾಲೇಖದ ಹಾಗೂ ಗಿರಿಸಾಕ್ಷಿಯ ಸ್ಥಿರದಾಖಲೆಯಾಗಿದೆ. ಅಶೋಕನಿತ್ತ ± "ನ್ಯಗ್ರೋಧಗುಹೆ" ಆಜೀವಕರ ಶಿವಮತದ ಸಂಕೇತ; ಶಿವನು ವಟಧಾಮನೆಂದೇ ಪ್ರಸಿದ್ಧಿ. ಆ ಕಾರಣ ಅರ್ಥಪೂರ್ಣ. "ವಾಹಿಂವಕ" ಮತ್ತೊಂದು ಗುಹೆ. ಆಜೀವಕಮತದ ಬೆಂಬಲಿಗರಾದ ಎತ್ತಿನ ಹೇರಿನ ಕಂಟಲಿ ವ್ಯಾಪಾರಸ್ಥರ ಪ್ರಮುಖ ಪಾತ್ರವನ್ನು ಸೂಚಿಸುತ್ತದೆ. "ವಿಶ್ವಝೋಪ್ರಿ"-ಇದು ಆಜೀವಕರ ಬಡವ-ಬಲ್ಲಿದ, ಹೆಣ್ಣು-ಗಂಡು, ಮೇಲು-ಕೀಳು, ರೈತ- ರಾಜ ಸೈನಿಕ-ಸೇನಾಧಿಪತಿ ಎಂಬ ಭೇದವಾವುದೂ ಇಲ್ಲದೆ ಎಲ್ಲರಿಗೂ ತಮ್ಮ ಮತ ಬಾಗಿಲು ತೆರೆದಿದೆ ಎಂಬುದರ ಹೆಗ್ಗುರುತಾಗಿರುವ ಗುಹೆ. ವನವಾಸ ಮಾಡುತ್ತಲಿದ್ದ ಪ್ರಾಚೀನ ಕಾಲದ ತಪಸ್ವಿಗಳ ಝೋಪ್ರಿ ಅರ್ಥಾತ್ ಜೋಪಡಿಯ ನಿವಾಸದ ಸಂಸ್ಕೃತಿಯ ಸೂಚನೆಯೂ ವಿಶ್ವಬಾಂಧವ್ಯಮಯ ವಿಶಾಲದೃಷ್ಟಿಯ ಪ್ರತೀಕವೂ ಆದುದು.

±-ನೋ:- "ಅಶೋಕನ ಶಿಲಾಶಾಸನಗಳು" 1959 ಕೋ. ಚೆನ್ನಬಸಪ್ಪ
Inscriptions of Asoka -- Govt. of India Publication. 1967 ±

CC-0. Jangamwadi Math Collection. Digitized by eGangotri

ದಾನಾರ್ಹರಾದ ಆಜೀವಕರಿಗೆ ಮೌರ್ಯಚಕ್ರವರ್ತಿಗಳು ನೀಡಿದ ಗುಹೆಗಳಲ್ಲಿ ವಾಸಮಾಡುವ ಪದ್ಧತಿಯೇ ಅನೇಕ ಶತಮಾನಗಳ ಬಳಿಕ ವಿರಕ್ತಮೂರ್ತಿಗಳ "ಗವಿಮಠಗಳ" ರೂಪದಲ್ಲಿ ಕಾಣಸ ತೊಡಗಿತು. ಬಲುವುಟ್ಟಿಗೆ ಆಂಧ್ರ, ಕರ್ನಾಟಕಗಳಲ್ಲಿ ಕಂಡುಬರುವ ಈ ಮಠಗಳು ಕಾಲವಾಹಿನಿಯ ಮೇಲೆ ಕಟ್ಟಿದ ಸೇತುವಾಗಿ ಆಜೀವ ಶಿವಮತದ ಬೆಳವಣಿಗೆಗೆ ನಿದರ್ಶನವೂ ಆಗಿವೆ.

ಆರಣ್ಯಕ ಜೀವನೋತ್ಸಾಹದ ಸಂಚಾರಶೀಲ ಆಜೀವಕರು ತಪೋಮೂರ್ತಿಗಳಾಗಿದ್ದವರು. ಕಟ್ಟುನಿಟ್ಟಾದ ಸಸ್ಯಾಹಾರಸೇವನೆ ಅವರ ವ್ರತವು ಆಗಮ-ನಿಯಮದ ಪ್ರಾಣದಯೆ ಹಾಗೂ ಅಹಿಂಸಾಚರಣೆಯ ಪಾಲನೆಯ ದೃಢಸಂಕಲ್ಪದ್ಯೋತಕ. ಎಲಚ, ಮುಗ್ಗ, ತಿಲ, ತಂಡುಲಗಳೆ ಅವರ ಪ್ರಮುಖ ಆಹಾರವಸ್ತುಗಳು. ಎಲಚಹಣ್ಣಿನ ಸೇವನೆಯನ್ನು ಹಲ್ಲಿಗೆ ಸೋಕಸದೆ ಜಿಹ್ವೆಯಿಂ ಭಕ್ಷಿಸುವ ಪೂರ್ವಪದ್ಧತಿ ವೀರಶೈವಾಂತ್ಯೇಷ್ಟಿವಿಧಿ‡ಯಲ್ಲಿ ನಿರೂಪಿಸಿ ರವುದನ್ನು ಗಮನಿಸಬಹುದು.

೫೧ ರುದ್ರಗಣದ ಆರಾಧನೆಗಿಂತ ಎಲಚಹಣ್ಣಿನ ಪ್ರಮಾಣದ ಘೃತಮಿಶ್ರಿತ ಕಬಳವನ್ನು ಲಿಂಗೈಕ್ಯವಾದಾತನಿಗೆ ಶಿವಾನಂದಸಿದ್ಧಿಯಾಗಲೆಂದು ಮಾಹೇಶ್ವರರು ಹೇಳಿ ಸ್ವೀಕರಿಸುವುದೆಂದು ವಿಧಿಸಿದೆ. ಆಜೀವಕರ ಎಲಚಹಣ್ಣಿನ ಸುಖಸೇವನೆಯ ಸಂಬಂಧಕ್ಕೂ ಲಿಂಗೈಕ್ಯ ವೀರಶೈವನ ಮುಕ್ತಸೌಖ್ಯಕ್ಕೂ ಮಾಹೇಶ್ವರರು ಸ್ವೀಕರಿಸುವ ಕಬಳದ ಪ್ರಮಾಣದಲ್ಲಿ ಎಲಚಹಣ್ಣು ಪಾತ್ರವಹಿಸಿದೆ. ಗಣಾಚಾರ್ಯ ಗೋಸಾಲಪ್ರತಿಪಾದಿತ ಆಜೀವಕಧರ್ಮ ವೀರಶೈವ ಆಚಾರ್ಯ-ಸಂಪ್ರದಾಯದಿಂದ ಅಭಿನ್ನವಾದ ಧಾರ್ಮಿಕ ಆಚರಣೆಯನ್ನು ಉಳಿಸಿಕೊಂಡು ಬಂದಂತೆ ತೋರುತ್ತದೆ.

---

‡ವೀರಶೈವಾಂತ್ಯೇಷ್ಟಿವಿಧಿಯು.ಪು.32-33 ಪ್ರ.1904 ಎಸ್‌ಜಿಎನ್‌ಪ್ರೆಸ್, ಬೆಂಗಳೂರ್.

CC-0. Jangamwadi Math Collection. Digitized by eGangotri

ತಪೋಜೀವನದ ಗುರು- ಇಲ್ಲವೆ "ಶಿವ-ಕೋರಾರಣ್ಯ ಭಿಕ್ಷವು" ಗ್ರಾಮಗಳತ್ತ ಸಾಗಿದಂತೆ "ಶಿವಕೋರಾನ್ನಭಿಕ್ಷ" ವಾಗಿರುವುದೂ ಸಾಮಾನ್ಯ ಅನುಭವ.ಅದು"ಗುರುಬೋಧಾಮೃತ ಭಿಕ್ಷ"ರೂಪವಾಗಿ ಗುರು-ಭಕ್ತ ಜ್ಞಾನ-ಸಂಬಂಧದ ಧಾರ್ಮಿಕ ಹಾಗೂ ಸಾಮಾಜಿಕ ಸುಧಾರಣಾ ಮಾಧ್ಯಮವಾಯಿತು. ಆಜೀವಕಮತ ತಾನು ಆತ್ಮೀಯ ಆಪ್ತ-ಲೌಕಿಕಮತವೆಂಬು ದನ್ನು ಭಕ್ತಸೂತ್ರದ ಮೂಲಕ ಮನಗಾಣಿಸುವಂತಿದೆ. ಆಜೀವಕ ಶಿವನ ಭಿಕ್ಷಾಟನ ಚರಿತೆಯ ಸಂಸ್ಮರಣೆಯಾಗಿ ಸಲೀಲಾಖ್ಯ ಮಠಗಳು,ಜೋಳಿಗೆಸಂಚಾರ ನಾಡಿನಲ್ಲಿ ಅಲ್ಲಲ್ಲಿ ಇಂದೂ ಸಮಾಜ ಸೇವಾಕಾರ್ಯನಿರತವಾಗಿರುವುದು ಎದ್ದುಕಾಣುತ್ತದೆ.

ಮಗಧದೇಶದ ಆಜೀವಕರ ತಪೋಜೀವನಪ್ರವಾಹ ಪುಂಡ್ರದೇಶದ ಸಹಸ್ರದ್ವಾರಪಟ್ಟಣದ ಮೂಲಕ ದಕ್ಷಿಣಕ್ಕೆ ಸಾಗಿ ಬಂದುದರ ಪರಿಣಾಮವಾಗಿ ಕನ್ನಡನಾಡಿನಲ್ಲಿ ಕಾಡಮಲ್ಲೇಶ್ವರರ, ಕಾಡಸಿದ್ದೇಶ್ವರರ, ಅಟವೀಶ್ವರರ ನೆನಪಿನ ಗದ್ದುಗೆಯ ಮಠಗಳು ಯುಗಾಂತರ ಪ್ರಜ್ಞೆಯ ಪ್ರತೀಕಗಳಾಗಿ ಇಂದಿಗೂ ಅಸ್ತಿತ್ವದಲ್ಲಿರುವುದು ಕಂಡುಬಂದ ಸಂಗತಿಯೇ ಆಗಿದೆ. ಪ್ರಭುಸ್ವಾಮಿಗಳ ಅರ್ಥಾತ್ ಅಲ್ಲಮಪ್ರಭುಗಳ ಸೂತ್ರಕ್ಕೆ ಸೇರಿದ ಗೋಸಲಸಿದ್ಧೇಶ್ವರರ ಸಕಲ ಬುಡಕಟ್ಟಿನ 770 ಚರಮೂರ್ತಿಗಳಲ್ಲಿ ಮೂರುಸಾವಿರದ ಬುಡಕಟ್ಟು ಮೊದಲಾದು ವುಗಳಲ್ಲಿ ''ಬಂಗಾಳಿ ಬುಡಕಟ್ಟಿನ" Ø ಚರಮೂರ್ತಿಗಳು ಇದ್ದರೆಂಬ ಸಂಗತಿಯು ನಿರಂಜನವಂಶ ರತ್ನಾಕರಗ್ರಂಥದಿಂದ ತಿಳಿದುಬರುವುದರಿಂದ ಗೋಸಾಲ ಗುರೂತ್ತಮನ ಆಜೀವಕ ಧಾರ್ಮಿಕ ಕಾರ್ಯಾಚರಣೆಯ ವ್ಯಾಪ್ತಿಗೆ ಸೇರಿದ್ದ ಬಂಗಾಳದ ಕಡೆಯಿಂದ ಕರ್ನಾಟಕಕ್ಕೆ ಆಜೀವಕರು ಆಗಮಿಸಿದ ಸಂಗತಿ ವಾಸ್ತವವೆಂದು ವ್ಯಕ್ತವಾಗುತ್ತದೆ.

Ø ನಿರಂಜನವಂಶರತ್ನಾಕರ ಭಾಗ ೨ ಪು. ೫

CC-0. Jangamwadi Math Collection. Digitized by eGangotri

ಪ್ರಭುದೇವರು ಚರ್ಮದೇಹಿಯೂ "ಜೀವಜೀವ"ನೂ ಆದ ಜೀವದೇವನನ್ನು "ಕಡವಸದ ಸ್ವಾಮಿ"ಎಂದರೆ ಅಧ್ಯಾತ್ಮಜಿಜ್ಞಾಸುವಾದ ಮುರಿಗಾಸ್ವಾಮಿ("ಮುರಿರಿತ್ಯತ್ರ ಚರ್ಮವೇಷ್ಟನಂ" ಅರ್ಥಾತ್ ಚರ್ಮದೇಹಿ-ಜೀವಾತ್ಮ/ ಜೀವದೇವ) ಎಂದು ಶಿವಸಮಯದ "ಆಜೀವಪಥ"ದತ್ತ ನಮ್ಮನ್ನು ಕೊಂಡೊಯ್ದಿದ್ದಾರೆ

"ಸರ್ವೇಷಾಂ ಜೀವಿನಾಂ ದೇಹಗುಹಾಯಾಂ ಶೇತೇ"-- ಎಲ್ಲ ಜೀವಿಗಳ ಒಡಲೆಂಬ ಗವಿಯೊಳ್ ಮಲಗಿದಪಂ" (ಕಾಶಕ್ಕ ಪು. ೧೭೨). ಸಮಸ್ತ ಜೀವಿಗಳಲ್ಲಿ ತನ್ನನ್ನು ತಾನೆ ಹಡೆದಾತನಾಗಿ ಎಂದರೆ ಸ್ವಯಂಭುವಾಗಿ ವಿಶ್ರಮಿಸುವವನು(m.One who recreates Himself) ಎಂಬ ಮೂಲಾರ್ಥವುಳ್ಳ 'ಶಿವ'ಪದದ ಪರ್ಯಾಯ ಶಬ್ದವೇ "ಆಜೀವ"ಶುಭನಾಮ. ತೋಂಟದ ಸಿದ್ಧಲಿಂಗೇಶ್ವರರನ್ನು ಕುರಿತು ಶಿವಾತ್ಮನಾದ ಷಡಕ್ಷರದೇವಕವಿ "ಸಾರ್ಥನಾಮಾಕರನ್"ಸ(m.ಆ-All)-ಆ +ಅರ್ಥ(m. living Being)-- ಜೀವನು> 'ಆಜೀವನು;"ಶಿವನಾಮನು. ಆಜೀವಶಿವನ ಮತಾಚರಣಧುರೀಣರೇ "ಆಜೀವರು" ಎಂದು ಮನಗಾಣಸಿರುವನು. "ಆಜೀವರಿಗೆ ಸಹಜ ಸದ್ಭಕ್ತರಿಗೆ ಪುಣ್ಯಪಾಪಗಳಿಲ್ಲ; ಇಹಪರದ ಬಂಧಮೋಕ್ಷಂಗಳಿಚ್ಛೆ ಯನಿಚ್ಛೆಯೆರಡನುಳಿದಿಪ್ಪರಾಗಿ"-ಎಂದು"ವೀರಶೈವಸಿದ್ಧಾಂತ"(-1923 ಪ್ರಕರಣ 3. ಪ.31) ನಿರೂಪಿಸುತ್ತ ಆಜೀವರು ಶುದ್ಧಚರಿತ್ರರು; ಜೀವನ್ಮುಕ್ತರು; ಇಹ-ಪರಗಳ ಬಂಧಮೋಕ್ಷಗಳ ಬೇಕು ಬೇಡೆಂಬುದನ್ನು ನೀಗಾಡಿ ವೀರವಿರಕ್ತರಾದ ಸಾಧುಗಳೆಂಬುದನ್ನು ಸಮರ್ಥಿಸುತ್ತದೆ.

"ಸರ್ವಭೂತಸ್ಥಮಾತ್ಮಾನಂ ಸರ್ವಭೂತಾನಿ ಚಾತ್ಮನಿ।
ಈಕ್ಷತೇ ಯೋಗಯುಕ್ತಾತ್ಮಾ ಸರ್ವತ್ರ ಸಮದರ್ಶನಃ॥ ೬-೨೯
"ಎಲ್ಲ ಪ್ರಾಣಗಳಲ್ಲೂ ನಿರ್ಲಿಪ್ತತೆಯಿಂದ ಅವ್ಯಕ್ತವಾಗಿ ನೆಲಸಿರುವ ಪರಮಾತ್ಮನನ್ನು ತಿಳಿದವನೇ ವಿಶಾಲವಾದ ತನ್ನ

CC-0. Jangamwadi Math Collection. Digitized by eGangotri

ಬಯಲಿನೊಳಗೆ ಎಲ್ಲ ಪ್ರಾಣಗಳೂ ನೆಲಸಿರುವುವೆಂಬುದನ್ನು ತಿಳಿಯುವನು. ಇದೇ ಶಿವಯೋಗವೆನಿಸುವುದು. ಇದರಲ್ಲಿ ಯಾವನ ಮನಸ್ಸು ಅಂಟಿಕೊಂಡಿರುವುದೋ ಅವನು ಎಲ್ಲರಲ್ಲೂ ಸಮನೆನಿಸಿದ ಪರಮಾತ್ಮನನ್ನೇ ಕಾಣುತ್ತ ಜೀವ-ಬ್ರಹ್ಮೈಕ್ಯ ಸ್ಥಿತಿಯನ್ನು ಅನುಭವಿಸುವನು." ಈ ಉದ್ಧರಣೆಯಲ್ಲಿ ಉಕ್ತವಾದ ತನ್ನೊಳಗಣ ಶೂನ್ಯವಾಚ ಬಯಲಮೂರ್ತಿಯಾದ ಅಂತರಾತ್ಮನಲ್ಲಿ ತಲ್ಲೀನಮನಸ್ಕತೆಯೇ ಶಿವಯೋಗವೆಂದು ತಿಳಿಸಿದೆ. ಆ ಜೀವ-ಶಿವೈಕ್ಯಸುಖವನ್ನು "ಇಷ್ಟಲಿಂಗ"ದ ಮೂಲಕವೇ ಪಡೆಯಬೇಕೆಂದು ಬೋಧಿಸಿದ ಗೋಶಾಲನು ಶಿವಶಕ್ತ್ಯಾತ್ಮಕ ಲಿಂಗಧಾರಣಾ ವಿಧಿಯನ್ನು ಸಾರಿದ್ದಾನೆಂಬುದು ಸ್ಪಷ್ಟವಾಗುತ್ತದೆ.

"ಬಯಲು ಲಿಂಗವೆಂಬೆನೆ, ಮೆಟ್ಟದಲ್ಲಿ ಹೋಯಿತ್ತು. ತರುಮರಾದಿಗಳು ಲಿಂಗವೆಂಬೆನೆ ತಱಿದಲ್ಲಿ ಹೋಯಿತ್ತು. ಲಿಂಗಜಂಗಮದ ಪಾದವೇ ಗತಿಯೆಂದು ನಂಬಿದೆ, ಚನ್ನಮಲ್ಲಿಕಾರ್ಜುನಾ, ಸಂಗನ ಬಸವಣ್ಣನ ಮಾತ ಕೇಳದೆ ಕೆಟ್ಟೆನಯ್ಯಾ"—ಅಕ್ಕಮಹಾದೇವಿಯ ಈ ವಚನದ (ಹ.ಶೂ.ಸಂ೧೧೫ ಪು.508) ಪೂರ್ವಾರ್ಧದ ಎರಡುಸಾಲುಗಳಲ್ಲಿ "ಲಿಂಗ"ದ ಸ್ವರೂಪದ ಬಗೆಗೆ ತನ್ನ ಮರಹನ್ನು ಹೊರಗೆಡಹಿ, ಕಡೆಯ ವಾಕ್ಯದಲ್ಲಿ ಪೃಥ್ವಿಯ ತರುಮರಾದಿಗಳೂ, ಸಮಸ್ತ ಜಗತ್ತನ್ನು ಒಳಕೊಳ್ಳುವ ಬಯಲೂ ವಿಶ್ವಾತ್ಮನ ವಿಶ್ವ ಪ್ರಕಾಶವೆಂಬುದನ್ನು ಮನಗಾಣದೆ ಕೆಟ್ಟೆನೆಂಬ ಪರಿತಾಪವಿದೆ. ನಡುವಣವಾಕ್ಯದಲ್ಲಿ ಜಂಗಮದೇಹದಲ್ಲಿ ಇಡೀ ಬ್ರಹ್ಮಾಂಡವೆ ಅಡಗಿದೆ ಎಂಬ ಅರಿವಿದೆ. ಬಯಲೇ ಮೂರ್ತಿಯಾದ ಪರಮಜ್ಞಾನಿ ಜಂಗಮ. ಬಯಲು ಬೇರೆಯಲ್ಲ, ಲಿಂಗಜಂಗಮ ಬೇರೆಯಲ್ಲ ಎಂದು ಬೋಧಿಸಿದ ಬಸವಣ್ಣನ ಮಾತನ್ನು

---

‡ಶ್ರೀಮದ್ಭಗವದ್ಗೀತಾ ವೀರಶೈವಭಾಷ್ಯ ಪು. ೧೯೦–

—ಡಾ। ಟಿ.ಜಿ. ಸಿದ್ಧಪ್ಪಾರಾಧ್ಯ

CC-0. Jangamwadi Math Collection. Digitized by eGangotri

ಮೊದಲೇ ಕೇಳದೆ ಮತಿಗೆಟ್ಟ ತಾನು ಈಗ ಬಯಲೇ ಲಿಂಗ, ಬಯಲು ಮತ್ತು ಲಿಂಗ ಅಭಿನ್ನ, ಏಕ. ಆ ಬಯಲೇ ಲಿಂಗಮೂರ್ತಿಯಾದ ಜಂಗಮ ಎಂಬ ದೃಢಮತಿಯಿಂದ ಆ ಬಯಲತತ್ತ್ವದಲ್ಲಿ ನಟ್ಟ ನಿಷ್ಠೆಯಿಂದ ಶರಣುವೊಕ್ಕವಳು ತಾನೆಂಬ ನಿರ್ಧಾರಕ್ಕೆ ಬಂದಿರುವ ನಿಲವಿನಲ್ಲಿ ಆಜೀವಕ ಶೂನ್ಯಧ್ಯಾನಾನುಸಂಧಾನ ಸಂತತವಾಗಿ ಯುಗಾಂತರದಿಂದಲೂ ಸಾಗಿಬರುತ್ತಿದ್ದು, ಆ ಮಧ್ಯೆ ಬಂದ ಸಂದೇಹಕ್ಕೆ 12ನೆಯ ಶತಮಾನದ ಅನುಭವಮಂಟಪದಲ್ಲಿ ಜರಗುತ್ತಿದ್ದಸಂಗೋಷ್ಠಿಗಳ ಸಂವಾದದಿಂದ ಪರಿಹಾರವೂ ಸಿಕ್ಕುತ್ತಿತ್ತು ಎಂಬುದಕ್ಕೆ ಅಕ್ಕಗಳ ಈ ವಚನ ಕಣ್ತೆರೆಯಿಸುವ ನಿದರ್ಶನ.

ಶೂನ್ಯವನ್ನು ಕುರಿತು ಅದರ ಸ್ವರೂಪವನ್ನು ಮಾದರಧೂಳಯ್ಯನೆಂಬ ಶಿವಾನುಭವಿಯು ನೀಡಿರುವ ನಿರ್ವಚನವಿದು:“ಅಕ್ಷಯ ಮುಚ್ಚದಲ್ಲಿ ಬಯಲು, ಬಿಟ್ಟಲ್ಲಿ ಒಡಲುಗೊಂಡಿತ್ತು.” ಆ ಒಡಲು ಯಾವುದೆಂಬುದನ್ನು ಬಿಡಿಸಿ “ಜ್ಞಾನ ಶೂನ್ಯಕ್ಕೆ ಒಡಲು”ಎಂದು ವಿವರಿಸಿದ್ದಾನೆ. ಇಡೀ ವಿಶ್ವವೇ ಬಯಲ ಗರ್ಭದಲ್ಲಿ ಅಡಗಿದೆ ಎಂಬುದನ್ನು ಮುಚ್ಚದ ಕಣ್ಣುಬಿಟ್ಟು ನೋಡಿದರೆ ಬಯಲಸ್ವರೂಪ ಹೇಗೆ ಮೈದೋರುತ್ತದೆ. ಎಂಬುದನ್ನು ಮಾರ್ಮಿಕವಾಗಿ ಮನ-ಗಾಣಿಸಿದ್ದಾನೆ. ವೃತ್ತಿ ಯಾವುದಾದರೇನು ಶಿವನನ್ನು ಕಂಡ ಶಿವಾನುಭಾವಿ ಆತ. ಬಯಲತತ್ತ್ವವೇ ಜಗಸಾಕಾರವಾಗಿದೆ ಎಂಬುದನ್ನು ಪ್ರತ್ಯಕ್ಷಗೊಳಿಸಿ ಅದು ನಿತ್ಯ, ಅಚಲ, ಸ್ವಯಂಭು ಎಂದರಿತ ಘನಮನದ ರಸಚೇತನ ಆತನದು. ಹಡಪದ ಅಪ್ಪಣ್ಣನೆಂಬ ಮತ್ತೊಬ್ಬ ಶರಣನು “ಇರದಿದ್ದರೆ ಅರಿವಿಂಗೆ ಆಶ್ರಯವಿಲ್ಲ” ಎಂದಿದ್ದಾನೆ. ಸ್ವಾನುಭವಗೋಚರವಾದ ಶೂನ್ಯದ ಈ ಲಕ್ಷಣನಿರೂಪಣೆಯಲ್ಲಿ ಆತನಿಗೆ ಕಂಡದ್ದು ಚಿದಾಕಾಶ; ವಿಶ್ವಾತ್ಮನ ವಿಶ್ವಪ್ರಕಾಶ. ಆ ಶೂನ್ಯವಿರದಿದ್ದರೆ ಅದರ ಒಡಲಾದ ಜ್ಞಾನಕ್ಕೆ ಇರಲೆಡೆಯಿನ್ನೆಲ್ಲಿ? ಜಗದ ಜೀವಿ ಬಯಲಮೂರ್ತಿ, ಬಯಲುಗ ಎಂಬುದು ವಚನಕಾರರ

CC-0. Jangamwadi Math Collection. Digitized by eGangotri

ನಿಲವು."ಮುಟ್ಟಬಾರದ ಠಾವ ಮಱಗೊಂಡಿಪ್ಪ ಮಮ ಕರ್ತ ಕೂಡಲಸಂಗಮದೇವ."(ಬ.ವ. ೯೪೮)-ಈ ಶಿವಾನುಭವದ ನುಡಿಯಲ್ಲಿ "ಶೂನ್ಯ"ಪದ "ಶಿವ"ಪರ್ಯಾಯವೆಂಬ ತತ್ತ್ವ-ವಿಚಾರವಿದೆ. ಸ್ವಾನುಭವಸಿದ್ಧವಾದುದೇ ಸಿದ್ಧಾಂತವೆನಿಸಿ ಆಜೀವಕ ಶೂನ್ಯತತ್ತ್ವದ ಅನುಸ್ಮೃತಿ ಬಸವಣ್ಣನವರ ಈ ವಾಣಿಯಲ್ಲಿದೆ. "ಜಂಗಮವೆನ್ನ ಪ್ರಾಣಲಿಂಗ ಕಂಡಯ್ಯ" ಎಂಬ ಅವರ ಮಾತಿನಲ್ಲಿ ಲಿಂಗ ಅರ್ಥಾತ್ ಶೂನ್ಯಸ್ವರೂಪವೆ ಜಂಗಮ ನೆಂಬುದು ಸ್ಪಷ್ಟ. "ಯತ್ರ ಮಾಹೇಶ್ವರಸ್ತತ್ರ ಸನ್ನಹಿತ"ನಾಗಿ ಜಂಗಮವೆ ಮುಖವಾಗಿ ಉಣ್ಬಾತ ಕೂಡಲಸಂಗಮದೇವನೆಂಬ ಅವರ ನುಡಿಯಲ್ಲಿ ಜಂಗಮ ಅರ್ಥಾತ್ ಚರಮೂರ್ತಿಯನ್ನು ಬಿಟ್ಟು ದೇವನಿಲ್ಲವೆಂಬ ನಿಲವೇ ಶಿವಶರಣರದು ಎಂಬುದನ್ನು ಅಕ್ಕನವರ ವಚನ ಮನಗಾಣಿಸುತ್ತದೆ.

"ಬೀಜವೃಕ್ಷದಂತೆ ನೀನಿಪ್ಪೆಯಯ್ಯಾ. ನಿರಾಕಾರವೇ ಮೂರ್ತಿಯಾಗಿ, ಮೂರ್ತಿಯೇ ನಿರಾಕಾರವಾಗಿ, ಇಂತಿವೆಲ್ಲ - ವನತಿಗಳೆದು ಬಯಲುಗನಾಗಿಪ್ಪೆಯಯ್ಯಾ ನೀನು, ಎನ್ನ ಕಪಿಲಸಿದ್ಧಮಲ್ಲಿಕಾರ್ಜುನದೇವಯ್ಯಾ"(ಪು.೧೫.ವ.೨೧). ಬೀಜದೊಳಗಣ ಸುಪ್ತ ಚೇತನದಂತೆ ಸಕಲ-ನಿಷ್ಕಲಪರವಸ್ತು ಸಾಕಾರ ನಿರಾಕಾರವಾಗಿ, ಆ ನಿರಾಕಾರ ಸಾಕಾರವಾಗಿ ಇವೆಲ್ಲವನು ಮೀರಿ ತೋರುವ "ಬಯಲುಗ" ಎಂದು ಸೊನ್ನಲಿಗೆಯ ಸಿದ್ಧರಾಮನು ತನ್ನ ಕರಸ್ಥಲದ ಲಿಂಗವನ್ನು ಸಂಬೋಧಿಸಿದ್ದಾನೆ. ಬಯಲುಗನೆಂದರೆ ಬಯಲ(ಶೂನ್ಯದ)ಲ್ಲಿ ಹುಟ್ಟಿ, ಬಯಲ (ಶೂನ್ಯದ)ಲ್ಲಿ ಜೀವಿಸುವವನು ಎಂದೇ ಅರ್ಥ. "ಆಬ್ರಹ್ಮಭವನ"ನಾದವನು. "ಬೀದಿಯಲ್ಲಿ ಬಿದ್ದ ಸೆಜ್ಜೆಯ ಕಂಡೆ"- ಪ್ರಭುದೇವರ ಈ ಮಾತಿನಲ್ಲಿ ಬಯಲುಗನಿದ್ದಾನೆ; ಇದ್ದೂ ಇಲ್ಲದಂತೆ. ಕಾಲವಾಹಿನಿಯ ಗುಪ್ತಗಾಮಿನಿಯಾಗಿ ಆಜೀವಕರ ಬಾಳಿನ ಭಾವದೀಪ್ತಿಯಾಗಿ ಬೆಳಗುತ್ತ ಶೂನ್ಯ-ತತ್ತ್ವಾಚರಣೆ ಬಂದಿದೆಯೆಂಬುದು ಒಂದು ಮಹತ್ತ್ವದ ಸಾಂಸ್ಕೃತಿಕ ಸಾಧನೆಯ ಸಾಹಸವೇ ಸರಿ.

CC-0. Jangamwadi Math Collection. Digitized by eGangotri

"ಬಯಲ ಬ್ರಹ್ಮವನೆ ಕಾಯದ ಕರದಲಿ ತೋರಿದ ಸದ್ಗುರುರಾಯ ಚೇಲಾಳೇಶನ ಭಜಿಸುತ ನಂಬಿರು ಮನವೆ– ಇರುವೆ ಗಣಸಭೆಯೊಳಗೆ."–ಈ ಸ್ವರವಚನದಲ್ಲಿ ಬಯಲು ಅಥವಾ ಶೂನ್ಯವೇ ಬ್ರಹ್ಮ, ಶಿವ. ಅವನನ್ನು ಅಂಗೈಯಲ್ಲಿ ಕೊಟ್ಟವನು <u>ಆದಿಗುರು</u>. ಆತನಿಂದಲೆ ಮುಕ್ತಿ ಎಂಬುದು ಇಲ್ಲಿನ ಆಶಯ.

ಕ್ರಿ.ಪೂ. ೫೦೦ಕ್ಕಿಂತ ಹಿಂದಿನಿಂದಲೂ ಶಿವಾನುಭವದ ಅಂಗಗಳಾದ ಕ್ರಿಯಾಪ್ರಧಾನವಾದ ಅಷ್ಟಾವರಣಗಳ ಆಚರಣೆಯನ್ನು ಪಾಣಿನಿ ಕಣಾದ ಮೊದಲಾದ ಶಿವಮತದ ದಾರ್ಶನಿಕರು ವ್ಯಾಪಕವಾಗಿ ಉಪದೇಶಿಸುತ್ತಿದ್ದರೆಂಬುದನ್ನು ಈ ಹಿಂದೆ ನೋಡಿದ್ದೇವೆ. ಆಂಧ್ರದೇಶದ ನಂದ್ಯಾಲಮಂಡಲದ ಪೊಡವಿಡಿಯ ಮಹಮೂರ್ತಿಯೆಂಬವನು ಕನ್ನಡದಲ್ಲಿ ರಚಿಸಿರುವ ಪದ್ಯಕೃತಿ "ಅಷ್ಟಾವರಣತಿಲಕ"ದಲ್ಲಿ ಗುರು, ಲಿಂಗ, "ಜಂಗಂ" ವಿಭೂತಿ, ರುದ್ರಾಕ್ಷಿ, ಪಂಚಾಕ್ಷರಿ ಮಂತ್ರ, <u>ಪೃಥೋದಕ</u> ಮತ್ತು ಪ್ರಸಾದಗಳ ಮಹತ್ವವನ್ನು ಪೂರ್ವದಲ್ಲಿ ಎಂದರೆ ಪ್ರಾಚೀನಕಾಲದಲ್ಲಿ "ಜೈನರು ಕೆಲವರು, ವೀರಶೈವ ಮತಸ್ಥರಲ್ಲಿ ಕೆಲವರು ಆಚರಣೆಯಲ್ಲಿ ನಡೆಸಿಕೊಂಡು ಬಂದ ಸಾಧನಗಳೆಂದು ತಿಳಿಸಿದ್ದಾನೆ. ಅವು"ವಿಚಿತ್ರ–"(m. ಲಿಂಗ.ನೋ: ಕಾಶಕೃ ಪು.೨೭೮, ೨೮೮)–ಮೂಲ ಎಂದರೆ ಲಿಂಗಮೂಲವುಳ್ಳವುಗಳೆಂದು ಹೇಳಿದೆ.(ನೋ: ಕಹಸೂ.ಸಂ೧. ಪು.೧೧೫) ಲಿಂಗನಿಷ್ಠಾಪುರಸ್ಸರವಾಗಿ ಶೂನ್ಯಧ್ಯಾನ ಮಾಡಲು ಉಪದೇಶಿಸಿದ ಆಜೀವಕ ಶಿವಮತದಾಚಾರ್ಯ ಗೋಶಾಲನ ಆಚರಣೆ ಸಹಜವಾಗಿ ಅಷ್ಟಾವರಣಯುಕ್ತವಷ್ಟೆ.

ಮಹಮೂರ್ತಿಯು ವಿವರಿಸಿರುವ ಅಷ್ಟಾವರಣಗಳಲ್ಲಿ ಲಿಂಗವು ಹೇಗೆ ಸೇರಿದೆಯೋ ಹಾಗೆಯೇ "ಪೃಥೋದಕ"ವೂ ಸೇರಿದೆ."ಪೃಥ"ಪದಕ್ಕೆ(m. **"the flat or palm of hand"-)** ಚಪ್ಪಟೆ, ಇಲ್ಲವೆ"ಶುದ್ಧ"ವಾದ ಅಂಗೈಯೆಂದೂ, ಅದರಲ್ಲಿನ ಉದಕವೆಂದರೆ ಅಂಗೈಯೊಳಗಣ ಲಿಂಗದ ಅಭಿಷೇಕಜಲವೆಂದೂ

CC-0. Jangamwadi Math Collection. Digitized by eGangotri

ಕಾಣಬಂದ ಅರ್ಥ. ಆ ಪ್ರಾಚೀನ ಕಾಲದಿಂದಲೂ ಅಂಗೈಯ ಲಿಂಗಾಭಿಷೇಕವನ್ನು ತೀರ್ಥವಾಗಿ ಸೇವಿಸುವ ಪದ್ಧತಿ ಲಿಂಗವಂತರ ಆಚರಣೆಯಲ್ಲಿದ್ದಿತೆಂಬುದು ಇದರಿಂದ ತಿಳಿದು ಬರುತ್ತದೆ. ಕೆರೆಯ ಪದ್ಮರಸರು ಎಲ್ಲ ಕ್ಷೇತ್ರಗಳ ಹಲವು ಲಿಂಗಗಳು "ನಿನ್ನಂಗೈಯೊಳಗವೆ" ತಿಳಿವಿಂದರ್ಚಸುತಿರು ಎಂದೂ ಆ ಅತಿಶಯದ ಲಿಂಗವನ್ನು ಕರದೊಳಗಿರಿಸಿ ಪರಮಭಕ್ತಿಯ ಸಾಗಿಪ ಮತವಿದೆಂದು ಅರುಪಿ ಮುಕ್ತಿಯ ತೋರಿದ ಗುರು ವಿಶ್ವನಾಥಪ್ರಭುವೆಂದು ತನ್ನ ದೀಕ್ಷಾಬೋಧೆ (ಸ್ಥಲ ಪು. ೯೨-೯೩; ೧೦೩, ೧೦೭)ಯಲ್ಲಿ ಸ್ತುತಿಸಿದ್ದಾನೆ. ಗುರು- ಶಿಷ್ಯ ಪ್ರಶ್ನೋತ್ತರ ಸಂವಾದರೂಪದ ಆ ವೀರಶೈವ ದಾರ್ಶನಿಕ ಗ್ರಂಥ, ಕವಿಯೇ ಹೇಳಿರುವಂತೆ, ಎಲ್ಲ ಶಿವಭಕ್ತರೂ ಬಲ್ಲ ದೀಕ್ಷಾಸಂಸ್ಕಾರವೇ ವಸ್ತುವಾಗಿ ಉಳ್ಳದ್ದೆಂದು ಅಭಿಪ್ರಾಯಪಟ್ಟಿದ್ದಾನೆ. ಶಿವಪಾರಮ್ಯ ವನ್ನು, ಅನುದಿನ ಸ್ತುತಿಸುವ ಆಗಮೋಕ್ತ, ಅನುಭಾವಿ ಶರಣರ ಹಾಗೂ ಸಕಲಸಜ್ಜನಗೋಷ್ಠಿಯ ಮುನಿ(m.ಗಣ.ನೋ:ಭುವನ ಕೋಶ) ನಿಕರಗಳ ವಚನಗಳಿಂದ ಕೇಳಿ ಕೇಳಿ ಕರ್ಣಾನಂದದಲ್ಲಿ ಮುಳುಗಿ ಭಾಳಾಕ್ಷ ಶಿವನಿಗೆ ತಾನು ಒಲಿದವನು ಎಂದಿರುವನು. ಹಿಂದಿನ ಭವಾವಳಿಯ ತೊಳಲಾಟದ ಬಾಧೆಗೆ ಸಿಕ್ಕ, ದೇವರುಗಳ ತಂಡದ ಮಧ್ಯ ಕಂಗೆಟ್ಟು ದಿಕ್ಕುಕಾಣದೆ ಬಂದು ಎಲೆ ದೇವ, ಮಱಿವೊಕ್ಕೆನು ನಿಮ್ಮನು ಎಂದು ಸದ್ಗುರುವಿಶ್ವನಾಥನ ಆಶ್ರಯವನ್ನು ಕೋರುತ್ತ ರಕ್ಷಸೆಂದು ಬೇಡಿರುವನು. ತಾನು ಬಲ್ಲ ಎಲ್ಲ ದೀಕ್ಷೆಗಳ ಅನುವನ್ನು, ಅವು ಸತ್ಪಥಕ್ಕೆ ಸಲ್ಲದ ಕಾರಣ, ಒಲ್ಲೆನೆಂದು ಸಾರಿದ್ದಾನೆ. "ದೂರದಿಂದರ್ಚಸಲ್ಕಾರಿಕಾಗಿ ರಲಾಱೆ। ಘೋರಭವದೊಳು ಮರಳಿ ಹೋರುತ್ತಮಿರಲಾಱೆ॥" (ದೀ.ಬೋ. ಒಲ್ಲೆ.). ಅರೆಭಕ್ತ, ಅರೆಭವಿಯಾಗಿರಲಾರೆ. ನಿಶ್ಚಿತವಿಲ್ಲದ ಮನದಲ್ಲಿ ಬೆಚ್ಚ ಬೆದರಲ್ಕಾಱೆ. ಯಾವ ಬಗೆಯಿಂದಲಾದರೂ ಎಲೆ ದೇವನೆ, ಜೀವಕಾಯದಿ ಲಿಂಗಭಾವ ತೀವುವಂತೆಸಗಿ, ಲಿಂಗಾರ್ಚನೆಯ ಕ್ರಮಗಳನ್ನು ಕೃಪೆಮಾಡೆಂದು ಬೇಡಿದ್ದಾನೆ. "ನೋಯದಂತಿರಿಸು ಲಿಂಗಾಯತದಿ ಸದ್ಗುರುವೆ" ಎಂದು

CC-0. Jangamwadi Math Collection. Digitized by eGangotri

ಮೊರೆಯಿಟ್ಟದ್ದಾನೆ. ಆತನ ಈ ಮೊರೆಯ ಮಾತು, ಮಾತು ತಿಳಿಸಲಾಗದ ಸಮಕಾಲೀನ ಸನ್ನಿವೇಶದ ಆವರಣ, ಯಾವುದೋ ಧಾರ್ಮಿಕ, ಸಾಮಾಜಿಕ ಹಾಗೂ ರಾಜಕೀಯ ಒತ್ತಡಗಳ ಕಡೆಗೆ ಮುಖಮಾಡಿಕೊಂಡಂತಿದೆ. ಶಿಷ್ಯನ ಬಾಯಿಂದ ಆಡಿಸಿದ್ದರೂ ಅದು ಪದ್ಮರಸನ ಆತ್ಮಚರಿತ್ರೆಯ ಸೂಕ್ಷ್ಮಾಂತರಂಗದ ರಹಸ್ಯವನ್ನು ಧ್ವನಿಸುತ್ತಿದೆಯೆಂಬುದರಲ್ಲಿ ಸಂದೇಹವಿಲ್ಲ. ತನ್ನ ಹಿಂದಿನ ಜೈನಪೂಜಾವಿಧಾನದಿಂದ ವಿಮುಖನಾಗಿ ಲಿಂಗಾರ್ಚನಾ ಕ್ರಮದಿಂದ ಸರ್ವಾಂಗಲಿಂಗಸಂಗನಾಗ ಬಯಸಿ ಮರೆವೊಕ್ಕಿರುವುದಂತು ಅಂಗೈಯ ನೆಲ್ಲಿಕಾಯಿಯಂತೆ ಸುಸ್ಪಷ್ಟ. ಹಿಂದಿನ ಕಾಲದಲ್ಲಿ ಅಷ್ಟಾವರಣದ ಆಚರಣೆ ಕೆಲವು ಜೈನರಲ್ಲಿಯೂ, ಕೆಲವು ವೀರಶೈವರಲ್ಲಿಯೂ ಇದ್ದಿತೆಂಬ ಸಂಗತಿಯನ್ನು ಹೊರಗೆಡಹಿದ ಮಹಮೂರ್ತಿಯ ಮಾತಿಗೆ ಪದ್ಮರಸನ ಹೃದಯಾಂತರಾಳದ ಧರ್ಮಸಂಕಟದ ಅರ್ಥಗರ್ಭಿತ ನಿರೂಪಣೆಯು ನಿದರ್ಶನವಾಗಿದೆ. ಪದ್ಮರಸನು ರಚಿಸಿದ ಶಿವಾದ್ವೈತಸಾಕಾರಸಿದ್ಧಾಂತ ಹಾಗೂ ಸಾನಂದಚಾರಿತ್ರ ಗ್ರಂಥಗಳು ಪ್ರಚುರವಾಗಿದ್ದುವೆಂದು ಆತನ ಜೊತೆಯಲ್ಲಿ ಸಮಕಾಲೀನನಾಗಿದ್ದ ಜಗದಾರಾಧ್ಯನಾಗಿದೇವನು ಕೊಂಡಾಡಿದ್ದಾನೆ. ಪದ್ಮರಸನನ್ನು "ಶರಣಕವಿ"ಯೆಂದೂ ಸ್ಮರಿಸಿದ್ದಾನೆ. ಈ ಎಲ್ಲವನ್ನೂ ಗಮನಿಸಿದ ಬಳಿಕ ಪದ್ಮರಸ ವೀರಶೈವನೆಂಬುದು ನೂರಕ್ಕೆ ನೂರು ಸತ್ಯ. ಶರಣಕವಿ ಪದ್ಮರಸನು "ಭವಿದೂರ"ನೆಂದೂ ಜಗದಾರಾಧ್ಯ ನಾಗಿದೇವನು ಹೇಳಿರುವ ಮಾತು "ಒಚ್ಚಭಕ್ತ ಒಚ್ಚ ಭವಿ"ಯಾಗಲಾರೆನೆಂದು ಪದ್ಮರಸನು ಶಿಷ್ಯನ ಬಾಯಿಂದ ತೋಡಿಕೊಂಡ ಸಂಕಟ ಪರಿಹಾರವಾಯಿತೆಂಬುದನ್ನು ಖಚಿತಪಡಿಸಿದೆ. ಅದಲ್ಲದೆ "ಮುರಹರನ ಪೊಗಳ್ವ ಕಥೆಯನಾಲಿಪರಲ್ಲದೆ । ಪುರಹರನ ಕಥೆಯನೊಲ್ಲರ್ ॥" ಎಂಬ ಆತನ ಮತ್ತೊಂದು ಹೇಳಿಕೆ ನರಸಿಂಹಬಲ್ಲಾಳನ ಕಾಲದ ಸಮಾಜದ ಒಲವು ವೈಷ್ಣವಪರವಾಗಿದ್ದಿತೆಂಬುದನ್ನು ಬಯಲುಪಡಿಸಿದೆ. ಈ ಹಿನ್ನೆಲೆಯಲ್ಲಿ ದೀಕ್ಷಾಬೋಧೆಯಲ್ಲಿನ

CC-0. Jangamwadi Math Collection. Digitized by eGangotri

ಪದ್ಮರಸನ ಅಳಲು, ಆತನ ಶಿಷ್ಯನದಲ್ಲ, ಆತನದೇ ಎಂಬುದನ್ನು ಮೂರನೆಯವನಾದ ಜಗದಾರಾಧ್ಯ ನಾಗಿದೇವನಿಂದ ದೃಢಪಟ್ಟಿದೆ. ಬೇರೆ ಸಾಕ್ಷ್ಯದ ಪ್ರಶ್ನೆಯೇ ಉದ್ಭವಿಸದು.

ಪದ್ಮಣಾಂಕನ (ಸು. ಕ್ರಿ.ಶ.1385)ಪದ್ಮರಾಜಪುರಾಣದಲ್ಲಿ "ಭರದಿನರ್ಧೇಂದು ಮೌಳಿಯನತಿ ವಿಶುದ್ಧನಂ ಕರಮೆ ಬಣ್ಣಿಸಿ ಗುಮ್ಮಟಯ್ಯನಾರಿಂ ಕೆಡದೆ, ದುರ್ವರ್ಣಮಂ ಕೆಡಿಸನೇ" ಪರಸಮಯವದಶ್ಲಾಘ್ಯಮೆಂದೆಂಬ ನಿಂದಾಶೀಲಂ ವಾಕ್‌ಶಸ್ತ್ರದಿಂ ಘಾತಿಸಿ ಪರರಿಗೆ ನೋವನ್ನುಂಟುಮಾಡುವ ಧರ್ಮವನ್ನು ಅಹಿಂಸಾಧರ್ಮವೆನ್ನಬಹುದೇ ಎಂದು ಧರ್ಮಧರ್ಮಗಳ ನಡುವೆ ವಾಗ್ವಾದವಾಗುತ್ತಿದ್ದ ಸಮಯವದು. ಗುಮ್ಮಟಾರ್ಯನೂ ಮೊದಲು ಜೈನನಾಗಿದ್ದು ಬಳಿಕ ಆ ಧರ್ಮಾಚರಣೆಯಿಂದ ದೂರವಾದವನೆಂಬುದನ್ನು ಪದ್ಮರಾಜಪುರಾಣ ಪ್ರಕಟಿಸಿದೆ.

ಸಕಲಜಗಜ್ಜೀವರನ್ನು ಬೋಧಿಸಿ ಸದಾಚಾರ ಸಂಪನ್ನರೂ, ಸನ್ಮಾರ್ಗಿಗಳೂ ಆಗುವ ದಿಸೆಯಲ್ಲಿ ಭರತಖಂಡದ ಉತ್ತರದ ಮೇರೆಯಾದ ಹಿಮಾಲಯದಿಂದ ಹಿಡಿದು ಮಧ್ಯಭಾರತ ಹಾಗೂ ದಕ್ಷಿಣದ ದಿಗ್ಭಾಗದವರೆಗೂ ಧರ್ಮೋಪದೇಶಕಾರ್ಯ ನಿರತರಾದ ಜಗದ್ಗುರುಗಳ ಹೆಸರ ಮೊದಲಲ್ಲಿ ಸಾಮಾನ್ಯವಾಗಿ ಇತರರು ಬಳಸುವ ಉಪನಾಮಗಳ(Initials)ಬದಲು ಶ್ರೀಶ್ರೀಶ್ರೀ ೧೦೮ ಅಥವಾ ಶ್ರೀಶ್ರೀಶ್ರೀ ೧೦೦೮ –ಈ ಎರಡರಲ್ಲಿ ಒಂದು ಉಪಸಂಖ್ಯೆಯನ್ನು ಅವರ ಪೂಜ್ಯತಾಸ್ಥಾನ ಹಾಗೂ ಗೌರವಸೂಚಕವಾಗಿ ಆಚಾರ್ಯ-ಪರಂಪರಾಗತ ಆ ಪಂಚಪೀಠಾಧೀಶ್ವರ ಜಗದ್ಗುರುಗಳ ಹೆಸರ ಆದಿಯಲ್ಲಿ ಬಳಸುತ್ತ ಬರಲಾಗಿದೆ. ಈ ಸಂಖ್ಯಾ ಸಂಬಂಧದ ಕಲ್ಪನೆಯಲ್ಲಿ ಅಡಗಿದ ತತ್ತ್ವಾರ್ಥವೇನಿದ್ದಿತು ಎಂಬುದರ ಅರಿವು ಯುಗಯುಗಗಳು ಹೊರಳುತ್ತಬಂದಂತೆ ಮರೆಯಾಗಿ ಈಗ ಬಹುಶಃ ಸಂಖ್ಯಾಮಾತ್ರವಾಗಿ ಸಮಾಜದ ಜನಮನದಲ್ಲಿ ಉಳಿದಿದೆ. ಮೂಲಾರ್ಥವನ್ನು ಹುಡುಕ ಹೆಕ್ಕ ತೆಗೆದಿದ್ದಾರೋ ಏನೋ ಎಂಬುದರ ನೆನಪೂ ಉಳಿದಿಲ್ಲ. ಅವುಗಳ ಆಧ್ಯಾತ್ಮಿಕ

CC-0. Jangamwadi Math Collection. Digitized by eGangotri

ಅಂತರಾರ್ಥವನ್ನು ಭೇದಿಸದಿರುವುದಕ್ಕೆ ಏನು ಕಾರಣವೋ ಅದೂ ಗೂಢ. ಈ ಸಂಖ್ಯೆಗಳ ಬಳಕೆಯ ಹಿನ್ನೆಲೆ ಹಾಗೂ ಅವುಗಳ ಪ್ರಾಶಸ್ತ್ಯವನ್ನು ಪ್ರಸ್ತಾಪಿಸುವ ಸಂದರ್ಭ ಒದಗಿದೆ.

ಜೈನ ತೀರ್ಥಂಕರರ ಚರಿತ್ರೆಗಳಲ್ಲಿ ಸೂಚಸಿರುವ ಪ್ರಕಾರ ಪರಮದೇವರುಗಳೆನಿಸಿದ ಅವರು ತಮ್ಮ ಹುಟ್ಟಿನಿಂದಲೆ ಮೂರ್ತಿವೆತ್ತ ದಶಸುಲಕ್ಷಣಗಳಲ್ಲಿ ೧೦೦೮ ಶರೀರಲಕ್ಷಣಗಳೂ ಒಂದು. ಅವರ ಆ೧೦೦೮ ದೇಹಲಕ್ಷಣಗಳಲ್ಲಿ ೧೦೮ ಮಹಾಲಕ್ಷಣ ಗಳೆಂದೂ, ಉಳಿದ ೯೦೦ ಲಕ್ಷಣಗಳು ವ್ಯಂಜನಲಕ್ಷಣಗಳೆಂದೂ ವಿಂಗಡಿಸಲಾಗಿದೆ. ಹೀಗೆ ವಿಭಜನೆಗೊಂಡಿರುವ ೧೦೮ ಮಹಾ ಲಕ್ಷಣಗಳ ಕುರುಹಾದ ಬಾಹ್ಯಜಗತ್ತಿನ ದೃಶ್ಯಾವಳಿಯು ವಿನೂತನವೂ ವಿಶಿಷ್ಟವೂ ಆದ ಅನುಭವವನ್ನು ತಂದುಕೊಡು ವುದನ್ನು ನೋಡಬಹುದು.(ನೋ: ಷಟ್ ಖಂಡಾಗಮದ ಪೀಠಿಕೆ ಪು. ೧೯) ಜನ್ಮತಃ ತೀರ್ಥಂಕರರ ಮೈವೆತ್ತ ಅನುಪಮವಾದ ಶರೀರಲಕ್ಷಣಗಳ ವಿಚಾರವಿದು.

ಪಂಚಪೀಠಾಧೀಶ ಜಗದ್ಗುರುಗಳ ಉಪಸಂಖ್ಯಾನಾಮ ಗಳ ಅನ್ವಯವು ತನ್ನದೇ ಆದ ಆಗಮಚೋದಿತ ಅನಾದಿ ಶಿವಧರ್ಮದ ಆತ್ಮನಿಷ್ಠ ತತ್ತ್ವಪ್ರತಿಪಾದನಾ ಸ್ವರೂಪವನ್ನುಳ್ಳ ದ್ದಾಗಿರುವಂತೆ ತೋರುತ್ತದೆ. ಜೈನತತ್ತ್ವಾಲೋಚನೆಯಲ್ಲಿ ಸಂಖ್ಯಾವಿಭಜನದೃಷ್ಟಿಯಿದ್ದರೆ ವೀರಶೈವ ಪಂಚಾಸ್ಯ ಪಂಚಾಚಾರ್ಯರ ಹೆಸರ ಮೊದಲ ಉಪಸಂಖ್ಯಾ ನಾಮಗಳು ಒಂದೊಂದೂ ಪ್ರತ್ಯೇಕ ಹಾಗೂ ಪೂರ್ಣಸಂಖ್ಯಾತ. ಈ ಅಂಶವನ್ನು ಗಮನಿಸಿದಾಗ, ಅತಿ ಪ್ರಾಚೀನವಾದ ಈಎರಡು ಧರ್ಮಗಳ ತಾತ್ತ್ವಿಕದರ್ಶನ ಮೂಲತಃ ಭಿನ್ನ. ಆದರೂ ಉಭಯಸಾಮಾನ್ಯ ಸಮಯಧರ್ಮವಿಲ್ಲದೆಯಿಲ್ಲ(ನೋ. ಇದೇ ಅನುಬಂಧ ೨) ಕಾರಣ ಎರಡು ಧರ್ಮಗಳ ಪರಿಸರ ಒಂದೇ ಇದ್ದು ಒಂದರ ನೆರಳು ಮತ್ತೊಂದರ ಮೇಲೆ ಬಿದ್ದಿರುವ ಸಂಭವವನ್ನು ತಳ್ಳಿಹಾಕುವಂತಿಲ್ಲ.

"ಪರಮಾತ್ಮನ ಪ್ರತಿಲಹರಿಯಿಂದ ಎಂದರೆ ಪರಮ ಪರಂಜ್ಯೋತಿ ಪ್ರಕಾಶದ ಪ್ರವರ್ತನ (occupying one's

CC-0. Jangamwadi Math Collection. Digitized by eGangotri

self in))ದಿಂದ ಅಂತರಾತ್ಮನ ಉತ್ಪತ್ತಿ. ಅಂತರಾತ್ಮನ ಪ್ರತಿಲಹರಿಯಿಂದ ಜೀವಾತ್ಮನ ಉತ್ಪತ್ತಿ." ಆ ಜೀವಾತ್ಮನೋ ತನುವೆಂಟರವನು. ಶ್ರೀಶ್ರೀಶ್ರೀ ೧೦೮ ರ ಅಂಕತದ ವಾಮಗತಿಯ ಎಂಟು(೮) ಜೀವಾತ್ಮನಿರ್ದೇಶಕ. ಆ ಜೀವಾತ್ಮನಲ್ಲಿ ಸತ್ವಗುಣ ಮಯಿ ಆಕಾಶ(ದಹರಾಕಾಶ) ಅರ್ಥಾತ್ ಸೊನ್ನೆ(೦)/ ಶೂನ್ಯವೇ ಅಂತರಾತ್ಮನಾದವನು. ಆ ಶಿವಶಕ್ತ್ಯಾತ್ಮಕ ಬಿಂದುವಿನ(೦)/ ಎಂದರೆ ಬಯಲಮರೆಯ ಬ್ರಹ್ಮವೇ ಸೃಷ್ಟಿಮೂಲದ 'ಏಕ' (೧)ದಿಂದ ಧ್ವನಿತ. ಸೂಕ್ಷ್ಮಾಗಮದಲ್ಲಿ ಆ ಏಕದ ಸ್ವರೂಪವು:

"ಏಕೋ ರುದ್ರಃ ಪರಂಜ್ಯೋತಿಃ ಪರಮಾತ್ಮಾ ಸನಾತನಃ।
ಪುರುಷಃ ಶಾಶ್ವತಃ ಸ್ಥಾಣುರೂರ್ಧ್ವರೇತಾಸ್ತ್ರಿಯಂಬಕಃ॥ ೧೬॥

ಸಂಖ್ಯೆ ೮ ಜೀವಾತ್ಮನ ಸಂಕೇತವೆಂದು ನೋಡಿದ್ದೇವೆ. ೧೦೮ರಸಂಖ್ಯೆಯೊಳಗಣ೮ ರ (ಎಂದರೆ ಜೀವಾತ್ಮನ) ಹಿಂದಿರುವ ಸೊನ್ನೆಯು ಶೂನ್ಯವೇ ಆದ ಅಂತರಾತ್ಮ. ಆ ಶೂನ್ಯದ ಮರೆಯ ಮತ್ತೊಂದು ಶೂನ್ಯ/ಸೊನ್ನೆಯು "ಶೂನ್ಯಸ್ಯ ಶೂನ್ಯ"ವಾದ "ಪರಮನಿಶ್ಶೂನ್ಯ"ದ ಪ್ರತೀಕ. ಅದರ ಮರೆಯಲ್ಲಿರುವ ಏಕ(೧) ಬಂಧುರ ನಿರಂಜನದಲ್ಲಿ ವಿಸ್ಫುಲಿಂಗದೊಳಿರುವ ಶೂನ್ಯಕಳೆ ಯಾಕಾರ. ತಾರಕಬ್ರಹ್ಮಪ್ರಕಾಶದ ದ್ಯೋತಕವೆಂಬುದನ್ನು ಒಳಹೊಕ್ಕು ಮನಗಾಣಬಹುದು. ಹೀಗೆ "ಪೂಜ್ಯ"ರಂಭಾಪುರಿ ರೇಣುಕಾಚಾರ್ಯರಾದಿಯಾಗಿ ಅಷ್ಟಾವರಣಮೂರ್ತಿಗಳಾದ ಪಂಚ ಪೀಠಾಧೀಶ್ವರರು ತಮ್ಮದೇ ಆದ ತಂತ್ರವೆಂಬ ಸೂತ್ರ, ಗೋತ್ರ, ಬೋಧಾಂಕಿತ ದಂಡ, ಕಮಂಡಲ ಹಾಗೂ ಭಿಕ್ಷಾವಾಕ್ಯ ಖ್ಯಾತರಾಗಿ, ಗಗನತತ್ತ್ವವೇ ಮೈವೆತ್ತವರಾಗಿ ಸಾಕ್ಷಾತ್ ಪರಬ್ರಹ್ಮರಾಗಿ ಲೋಕಸಂಚಾರ ಕೈಕೊಂಡು ಧರ್ಮ-ಪ್ರವರ್ತನೆಯನ್ನು ಯುಗಯುಗಗಳ ಆದಿಯಿಂದಲೂ ಇಂದಿನವರೆಗೂ ಮಾಡುತ್ತಲಿರುವುದು ಸರ್ವರಿಗೂ ವೇದ್ಯವಾದ ವಿಷಯವೇ ಆಗಿದೆ."ಶೂನ್ಯಮೆ ಗಟ್ಟಿಗೊಂಡು ಬಹಿರಂತರ - ಖಂಡಿತ ಲಿಂಗವಾಗಿ ನಿಃಶ್ಶೂನ್ಯ"ದ ನಿಲವಿನಿಂದ ಸಕಲಭುವನಾ ಚಾರ್ಯರೆನಿಸಿದವರು ಪಂಚಾಚಾರ್ಯರು. ಲಿಂಗತತ್ತ್ವ

CC-0. Jangamwadi Math Collection. Digitized by eGangotri

ಅರ್ಥಾತ್ ಬಯಲ ತತ್ತ್ವಾವಲಂಬಿ ಆಜೀವಶಿವಮತದ ಗುರೂತ್ತಮ ಗೋಶಾಲನ ಶೂನ್ಯಧ್ಯಾನ ಪ್ರತಿಪಾದನೆಯಿಂದ ಆ ಯುಗಾಂತರದ ಶರಣಸಂಸ್ಕೃತಿ ಹಾಗೂ ಆಧ್ಯಾತ್ಮಿಕ ಪ್ರಜ್ಞೆಯ ನೆನೆಪು ನಮಗೆ ತಿರುಗಿ ದೊರೆಯುವಂತಾಗಿ ದಕ್ಕಿದ್ದು ಸತ್ಯಸ್ಯ ಸತ್ಯ. ಹಾಗೂ ಅದೊಂದು ಸುದೈವ.

ಇದೇ ಸಂದರ್ಭದಲ್ಲಿ ನವಧ್ಯಾನಸ್ಥಾನಗಳಲ್ಲಿ ಒಂದಾದ ಆಜ್ಞಾಚಕ್ರದ ಮೇಲಣ ಬ್ರಹ್ಮರಂಧ್ರಾಂತದ ಶೂನ್ಯಧ್ಯಾನ-ಸ್ಥಿತ ಗುರುವಿನ ಬೆಳಗು ವಿಶ್ವವನ್ನೇ ಒಳಕೊಂಡ ಬಗೆಯನ್ನು ವರ್ಣಿಸಿರುವ ಚನ್ನಬಸವಣ್ಣನವರ ಮುಂದಿನ ವಚನದಲ್ಲಿ ನೂರೆಂಟು ಸಾವಿರದಳದ ತಾವರೆ, ಅದರ ಮಧ್ಯದಲ್ಲಿ ಜ್ಯೋತಿರ್ಮಯ ವರ್ಣದ ಲಿಂಗ ನೂರೆಂಟು. ಸಾವಿರ ಎಸಳಿನಲ್ಲಿ ನೂರೆಂಟು ಸಾವಿರ ಅಕ್ಷರಗಳ ಪ್ರಸ್ತಾಪವಿರುವುದನ್ನು ಗಮನಿಸಬಹುದು.

"ಶ್ರೀ ಗುರುವಕ್ತ್ರ, ಆಜ್ಞಾಚಕ್ರ.
ಅಲ್ಲಿಂದ ಬ್ರಹ್ಮರಂಧ್ರದಲ್ಲಿ ಬ್ರಹ್ಮಚಕ್ರ. ಅಲ್ಲಿಗೆ ಚಂದ್ರನೆಂಬ ಮಹಾಭೂತ; ಲಿಂಗ(?)ವಕ್ತ್ರ; ಪರಮೇಶ್ವರ ಪೂಜಾರಿ. ಮಹಾ ಜ್ಯೋತಿರ್ವರ್ಣದ ತೇಜ; ಬಾಲ ಅನಂತಕೋಟಿಸೂರ್ಯ ಪ್ರಕಾಶ; ಒಂದುನೂಱ ಎಂಟು, ಸಾವಿರ ಎಸಳಿನ ತಾವರೆಯ ಮಧ್ಯದಲ್ಲಿ, ಮಹಾಜ್ಯೋತಿರ್ವರ್ಣದ ಲಿಂಗ; ಅದು ನಿರಾಮಯ ಲಿಂಗ; ಅದಕ್ಕೆ ಬೀಜಾಕ್ಷರ ಪ್ರಣವನಾದಘೋಷ; ಎಸಳೊಂದು ನೂರೆಂಟು ಸಾವಿರದಲ್ಲಿ ಒಂದು ನೂಱುಎಂಟು ಸಾವಿರ ಅಕ್ಷರ. ಪ್ರೇತಾಸನ# ವಿಶ್ವತೋಮುಖ.

ವಿಶ್ವತಶ್ಚಕ್ಷುರುತ ವಿಶ್ವತೋ ಮುಖೋ ಬಾಹುರುತ ವಿಶ್ವತಃ ಪಾತ್।
ಸ ಬಾಹುಭ್ಯಾಂ ಧಮತಿ ಸ ಪತತ್ರೈ ದ್ಯಾವಾಭೂಮೀ ಜನಯನ್ ದೇವ ಏಕಃ॥

ಇಂತೀ ಗುರುವಿನ ಬೆಳಗು ವಿಶ್ವವನ್ನಪಹರಿಸಿ ತಾನು ತಾನೆ ಸೋಹಂ ಪ್ರಕಾಶ, ಕೂಡಲ ಚನ್ನಸಂಗಮದೇವಾ!"

[ಐಕ್ಯಲಿಂಗವಕ್ತ್ರ]

CC-0. Jangamwadi Math Collection. Digitized by eGangotri

ಸುಪ್ರಭೇದಾಗಮದಲ್ಲಿ ನಿರೂಪಿಸಿರುವ ಉಪ-ಸೂತ್ರಗಳಲ್ಲಿ ಗಗನದ ಬಗೆ, ಗೋಸಲ/ಗೋಚರದ ಬಗೆ, ಪಂಚವರ್ಣಗೆಯ ಬಗೆ, ಪಶುಪತಿಯ ಬಗೆ, ವೇಣಿಯಬಗೆ– ಈ ಧಾರ್ಮಿಕ ಪಂಥಗಳ ಮೂಲವು ಪ್ರಾಚೀನತೆಯಲ್ಲಿ ಹುದುಗಿದೆ. ಗೋಶಾಲ ದಿಗಂಬರನ ಬಯಲತತ್ತ್ವವು ಎದ್ದು ಕಾಣುವಂತೆ 12ನೆಯ ಶತಮಾನದ ಅಲ್ಲಮಪ್ರಭುವಿನಿಂದ ಮೂರ್ತಗೊಂಡು ಮುಂದುವರಿದು 14ನೇ ಶತಮಾನದ ಗೋಸಲ ಸಿದ್ಧೇಶ್ವರರ ಪರಂಪರೆಯಾಗಿರುವುದನ್ನು ಕಾಣಬಹುದು.

ಗೋಸಲ ಸಿದ್ಧೇಶ್ವರರು ಗೋಸಲಾರ್ಯಯತಿಯೆಂದೂ ಶತಪವಾಡದ ಮಹಾತ್ಮರೆಂದೂ ಪ್ರಸಿದ್ಧರಾದವರು. ಅವರು ಆಂಧ್ರದ ಪೊಡವಿಡಿಯ ರಾಜಗುರು ಅಪ್ಪಣಾರ್ಯರ ನಿಜಗರ್ಭ-ಸಂಜನಿತರು; ಅನಾದಿ ಮರುಳಾರ್ಯ ವಂಶಜರು ಎಂಬುದು ಹೊಯ್ಸಳ ವೀರವಿರೂಪಾಕ್ಷಬಲ್ಲಾಳನು ಅವರಿಗೆ ಇತ್ತ ತಾಮ್ರ ಶಾಸನೋಲ್ಲೇಖ.# ಹರದನಹಳ್ಳಿ ಶೂನ್ಯಸಿಂಹಾಸನಕ್ಕೆ ಕಾರಣಕರ್ತರಾದ ಗೋಸಲಯತೀಶ್ವರರು ಕುಲಾಂತರ ಅಧಿಕವಾಗುತ್ತಿದ್ದುದನ್ನು ಕಂಡು ಹಿಂದೆ ಕ್ರಿ.ಪೂ. 6ನೇ ಶತಮಾನ ದಲ್ಲಿದ್ದ 363 ಕುಲಗಳನ್ನು 335 ಪಂಗಡಗಳಾಗಿ ವಿಂಗಡಿಸಿ ಶಿವಭಕ್ತಿಯನ್ನು ಅವರಲ್ಲಿ ಒಡಮೂಡಿಸಿ ಸುವ್ಯವಸ್ಥಿತ ರನ್ನಾಗಿಸಿದ ಮಹಾಮಹಿಮಾಮಯ ಸಾಹಸವನ್ನು ಮನಗಂಡು ಮೆಚ್ಚಿ ಹಾಕಿಸಿದ ರಾಜಶಾಸನವದು. ತನ್ನ ಯುಗಾಂತರ ಕಾಲದ ಬುಡಕಟ್ಟುಗಳ ಸ್ಥಿತಿಗತಿಗೆ ಒದಗಿದ್ದ ದುಃಸ್ಥಿತಿಯನ್ನು ಕಂಡು ಗೋಶಾಲನು ತಳೆದಿದ್ದ ಅನುತಾಪ ಗುಪ್ತಗಾಮಿನಿಯಾಗಿ ಹರಿದು ಬಂದು ಅದೇ ಗೋಸಲ ಪರಂಪರೆಯ 14ನೆಯ ಶತಮಾನದ

ಮೈಸೂರು ನ್ಯಾಯಾಲಯದಲ್ಲಿ ಚಾಮರಾಜನಗರದ ಬಳಿಯ ಚನ್ನಪ್ಪನ ಪುರದ ಶ್ರೀ ಗೋಸಲಾರಾಧ್ಯರ ಮನೆಯಲ್ಲಿರುವ ಈ ತಾಮ್ರಶಾಸನದ ಬಗೆಗೆ ಹೂಡಿದ್ದ ಕಟ್ಟಳೆಗೆ ಸಂಬಂಧಿಸಿದಂತೆ ಆದ ನ್ಯಾಯಾಧೀಶರ ಅಂತ್ಯತೀರ್ಮಾನ ಶಾಸನದ ಪ್ರಾಮಾಣಿಕತೆಯನ್ನು ಎತ್ತಿಹಿಡಿದಿದೆ ಎಂಬುದೂ ಗಮನಾರ್ಹ.

CC-0. Jangamwadi Math Collection. Digitized by eGangotri

ಗೋಸಲಾರ್ಯಯತಿಯ ಅಂತರಂಗದಿಂದ ಬುಗ್ಗೆಯಾಗಿ ಹೊರಚಿಮ್ಮಿ ಬುಡಕಟ್ಟುಗಳ ಸುಧಾರಣೆಯ ರೂಪಧಾರಣೆ ಮಾಡಿದ್ದಂತು ಗೋಶಾಲನೇ ಪ್ರತಿಪಾದಿಸಿದ ನಿಯತಿವಾದದ **(the doctrine of destiny)** ಅತ್ಯದ್ಭುತವಾದ ಯೋಗಾ-ಯೋಗವೆನ್ನುವಂತಿದೆ. ಕ್ರಿ.ಪೂ. 6ನೆಯ ಶತಮಾನದ (363) ಬುಡಕಟ್ಟುಗಳ ಹಾಗೂ 14ನೆಯ ಶತಮಾನದ ಸಂಕ್ಷೇಪಗೊಳಿಸಿದ (335)ಬುಡಕಟ್ಟುಗಳ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಆಧ್ಯಾತ್ಮಿಕ ಇತ್ಯಾದಿ ವಿಷಯಗಳನ್ನು ಕುರಿತು ತುಲನಾತ್ಮಕ ಅಧ್ಯಯನದಿಂದ ಇನ್ನೂ ಹೆಚ್ಚಿನ ಸಂಗತಿಗಳು ಬೆಳಕು ಕಾಣಬಹುದು. ಆಜೀವನಾಮಾಕರನಾದ ತೋಂಟದ ಸಿದ್ಧಲಿಂಗೇಶ್ವರರನ್ನು ಕುರಿತ ತನ್ನ ಪುರಾಣಕೃತಿಯ ಆದಿಯಲ್ಲಿ(೧.೧) ಗುಬ್ಬಿಯ ಕವಿ ಶಾಂತೇಶನು ಅವರನ್ನು "ನಿರ್ಮಲ(*m.ಪವಿತ್ರ, ಲಿಂಗ)-ಜೀವಿತೇಶ್ವರ"ನೆಂದು ಸ್ಮರಿಸಿದ್ದಾನೆ. ಅದೇ ತೋಂಟದಾರ್ಯರ ಪುರಾಣವನ್ನು ಬರೆದಿದ್ದ ಬಿಜ್ಜಾವರದ ವಿರಕ್ತತೋಂಟದಾರ್ಯ ಕವಿಯು "ಜಗಜ್ಜೀವಸ್ವರೂಪಿ"ಎಂದು ಭಾವಿಸಿರುವನು. ಬಸವ ಪುರಾಣದ ಭೀಮಕವಿ ತನ್ನ ಇಷ್ಟದೈವವೂ ಸಿದ್ಧವಟನಾಥನೂ ಆದ ಶಿವನನ್ನು "ಜೀವಜೀವಂ," "ಶರಣಶರಣಂ"ಎಂದು ಕೊಂಡಾಡಿ ಆ ಆಜೀವನಾದ ಶಿವನು "ಸೇವಕಂ ಸೇವಕಪರರ್ಗೆ" ಎಂದು ಭಕ್ತಭಾವದಿಂದ ಸ್ತುತಿಸಿದ್ದಾನೆ. ಒಕ್ಕಲ ಮುದ್ದಯ್ಯನೆಂಬ ವಚನಕಾರನು "ಕಾಮಭೀಮ ಜೀವದೊಡೆಯ" ಎಂದು ತನ್ನ ಇಷ್ಟಲಿಂಗವನ್ನು ಅಂಕಿತಗೊಳಿಸಿರುವನು. ಆಜೀವಕ

----

* "ಲಿಂಗವೆಂಬುದು ಸರ್ವಕಾರಣ ಪರಮ ನಿರ್ಮಲ" ಎಂಬ ಈ ಸ್ವತಂತ್ರ ಸಿದ್ಧಲಿಂಗೇಶ್ವರರ ವಚನ(೧೭೧) ಭಾಗದ ವಿವರಣೆಯಿಂದ "ನಿರ್ಮಲ"ಪದ "ಲಿಂಗ"ಲಕ್ಷಣದಿಂದ ಪರ್ಯಾಯಪದವಾಗಿದೆ. ಶಾಂತೇಶನ "ನಿರ್ಮಲಜೀವಿತೇಶ್ವರ" ಎಂಬ ಸಂಬೋಧೆಯೂ ತೋಂಟದ ಸಿದ್ಧಲಿಂಗೇಶ್ವರರನ್ನು ಲಿಂಗಜೀವಿ ಆಜೀವಕಶಿವಮತದ ಗುರೂತ್ತಮನೆಂಬುದರ ನಿರ್ದೇಶನದ ಸ್ಪಷ್ಟ ನಿಲವನ್ನು ಮನಗಾಣಿಸಿದೆ.

CC-0. Jangamwadi Math Collection. Digitized by eGangotri

ಧರ್ಮಾಚರಣೆಯು ಹೀಗೆ ತನ್ನ ಮೂಲಸ್ವರೂಪದಲ್ಲಿ ಜನಮನದಲ್ಲಿ ಕವಿಪ್ರತಿಭೆಯ ಭಾವ ಭಾವನೆಯಲ್ಲಿ ಮೈದೋರಿರುವುದನ್ನು ಕಾಣಬಹುದು.

ಭಕ್ತನ ಪ್ರಾಣವೆ ಆತನ ಅಂಗೈಯ ಇಷ್ಟಲಿಂಗವಾದಂತೆ ಜಂಗಮದ ಮಕುಟದಲ್ಲಿ ಜನಿಸಿದ ಘನಶೂನ್ಯಲಿಂಗವೇ ಸತ್ಪ್ರಾಣ; ಆತ್ಮಲಿಂಗ. ಅದು "ಆ।ಜೀವಕಂ ಸಲೆ ಬೀಜವೆನಿಸಿ।ತ್ತಾವಗಂ ತತ್ತ್ವಂಗಳಂ ತವೆ ಪುಟ್ಟಿಸುತ್ತಿಹುದು."(ಸಂ. ೧೨-೪೮) ಎಂಬ ಶಾಂತೇಶನ (ಕ್ರಿ.ಶ. ೧೫೬೧) ನಿರೂಪಣೆಯಲ್ಲಿ ಶೂನ್ಯಲಿಂಗಧ್ಯಾನ ಮೂಲದ ಆಜೀವಕರ ಪ್ರಸ್ತಾಪವನ್ನು ಪ್ರಚ್ಛನ್ನಪ್ರಕಟಾರ್ಥದಿಂದ ಮನಗಾಣಿಸಿದ್ದಾನೆ. "ಸ್ಥೂಲಜನದನುಕೂಲ ಕಾಷ್ಠಾಚೇಲ (ಅರ್ಥಾತ್ ದಿಗಂಬರ ಯತಿಯೂ) ವಿರಸಾಭೀಲ-ಇಂದ್ರಿಯ ಲಾಲಸೆಯ ವಿಷಯರಸಕ್ಕೆ ಭೀಕರನೂ ಆದ, ಕರಧರಶೂಲ--ತನುತ್ರಯದ ಬೇನೆಯನ್ನು ಕರಸ್ಥಲದ ಲಿಂಗಮುಖದಿಂದ ಅಡಗಿಸಿಬಿಟ್ಟವನು, ಶೂಲಿ, ಶಿವನೆಂದೇ ತೋಂಟದ ಸಿದ್ಧಲಿಂಗೇಶ್ವರರನ್ನು ಸ್ತುತಿಸಿದ್ದಾನೆ (ಸಂ. ೧೩- ೧). ಆಜೀವಕ ಅಚೇಲಕಗಣ ಸಂಪ್ರದಾಯದವನೆಂಬುದರ ಸೂಚನೆ ಕವಿಯ ಈ ಬಿಚ್ಚುನುಡಿಗಳಿಂದ ಸುವ್ಯಕ್ತ. ಹಾಗಾಗಿ ಸರ್ವವೇದ್ಯ. ನೂರು ವರ್ಷಗಳ ಅನಂತರ, ಕವಿ ಷಡಕ್ಷರದೇವ "ಸಾರ್ಥನಾಮಾಕರ" ನೆಂದು ಕರೆದು ಸ್ವಧರ್ಮೀಯರಿಗೆ ಸುಕರವಾಗಿಯೂ, ಅನ್ಯರಿಗೆ ಹೊರತೋರಿಕೆಯ ಸಾಮಾನ್ಯಾರ್ಥದಿಂದಲೂ ಗೋಚರಿಸುವಂತೆ ಮಾಡಿರುವ ಪದರಚನೆ ಗಾಢವೂ ಗೂಢವೂ ಆಗಿ ಕವಿಯ ಪ್ರತಿಭೆಗೆ ಸಾಕ್ಷಿಯಾಗಿದೆ. ಷಡಕ್ಷರದೇವನ ಅಡಿಗೀಟಿನಲ್ಲಿರುವ

ಅರಿಷಡ್ವರ್ಗಮಂ ಪೂಣ್ದುಸಗಿ ತಳೆದು ಪಂಚಾಗಸನ್ಮಂತ್ರಮಂ ಪೂ।
ರ್ದಿರೆ ಸತ್ತ್ವಂ ಸತ್ಪ್ರಜಾಪಾಲನೆಯ ನೆಗಳ್ದುಪಾಯಂಗಳಂ ಸಾರ್ದು ಶಕ್ತಿ।
ಸ್ಫುರಣಂ ಕೈಗಣ್ಮೆ ತಂತ್ರೋದಿತ ಗುಣಗಣಮಂ ತಾಳ್ದಮೋಘಂ ಪ್ರಭುತ್ವಂ
ದೊರೆಕೊಂಡೆಮ್ಮಾಳ್ದನಾದಲ್ಲಮ ವಿಭು ವಿರತಿಶ್ರೇಯಮಂ ಮಾಳ್ಪು-
ದೆಮ್ಮೊಳ್ ॥ (೧-೧೩)

CC-0. Jangamwadi Math Collection. Digitized by eGangotri

ರಾಜಶೇಖರವಿಲಾಸದ(೧-೧೩) ವೃತ್ತದಲ್ಲಿನ 'ಪಂಚಾಗ-ಸನ್ಮಂತ್ರಮಂ' ತಳೆದು'ಪೂರ್ದಿರೆ ಸತ್ವಂ' ಎಂಬುದರ ವಿವೇಚನೆಯಲ್ಲಿ (ಇಡೀವೃತ್ತದ ಅರ್ಥವಿವರಣೆಗೆ ಪ್ರಭುಗೀತಾ ಪು. 250 ನೋಡಿ)ಅಡಗಿರುವ ಶೂನ್ಯತತ್ತ್ವವು ಗಮ್ಯ. ಅಲ್ಲಮಪ್ರಭುವನ್ನು ವಿಭು ಎಂದರೆ "ಅರಸು"(ಕಾಶಕ್ಯಪು.೫) ಎಂದು ಷಡಕ್ಷರದೇವನು ಸೂಚಿಸಿರವುದನ್ನು ಗಮನಿಸುವುದಗತ್ಯ."ಪಂಚಾಗಸನ್ಮಂತ್ರಮಂ" ಎಂಬ ಪಿ.ಆರ್. ಕರಿಬಸವ ಶಾಸ್ತ್ರಿಗಳು ಸಂಪಾದಿಸಿದ್ದ 1930ರ ಮುದ್ರಣದ ಮೂಲಪಾಠವನ್ನು ಕರ್ನಾಟಕ ವಿಶ್ವವಿದ್ಯಾಲಯದ ರಾ.ವಿ.ದ ೧೯೭೬ರ ಮುದ್ರಣದಲ್ಲಿ ಅದರ ಸಂಪಾದಕರು "ಪಂಚಾಂಗಸನ್ಮಂತ್ರಮಂ" ಎಂದು ತಿದ್ದಿ ಮಾಡಿರುವ ಮಾರ್ಪಾಟಿಗೆ ಯಾವ ಗ್ರಂಥಾಧಾರವೂ ಇಲ್ಲ. ಆಗಿರುವ ತಿದ್ದುಪಾಟನಿಂದ ಮೂಲದ ಅರ್ಥಕ್ಕೆ ಭಂಗವನ್ನುಂಟು ಮಾಡಿದಂತಾಗಿದೆ. ಇಲ್ಲಿನ ಸಮಸ್ತಪದವನ್ನು ಬಿಡಿಸಿ ಓದಿ ಅರ್ಥೈಸುವಾಗ"ಪಂಚ+ ಆಗಸ+ಸನ್ಮಂತ್ರಮಂ" ಎಂದು ಪದವಿಭಾಗವಾಗುತ್ತದೆ. ಪೂರ್ವಪದಾಂತ್ಯ'ಸ'ಕಾರ ಪರಪದದ ಆದಿಯ'ಸ'ಕಾರ ಎರಡೂ ಕೂಡಿ ಸಂಧಿಯಾದಾಗ ಒಂದೇ'ಸ'ಕಾರ ಉಳಿಯುವುದು. ಆಂಗ್ಲ, ಸಂಸ್ಕೃತ, ದೇಶೀಭಾಷೆಗಳಲ್ಲಿ ಈ ವ್ಯಾಕರಣನಿಯಮ ಪಾಲನೆಯಾಗಿದೆ. ಉದಾಗೆ. Manus +script >Manuscript"ಮಾನಸ+ಸರೋವರ >ಮಾನಸರೋವರ" ಇತ್ಯಾದಿ. ಇದು ಭಾಷಾವಿಜ್ಞಾನದ ವಿಷಯವಾಯಿತು.ಆದರೆ "ಪಂಚ ಆಗಸಸನ್ಮಂತ್ರಮಂ" ಎಂದರೆ ಏನು ಎಂಬುದು ಶೂನ್ಯ ಇಲ್ಲವೆ ಗಗನಸಿದ್ಧಾಂತವನ್ನು ಬಲ್ಲ ಶಿವಾನುಭವಿಗಳಿಂದಲೆ ತಿಳಿದುಕೊಳ್ಳಬೇಕು. ಶಿವಾನುಭವಕೋಶದಲ್ಲಿ "ವ್ಯೋಮಾಸ್ತ್ರಮಂತ್ರ" ಕುರಿತ ವಿಚಾರವಿದೆ. ಆ ಮಂತ್ರದ ಪಲ್ಲವ "ಓಂ ಆಂ ಊಂ ವ್ಯೋಮವ್ಯಾಪಿನೇ ವ್ಯೋಮಾಸ್ತ್ರಾಯ ಫಟ್" ಎಂದಿದೆ.(ಶಿವಾಕೋ. ೧೬೧-೧೬೩) ಷಡಕ್ಷರದೇವನು ಶಿವಾನುಭವಿಯಾಗಿ ಬಳಸಿದ"ಆಗಸನ್ಮಂತ್ರವೇ" ವ್ಯೋಮವ್ಯಾಪಿಯಾದ ಅಸ್ತ್ರಮಂತ್ರ. ಈ ಶೂನ್ಯಧ್ಯಾನ ಮಂತ್ರಸಿದ್ಧಿಯನ್ನು

CC-0. Jangamwadi Math Collection. Digitized by eGangotri

ಅಲ್ಲಮಪ್ರಭು ಹೊಂದಿದ್ದರೆಂಬುದು ಷಡಕ್ಷರಕವಿಯ ನಿರೂಪಣೆಯಿಂದ ವ್ಯಕ್ತವಾಗುತ್ತದೆ. ಶೂನ್ಯಧ್ಯಾನಪರಂಪರೆಯ ಒಳನೋಟವಿದು."ಪೂರ್ದಿರೆ ಸತ್ವಂ"ಎಂಬ ಕವಿಯ ಮಾತುಗಳು "ಸತ್ವಗುಣಮಾಕಾಶಂ, ಅಂತರಾತ್ಮನುಂ" ಎಂದು ಮನಗಾಣಿಸಿರುವ ಸಮಕಾಲೀನ ಕವಿ ಆರಾಧ್ಯದೇವನ(ಕ್ರಿ. ಶ...1676...)ಅರ್ಥಗರ್ಭಿತ ವಿಚಾರವನ್ನೇ ಎತ್ತಿಹಿಡಿದಂತಾಗಿದೆ. ಪ್ರಭುವಿನ ಚಾರಿತ್ರದಲ್ಲಿ ಗೋಶಾಲಗುರೂತ್ತಮನ ಶೂನ್ಯಧ್ಯಾನದ ಪ್ರತ್ಯಕ್ಷ ಲಿಂಗಲೀಲಾವಿಲಾಸವನ್ನು ಚಾಮರಸನು ಸಚಿತ್ರಗೊಳಿಸಿದ್ದಾನೆ.

ಲಿಂಗವೆಂಬುದು ಬಯಲತತ್ವದ ಪ್ರಥಮನಾಮ. ಶರಣಧರ್ಮದ ಮೂಲತತ್ವ. ಷಟ್‌ಸ್ಥಲಾಂತರ್ಗತ 101ಸ್ಥಲದ ಕಟ್ಟಕಡೆಯ ಸ್ಥಲದ ಹೆಸರೇ "ಜ್ಞಾನಶೂನ್ಯಾಂತಸ್ಥಲ." ಜ್ಞಾನದಿಂದ ಮುಕ್ತಿಯಾಗದು, ಶೂನ್ಯಧ್ಯಾನಾನುಭವದಿಂದ ಜೀವನ್ಮುಕ್ತಿ ಎಂಬುದೇ ಸ್ವತಂತ್ರ ವಿಚಾರಮತಿಯಾದ ಗೋಶಾಲನ ನಿಲವು."ಜ್ಞಾನ ಶೂನ್ಯಕ್ಕೆ ಒಡಲು." ಸೋಽಹಂ; ಸೋಽಸ್ಮಿ; ಅಹಂಬ್ರಹ್ಮಾಸ್ಮಿ-ಎಂಬೀ ಜ್ಞಾನವುಳ್ಳ ಶೂನ್ಯದ ಸುಳಿವೂ ಇಲ್ಲದ, ಜ್ಞಾನದುದಯವೇ ಭಕ್ತ,ಜ್ಞಾನದ ಶೂನ್ಯವೇ ಐಕ್ಯವಾದ ಅಂಗ-ಲಿಂಗಗಳ ಅರ್ಥಾತ್ ಅಂಡ-ಪಿಂಡಗಳ ಸಮರಸೈಕ್ಯದ ಜೀವನ್ಮುಕ್ತಾವಸ್ಥೆಯಲ್ಲಿನ ದಿವ್ಯಪ್ರಕಾಶದೊಳಗೆ ಮುಳುಗಿದಂತಹ ದರ್ಶನಸುಖದಲ್ಲಿ ಬೆರಸಿರೆ ಇನ್ನೆಂತೋ! ಅದು ವಾಗತೀತ. ಹೇಳಲು ಬಾರದು ಎಂಬುದೇ ಪ್ರಭುವಿನ ಉದ್ಗಾರ. "ಜೀವನ್ಮುಕ್ತಾತ್ಮಸ್ಥಿತಿ ಒಳಹೊರಗೆ ಪೂರ್ಣ: ಜಲಮಗ್ನ ಕುಂಭದಂತೆ. ಒಳಹೊರಗು ಬರಿದು: ಆಕಾಶದ ನಡುವಣ ಬರಿಯ ಘಟದಂತೆ. ದಿವ್ಯಾನಂದದೊಳಗೆ ಮುಳುಗಿದುದೆ ಶೂನ್ಯಭಾವವೆಂಬುದು ಶಿವಯೋಗಪ್ರದೀಪಿಕೆಯ (ಪು ೧೭೦- ೧೭೧) ಮತ.

——— ಕರಜಪವೆ ಇಷ್ಟಕ್ಕೆ। ಸ್ವರಜಪವೆ ಪ್ರಾಣಕ್ಕೆ
ವರ ಬಯಲಜಪವೆ-ಸ್ಥಿರಭಾವಲಿಂಗಕ್ಕೆಂ-
ದರುಹಿದ ಗುರುವ ಕೃಪೆಯಾಗು॥ ನೋ: ಗುರುಕರುಣತ್ರಿವಿಧಿ.

CC-0. Jangamwadi Math Collection. Digitized by eGangotri

"ಆಕಾಶವನಾಡು ಮೇಯಿತ್ತಲ್ಲಾ" ಎಂಬ ಪ್ರಭುದೇವರ ಈ ಬೆಡಗಿನ ನುಡಿಯ ಗೂಢಾರ್ಥ "ಜೀವ್ಯೋಽಭವದ್ಬ್ರಹ್ಮಪದೇ" ಎಂಬ ಮಗ್ಗೆಯ ಮಾಯಿದೇವರ ಬಿಚ್ಚುನುಡಿಯಲ್ಲಿ ಬಯಲಾಗಿದೆ. ಜೀವ ಶಿವಪದದ ನಿಂದನಿಜದ ನಿಲವಾಯಿತು. ಬಯಲ ತತ್ತ್ವವೇ ಮೂರ್ತಿವೆತ್ತ ಅಲ್ಲಮಪ್ರಭು ತಮ್ಮ ಅಂಗೈಯ ಗೋಹೇಶ್ವರ ಲಿಂಗವನ್ನು "ವ್ಯೋಮ ವ್ಯೋಮವ ಕೂಡಿದಂತಿಪ್ಪುದು (ವ. 209 ಪ್ರ.ಗೀ) ಎಂದಿದ್ದಾರೆ. ಅದರ ನಿಲವ ನಿಜದ ನಿಷ್ಪತ್ತಿ ಎಂದರೆ ಜನನ ಇಲ್ಲವೆ ಸಿದ್ಧಿಯು ನುಂಗಿತ್ತು ಎಂಬಲ್ಲಿ ಬಯಲೆಂಬುದು ನಿತ್ಯಸತ್ಯ. ಸತ್ಯದ ಸಾಕಾರವೇ ಲಿಂಗ. ಯಾವುದರಲ್ಲಿ ಎಲ್ಲವೂ ಮೂಡಿ ಮುಳುಗುವುದೋ ಅದೇ ಲಿಂಗ ಅಥವಾ ಶೂನ್ಯ."ಅಂಗೈಯೊಳಗಣ ನಾರಿವಾಳ" ಅರ್ಥಗರ್ಭಿತವಾದ ಆಲಂಕಾರಿಕ ದೃಷ್ಟಾಂತ; ರೂಪಕ. ಅಂಗೈಯಲ್ಲಿ ಆಕಾಶವನ್ನೇ ತೋರಿಸುತ್ತಾನೆ ಎಂಬ ನಾಡ ನುಡಿಯುಂಟು. ಮುಕ್ಕಣ್ಣನ ಶಿವತೇಜ ಪರ್ಯಾಯವೇ ಲಿಂಗ. ಅದೇ ಶೂನ್ಯ; ಪಿಂಡಾಂಡವ್ಯಾಪಿ.

ಆಜೀವಕ ಧರ್ಮದ "ಜೀವ್ಯೋಽಜೀವ್ಯೋ ಜೀವಾಜೀವಶ್ಚ" ಎಂಬ ತ್ರ್ಯಾತ್ಮಕತತ್ತ್ವವನ್ನು ಗುಮ್ಮಟಾರ್ಯನು "ಜೀವಂ ನಿರ್ಜೀವನಾತ್ಮಾನಿಲನ್"ಎಂದು ಗುರುತಿಸಿದ್ದಾನೆ. "ದೇವ, ನಿನ್ನಂಶವೀ ಜೀವಸಮೂಹಂ ತಾನವಂ ನೋಯಿಸುವವನೆ ಶಿವದ್ರೋಹಿ"(ಓಲೆ ೯೪/ ಮು ೭೧) ಎಂದು ಜೀವವೆ ಶಿವನೆಂಬುದನ್ನು ಸಾರಿದ್ದಾನೆ "ಆಜೀವ" ಪದದ ಸಮಸ್ತಜೀವವೆಂಬರ್ಥದಲ್ಲಿ ಎಲ್ಲಜೀವರೂ ಶಿವನೆಂದು ಭಕ್ತಿಭಾವದಿಂದ ಮಣದಿದ್ದಾನೆ. "ತನಗೆ ಒಳ್ಪಂ ಬೇಳ್ಪುದು, ಒಳ್ಪಂ ಬಗೆವುದು ಸಕಲಪ್ರಾಣಿಗೆ" ಎಂಬುದೇ ಆಜೀವಕ ಮತದ ಸಾಮಾಜಿಕ ಸಮರಸಜೀವನದ ದೃಷ್ಟಿ(೫೭/ ೭೫). ಆ ಕಾರಣ ಆಪ್ತಲೌಕಿಕಮತವೆನಿಸಿದೆ. ಧ್ಯಾನಸಂಪ್ರದಾಯ ಬುದ್ಧ ನಿಗಿಂತಲೂ ಮೊದಲೇ ಗೋಶಾಲನಿಂದ ಆಚರಣೆಯಲ್ಲಿ ಪ್ರವರ್ತನ ಗೊಂಡಿತ್ತು. ಮನಂ ಚತ್ತದೊಳ್ಪೊಕ್ಕು ಅಡಂಗಲ್

CC-0. Jangamwadi Math Collection. Digitized by eGangotri

ತನಗೊಂದುಂ ಬೋಧಮಂ ತೋಱಿದ ನಿಲವೆ ನಿಜಂ, ಶೂನ್ಯಂ, ಅದ್ವೈತರೂಪು, ಉನ್ಮನಿ ತತ್ತ್ವಂ ಸೂಕ್ಷ್ಮಭಾವಂ ತೂರ್ಯಂ ಶಿವಪದಂ ನಿಲ್ಪುದು" ಎಂದು ಶೂನ್ಯದ ಸ್ವರೂಪವನ್ನು ಗುಮ್ಮಟಾರ್ಯ ವಿಶದಪಡಿಸಿದ್ದಾನೆ. "ಧ್ಯಾನದೊಳೊದವಿ ಮನಂ ನಟ್ಟು ನಿಂದಲ್ಲಿ ಚಿತ್ತಂ ಕರಗುತ್ತಂ ನಿಮ್ಮನೈದಿರ್ಪ-ರವನೆ ವರವಾಗೀವುದು."ಎಂದು ಹಂಬಲಿಸಿದ್ದಾನೆ. "ನಿನ್ನನೆ ನೆನೆವನೆ ನೀನಕ್ಕುಂ"-ಇದು ಅವನ ನಿಶ್ಚಿತ ನಿಲವು. ಹಿಮಕರಣನ ಬಿಂಬಾವಳಿಯಿಂದ ಇಡೀ ಆಕಾಶ ತೊಳಗುವಂತಿರುವ ತೇಜೋನಿಧಾನವಾದ ಪರಂಜ್ಯೋತಿಯು ನನ್ನ ಹೃದ್‌ವ್ಯೋಮವನ್ನು ಬೆಳಗುತ್ತಿರಲಿ ಎಂಬುದು "ಶಿವಮತ - ದಾಚಾರ್ಯರತ್ಯಂತಶುದ್ಧ" ಎಂದು ಕೊಂಡಾಡುವ ಗುಮ್ಮಟಾರ್ಯನ ಕೋರಿಕೆ.

"ತನ್ನಿಂ ತಾನೆ ನಿಶ್ಚಿಸಿ ತನ್ನಂ ತಿಳಿಯೆ ನಿಜಪದಂ ತೋರ್ಪುದು"ಎಂಬ ಕವಿಯ ಭಾವ ಆಜೀವಕ ಶಿವಗಣಮತದ ಶೂನ್ಯಧ್ಯಾನತತ್ತ್ವದ ಸಾರಸರ್ವಸ್ವವಾಗಿದೆ. ಅಲ್ಲದೆ ಶಿವಾನುಭವದ ಮೂಲಸೂತ್ರವಾಗಿರುವುದಂತು ಆಧ್ಯಾತ್ಮಿಕ ಸಾಧನಾ ಮಾರ್ಗದ ಯುಗಾಂತರಪ್ರಜ್ಞೆಯ ಆಜೀವಂತಿಕೆಯೇ ಸಾಕ್ಷಾತ್ಕಾರವಾದಂತೆ!

ತನಗೆ ಅವಸಾನಭೂಮಿ ಶಿವಲಿಂಗ; ಆ ಶಿವಲಿಂಗಕ್ಕೆ ನಿಲುಕಡೆಯ ಸುಸ್ಥಲ ತಾನೆಯೆನಿಸಿದ ಶರಣ. ಜ್ಞಾನಕ್ಕಿಂತಲೂ ಉತ್ಕೃಷ್ಟವಾದ 'ಅಣು'ವಿನ ಅನುಭವದಿಂದ ಸ್ವರೂಪ ಸಾಕ್ಷಾತ್ಕಾರ; ನಾ-ನೀನೆಂಬ ಭೇದದ ಅಳಿವು. ಆತ್ಮನಲ್ಲಿರುವ ಅಣುರೂಪಿನಿಂದ ಆಶ್ರೈಸಲ್ಪಟ್ಟ ಪ್ರಾಣಲಿಂಗವು ಆದಿಗುರುವಿನ ಸೇವೆಯಿಂದ ಪ್ರಕಟವಾದಲ್ಲಿ ಆತ್ಮಲೇಪ ಪಶುಭಾವ ತೊಲಗಿ ತನ್ನ ತಾನಾಗುವನು ಎಂದಿರುವ ಮಗ್ಗೆ ಮಾಯಿದೇವರ ಮಾತಿನಲ್ಲಿ ಗೋಶಾಲ ಪ್ರತಿಪಾದಿತ ಅಣುತತ್ತ್ವದ ಚಿಂತನೆಯನ್ನು ಕಾಣಬಹುದು. ಆತ್ಮದೊಳಗಣ"ಅಣು"ವಿನ ಭಾವವೇ "ಅನು" ಭಾವವಾಗಿದೆ.(ನೋ: ಮಿಣುಕು(ಕ) ಮಿನುಗು; ಕಣ್ಣು(ಕ) ಕನ್ನು(ತೆ); ದಣಿ(ಕ) ಧನಿ(ಸಂ); ಮಣ್ಣು(ಕ) ಮನ್ನು(ತ).

CC-0. Jangamwadi Math Collection. Digitized by eGangotri

ವಿನಯುವಾದಿ ಆಜೀವಕರಿಗೆ "ಲಿಂಗ" ಮತ್ತು ಶಾಸ್ತ್ರ" ಪ್ರತ್ಯೇಕವಾದುವುಗಳಲ್ಲ. ಇವು ಕೇವಲ ಮೋಕ್ಷವೇ ಗುರಿಯಾಗಿ ಉಳ್ಳವುಗಳು. "ಇಷ್ಟ" ಪೂರ್ವಕವಾಗಿ ಶೂನ್ಯಧ್ಯಾನ ಮಾಡಿರಿ ಎಂದು ಬೋಧಿಸಿದ ಗೋಶಾಲಪ್ರತಿಪಾದಿತ ಶುಭರೂಪ ಆಜೀವಕಮತವನ್ನು "ಲಿಂಗಜೀವಿಮತ"ವೆಂದು ಜೈನಶಾಸ್ತ್ರ ಗ್ರಂಥಗಳು ಸಾರಿವೆ(ನೋ: ಜೈನಧರ್ಮಕಾ ಮೌಲಿಕ ಇತಿಹಾಸ ಪ್ರಥಮ ಭಾಗ: ಪು. 726, 729, 738) ಮೇಲಿನ ಲಿಂಗ ಮತ್ತು ಶಾಸ್ತ್ರಗಳ ಬಗೆಗಿನ ನಿರೂಪಣೆಯುನ್ನು ಶಾಂತೇಶ ಕವಿ ತನ್ನ ಸಿದ್ದೇಶ್ವರಪುರಾಣದಲ್ಲಿ

"ಲಿಂಗ ಮಂತ್ರಗಳೆರಡು ತನಗಂ-
ತಂಗಮಾದಾ ಮನಕೆ ಮತ್ತಂ
ತುಂಗದಿಂದಂ ವೀರಶೈವಂ ಪರಶಿವಂ; ತಾನ।
ಮಂಗಲದ ಮಹದಾದಿ ಘನ ತ
ತ್ವಂಗಳಿಗೆ ಸುಸ್ಥಾನವದಱಿಂ
ಪಿಂಗದೇ ಕೇಳ್ ತನ್ನ ಶಕ್ತಿಕ್ಷೋಭಮಾತ್ರದೊಳು॥ ಸಂ.೧೬-೭

ಲಿಂಗ ಮತ್ತು ಧ್ಯಾನಮಂತ್ರಗಳೆರಡು ಆಜೀವಶರಣನಾದ ತನಗೂ ಅಂತು-ಹಾಗೆಯೇ, ತನ್ನ ಅಂಗಮಾದ - ಆತ್ಮತೇಜೋನಿಲಯವಾದ ಮನಕ್ಕೆ; ಮತ್ತೆ -ಬಳಿಕ, ತುಂಗದಿಂದಂ- ಬಲ ಇಲ್ಲವೆ ಶಕ್ತಿಯ ಕಾರಣದಿಂದ ವೀರಶೈವನು ಪರಶಿವಬ್ರಹ್ಮನು. ಎಂದ ಬಳಿಕ ತಾನೆ ಸುಖದಾಯಕ ಪರತತ್ವದ ಆದಿ ಘನಲಿಂಗತತ್ವಗಳಿಗೆ ಮೂಲ ಸರ್ವಕಾರಣ - ಪರಮಪದವು; ಅದೇ ಈಶಸ್ಥಲ. ಅದು ತನ್ನ ಶಕ್ತಿಯ ಕ್ಷೋಭೆಯಿಂದ ಅಂಗ ಮತ್ತು ಲಿಂಗವೆಂದು ಮುಂದೆ ಸ್ಥಲ ಎರಡಾಯಿತು."ಶಿವನೆ ಭಕ್ತಂ, ಭಕ್ತನೇ ಶಿವನು"(೧೧-೭)ಎಂದು ಶಾಂತೇಶನು ಸಾರುತ್ತ, ಮಗ್ಗೆಯ ಮಾಯಿದೇವರ "ತನಗೆ ಅವಸಾನಂ ಶಿವಲಿಂಗ; ಆ ಶಿವಲಿಂಗಕ್ಕೆ ನಿಲುಕಡೆಯ ಸುಸ್ಥಲ ತಾನೆನಿಸಿದ ಶರಣ"ನೆಂಬ ನಿಲವನ್ನು ಪ್ರತಿಪಾದಿಸಿರುವುದು ಕಂಡುಬರುತ್ತದೆ.

CC-0. Jangamwadi Math Collection. Digitized by eGangotri

ಆಜೀವಕದರ್ಶನದ ಮೋಕ್ಷಸಾಧನಗಳಾದ ಲಿಂಗ ಮತ್ತು ಶಾಸ್ತ್ರಗಳ ಪರಸ್ಪರ ಅವಿನಾಭಾವಸಂಬಂಧವು ಶರಣರ ಶಿವಾನುಭವದ ಮೂಲ ತತ್ತ್ವವಾಗಿರುವುದನ್ನಿಲ್ಲಿ ಕಂಡಿದ್ದೇವೆ. ಲಿಂಗ ಮಂತ್ರಗಳೆ ಅಂಗವಾದ ಆಜೀವಕ ಶರಣನು ವೀರಶೈವ, ಪರಶಿವ/ ಲಿಂಗಸ್ಥಲನು ಎಂಬುದನ್ನು ಸರಳವೂ ಸುಲಭವೂ ಆದ ಸುಸ್ಪಷ್ಟ ಪದಗಳಿಂದ ಮೇಲಣ ಪದ್ಯದಲ್ಲಿ ಶಾಂತೇಶನು ವಿವರಿಸಿದ್ದಾನೆ. "ವೀರಶೈವದ ಆರಂಭದ ಚರಿತ್ರೆ"ಗೆ ಮುಸುಕಿದ್ದ ಮಸಕು ಹೀಗೆ ಹರಿದುಹೋಗಿ ಬಹುಮುಖದಿಂದ ಬೆಳಕು ಕಾಣುವಂತಾಗಿದೆ.

"ನಿಮ್ಮ ಶರಣರು ಲಿಂಗಪ್ರಾಣಗಳು; ಲಿಂಗ ಸಂಬಂಧಿಗಳು, ಪ್ರಸಾದಮುಕ್ತರು." "ಸ್ವಾನುಭಾವಜ್ಞಾನಶುದ್ಧ ಶಿವಯೋಗದಲ್ಲಿ ಸ್ವರೂಪಜ್ಞಾನಿಗಳು"(ಅನುಭಾ.ವ.೯೮)ಎಂಬ ತೋಂಟದ ಸಿದ್ಧಲಿಂಗೇಶ್ವರರ ಶರಣರ ಲಕ್ಷಣ ನಿರೂಪಣೆಯಲ್ಲಿ ಲಿಂಗವಂತ ಶರಣರ ಪೂರ್ವಪರಂಪರೆಯ ಆದಿ ಚತ್‌ಚೈತನ್ಯ ಮೂರ್ತಿ ವೀರಸಾಧುಸಮ್ಮತ ಗಣಾಚಾರ್ಯ ಗೋಶಾಲ ಮಹಾಘನ ಜಂಗಮ"ಶುದ್ಧಶಿವೈಕ್ಯನ" ಬಯಲನಿಲವಿನ ಸ್ವಸ್ವರೂಪಜ್ಞಾನವನ್ನೇ ಮನಗಾಣಸಿದಂತಿದೆ.

ಲೋಕದಲ್ಲಿ ಯಾರು ದೊಡ್ಡವರು ಎಂಬ ಭಕ್ತ ನಾರದನ ಪ್ರಶ್ನೆಗೆ "ಖಂ ತತ್ತ್ವಂ ಚೇತಸಿ ಧಾರಯಸ್ಯವಿರತಂ ತ್ವತ್ತೋಽಸ್ತಿ ನಾನ್ಯೋ ಮಹಾನ್"—ಬಯಲತತ್ತ್ವವನ್ನು ಅಂತರಾತ್ಮನ ಭಾವಹಸ್ತದಲ್ಲಿ ಸದಾ ಧರಿಸಿರುವ ನಿನಗಿಂತಲೂ ದೊಡ್ಡವನು ಮತ್ತೊಬ್ಬನಿಲ್ಲ ಎಂದು ವಿಷ್ಣು ಹೇಳಿದನೆಂಬ ಪೌರಾಣಕೋಕ್ತಿ ಯಲ್ಲಿ ಬಯಲತತ್ತ್ವದ ಮಹತ್ತ್ವವಿರುವುದನ್ನು ಗಮನಿಸಬಹುದು.

"ಸುವ್ಯವಸ್ಥೆಯ ಪಾರಮಾರ್ಥಿಕ ಹಾಗೂ ದಾರ್ಶನಿಕ ಪಂಥವೊಂದು12ನೆಯ ಶತಮಾನಕ್ಕೆ ಮುನ್ನ ಇದ್ದಿತೆಂಬುದು ವಿಮರ್ಶೆಯಿಂದ ದೃಢಪಟ್ಟ ಸಂಗತಿ. ಅದರಿಂದ 12ನೆಯ ಶತಮಾನಕ್ಕೆ ಪೂರ್ವದಲ್ಲಿ ಅದು ಅಸ್ತಿತ್ವದಲ್ಲಿಯೇ ಇರಲಿಲ್ಲವೆಂಬುದನ್ನು ಒಪ್ಪಲು ಸಾಧ್ಯವಾಗದು. ಬಹುಶಃ ಅಷ್ಟು

CC-0. Jangamwadi Math Collection. Digitized by eGangotri

ಗಣ್ಯವಾದುದೇನಲ್ಲವೆಂಬುದು ನಿಜವಿರಬಹುದು, ಅಥವಾ ಅದಕ್ಕೆ ಬೇರೊಂದು ಹೆಸರೂ ಇದ್ದಿರಬಹುದು. ಕಾಲಾಂತರದಲ್ಲಿ ಆ ಹೆಸರ ಬದಲು ಅದು ವೀರಶೈವ ಎಂದಾಗಿರಬಹುದು" ಎಂದು ಈಗ್ಗೆ75 ವರ್ಷಗಳ ಹಿಂದೆ(1930)ಪೂಜ್ಯ ಡಾ। ಎಸ್ ನಂದಿಮಠ ಅವರು ಲಂಡನ್ ವಿಶ್ವವಿದ್ಯಾನಿಲಯದಲ್ಲಿ ಪಿಎಚ್.ಡಿ ಪದವಿಗೆ ಸಲ್ಲಿಸಿದ ಪ್ರೌಢಪ್ರಬಂಧದಲ್ಲಿ (ಪು.6)ಅಭಿಪ್ರಾಯಪಟ್ಟರು. ಅವರ ಈ ಧಾರ್ಮಿಕ ಇತಿಹಾಸದ ಪ್ರಾಚೀನತಾ ಸೂಕ್ಷ್ಮಾನುಭವ ದೃಷ್ಟಿಯನ್ನು ಇಲ್ಲಿ ಪರಿಶೀಲಿಸಿ ಸಾಧಾರವಾಗಿ ಪುಷ್ಟೀಕರಿಸಲಾಗಿದೆ. ಗಣವಂಶದ ಬಸವಪೂರ್ವದ ಅವರ ಆಜೀವಪಂಥ ಚಕ್ರವರ್ತಿ ಪೂಜ್ಯವೂ ಗಣ್ಯವೂ ಆಗಿದ್ದಿತಲ್ಲದೆ ಅದು ವೀರಶೈವವೆನಿಸಿದ ಬಗೆಗಂತು ಶಾಂತೇಶನ ಗ್ರಂಥೋಕ್ತವಾದ ಮೇಲಣ ಪದ್ಯವು ನಿಸ್ಸಂದಿಗ್ಧವಾದ ಮಾತುಗಳಿಂದ ಏನೊಂದು ಸಂದೇಹವೂ ಉಳಿಯದಂತೆ ಖಚಿತಪಡಿಸಿದೆ ಎಂದು ಹೇಳಬೇಕಾಗಿಲ್ಲ.

"ನೀಲಕೇಶಿ" ಎಂಬುದು ತಮಿಳಿನ ಒಂದು ಕಾವ್ಯ. ಅದರ ಕರ್ತೃ ಒಬ್ಬ ಜೈನತತ್ತ್ವಜ್ಞಾನಿ. ಕ್ರಿ. ಶ. 14ನೆಯ ಶತಮಾನದಲ್ಲಿ ವಾಮನ ಮುನಿಯು ಆ ಕೃತಿಗೆ ಒಂದು ವ್ಯಾಖ್ಯಾನ ರಚಿಸಿದ್ದಾನೆ. ಆ ಗ್ರಂಥದಲ್ಲಿ 6ನೆಯ ಅಧ್ಯಾಯವು "ಆಜೀವಕವಾದ ಚರುಕ್ಕಮ್" ಎಂಬುದು. ಆ ಪರಿಚ್ಛೇದದಲ್ಲಿ ಆಜೀವಕರ ಬಗೆಗೆ ಇರುವ ಸಂಗತಿಗಳನ್ನು ಕುರಿತು ತಮಿಳು ವಿದ್ವಾಂಸರಾದ ಪ್ರೊ. ಎ. ಚಕ್ರವರ್ತಿ ಹಾಗೂ ಇತರರು ಪ್ರಕಟಿಸಿರುವ ಅಭಿಪ್ರಾಯವನ್ನು ಉಲ್ಲೇಖಿಸುವ ಮೂಲಕ ಪ್ರಸ್ತುತ ಗ್ರಂಥದ ಮೊದಲ ಲೇಖನವನ್ನು ಪರಿಸಮಾಪ್ತಿ ಗೊಳಿಸಬಹುದಾಗಿದೆ.

"Neelakesi:-- This is also one of the minor kavyas which is evidently by a Jaina philosopher poet about whom we know nothing." "The 6th chapter is devoted to **Ajivaka religion.** The chapter is called

CC-0. Jangamwadi Math Collection. Digitized by eGangotri

Ajivakavadacarukkam. The founder# of Ajivaka religion was a contemporary of Mahavira and Gautama Buddha. In outward appearance Ajivakas resembled Jaina Nirgranthas. But in the matter of religion they differed very much from both the Jainas and the Buddhas. Though the contemporary Buddhistic writers made no mistake about the identity of Ajivakas, later Indian writers very often made the mistake of confounding them with the Digambara sect of Jainas. In this chapter on Ajivakas the author of Neelakesi distinctly warns the reader against any such confusion and emphasises the fundamental differences between the two sects."

---Jaina Literature in Tamil,p 52, 61.

."Gosala was the head of Ajivika sect which long continued to exist." --Jain Religion.

Tr. by Amulya Chand Sen and T.c. Burke

***

....

ಜೈನ "ಪೂರ್ವಗತ"ತತ್ತ್ವಜ್ಞಾನದಲ್ಲಿ ಪರಿಣತನಾಗಿದ್ದ ಗೋಸಾಲನು ಆತನಿಗಿಂತಲೂ ಪೂರ್ವದಿಂದ ಪ್ರಚಲಿತವಾಗಿದ್ದ ಆಜೀವಕಮತದ ಬಯಲತತ್ತ್ವದ ಪ್ರತಿಪಾದಕನಾದ ಗಣಾಚಾರ್ಯನೇ ಹೊರತು ಆ ಮತದ ಸ್ಥಾಪಕನಲ್ಲವೆಂಬುದು ಗ್ರಂಥಾಧಾರಗಳಿಂದ ಖಚಿತಪಟ್ಟಿರುವ ಸಂಗತಿ. ಉದಾಹರಣೆಗೆ "ಗೋಶಾಲಪ್ರವರ್ತಿತಾ ಆಜೀವಿಕಾಃ" ಎಂದು ಸಾರಿರುವ ಜೈನ ನಂದಿಸೂತ್ರವೇ ನಿದರ್ಶನ (ನೋ:ಷಟ್ಖಂಡಾಗಮ. ಪು.೧೪೭).

CC-0. Jangamwadi Math Collection. Digitized by eGangotri

ಆಜೀವ ಮಧುಸ್ಮೃತಿ

೨. ಶರಣರ ಬಯಲ ತತ್ತ್ವ, ಅದರ ಮೂಲಸೆಲೆ→

CC-0. Jangamwadi Math Collection. Digitized by eGangotri

ಆಜೀವ ಮಧುಸ್ಮೃತಿ

೨. ಶರಣರ ಬಯಲ ತತ್ತ್ವ, ಅದರ ಮೂಲಸೆಲೆ

ಕರ್ನಾಟಕದ 12ನೆಯ ಶತಮಾನ ಭರತಖಂಡದ ಆಧ್ಯಾತ್ಮಿಕ, ಧಾರ್ಮಿಕ, ನೈತಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಸಾಹಿತ್ಯೇತಿಹಾಸದ ಒಂದು ವ್ಯಾಪಕ ವಿಚಾರಪರಿಪ್ಲುತ ಉದಯೋನ್ಮುಖ ಯುಗ. ಎಲ್ಲ ಕಾಲದ ಸಮಸ್ಯೆಗಳ ಪರಿಹಾರಸೂಚಕ ವಿಕ್ರಾಂತದರ್ಶಿ ಯುಗವಾಗಿ ಇಂದಿಗೂ ಇಡೀ ರಾಷ್ಟ್ರದ ಮುನ್ನಡೆಗೆ ದಾರಿದೀಪವಾಗಿ ಬೆಳಗುತ್ತಿರುವುದು ಅದರ ವೈಶಿಷ್ಟ್ಯ. ಪ್ರಸ್ತುತ ಲೇಖನವು ಅಲ್ಲಮಪ್ರಭುವಿನ ಜೀವನಸಿದ್ಧಿಯ ಸಾಧನವಾದ ಆತ್ಮವಿದ್ಯೆಯ ಮೂಲ ಸೆಲೆಯಾದ ಬಯಲ ತತ್ತ್ವ ಇಲ್ಲವೆ ಗಗನಸಿದ್ಧಾಂತದ ಶಿವಶರಣರ ಅನುಭಾವಿಕ ಗಾಢ ಸತ್ಯಸಂಧಾನದ ಒಳನೋಟದ ಸಕೃದ್ದರ್ಶನವನ್ನು ಮನಗಾಣಿಸುವ ಅಂತರಂಗವಾಗಿದೆ.

ವೀರಶೈವ ಅಧ್ಯಾತ್ಮಪ್ರಕಾಶದ ಶರಣರ ಬಹುಬಳಕೆಯ ಸುಪರಿಚಿತ ಪಾರಿಭಾಷಿಕಪದವೆಂದರೆ "ಬಯಲು." ಆತ್ಮಪ್ರಕಾಶಗಳೆಂಟರಲ್ಲಿ ಒಂದಾದ ಶುದ್ಧಾತ್ಮವೆ ಗಗನ ಇಲ್ಲವೆ ಆಕಾಶ ಅಥವಾ ಬಯಲು. ಯಾವುದರಲ್ಲಿ ಎಲ್ಲವೂ ಮೂಡಿ ಮುಳುಗಿ ಹೋಗಿ ಚಿದ್ಗರ್ಭದ ನೆಲೆಯಾಗುವುದೋ ಅದೇ ಬಯಲೆಂಬುದು. ಆಕಾಶ-ಆಕಾಶದೊಡನೆ ಬೆರಸಿದಾಗಲೆ "ಅರಿವು ಇಲ್ಲವೆ ಜ್ಞಾನ ಹುಟ್ಟುತ್ತದೆ" ಎಂಬುದು ಅನುಭಾವಿಗಳು ಕಂಡುಂಡ ಸತ್ಯ. ಬಯಲು ಪರಶಿವಬ್ರಹ್ಮದ ನಿಂದನಿಜ; ನಿರಾಕಾರದ ನಿಲವು; ಅಚಲವಪ್ಪ ನಿರಾಳ; ಕದಲದ ನಿಜತತ್ತ್ವ. "ಸತ್ತ್ವಗುಣಮ್ ಆಕಾಶಂ ಅಂತರಾತ್ಮನುಂ" ಆದ ಆ ಲಿಂಗಮತದ ಪ್ರಸ್ತಾಪ ಹಲವೆಡೆಗಳಲ್ಲಿ ದೊರೆಯುತ್ತದೆ. ಬುದ್ಧನ ಅನತಿ-ಪೂರ್ವ

CC-0. Jangamwadi Math Collection. Digitized by eGangotri

ಕಾಲಕ್ಕಾಗಲೇ ಆರು ಹಿರಿಯರೆಂದು ಪ್ರಸಿದ್ಧರಾಗಿದ್ದ ತತ್ತ್ವಜ್ಞಾನಿಗಳೂ ಆಧ್ಯಾತ್ಮಿಕ ಮಹಾಪುರುಷರೂ ಆದವರಲ್ಲಿ ಮಹಾವೀರನ ಹಿರಿಯ ಸಮಕಾಲೀನನಾದ ಗುರು ಗೋಶಾಲನೂ ಒಬ್ಬನು. ಈ ಬಗೆಗೆ ನೋಡಿ:

''2500 years of Buddhism''(Tyrs)

" There are frequent references in Buddhist literature to some **six senior contemporaries** of the Buddha, for instance, in the Digha-nikaya (the samanna phala sutta and its counterpart in Sanskrit)....

Of these **six thinkers** Nigantha Nataputta, who is no other than Mahavira... seems to have been slightly older than the Buddha."

" The next important contemporary of the Buddha was Makkhali Gosala. ...."

" The remaining four teachers, who are mentioned as contemporaries of the Buddha, did not leave their mark on posterity as did Mahavira and, to a lesser degree, **Gosala** " (pp. 14-17) .

ಪೂರಣ ಕಸ್ಸಪನಿಂದ1 ಹಿಡಿದು ನಿರ್ಗ್ರಂಥ ಜ್ಞಾತಪುತ್ರನ ಎಂದರೆ ಜೈನ ಮಹಾವೀರನವರೆಗೆ2 ಆತ ಹಾಗೂ ಬುದ್ಧ - ಈ ಇಬ್ಬರಿಗಿಂತಲೂ ಹಿರಿಯ ಗಣಾಚಾರ್ಯನಾದಾತ ಮಕ್ಖಲಿ

CC-0. Jangamwadi Math Collection. Digitized by eGangotri

/ಮಸ್ಕರಿ ಗೋಶಾಲನು.3ವೇಣುದಂಡಧಾರಿಯಾದ ಈತನ ಬಗೆಗೆ ಪ್ರೊ.ಸಾ.ಕೃ ರಾಮಚಂದ್ರರಾವ್ ಅವರು ಪ್ರಭಾವಶಾಲಿ ವ್ಯಕ್ತಿತ್ವ, ಆಳವಾದ ಜ್ಞಾನವುಳ್ಳವನೆಂದು ಮೆಚ್ಚಿ ನುಡಿದ ಮಾತುಗಳು:

"The fifth wanderer, Gosala of the bamboo staff, deserves some more attention (ad infra) because of his influence as well as the profundity of his thought. All these wanderers, together with Mahavira the 'fetterless' ascetic, were senior contemporaries of the Bhuddha." (DPTI. pp 65-66)

ಪೂರ್ವೋಕ್ತ ಆರು ಗುರುಗಳ ವೃಂದದಲ್ಲಿ ಸೇರಿದವನು ಗೋಶಾಲ. ಉಳಿದ ಮೂವರುಅಜಿತ ಕೇಶಕಂಬಲಿ4 ಪಕುಧ ಕಚ್ಚಯನ(ಕಕುದ ಕಾತ್ಯಾಯನ)5 ಮತ್ತು ಸಂಜಯ ಬೇಲಟ್ಟಪುತ್ತ 6. ಮಗಧದೇಶದ ಈ ಗುರುಗಳಲ್ಲಿ ಮಹಾವೀರನ ಹೆಸರನ್ನು ಬಿಟ್ಟರೆ ಉಳಿದವರ ವ್ಯೆಯಕ್ತಿಕ ಪರಿಚಯದ ಬದಲು "ಆರುಹಿರಿಯರು" ಎಂದರೆ ಆರುಮಂದಿ(6) ಗುರುವರ್ಯರು, ಅರ್ಥಾತ್ ಪೂಜ್ಯರು, ಜಂಗಮರು ಎಂಬ ಅರ್ಥದಲ್ಲಿ 11, 12ನೆಯ ಶತಮಾನಗಳಲ್ಲಿ, ಮತ್ತು ನಾಡಿನ ಆ ಅನಂತರದ ಕೆಲವುಕಾಲ ಶರಣರ ಕೃತಿ ಹಾಗು ಜನಮನದ ನೆನೆಪಿನಲ್ಲಿ ಮಾತ್ರಉಳಿದುಕೊಂಡಿದ್ದುದು ಕಂಡುಬರುತ್ತದೆ. "ಆರು ಹಿರಿಯರು"ಎಂಬ ಗಣಾಚಾರ್ಯನಿರ್ದೇಶಕ ನುಡಿಗಟ್ಟು ಮಾತ್ರ ಆಂಧ್ರದೇಶದಲ್ಲಿ "ಆಱುಗುರು"/ "ಆರ್ಗುರು" ಎಂಬ ಶಬ್ದರೂಪ ಗಳಿಂದ ಪ್ರಯೋಗವಾಗಿರುವುದು ಕಂಡುಬರುತ್ತದೆ (ನೋ: ತೆ.ಶ.ದೀ.ಪು. 129). ಪ್ರಭುದೇವರ ಅಧಿಕೃತ ಮೂಲ ವಚನಗಳ ಸಂಕಲನ ಗ್ರಂಥಗಳಲ್ಲಿ "ಆರು ಹಿರಿಯರು"ಎಂಬ ಮೂಲ ನುಡಿಕಟ್ಟಿನ ಬಳಕೆಯಾಗಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಉದಾಹರಣೆಗೆ ಕಟ್ಟಿಗೆಹಳ್ಳಿ ಸಿದ್ಧಲಿಂಗಸ್ವಾಮಿಗಳವರಿಗಾಗಿ ಓಲೆಯ ಎರಡೂ ಮಗ್ಗಲುಗಳಲ್ಲಿ ಪಂಚಾಕ್ಷರೀ ದೇವರಿಂದ ಲಿಖಿತವಾದ ಬಹು ಸಣ್ಣ ಹಾಗೂ ಮುದ್ದಾದ ಕನ್ನಡ ಲಿಪಿ

CC-0. Jangamwadi Math Collection. Digitized by eGangotri

ಯಿಂದ ಕೂಡಿದ, ಆಧುನಿಕ ಮುದ್ರಣಕ್ಕೆ ಮಾದರಿಯಾಗಬಲ್ಲ ಓಲೆ ಕಟ್ಟಿನಲ್ಲಿ ನೋಡಬಹುದು.

''ಧರೆ[ಗಿರಿ]ಯ ಮೇಲುಳ್ಳ
ಆರು ಹಿರಿಯರೆ"ಲ್ಲರನು ನೆರಹಿ,
ಪರಿಯಾಯ ಪರೀಕ್ಷೆಯನ್ನೊರೆದು,
ಬಣ್ಣವ ನೋಡಿ,
ಸರವರದ ಪುಷ್ಪದೊಳು ಭರಿತಪರಿಮಳ ತುಂಬಿ,
ಪರಮಜ್ಞಾನಜ್ಯೋತಿ ಪರಬ್ರಹ್ಮವನು ಮೀರಿ
ಪುರುಷರತ್ನದೊಳಡಗಿ,
ಗೋಗೇಶ್ವರ ನಿಂದನಿಲವು
ಮೇರುಗಗನವ
ನುಂಗಿತ್ತು."

ಈ ವಚನದ ವಸ್ತುನಿರೂಪಣೆಯ ಆ ಆರು ಹಿರಿಯರು ಯಾರು ಎಂಬ ಗತಕಾಲದ ಐತಿಹಾಸಿಕ ಸಂಗತಿ ತಿಳಿಯದ ಹೊರತು ವಚನದ ಪೂರ್ವಾರ್ಧಕ್ಕೆ ಸಮಂಜಸವಾದ ಅರ್ಥವೇನೆಂಬುದು ದುರ್ಗ್ರಾಹ್ಯವೆಂದೇ ಹೇಳಬಹುದು. ಅಷ್ಟುಇಷ್ಟು ಆದ ಅರ್ಥದಿಂದ ಸಂಪೂರ್ಣ ತೃಪ್ತಿಬಾರದು. ಆ ಆರುಗುರುಗಳ ಬಗೆಗೆ ನಡೆದ ಪರಿಯಾಯ ಪರೀಕ್ಷೆಯಾವುದು ಎಂಬ ಅದರ ಹಿನ್ನೆಲೆಯನ್ನು ಕಂಡುಕೊಂಡಲ್ಲಿ ಮಾತ್ರ ವಚನದ ವಸ್ತುಸ್ಥಿತಿಯ ಗೂಢಾರ್ಥವನ್ನು ಮನಗಾಣಬಹುದು.

ಪ್ರಭುವಿನ ಈ ವಚನಗೀತೆಯ ಸಾರಸರ್ವಸ್ವವನ್ನು ಯಥಾವತ್ತಾಗಿ ಭಟ್ಟಿ ಇಳಿಸಿ ವಚನದ ರಚನೆಯ ಸರಣಿಯನ್ನನುಸರಿಸಿ ಪ್ರಭುದೇವರ ಮನದ ಮೂಲ ಆಶಯವನ್ನು ಮಗ್ಗೆಯಮಾಯಿದೇವರು ತಮ್ಮದೇ ಆದ ಕವಿತಾಚಾತುರ್ಯದ ವಾಗ್ವಿಲಾಸಮಯೀ ಶಾರ್ದೂಲವಿಕ್ರೀಡಿತ ಛಂದೋಬಂಧದಲ್ಲಿ ಮನೋಜ್ಞವೂ ರಮಣೀಯವೂ ಆದ ಪದಶಯ್ಯೆಯ ಗಾಂಭೀರ್ಯಯುಕ್ತ ಶೈಲಿಯಲ್ಲಿ ಅಭಿವ್ಯಕ್ತಗೊಳಿಸಿರುವ ಬಗೆಯನ್ನು ಭಾವಿಸಿರಿ:-

CC-0. Jangamwadi Math Collection. Digitized by eGangotri

ಯೇ ಭೂಮೌ ಗಿರಿಗಹ್ವರೇ ಚ
ನಿವಸಂತ್ಯಾರ್ಯಾ ಮಹಾಪೂರುಷಾ-
ಸ್ತೇಷಾಂ ಮಧ್ಯತ ಉತ್ತರೋತ್ತರಗುಣೋತ್ಕರ್ಷಂ
ಪರೀಕ್ಷ್ಯ ಕ್ರಮಾತ್।
ಪಶ್ಚಾತ್ತಸ್ಯ ಹೃದಂಬುಜೇ ಮಧುಕರೋ ಭೂತ್ವಾ
ಸ್ವಯಂ ಸಂತತಂ
ತಿಷ್ಠತ್ಯಾತ್ಮತಯಾ ಕಿಮತ್ರ ಬಹುನಾ
ನಿಶ್ಶಬ್ದಮಾತ್ರಃ ಶಿವಃ ||೩೩೭||

ಪ್ರಭುವಿನ ಕನ್ನಡವಚನದ "ಆರು ಹಿರಿಯರು" ಸಂಸ್ಕೃತ ವ್ಯಾಖ್ಯಾನದಲ್ಲಿ 'ಆರ್ಯರಾದ ಮಹಾಪುರುಷ'ರೆಂದು ಭಾವಿಸಲಾಗಿದೆ "ಗಹ್ವರ" ಪದಪ್ರಯೋಗದ ಹಿನ್ನೆಲೆಯಲ್ಲಿ ಚಾರಿತ್ರಕ ಘಟನೆಯ ಸ್ಮರಣೆ ಇದ್ದಲ್ಲಿ ಆಶ್ಚರ್ಯವಿಲ್ಲ. ಬಿಹಾರದ ಬರ್ಬರಗಿರಿಯಲ್ಲಿ ಬಂಡೆಗೊರೆದ ಸುಂದರವಾದ ಗುಹೆಗಳನ್ನು ಅಶೋಕಚಕ್ರವರ್ತಿಯು (ಕ್ರಿ.ಪೂ. ೨೭೨-೨೩೨) ಆಜೀವಕ ಪರಿವ್ರಾಜಕ ಯತಿಗಳಿಗೆ ಮಳೆಗಾಲದ ವಾಸಕ್ಕಾಗಿ ದಾನಮಾಡಿದ್ದ ಶಾಸನಪ್ರಸಿದ್ಧಿಯ ಅರಿವು ಶತಶತಮಾನಗಳ ಪೂರ್ವದ ಗುರುಪರಂಪರೆಯ ಜ್ಞಾನಾನುಭವದ ಮಹಾಮಹಿಮರಾಗಿದ್ದ ಮಗ್ಗೆಯ ಮಾಯಿದೇವರ ಮನದ ಆಳದಲ್ಲಿ ನೆಲೆಗೊಂಡಿದ್ದಿರಲು ಸಾಧ್ಯ. ಯಾವ ಆ ಆರ್ಯ ಮಹಾಪುರುಷರುಂಟೋ ಅವರ ತತ್ತ್ವಚಿಂತನೆಯನ್ನು ಒರೆಗಲ್ಲ ಪರೀಕ್ಷೆಗೆ ಗುರಿಪಡಿಸಿ ಒರೆದು ನೋಡಿ ಸುವರ್ಣದ ಹದಿನಾರಾಣೆ ಬಣ್ಣದಲ್ಲಿ ಯಾವುದು ಎಷ್ಟು ಮಟ್ಟದ್ದೆಂದು ಖಚಿತಪಡಿಸಿಕೊಂಡು ಕಡೆಗೆ ಆ ಧ್ಯಾನಯೋಗಿಯ ಹೃತ್ಪದ್ಮದಲ್ಲಿ ವ್ಯಾಪಿಸಿದ ಸದ್ವಾಸನಾತ್ಮಕ ಪರಮಜ್ಞಾನ ಜ್ಯೋತಿಯು ಪರಬ್ರಹ್ಮವನ್ನು ಮೀರಿರಲು ಗೋಗೇಶ್ವರ ನಿಂದನಿಜದ ನಿಲವಾದರೋ ಕೇವಲ ನಿಶ್ಶಬ್ದಮಾತ್ರ ಅರ್ಥಾತ್ ಬಯಲಬ್ರಹ್ಮವಾಗಿ ಆಜೀವರತ್ನಪ್ರಾಯನಾದ ಆ ಮಹಾಪುರುಷನಲ್ಲಿ ಆತ್ಮರೂಪದಿಂದ ಮೇರುಮಂದಿರದ ಬ್ರಹ್ಮಚಕ್ರ ಧ್ಯಾನಸ್ಥಾನದ ನಿಜಾನಂದಮಯನಾಗಿ ತನ್ನಲ್ಲಿ

CC-0. Jangamwadi Math Collection. Digitized by eGangotri

ತಾನೇತಾನಾಗಿ ವಿಶ್ರಮಿಸುತ್ತಿದ್ದಿತು ಎಂಬ ಭಾವವನ್ನು ಮನಗಾಣಿಸುತ್ತದೆ. "ಹೃದಂಬುಜೇ ಮಧುಕರೋ ಭೂತ್ವಾ" ಎಂಬೀ ಪದಪ್ರಯೋಗ, ಹೊರನೋಟಕ್ಕೆ ಆ ಪರವಸ್ತು ಕೇವಲ ಕಮಲದ ಮಕರಂದವನ್ನು ಹೀರುವ ಭ್ರಮರಮಾತ್ರವಾಗಿ ಕಂಡುಬಂದರೆ, ಒಳಗಣ್ಣಿಗೆ ಅಂತರಾತ್ಮನ ದಹರಾಕಾಶದ ಚಿದ್ಗರ್ಭದಲ್ಲಿ ಸ್ವಯಂ ಶಿವನೇ ಸದಾ 'ಮಧು(m.ಶಿವನ ಹೆಸರು)-ಕರ' 'ಶಿವಂ/= ಶಿವ-ಕರ'ನಾಗಿ, ಚಿನ್ಮಯ ಜ್ಯೋತಿಸ್ಸ್ವರೂಪದಿಂದ ನೆಲಸಿದ್ದಾನೆ ಎಂಬೀ ಭಾವತನ್ಮಯತೆಯಲ್ಲಿ ಆ ಆರ್ಯ ಮಹಾಪುರುಷನ ಬಯಲಮೂರ್ತಿ ಮೈದೋರಿದೆ. ಅಲ್ಲಮಪ್ರಭುವಿನ "ಆರು ಹಿರಿಯರು" ಮಾಯಿದೇವಪ್ರಭುವಿನ ನವನವೋನ್ಮೇಷ ಶಾಲಿನೀಪ್ರತಿಭೆಯಲ್ಲಿ ಅವರ ಹೃನ್ಮಂದಿರದ "ನಿಶ್ಶಬ್ದಮಾತ್ರ" ಬಚ್ಚಬಯಲುಗ ಶಿವನಾಗಿ ದರ್ಶನವಿತ್ತಿರುವುದು ಇಲ್ಲಿ ಸುಸ್ಪಷ್ಟ. ಆ ಕಾರಣ ನಿಶ್ಶಬ್ದ ಶೂನ್ಯಧ್ಯಾನ ಪರಂಪರೆಯ ಆಜೀವ ಶಿವಮತಪ್ರವರ್ತಕನೂ ಗುರೂತ್ತಮನೂ ಆದ ಗೋಸಾಲನೇ ಅಲ್ಲಮನ "ಆರು ಹಿರಿಯರು."

"ಆಱು"/"ஆறு"ಎಂಬ ತಮಿಳುಪದಕ್ಕೆ ವಿಶಿಷ್ಟ ಸಂಖ್ಯಾ-6(ಆರು)-ವಿಶೇಷಣವಾಗಿಯಲ್ಲದೆ ಸದಾಚಾರ, ಸಾಧುಸಜ್ಜನಿಕೆ, ಸದ್ಗುಣಸಂಪನ್ನತೆಯುಳ್ಳ ಎಂಬ ಅರ್ಥವಿದ್ದು ಆರ್ಯಅರ್ಥಾತ್ ಅನುಭಾವಜ್ಞಾನಗೌರವಸೂಚಕ ನಾಮ ವಿಶೇಷಣವಾಗಿಯೂ ಮಹತ್ವಪೂರ್ಣ ಪ್ರಾಚೀನಪದಪ್ರಯೋಗವಾಗಿದೆ."ಆಱು ಹಿರಿಯರು"ಎಂದರೆ ಆರ್ಯರಾದ ಮಹಾತ್ಮರೆಂದು "ಗುರುಯತಿ"ಗಳೆಂದು ಹೆಸರುವಾಸಿಯಾಗಿದ್ದವರು.

ಆರು ಹಿರಿಯರೆಂದೆನಿಸಿದ್ದ ಗೋಸಾಲ ಗುರುವಿನ ಜೀವನ ಸಂಗತಿಗಳ ಬಗೆಗೆ ಡಾ। ಬೂಲ್ ಚಂದ್ ಅವರು "Lord Mahavira"/ "ಲಾರ್ಡ್ ಮಹಾವೀರ"ಎಂಬ ತಮ್ಮ ಗ್ರಂಥದಲ್ಲಿ (ಪು. 42) ವಿದ್ವಾಂಸರ ಅಭಿಪ್ರಾಯಗಳು ಬೇರೆ ಬೇರೆಯಾಗಿದ್ದು ಒಂದು ಮತ್ತೊಂದಕ್ಕೆ ತೀರ ವಿರುದ್ಧವಾಗಿರುವುದುಂಟು ಎಂದು ಪ್ರಕಟಿಸುತ್ತ-

CC-0. Jangamwadi Math Collection. Digitized by eGangotri

"Gosala figures in the early tradition of Buddhism as an independent leader of thought," the head of an order, of a following, the teacher of a school, ...a man of experience who has long been a recluse" [ವಿರಕ್ತ]; there is no suggestion made of his personal relation with Mahavira. From the point of view of thought and belief, the Jain and Ajivika sects are undoubtedly allied having many points in common between them. (p.42)

A. L Basham, in his "History and doctines of Ajivikas" (1981), has observed as follows:-

"Gosala enjoyed the status among followers, comparable to that of Mahavira among Jains and was treated with great respect, like Mahavira, he seems to have been considered Omniscient by his devotees."

ವಿದ್ವಾಂಸರಾದ ಎ.ಎಲ್. ಬಾಷಂ ಅವರ ಈ ಮಾತುಗಳಿಂದ ಗೋಸಾಲಗುರುವನ್ನು ಸರ್ವಜ್ಞ ಅರ್ಥಾತ್ ಜೀವನ್ಮುಕ್ತನೆಂದೇ ಭಾವಿಸಿ ಆತನ ಅನುಯಾಯಿ ಆಜೀವಕ ಶಿವಭಕ್ತರು ಕೊಂಡಾಡುತ್ತಿದ್ದುದನ್ನು ಗಮನಿಸಿದಾಗ ಗೋಸಾಲನ ವ್ಯಕ್ತಿತ್ವದ ಹಿರಿಮೆ ಮಹತ್ತ್ವಪೂರ್ಣವಾದುದೆಂಬುದು ಸುಸ್ಪಷ್ಟ. ಪವಿತ್ರಾತ್ಮರಾದ ಕೆಲವರು ಆಜೀವಕರನ್ನು ಭಗವತಿಸೂತ್ರವು ಅರಿಹಂತದೇವರೆಂದೇ ಕರೆಯುತ್ತಿದ್ದುದನ್ನು ನೋಡಿದರೆ

CC-0. Jangamwadi Math Collection. Digitized by eGangotri

ಆಜೀವಕರಿಗೆ ಪೂಜ್ಯಸ್ಥಾನವಿತ್ತೆಂಬುದು ಯಥಾರ್ಥ. ಅಶೋಕ ಚಕ್ರವರ್ತಿಯಿಂದಲೇ ಮಾನ್ಯರಾಗಿದ್ದ ಆಜೀವಕರಿಗೆ ಶಾಸನೋಕ್ತ ದಾನವಾಗಿ ದೊರೆತ ಬರ್ಬರಗಿರಿಯ ನ್ಯಗ್ರೋಧಾದಿ ಗುಹೆಗಳು ಈ ಸಂಗತಿಗೆ ಇಂದಿಗೂ ಸಾಕ್ಷಿಯಾಗಿರುವುದೊಂದು ಆಜೀವ ಶಿವಧರ್ಮದ ಸುದೈವವೆ ಸರಿ.

ಈ ಹಿಂದೆ ಉದ್ಧರಿಸಿದ ಪ್ರಭುವಿನ ವಚನ ಹಾಗೂ ಮಾಯಿದೇವರ ವ್ಯಾಖ್ಯಾನದಲ್ಲಿ "ಉತ್ತರೋತ್ತರ ಗುಣೋತ್ಕರ್ಷ" ಇಲ್ಲವೆ "ಪರಿಯಾಯ ಪರೀಕ್ಷೆ"ಯ ಉಲ್ಲೇಖವಿದೆಯಷ್ಟೆ. ಅದಕ್ಕೆ ಹಿನ್ನೆಲೆ ಇದ್ದರೆ ಅದೇನು? ಎಲ್ಲಿ? ಯಾವಾಗ? ಎಂಬುದಕ್ಕೆ ನೋಡಿ:

" It appears from the context of these references that Ajatasatru (ಅಜಾತಶತ್ರು) the king of Magadha, met a number of **these teachers and asked them each separately** to state in clear and unambiguous terms the result of their ascetic practices. **All of them were well known, in the country as founders of religious schools with a large following.** Their **names** and the **special doctrines they** held are briefly stated in the text" see (pp. 14- -15 Tyrs)

ಮಗಧ (ಬಿಹಾರ) ದೇಶದ ರಾಜ ಅಜಾತಶತ್ರುವು ತನ್ನ ಕಾಲದ ಬೇರೆಬೇರೆ ಮತಪಂಥಗಳ "ಗಣಾಚಾರ್ಯ" ರನ್ನು ಒಬ್ಬೊಬ್ಬರನ್ನು ಪ್ರತ್ಯೇಕವಾಗಿ ಪ್ರಶ್ನಿಸಿ ಅವರವರ ಮತಸಿದ್ಧಾಂತ ಇಲ್ಲವೆ ದರ್ಶನಾನುಭವದ ಖಚಿತವಾದ ನಿಲವು ಏನೆಂಬುದನ್ನು ಸಂಶಯಾತೀತವೂ ಸುಸ್ಪಷ್ಟವೂ ಆದ ಮಾತುಗಳಿಂದ ನಿರೂಪಿಸುವಂತೆ ಅದಕ್ಕಾಗಿ ಒಂದು

CC-0. Jangamwadi Math Collection. Digitized by eGangotri

ವೇದಿಕೆಯನ್ನು ಕಲ್ಪಿಸಿದ್ದನೆಂಬ ಸಂಗತಿ ದೀಘನಿಕಾಯಾದಿ ಬೌದ್ಧಗ್ರಂಥೋಲ್ಲೇಖಗಳಿಂದ ತಿಳಿದುಬರುತ್ತದೆ. ಆ ಆಚಾರ್ಯರಿಗೆ ತಮ್ಮದೇ ಆದ ಸಿದ್ಧಾಂತಗಳಿದ್ದುವಲ್ಲದೆ ಅವರಿಗೆ ಅಪಾರ ಸಂಖ್ಯೆಯ ಅನುಯಾಯಿಗಳಿದ್ದರೆಂದೂ ಮೇಲಿನ ಉಲ್ಲೇಖದಿಂದ ವ್ಯಕ್ತವಾಗುತ್ತದೆ. ಆ ಗುರೂತ್ತಮರಲ್ಲಿ ಗಣಾಚಾರ್ಯ ಗೋಸಾಲನೂ ಒಬ್ಬ ಪ್ರಮುಖ ದಾರ್ಶನಿಕನೆಂದು ಜೈನ ಬೌದ್ಧಗ್ರಂಥಗಳೇ ಸಾರಿವೆ. ಮೇಲೆ ಉದ್ಧೃತವಾದ ಅಲ್ಲಮಪ್ರಭುವಿನ ವಚನ ಹಾಗೂ ಮಗ್ಗೆಯ ಮಾಯಿದೇವರ ಅದರ ವ್ಯಾಖ್ಯಾನಗಳು ಅಜಾತಶತ್ರು ರಾಜನು ನಡೆಸಿದ ಗಣಾಚಾರ್ಯರ ಪರೀಕ್ಷೆಯ ಘಟನೆಯನ್ನು ದೃಢಪಡಿಸಿವೆ. ಇದಿಷ್ಟೂ ಸತ್ಯಸಂಗತಿಗಳ ಖಚಿತ ಲಿಖಿತದಾಖಲಾತಿಗಳು.

ಈ ಹಿನ್ನೆಲೆಯಲ್ಲಿ ಅಲ್ಲಮ ಪ್ರಭುವಿನ ವಚನದಲ್ಲಿ ನಿಗೂಢವಾಗಿರುವ ಮಿಕ್ಕ ಅಂಶಗಳನ್ನು ಇನ್ನು ಅವಲೋಕಸಬಹುದು. ಗೋಸಾಲನು ಬಳಸಿದ ಪಾಳಿಯ ಭಾಷೆಯ "ಅಯ್ಯಗಣೋ" ಪದ ಕನ್ನಡದಲ್ಲಿ ಅಯ್ಯಗಳು, ಅಯ್ನವರು, ಅಜ್ಜಯ್ಯ ಆಗಿ ಪೂಜ್ಯರು, ಆರಾಧ್ಯರು, ಶರಣರು, ಸ್ವಾಮಿಗಳು ಎಂಬ ಅರ್ಥದಲ್ಲಿ ಈಗಲೂ ಬಳಕೆಯಲ್ಲಿರುವುದನ್ನು ಕಾಣಬಹುದು. ಮಗಧ ದೇಶದ ರಾಜನಾದ ಅಜಾತಶತ್ರು ಅಂದಿನ "ಆರು ಹಿರಿಯರೆಲ್ಲರನು ನೆರಹಿ" ಪರಿಯಾಯ ಪರೀಕ್ಷೆಯನ್ನು ಮಾಡಿದ ಸ್ಥಳವನ್ನು ಕುರಿತು ಅಲ್ಲಮಪ್ರಭುವೆ ತಮ್ಮ ವಚನದಲ್ಲಿ ಪ್ರಚ್ಛನ್ನ ಪ್ರಕಟಾರ್ಥದಿಂದ "ಸರವರದ ಪುಷ್ಪದೊಳು" ಎಂದು ಕಾಣಸಿದ್ದಾರೆ.

'ಸರ' ಅರ್ಥಾತ್ ಪುಷ್ಪಪುಟ("cup or seed-vessel")ವನ್ನುಳ್ಳ ಆ ಪುಷ್ಪವು, 'ವರದ' ಎಂದರೆ ಕೇಸರೀ ಬಣ್ಣದ ಕಂಪುಬೀರುವ ಚಂಪಕ; ಅಂಗದೇಶದ ರಾಜಧಾನಿ "ಚಂಪಾ-" ಪುರೀ ಪ್ರತಿಬಿಂಬದ್ಯೋತಕ. "ಚಂಪಾ ಏಕೋ ರಾಮೇಶ್ವರ ಕ್ಷೇತ್ರಂ"(ಕಾಶಕ್ಯ ಪು.258);"metron of a teacher." ಒಬ್ಬ ಗಣಾಚಾರ್ಯನ ತಾಯಿಯ ಹೆಸರನ್ನು ತಳೆದು ಜನಬಳಕೆಯ

CC-0. Jangamwadi Math Collection. Digitized by eGangotri

ಮಾತಿನಲ್ಲಿ ರೂಢಿಗೆ ಬಂದಿರುವ ಆ ಚಂಪಾನಗರ ಇಂದಿನ ಬಿಹಾರದ ಭಾಗಲ್ಪುರ. ಈ ಸಂದರ್ಭದಲ್ಲಿ ನೆನಪಿಗೆ ಬರುವ ಒಂದು ವಿಷಯವೆಂದರೆ ಗೋಸಾಲ ಗುರೂತ್ತಮನ ತಾಯಿಯ ಹೆಸರು ಬದ್ಧ. ಈ ಮಾಹಿತಿ ಗ್ರಂಥಸ್ಥಗೊಂಡು ಪ್ರಕಟಿತವಾಗಿ ತಿಳಿದುಬಂದಿರುವ ಅಂಶ. ಬದ್ಧ m. ಭದ್ರಾಂಬಾ, ಭದ್ರಮ್ಮ. ಹೆಸರೇ ಹೇಳುವಂತೆ ಆಕೆ ಮಂಗಳಗೌರಿ, ಹಳದಿಬಣ್ಣ ತೊಟ್ಟವಳು. ಆ ಬಣ್ಣವ ನೋಡಿ ಪೂಜಿಸಿ ಸಲ್ಲಿಸುವ ಅರಿಸಿಣದ ಮೊರದ ಬಾಗಣ, ಬಾಗಿನ, ಲಿಂಗವಂತರ ಗೌರೀಹಬ್ಬದ ಪೂಜಾ ಚರಣೆಗೆ ಬಹುಶಃಚಾಲನೆಯಿತ್ತಮೂಲನೆಲೆ ಭಾಗಲ/ಭಾಗಲಿಪುರ. ತನ್ನ ಕಾಲದ ಸಮಾಜದ ಬುಡಕಟ್ಟಿನ ಸಂಸ್ಕೃತಿಯು ಸಾಗಿಬಂದ ಹಾದಿಯ ಕುರುಹೋ ಎಂಬ ಅರಿಸಿನ ಬಾಗಣದ ಪದ್ಧತಿ, ಆ ಗತಕಾಲದ ಒಂದು ಇಣುಕು ನೋಟವೊ ಎಂಬಂತೆ ಇಲ್ಲವೆ ಬಾಗವಾಡಿ, ಬಾಗೇಶಪುರ, ಬಾಗೇವಾಡಿ, ಬಾಗೆ, ಬಾಗಲಿ, ಮುಳ (ಮೂಲ?)ಬಾಗಲು, ಬಾಗೇಪಲ್ಲಿ –ಹೀಗೆ ಕನ್ನಡ ನಾಡಿನ ಹೆಸರುಗಳಾಗಿ ಉಳಿದು ರೂಢಿಗೊಂಡಿದ್ದರೆ ಆಶ್ಚರ್ಯವಿಲ್ಲ.

ಅದೇನೇ ಇರಲಿ. ಪ್ರಸಿದ್ಧ ಚಂಪಾ/ಪುಷ್ಪ-ಪುರಿಯಲ್ಲಿ "ಭರಿತ,"ಭರ್ತ/ ಇಲ್ಲವೆ ರಾಜನಾದ ಅಜಾತಶತ್ರುವು, ಮತ್ತೆಯೂ ಭರಿತ –ಪ್ರೋತ್ಸಾಹಿಸಿದ, ಸದ್ವಾಸನಾಭರಿತ ಮಹಾನುಭಾವಿ ತತ್ತ್ವಜ್ಞಾನಿಗಳಾದ ಆರು ಹಿರಿಯರೆಲ್ಲರನು, ನೆರಹಿ– ಒಂದೆಡೆ ಕೂಡಿಸಿದಂತಹ "ಭರಿತ-ತುಂಬಿದ-ಪರಿಮಳ" m."ವಿದ್ವತ್ಸಭೆ,' " a meeting of learned men"ಯಲ್ಲಿ ನಡಸಿದ ಪರಿಯಾಯ ಪರೀಕ್ಷೆಯಲ್ಲಿ, ಪರಮಜ್ಞಾನ (m.'ಗೋ)ವೆ, ನಿವಾಸ-ಶಾಲ- ವಾಗುಳ್ಳ, ಜ್ಯೋತಿ m.–"ಶೂನ್ಯಕಳೆ"ಯಾದ ಗೋಶಾಲ ಗುರೂತ್ತಮನು, ಸರವರದ ಪುಷ್ಪದೊಳು-ಚಂಪಾಪುರಿಯ ವಿದ್ವತ್ಸಭೆಯಲ್ಲಿ, ಸರವರದ m.("a fit of minor mental disturbance")'ಆಟುಮೂಲ''ದ ಉನ್ಮನಿಸ್ಥಾನದ ಪದ್ಮ-ಲಿಂಗಾ(m."ವಿಚತ್ರಾ")ರ್ಚನೆಯ ಧ್ಯಾನಸ್ಥಿತಿಯಲ್ಲಿದ್ದ, ಗೋಸಾಲ ಗುರುವರನು, ಪರಬ್ರಹ್ಮವನು ಮೀರಿ—ಭ್ರೂಮಧ್ಯದ ಮೇಲಣ

CC-0. Jangamwadi Math Collection. Digitized by eGangotri

ಬ್ರಹ್ಮರಂಧ್ರಾಂತದ "ಶೂನ್ಯದೇಶ"ವನ್ನೇರಿರಲಾಗಿ, ಗೋಗೇಶ್ವರ, ಗೋ-ಆಗಸವನ್ನೇ, ಶೂನ್ಯವನ್ನೇ, ಗ-m.ಭವ("a dwelling," cf. ಚೈತ್ಯಭವ) ವಾಸಸ್ಥಾನವಾಗುಳ್ಳ- ಗಣವಂಶೋದ್ಭವರಾದ ಬಸವೇಶ್ವರರ ಮಾತಿನಲ್ಲಿ "ಮುಟ್ಟಬಾರದ ಠಾವ ಮರೆಗೊಂಡಿಪ್ಪ ಮಮಕರ್ತ ಕೂಡಲಸಂಗಮದೇವ"ನಾದ, ಈಶ್ವರ - ಜಗಜ್ಜೀವಸ್ವರೂಪಿ ಆಜೀವ ಶಿವನು, ಪುರುಷರತ್ನದೊಳಡಗಿ- -ಶರಣ ಎಂದರೆ ಮಹಾತ್ಮ (best of soul), ಆ ಮಹಾ ಪುರುಷ, ಜೀವಜೀವ, ಆಜೀವರ ಜೀವರತ್ನನೆನಿಸಿದ ಗೋಸಾಲ ಗುರೂತ್ತಮನಲ್ಲಿ, ನಿಂದನಿಲವು-ಗಟ್ಟಿಗೊಂಡ ಸ್ವಸ್ವರೂಪವು ಮೇರುಗಗನವ-ದ್ಯಾವಾ ಪೃಥ್ವಿಯನ್ನು, ಬಾನ್-ಬುವಿಗಳನ್ನು, ಬೆಳಕು- ಕತ್ತಲೆಗಳನ್ನು, ಮತ್ತೆಯೂ ದ್ಯಾವಾ-ದ್ಯೌಸ್ಥಿತ m.ಗಗನಲೀನ, ಪೃಥ್ವಿ-ಭೂಮಿಯನ್ನು, ನುಂಗಿತ್ತು-ಏಕತ್ವದಿಂದ ಅಡಗಿಸಿಕೊಂಡಿತ್ತು. ಸಾಕ್ಷಾತ್ ಶಿವನೇ ಶೂನ್ಯಲಿಂಗಧ್ಯಾನಿ ಗೋಸಾಲನಾಗಿದ್ದನೆಂಬುದು ತಾತ್ಪರ್ಯ. ಅಲ್ಲಮಪ್ರಭು, ಮಗ್ಗೆಯವಿಭು-ಈ ಉಭಯ ಶಿವಾತ್ಮರು ಶತಶತಮಾನಗಳ ದೀರ್ಘಾಂತರಂಗದ ಆ ಮಗಧದೇಶದ ಚಂಪಾನಗರಿಯ ಗತಕಾಲದ ಚಾರಿತ್ರಿಕ ಹಾಗೂ ಲಿಂಗಪ್ರಾಣ ಆಜೀವ ಶಿವ ಧರ್ಮದ ಇತಿಹಾಸದ ಮಹತ್ತ್ವದ ಸಂಗತಿಗಳ ಮಧು-/ಶಿವ- ಸ್ಮೃತಿಯನ್ನು ಅವರಿವರ ಕೈಗೆಸಿಕ್ಕ ನಿರೀಶ್ವರವಾದಿಗಳಿಂದ ನಷ್ಟವಾಗದಂತೆ ಇಲ್ಲವೆ ಅವರಿಂದ ವಿರೂಪಗೊಳ್ಳದಂತೆ, ಜಾಗರೂಕತೆಯಿಂದ ಉನ್ಮನಿಸ್ಥಾನದ ಉಲುಹಿನ ಮಂತ್ರ ಗೋಪ್ಯದಂತೆ ತಮ್ಮ ಆ ನಿಗೂಢ ಸ್ವಾನುಭಾವಜ್ಞಾನಸಂಪತ್ತನ್ನು ಬೆಡಗಿನ ವಚನಗಳ ರೂಪಗಳಲ್ಲಿ ನಿಕ್ಷಿಪ್ತಗೊಳಿಸಿದ್ದಾರೆ. ಆ ಆನುಭಾವಿಕ ಅನುಪಮ ಸಾಧನೆಯ ಸಚ್ಛನ್ನಿಧಿಯನ್ನು ಶರಣರ ಶಿವಪೂಜಾ ಮಂದಿರದ ಆಧಾರದ ಬುಟ್ಟಿಯ ಸಾಹಿತ್ಯಸಂಪುಟ ದಲ್ಲಿ ಜೋಪಾನಗೊಳಿಸಿದ್ದುದು ಆಜೀವಕ ಲಿಂಗಜೀವಿ ಮತಧರ್ಮದ ಭಾಗ್ಯವಿಶೇಷವಲ್ಲದೆ ಮತ್ತೇನು!

ಷಟ್ಸ್ಥಲಜ್ಞಾನಸಂಪನ್ನ ಶಾಸ್ತ್ರವಿಷಯವು ಭಿನ್ನಮಾರ್ಗ ವರ್ತಿಗಳಾದ ಅನ್ಯರಿಗೆ ಎಂದಿಗೂ ತಿಳಿಸಬಾರದೆಂದಿರುವ

CC-0. Jangamwadi Math Collection. Digitized by eGangotri

ಸೂಕ್ಷ್ಮಾಗಮವು ಅದನ್ನು ವೀರಮಾರ್ಗಾನುಸಾರಿ ಲಿಂಗತ್ರಯ ನಿಷ್ಠರೂ ತತ್‌ಪ್ರಸಾದವರ್ತಿಗಳೂ ಆದ ವೀರಮಾಹೇಶ್ವರರಿಗೆ ಹೇಳತಕ್ಕದ್ದೆಂದು ಸೂಚಿಸಿದೆ. ಆದರೆ ಆ ನಿರ್ದೇಶನವನ್ನು ಪರಂಪರಾಗತವಾಗಿ ಪಾಲಿಸಿಕೊಂಡು ಬಂದಿದ್ದರೆ ಲಿಂಗನಿಷ್ಠ ತತ್ಪರ ಶೂನ್ಯಧ್ಯಾನೋಪದೇಶಕನ ನೆನಪು ಉಳಿದು ಕೊಂಡಿರುತ್ತಿತ್ತು. ಆ ಶ್ರದ್ಧೆಯ ಕೊರತೆಯೇ ಪ್ರಭುದಂಡೇಶರು ಕಂಡ ಐತಿಹಾಸಿಕ ಸತ್ಯದ ಸಂದೇಶ ಗೂಢವಾಗಿಯೇ ಈತನಕ ಉಳಿದುಕೊಂಡು ಬರಲು ಕಾರಣವಾಯಿತು. ವಚನಾನುಭವದ ಮೂಲಾರ್ಥವನ್ನು ಒಳಹೊಕ್ಕು ಅದರ ರಹಸ್ಯವನ್ನು ಆ ಅನಂತರದ ಅನುಭಾವಿಗಳು ಅರಿತು ಆನಂದಿಸುವರೆಂಬ ಕೃತಿಕರ್ತರ ವಿಶ್ವಾಸವನ್ನು ಉಳಿಸದಿರುವುದಕ್ಕೆ ಅನುಭಾವಿ ಗಳಂತಃಸತ್ವದ ಕೊರತೆಯೇ ಕಾರಣ. ಬೆಡಗಿನ ವಚನಗಳು ಉಕ್ಕಿನ ಕಡಲೆಯಾಗ ತೊಡಗಿದವು. ಮರೆಯ ಮಾತುಗಳಿಂದ ಮನವನ್ನು ಅರಿಯಲಾರದೆ ಹೋದು ದನ್ನು ಗಮನಿಸಿಯೋ ಏನೋ ಅಂಬಿಗ ಚೌಡಯ್ಯನು ಆ ಬಗೆಗೆ ಹೇಳಿರುವುದು ಹೀಗೆ:

"ವಚನಾರ್ಥವ ಕಂಡಹರೆಂದು ರಚನೆಯ ಮರೆಯಮಾಡಿ ನುಡಿಯಲೇತಕ್ಕೆ? ದಾರಿಯಲ್ಲಿ ಸರಕು ಮರೆಯಲ್ಲದೆ, ಮಾರುವಲ್ಲಿ ಮರೆಯುಂಟೆ? ತಾನರಿವಲ್ಲಿ ಮರೆ [m.spiritual experience of truth in solitude]ಯಲ್ಲದೆ ಬೋಧೆಗೆ ಮರೆಯಿಲ್ಲ ವೆಂದನಂಬಿಗ ಚೌಡಯ್ಯ."(ಅನುಭಾ. ೩೧)

ಬೆಡಗಿನ ವಚನಗಳ ಬಗೆಗಿನ ಇಂತಹ ದೃಷ್ಟಿಯ ಔಚಿತ್ಯವನ್ನು ಒರೆಗಲ್ಲಿಗೆ ಒಳಪಡಿಸಿದಂತೆಯೂ ಇದೆ. ಗಹನವಾದ ಪ್ರಸ್ತುತ ವಚನಾನುಭವದ ಪ್ರಾಚೀನ ಐತಿಹಾಸಿಕತೆಯು ಅಂತರಂಗದ ಆತ್ಮೀಯ ಪುರುಷರತ್ನ ಅರ್ಥಾತ್ ಆಜೀವರ ಜೀವನೆನಿಸಿದ ಗುರುವನ್ನು ಕುರಿತದ್ದು. ಅದು ಆತನ ಅನುಪಮ ಸಚ್ಚಿದಾನಂದಾನುಭವದ ಸ್ವರೂಪವುಳ್ಳದ್ದಾದುದರಿಂದ ಸ್ವಾನು-ಭವವೇದ್ಯ ಮಾತ್ರವಾಗಿರಬೇಕಲ್ಲದೆ ಬಹಿರಂಗದ ಜಾಹೀರಾತಾಗಿ, ಕೂಡಿಬಾಳಬೇಕಾದ ಸಮಾಜದ ವ್ಯವಸ್ಥೆಯನ್ನು ಕದಡಿಸಬಾರ

CC-0. Jangamwadi Math Collection. Digitized by eGangotri

ದೆಂಬ ಸೂಕ್ಷ್ಮದೃಷ್ಟಿಯಿಂದ ಕೂಡಿರುವ ಚನ್ನಬಸವಣ್ಣನವರ ವಚನವಿದು(ನೋ. ಕ.ವಿ.ಪ್ರ.ವ.೮೪೧):-

ಅನುಭಾವ ಅನುಭಾವವೆಂದೆಂಬಿರಿ:
ಅನುಭಾವವೆಂಬುದು ಅಂತರಂಗದ ರತ್ನ ಕಾಣಭೋ!
ಅನುಭಾವವೆಂಬುದು ರಚನೆಯ ಮಾತೆ?
ಅನುಭಾವವೆಂಬುದು ಸಂತೆಯ ಸುದ್ದಿಯೆ?
ಅನುಭಾವವೆಂಬುದು ಬೀದಿಯ ಪಸರವೆ?
ಏನೆಂಬೆ ಹೇಳಾ, ಮಹಾಘನವವನು!
ಆನೆಯ ಮಾನದೊಳಿಕ್ಕದೊಡಡಗುವುದೆ,
ದರ್ಪಣದೊಳಡಗುವುದಲ್ಲದೆ?
ಕಂಡಕಂಡಲ್ಲಿ ಗೋಷ್ಠಿ*,
ಬಂದಬಂದಲ್ಲಿ ಪ್ರಸಂಗವ ಮಾಡುವ
ಪಾತಕರ ತೋರದಿರಯ್ಯಾ, ಕೂಡಲಚನ್ನಸಂಗಮದೇವಾ#।

ಪ್ರಸ್ತುತ ವಚನದಲ್ಲಿ ಬಳಕೆಯಾಗಿರುವ ಅಂತರಂಗ, ಆನೆ, ಮಾನ ಮತ್ತು ದರ್ಪಣ-ಈ ಪದಗಳು ಗೂಢಾರ್ಥಕ ಪ್ರಯೋಗಗಳು.ಸೋಽಹಂಪ್ರಕಾಶಕ(೧೯೭೭)ನಾದ ಆ ಆರ್ಷೇಯ ಗುರುವಿನ ಗೂಢಸ್ವರೂಪವನ್ನು ಅಂತರಂಗಕ್ಕೂ, ಗುರುತ್ವವನ್ನು ಆನೆಗೂ, ಆತನ ಮಹಾಘನತೆಗೆ ಕುಂದೆಣಿಸುವುದನ್ನು ಕರಿ ಅಳತೆಯ ಅವಲೋಹದ ಸಾಧನವಾದ 'ಮಾನ'ಕ್ಕೂ ಹೋಲಿಸಿರುವುದನ್ನು ಕಾಣಬಹುದು. ಮಹಾಪುರುಷರತ್ನನೆನಿಸಿದ ಆ ಗುರುವಿನ ಗುಂಡಿಗೆಯುನ್ನು, ಎದೆಗಾರಿಕೆಯುನ್ನು ಗಜಗಾಂಭೀರ್ಯ, ಘನತೆಗಳಿಗೆ ಸರಿಗಾಣಿಸಿರುವುದು ಸುಸ್ಪಷ್ಟವಾಗಿದೆ. ಆತನ ಮಹಿಮೆಗೆ ಕುಂದೆಣಿಸಲು ಯತ್ನಿಸಿದರೆ ಆತನ ಧೀರಚೈತನ್ಯಚೇತನ-ದರ್ಪಣದಲ್ಲಿ ಆ ತನ್ನ ಮಹತ್ತ್ವವು

---

*ಗೋಷ್ಠಿ m. ಮಾತು, ಕಥೆ.

[ಗ್ರಂಥಸ್ಥ ಮುದ್ರಿತ ಪಾಠಾಂತರಗಳನ್ನು ಅನುಲಕ್ಷಿಸಿ ಪ್ರಸ್ತುತ ಗ್ರಂಥಕರ್ತನು ಪರಿಶೋಧಿಸಿದ ವಚನದ ಪೂರ್ಣಪಾಠ.]

CC-0. Jangamwadi Math Collection. Digitized by eGangotri

ಪ್ರತಿಫಲಿಸಿದುದಲ್ಲದೆ ಅಳಿದುಹೋದುದುಂಟೆ? ಪುರುಷರತ್ನ ನೆನಿಸಿದ ಆಜೀವಗುರುವನ್ನು ಏನೆಂದು ತಿಳಿದಿರುವೆ? ಉಸುರು ಎಂದು ವಾದಿಯನ್ನು ಗದರಿಸಿರುವುದರ ವಚನದಲ್ಲಿನ ಧ್ವನಿ ಮನಕ್ಕೆ ತಾಕದಿರದು.

ಮಗಧದೇಶದ ಆ ಮಹಾನುಭಾವ ಗುರುವಿನ ಬಗೆಗೆ ಇಲ್ಲ ಸಲ್ಲದ ಮಾತುಗಳನ್ನು ಕಲ್ಯಾಣದಲ್ಲಿ ಆಡುತ್ತಿದ್ದವರನ್ನು ಬಹುಶಃ ಕಣ್ಣಾರೆ ಕಂಡೇ ಚನ್ನಬಸವಣ್ಣನವರು ಆ ಪಾಪಿಗಳನ್ನು ಕಾಣಿಸದಿರೆಂದು ಇಷ್ಟಲಿಂಗವನ್ನು ಪ್ರಾರ್ಥಿಸಿದ್ದಾರೆ. ಜೈನಪೂರ್ವ-ಗತವನ್ನು ಚೆನ್ನಾಗಿ ಬಲ್ಲವನಾಗಿದ್ದ ಗೋಸಾಲನು ಮಹಾವೀರನ ಪ್ರತಿಸ್ಪರ್ಧಿಯಾಗಿ ಬಲಿಷ್ಠನಾಗಿದ್ದುದೇ ಅವರ ಅಸೂಯೆಗೆ ಕಾರಣವಾಗಿತ್ತು. ಜೈನಗ್ರಂಥಗಳಲ್ಲಿ ಗೋಸಾಲನನ್ನು ಕೆಡುಕ, ಹುಚ್ಚ ಎಂದು ಕರೆದಿರುವುದುಂಟು. ಲೋಕದಲ್ಲಿ ಯಾವ ಮಹಾತ್ಮರನ್ನೂ ಧರ್ಮಾಂಧರು ನೋಡಿ ಸಹಿಸದಿರುವುದು ಹೊಸದೇನಲ್ಲ. ಆ ಬಗೆಗೆ ಬೆಲೆಕೊಡದೆ ವಿದ್ಯಾಲಂಕಾರ ಶಾಸ್ತ್ರಚೂಡಾಮಣಿ ಸಂಗೀತಕಲಾರತ್ನ ಪೂಜ್ಯ ಪ್ರಾಧ್ಯಾಪಕ ಎಸ್.ಕೆ. ರಾಮಚಂದ್ರರಾವ್ ಅವರು ಗೋಸಾಲ ಗುರೂತ್ತಮನನ್ನು ಬಹು ಸಮರ್ಥನಾದ ಗುರುವೆಂದೂ ಪ್ರಾಜ್ಞನೂ ಪ್ರತ್ಯುತ್ಪನ್ನಮತಿಯೂ ಆಗಿದ್ದವನು ಎಂದಿರುವರು:

"The Jaina books describe Gosala as mischievous and mad. But beyond doubt, he was a powerful teacher whose influence survived for centuries and his thoughts, although preserved in fragments, reveal a resourceful mind" (DPTI P. 66).

ಈ ಸಂದರ್ಭದಲ್ಲಿ ಮಗಧ ಹಾಗೂ ಕನ್ನಡನಾಡುಗಳ ನಡುವೆ ಬೆಳೆದುಬಂದಿರುವ ಆಧ್ಯಾತ್ಮಿಕ, ಧಾರ್ಮಿಕ, ಸಾಮಾಜಿಕ ಹಾಗೂ ಐತಿಹಾಸಿಕ ಸಂಬಂಧದ ಮತ್ತೊಂದು ಸಂಗತಿಯನ್ನು ಈ ಹಿಂದೆ ಬೇರೊಂದೆಡೆ ಪ್ರಸ್ತಾಪಿಸಲಾಗಿದೆ (ನೋ: ಪ್ರ.ಗೀ. ಪೀಠಿಕೆ xl).

CC-0. Jangamwadi Math Collection. Digitized by eGangotri

ಅದೇನೆಂದರೆ ಗೋಸಾಲನನ್ನು ಶಿವನೊಡನೆ ಸಮೀಕರಿಸಿ "ಅತ್ಯಂತ ಶುದ್ಧ"ನೆಂದು ತನ್ನ ಗುಮ್ಮಟ ಶತಕದ ಉತ್ತರಾರ್ಧದಲ್ಲಿ ಕವಿ ಅಂಕಿತವಿಟ್ಟಿದ್ದಾನಷ್ಟೆ. ತನ್ನನ್ನು ಹಾಗೆ "" Supremely white category"ಗೆ, ಅತ್ಯಂತ ಶುದ್ಧರಾದವರ ಗುಂಪಿಗೆ ಸೇರಿದ ಲಿಂಗಜಂಗಮದೊಡನೆ ತಾನಾಗಿದ್ದೇನೆ ಎಂಬ ಗೋಸಾಲನ ಬಗೆಗೆ "ಮಹಾಘನಜಂಗಮ ಶುದ್ಧ ಶಿವೈಕ್ಯನು" ಎಂದು ಸ್ಮರಿಸುತ್ತ ಚನ್ನಬಸವಣ್ಣನವರೂ ಆ ಗೋಸಾಲ ಗುರುವು ಲಿಂಗ ಜಂಗಮಗಳನ್ನು ಉಪಮೆಗೆ ತಂದು ಎರಡೆನ್ನಬಹುದೆ ಎಂದುಕೊಳ್ಳುತ್ತ ವಿಚಾರಮಾಡ ತೊಡಗಿದರಷ್ಟೆ।

ಆ ಹಿನ್ನೆಲೆಯಲ್ಲಿ ಗೊಮ್ಮಟಾರ್ಯನ ಶತಕದ ಉತ್ತರಾರ್ಧದ ಅಂಕಿತದ ಔಚಿತ್ಯ ಹಾಗೂ ಸಾರ್ಥಕತೆಯನ್ನು ಗುರುತಿಸಬಹುದು. ಆ ಕವಿ ಕರ್ನಾಟಕದ ಗುಲ್ಬರ್ಗ ಜಿಲ್ಲೆಯ ಮಳೆಯಖೇಡದ, ಮಾಲ್‌ಖೇಡದ ಬೆಣ್ಣೆನದಿಯ ಪಡವಲು ಮಳೆಯೂರ್ ಪ್ರದೇಶದವನೆಂಬುದನ್ನು ನೆನೆದಾಗ ಮಗಧ ದೇಶದ ತತ್ತ್ವಜ್ಞಾನಿಯಾದ ಗೋಸಾಲ ಗುರೂತ್ತಮನ ಆಧ್ಯಾತ್ಮಿಕ ಚಿಂತನೆ ನಿಗೂಢವಾಗಿ ಕರ್ನಾಟಕದಲ್ಲಿ ಹೇಗೆ ಬೇರೂರಿದ್ದಿತೆಂಬುದುಸುಸ್ಪಷ್ಟವಾಗಿದೆ. ಗುಮ್ಮಟಾರ್ಯನಿಗಿಂತಲೂ ಮೊದಲು 11, 12 ನೆಯ ಶತಮಾನದಲ್ಲಿ ಬಿಹಾರ ಹಾಗೂ ಕರ್ನಾಟಕಗಳ ನಡುವೆ ಮತ್ತೊಂದು ಸಾಮಾಜಿಕ-ಸಹ-ಧರ್ಮಸಂಬಂಧ ಬೆಳೆದಿದ್ದಿತು. ಅದರ ಹೆಗ್ಗುರುತಾಗಿ ಪ್ರಸಿದ್ಧವಾದ ಧರ್ಮಶಾಸ್ತ್ರಗ್ರಂಥವೊಂದರ ವ್ಯಾಖ್ಯಾನ ರಚನೆಯಿದೆ. ಬಿಹಾರದ ಮಧುಬಾಣಿಯ ಮಿಥಿಲಾ ಪಟ್ಟಣದಲ್ಲಿ ಕ್ರಿ.ಪೂ ೧೦೦೦ದಲ್ಲಿದ್ದ ಋಷಿ ಯಾಜ್ಞವಲ್ಕ್ಯರಚಿತ ಧರ್ಮಶಾಸ್ತ್ರಕ್ಕೆ ಗುಲ್ಬರ್ಗಾಜಿಲ್ಲೆಯ ಚಿತ್ತಾಪುರತಾಲ್ಲೋಕು ಮರತೂರ ಗ್ರಾಮದಲ್ಲಿ ವಿಜ್ಞಾನೇಶ್ವರೀಯ ಇಲ್ಲವೆ ಮಿತಾಕ್ಷರವೆಂಬ ವ್ಯಾಖ್ಯಾನ ಗ್ರಂಥವನ್ನು ಕ್ರಿ.ಶ.೧೦೭೮ ರಿಂದ ೧೧೦೦ ರ ಅವಧಿಯಲ್ಲಿ ರಚಿಸಿರುವ ಮೂಲಕ ವಿಜ್ಞಾನೇಶ್ವರರು ಸ್ತ್ರೀಯರ ಹಕ್ಕನ್ನು ಎತ್ತಿ ಹಿಡಿದು ಸಾಮಾಜಿಕನ್ಯಾಯ ವ್ಯವಸ್ಥೆಯನ್ನು ನಾಡಿಗೆ

CC-0. Jangamwadi Math Collection. Digitized by eGangotri

ನೀಡಿದ ಮಹಾಜ್ಞಾನಿಯೆಂದು ಬಿಹಾರದ ರಾಜ್ಯಪಾಲರಾಗಿದ್ದ ನ್ಯಾಯಮೂರ್ತಿ ಸನ್ಮಾನ್ಯ ಡಾ। ಎಮ್. ರಾಮಜೋಯಿಸ್ ಅವರು ಕೊಂಡಾಡಿದ್ದಾರೆ. ಬಸವಪೂರ್ವದಲ್ಲಿಯೆ ಸು.೧೨೦೦ ರ ವೇಳೆಗಾಗಲೆ ಪರಕೀಯರ ಧಾಳಿಗೆ ಗುರಿಯಾಗಿದ್ದ ನಳಂದ ವಿದ್ಯಾಲಯದ ಮಗಧದೇಶದಿಂದ ಪಂಡಿತರು ಕರ್ನಾಟಕಕ್ಕೆ ಬರುವಾಗ ಅವರು ಶಾಸ್ತ್ರಗ್ರಂಥಗಳ ಸಮೇತ ಬಂದಿರಬಹುದಾದ ಸಾಧ್ಯತೆಯನ್ನು ವಿಜ್ಞಾನೇಶ್ವರರು ರಚಸಿರುವ ಧರ್ಮಶಾಸ್ತ್ರದ ಈ ವ್ಯಾಖ್ಯಾನ ಸೂಚಸುತ್ತದೆ. ಕ್ರಿ.ಪೂ. 6ನೆಯ ಶತಮಾನದ ಎಲ್ಲವರ್ಗದವರನ್ನೂ ಒಳಕೊಂಡ ಆಜೀವಕ ಧರ್ಮದ ಸರ್ವಸಮಾನತಾ ಸಮಾಜದೃಷ್ಟಿಯ ಬೆಳವಣಿಗೆಯ ಮೇಲೆ ಯಾಜ್ಞ್ಯವಲ್ಕ್ಯ ಧರ್ಮಶಾಸ್ತ್ರದ ಜೀವನಮೌಲ್ಯದ ಪ್ರಭಾವ ಸಹಜವಾಗಿ ಬಿದ್ದಿರಬೇಕೆಂದು ತೋರುತ್ತದೆ.

ಇದಿಷ್ಟೂ ಸತ್ಯಸಂಗತಿಗಳ ಉಪಲಬ್ಧ ಖಚತ ದಾಖಲಾತಿಗಳು. 12ನೆಯ ಶತಮಾನದ ಮನುಮುನಿ ಗುಮ್ಮಟದೇವ ಜಿನವಾಸದವನಾಗಿದ್ದು ದಿನನಾಶದವನಾಗಿ ರಚಸಿರುವ ಎರಡು ವಚನಗಳಲ್ಲಿ "ಆರು ಹಿರಿಯರ" ಪ್ರಸ್ತಾಪ ವುಂಟು.

"ಆರು ಹಿರಿಯರೆಲ್ಲರು ಕೂಡಿ ಅಱಿಯದ ಕೂಸಿನ ಕೈಯಲ್ಲಿ ಮಱಿಯ ಮಾಡೆ, ಈಸಿಕೊಂಡ ಲಿಂಗಕ್ಕೆ ಕುಱುಹು ಆವುದು? ಅಱಿವುದಕ್ಕೆ ತೆರಹು ಆವುದು? ಅಱಿವೇ ಮಱಿವೆಗೆ ಬೀಜ. ಮಱಿವೆಯ ಮನದ ಕೊನೆಯಲ್ಲಿ ಅಱಿವುದೇನು? ಅಱಿವು ತಾನೋ, ಮಱವೆಯ ಮುಮ್ಮೊನೆಯೋ? ಇಂತೀ ಉಭಯದ ಹಿಂಚುಮುಂಚನಱಿತು, ಅಂತಿಕದಲ್ಲಿ ಸಿಕ್ಕದೆ, ವಿಶ್ರಾಂತಿಯೇ ತಾನಾಗಿಪ್ಪ ಎನ್ನ ಗೂಡಿನ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗ"॥ ೧೪॥

ಹುಟ್ಟಿದ ಕೂಸಿಗೆ ಹೆಸರಿಡುವ ದಿವಸ ಲಿಂಗವನ್ನು ಆ ಹಸುಳೆಯ ಅಂಗೈಯಲ್ಲಿ ಮರೆಗೊಳ್ಳುವಂತೆ ಮಡಿಸಿಟ್ಟವರು ಆ ಆರು ಹಿರಿಯರು, ಆರ್ಯದೇಶಿಕರಾದ ಲಿಂಗದೀಕ್ಷಾಗುರು

CC-0. Jangamwadi Math Collection. Digitized by eGangotri

ಗಳೆಂಬುದು ವಚನದ ವಿಷಯ ನಿರೂಪಣೆಯಿಂದ ತಿಳಿದುಬರುವ ಸಂಗತಿ. ಆ ಮಗುವಿಗೆ ಲಿಂಗ ತನ್ನ ಕೈಗೆ ಬಂದಿತು ಎಂಬುದಕ್ಕೆ ಗುರುತೇನು? ಆ ಲಿಂಗದ ಅರಿವು ಶಿಶುವಿಗೆ ಆಯಿತೆಂಬುದಕ್ಕೆ ಕಾಣಸಿಕೊಂಡ ಅದರ ಲಕ್ಷಣವೇನು? ಅರಿವೇ ಮರೆವೆಗೆ ಬೀಜವಾದ ಕಾರಣ ಮರೆವೆಯ ಮನದ ಕೊನೆಯಲ್ಲಿ ತಿಳಿಯುವುದಾದರೂ ಏನು? ತಾನು ಅರಿವೋ, ಮರವೆಯ ಅತಿರೇಕವೋ? ಈ ಎರಡರ ಹಿಂದು ಮುಂದುಗಳನ್ನು ಅರಿದು ಸಮೀಪದ ತನುಗುಣದ ಮರೆಯಲ್ಲಿ ಸಿಕ್ಕದೆ, ಶಿವಶರಣನು ಸ್ವಯಂಭು(Re-creation of Onself in) ಶಿವ ತಾನಾಗುವನು ಎಂಬ ಮಾರ್ಗದರ್ಶನ ಮಾಡಿದ ವಚನವಿದು. "ಮರೆತರೆ ಮಾನವ, ಅರಿತರೆ ಶರಣ"ಎಂಬ ಕನ್ನಡದೊಳ್-ಭಾವಿಸಿದ ಶಿವಾನುಭಾವಿಗಳ ಅನನ್ಯಸಾಧಾರಣವಾದ ವಿಶ್ವಚೈತನ್ಯಚೇತನರ ನುಡಿಮುತ್ತಿಗೆ ಒಳ್ಳೆಯ ಉದಾಹರಣೆ ಈ ಮೇಲಣ ವಚನ.

ಇದೇ ವಚನಕಾರನ ಮತ್ತೊಂದು ವಚನ((೪೨)ದಲ್ಲಿ 'ಆರು ಹಿರಿಯರಾ'ದವರು ಎಳ್ಳಿನೊಳಗಣ ಎಣ್ಣೆಯಂತೆ ಎಂದು ಅವರನ್ನು ತಿಲರಸಕ್ಕೆ ಹೋಲಿಸಿರುವರು. ಎಣ್ಣೆ ಎಳ್ಳುಗಳ ಸಂಬಂಧದಂತೆ ಎಂದರೆ ತಿಲ-ತೈಲಗಳ ಸ್ನೇಹದಂತೆ ಬೆರಸಿ ಬೇರಾಗಿರುವವರು ಆ ಆರು ಹಿರಿಯರೆಂದು ಅವರ ನಿರ್ಲೇಪ ಸ್ಥಿತಿಯನ್ನು ಕೊಂಡಾಡಲಾಗಿದೆ. ಮರೆತು ಮಧು- ಮಕ್ಷಕದಂತೆ ಬೇರೊಂದೆಡೆ ಗೂಡಿನಲ್ಲಿ ಶೇಖರಿಸಿಡದೆ, ಅರಿತು ಆ ಮಕರಂದ ರಸವನ್ನು ಹೀರಿ ಸುಖಿಸುವ ಮಧುಮಕ್ಷಕದಂತೆ "ವಿರಕ್ತರು" ಇರುವಲ್ಲಿ ಶಿವನು ಬೇರೆಯಲ್ಲ ಆ ವಿರಕ್ತರು ಬೇರೆಯಲ್ಲ ಎಂದು ಮನುಮುನಿ ಗುಮ್ಮಟದೇವನು ವಿವರಿಸಿದ್ದಾನೆ. ಲೋಕದ ಗುರುಗಳಾದ ಆ ಆರು ಹಿರಿಯರು ಲೋಕದಲ್ಲಿ ಅಂಟಿಯೂ ಅಂಟದಂತೆ ಕಮಲಪತ್ರದ ಜಲಬಿಂದುವಿನಂತೆ ಇದ್ದವರು ಎಂಬುದು ಭಾವ. "ಗೋಗೇಶ್ವರಲಿಂಗವನರಿಯಬಲ್ಲಡೆ ನಿನ್ನ ನೀ-ತಿಳಿದುನೋಡಾ"ಎಂದೂ, ಬೇರೊಂದೆಡೆ ಅಲ್ಲಮನೇ ಹೇಳಿರುವಂತೆ "ಆತ್ಮವನತಿಗಳೆದು ಗೋಹೇಶ್ವರನೆಂಬ ಲಿಂಗವಿಲ್ಲ."

CC-0. Jangamwadi Math Collection. Digitized by eGangotri

–ಆತ್ಮವನ್ನು ಬಿಟ್ಟು ಪರವಸ್ತುವಿಲ್ಲ. "ಗೋಹೇಶ್ವರಶಬ್ದ ವನೊಳಕೊಂಡ ಮಹಂತ ಬಯಲು." ಆತ್ಮನ ಬಯಲ ಸ್ವರೂಪವೆ ಲಿಂಗ, ಲಿಂಗವೇ ಶೂನ್ಯವೆಂದು ಬೋಧಿಸಿದ ಅಲ್ಲಮಪ್ರಭುವಿನ ಉಪದೇಶದ ಹಿನ್ನೆಲೆಗೆ ಗೋಸಾಲ ಪ್ರತಿಪಾದಿತ ಇಷ್ಟಲಿಂಗ ಪುರಸ್ಸರವಾದ ಶೂನ್ಯಲಿಂಗಧ್ಯಾನಾ ಚರಣೆಯ ಉಪಲಬ್ಧ ಧಾರ್ಮಿಕ ಇತಿಹಾಸವೇ ಸಾಕ್ಷ್ಯ.

ಪ್ರಭುದೇವರ ಬಯಲಭಾವನೆಯ ಜೀವನ್ಮುಕ್ತಮಾರ್ಗ ಶರಣರ ದಾರಿದೀಪವಾಗಿ ಶೂನ್ಯಪೀಠದ ಪರಂಪರೆಯನ್ನೇ ಬೆಳೆಸಿಕೊಂಡುಬಂದು ಇಂದೂ ಆಜೀವೌನ್ನತ್ಯದ ಮಹತ್ವವನ್ನು ಸಾರುತ್ತಲಿದೆ. ಅದು ಮೇಲುಕೀಳೆಂಬ ತಾರತಮ್ಯವಿರದ ಪ್ರಜಾ ಸ್ವಾತಂತ್ರ್ಯದ, ಸರ್ವಸಮಾನತೆಯ, ಆತ್ಮಾವಲೋಕನದ ನರನು ತನ್ನೊಳಗಣ ದೇವನನ್ನು ಕಾಣಬಲ್ಲ ಅನುಭಾವನಿಷ್ಠ, ಸಕಲ ರನ್ನೂ ನಿಜಭಾವದಿಂದ ಕಾಣುವ ಆಪ್ತಲೌಕಿಕತೆಯಿಂದ, ಆತ್ಮವಿವೇಕನಿಷ್ಠ ಆಚರಣೆಯ ಸಮಾಜರಚನೆಯೇ ಗುರಿಯಾಗಿ ಉಳ್ಳದ್ದು.

ಯಾವ 'ಜೀವ'ನ ಅಂತರಂಗದ ಆಧ್ಯಾತ್ಮಿಕ ವಿಕಾಸದ ಹಾಗೂ ಬಹಿರಂಗದ ದೈಹಿಕ ಬೆಳವಣಿಗೆಯ ಆತ್ಮಪ್ರಕಾಶಕ ತತ್ವಗಳ ಎಂಟು ಸ್ಥಲಗಳನ್ನು ಗೋಸಾಲನು 'ಅಟ್ಠ ಪುರಿಸ ಭೂಮಿಯೋ" ಎಂದು ತನ್ನ ಪಾಳಿಯ ಭಾಷೆಯಲ್ಲಿ ಕರೆದನೋ ಆ ತಾತ್ವಿಕ ಚಿಂತನೆಯ ಪ್ರಭಾವವು ಜಿನಧರ್ಮದಿಂದ ಹೊರಳಿ ಶಿವಸಮಯವನ್ನಪ್ಪಿದ, ಬೆಡಗಿನ ಭಾಷೆಗೆ ಹೆಸರಾದ ಮನುಮುನಿ ಗುಮ್ಮಟದೇವನ(ಕ್ರಿ. ಶ. 1100)''ಅಷ್ಟಭೂಮಿಯ ಮಧ್ಯದಲ್ಲಿ ಹುಟ್ಟಿತ್ತೊಂದು ಬೆಟ್ಟ" (m.ಅಚಲಾತ್ಮ) ಎಂಬ ವಡಬಿನ ಮಿಡಿತದ ನುಡಿಯಲ್ಲಿ ಮೈದೋರಿರುವುದನ್ನು ಗಮನಿಸಬಹುದು. "ಪುರುಷ"ಪದ 'ಜೀವ' ಪದದ ಪರ್ಯಾಯ ಎಂದಿರುವುದಕ್ಕೆ ನೋಡಿ:"ಕಾಯಃ ಪ್ರಕೃತಿಃ ಪುರುಷೋ ಜೀವ ಇತಿ ಪ್ರೋಕ್ತಃ॥"

ಮಗಧದೇಶದ ಗಣಾಚಾರ್ಯ ಗೋಸಾಲನ ಪ್ರತಿಪಾದಿತ ಲಿಂಗವಂತ ಸಂಸ್ಕೃತಿ ಕನ್ನಡನಾಡಿನ ಶಿವಶರಣರ

CC-0. Jangamwadi Math Collection. Digitized by eGangotri

ವಚನಗಳ ಅಂತಃಸತ್ತ್ವವಾಗಿರುವುದನ್ನಿಲ್ಲಿ ಸ್ಪಷ್ಟವಾಗಿ ಕಾಣ-ಬಹುದು. ಬಸವಯುಗ ಪೂರ್ವದಲ್ಲಿಯೇ ಆಜೀವ ಶಿವಮತದ ಇಷ್ಟನಿಷ್ಠೆಯ ಶೂನ್ಯಧ್ಯಾನಾನುಸಂಧಾನದ ಶಿವಶರಣರು ಕರ್ನಾಟಕದಲ್ಲಿ 11ನೆಯ ಶತಮಾನಕ್ಕಿಂತಲೂ ಪೂರ್ವದಲ್ಲಿ ನೆಲಸಿದ್ದರೆಂಬುದಕ್ಕೆ ಶಾಸನ ಹಾಗೂ ಗ್ರಂಥಾಧಾರಗಳಿಲ್ಲದೇ ಇಲ್ಲ. ಇದ್ದಕ್ಕಿದ್ದಂತೆ11, 12 ಶತಮಾನಗಳಲ್ಲಿ ತಲೆದೋರಲು ಪ್ರಬಲವಾದ ಕಾರಣವೇನಾದರೂ ಇದ್ದಿರಬಹುದೆ ಎಂಬುದು ಇತಿಹಾಸಜ್ಞರು ಕಂಡುಹಿಡಿದು ನಿರ್ಣಯಿಸಬೇಕಾದ ವಿಷಯ.

ಉತ್ತರದಿಂದ ಬಂದ ಆಜೀವಕ ದೇಶಿಕಗಣಂಗಳಿಗೆ ಪುಂಡ್ರದೇಶದಲ್ಲಿ ರಾಜಾಶ್ರಯ ಹಾಗೂ ಬೆಂಬಲವಿದ್ದು ಆ ಮುಖಾಂತರ ಬಂದು ಕರ್ನಾಟಕದಲ್ಲಿ ಕೇಂದ್ರೀಕೃತರಾದುದರ ಬಗೆಗೆ ಇರುವ ಉಲ್ಲೇಖಗಳನ್ನು ಕಾಣಬಹುದು. ಎಷ್ಟು ಹಿಂದೆ ಎಂಬುದು ಖಚತವಿಲ್ಲದಿದ್ದರೂ 12ನೆಯ ಶತಮಾನದ ವೇಳೆಗೆ ಬಸವಣ್ಣನವರ ಶೂನ್ಯಸಿಂಹಾಸನದ ಅನುಭವಮಂಟಪದ ಕೀರ್ತಿಯನ್ನು ಕೇಳಿ ಇಡೀ ದೇಶದ ನಾನಾಭಾಗಗಳಿಂದ ಶಿವಭಕ್ತರು ಕಲ್ಯಾಣಕ್ಕೆ ಬಂದು ಒಡಗೂಡಿ ಅನುಭವ ಮಂಟಪ ದಲ್ಲಿ ಪಾಲ್ಗೊಂಡಸಂಗತಿ ಬಹುಪ್ರಖ್ಯಾತವಾಗಿದೆ. ಆದರೆ ಭಕ್ತ ಭಂಡಾರಿ ಬಸವಣ್ಣನವರ ಆ ಯುಗದ ಸಾಮಾಜಿಕ ಸುಧಾರಣೆ ಹಾಗೂಸಂಘಟನೆಗೂ ಬಹುಶಃ ಅದೇ ಸುಮಾರು ಕ್ರಿ.ಶ 1200 ವೇಳೆಗೆ ಸಹಸ್ರಾರು ಪಂಡಿತರಿಗೆ ಹೆಸರಾಗಿದ್ದ ಮಗಧದೇಶದ ನಲಂದವಿದ್ಯಾಕೇಂದ್ರವು ಪರಕೀಯ ಪರಧರ್ಮೀಯರ ಧಾಳಿಗೆ ತತ್ತರಿಸಿಹೋಗಿ ಮತ್ತೆಂದಿಗೂ ತಲೆಯೆತ್ತದಂತಾಗಿ ಅಲ್ಲಿಂದ ಅಲ್ಲಿನ ಜನ ಚೆದರಿಹೋದ ಘಟನೆಗೂ ಏನಾದರೂ ಅಂತಹ ಸಂಬಂಧ ಇದ್ದಿತೆ ಎಂಬುದು ಇತಿಹಾಸಜ್ಞರ ಕುತೂಹಲವನ್ನು ಸೆಳೆಯದಿರದು.

ಆಧಾರಾದಿ ಷಟ್ಚಕ್ರಗಳಲಿ ಕ್ರಮವಾಗಿ ಆಯಾ ದೇವತೆಗಳಾದ ಭವ, ಮೃಡ, ರುದ್ರ, ಈಶ್ವರ, ಸದಾಶಿವ ಮತ್ತು ಪರಶಿವರ ಸ್ವಾಯತವು ವ್ಯೋಮ- ವ್ಯೋಮವ ಕೂಡಿದಂತೆ, ಆ ಚಕ್ರ ಮತ್ತು ದೇವತೆಗಳು ಉಭಯವೂ

CC-0. Jangamwadi Math Collection. Digitized by eGangotri

ಲಿಂಗಸ್ವರೂಪವಾಗಿರಲು, ಆ ಬಯಲತತ್ತ್ವ ಏಕಾಖಂಡವೆಂದು ಅರಿತದ್ದಾಗಿದೆ. ಬಯಲಲ್ಲಿ ಹುಟ್ಟಿ, ಬಯಲಲ್ಲಿ ಬೆಳೆದು, ಬಯಲ ಲಿಂಗ (m.ಶರೀರ)-ವನೆ ಧರಿಸಿಕೊಂಡು, ಬಯಲ (ಇಷ್ಟಲಿಂಗವ)ನೆ ಆರಾಧಿಸಿ, ಬಯಲಾಗಿ(ಶಿವಜೀವೈಕ್ಯಗೊಂಡು) ಹೋಯಿತ್ತ ಕಂಡೆ ಗೋಹೇಶ್ವರಾ, ಎಂಬೀ ಅನುಭವ ಪ್ರಭುವಿನ ಜೀವನ್ಮುಕ್ತಾವಸ್ಥೆಯನ್ನು ಪ್ರಕಟಿಸುತ್ತದೆ. "ದೇಹದೊಳಗೆ ದೇವಾಲಯವಿದ್ದು ಮತ್ತೆಬೇರೆ ದೇಗುಲವೇಕಯ್ಯಾ? ಎರಡಕ್ಕೆ ಹೇಳಲಿಲ್ಲಯ್ಯಾ,ಗೋಗೇಶ್ವರಾ,ನೀನು ಕಲ್ಲಾದರೆ ನಾನೇನಪ್ಪೆನು?" ದೇವರು ದೇವಾಲಯದಲ್ಲಿರುವನು ಎಂದು ತಿಳಿವವರ ಬಗೆಗೆ "ಒಡಲುವಿಡಿದು ಪಾಷಾಣಕ್ಕೆ ಹಂಗಿಗರಾದಿರಲ್ಲಾ" ಎಂದು ಮರುಗಿದನು. "ಎತ್ತನೇರಿ ಎತ್ತನರಸುವರೆತ್ತ ಹೋದರೋ" ಎಂದೆನ್ನುತ್ತ ಮರೆತ ಮಾನವರನ್ನು "ಗೋಗೇಶ್ವರನೆಂಬ ಎತ್ತು ನಿಮ್ಮೊಳಗೈದಾನೆ, ಅರಸಿಕೊಳ್ಳಿರೋ" ಎಂದು ಪ್ರಭುವೆ ಎಚ್ಚರಿಸಿರುವುದನ್ನಿಲ್ಲಿ ಒಳಹೊರಗೆ ಕಣ್ಣಿರುವ ಎಲ್ಲರೂ ಕಾಣಬಹುದು."ಆತ್ಮೈವ ಚದ್ಘನತರಂ ಶಿವಲಿಂಗಮುಕ್ತಃ" ಎಂಬ ಸ್ವಾನುಭವ ಸತ್ಯಾರ್ಥ ಸಂದೇಶವನ್ನು ಸಾರಿ, ಆತ್ಮಧ್ಯಾನಾನು-ಸಂಧಾನದಿಂದ ತನ್ನ ತಾನಾಗುವ ಮಾರ್ಗವನ್ನು ಮನದಟ್ಟು ಮಾಡಿಕೊಟ್ಟ ಅಲ್ಲಮಪ್ರಭು "ಗೋಗೇಶ್ವರನೆಂಬ ಎತ್ತು" ನಿಮ್ಮೊಳಗೆ ಇದ್ದಾನೆ ಎಂಬ ಎಚ್ಚರದ ನುಡಿಯಲ್ಲಿ ಓದುಬಲ್ಲ ಎಲ್ಲರಿಗೂ ಆ ಪ್ರಭುವೇ ತಮ್ಮ ವಚನಗಳ ಅಂಕಿತ "ಗೋಹೇಶ್ವರ"ಗೋ + ಹ m.ರೂಪ, ಶಿವ ಎಂದರೆ ದ್ವಿತೀಯ ಶಂಭುಅರ್ಥಾತ್ ನಂದೀಶ್ವರಎಂದೋ, ಗೋ + ಗ(m. ಪ್ರೀತ)ನಾದ ವೃಷಭಾರೂಢ, ಎತ್ತನೇರಿದ ಶಿವ ಅಥವಾ ಬಯಲ ಸಿದ್ಧಾಂತದ ಸಾಕಾರಮೂರ್ತಿಯಾದ ಅಲ್ಲಮಪ್ರಭುವಿನ ಗಗನಪ್ರೀತನಾದ ಆಕಾಶಪ್ರಕಾಶಕ ಬಯಲುಗ ಶಿವ ಎಂದೋ ಅರ್ಥವಿದೆಯೇ ಹೊರತು, "ಗೋಹೇಶ್ವರ" ಪದದಲ್ಲಿನ ಗಕಾರ ಓಕಾರಾಂತವಾಗದ 'ಗೊಹೆ'ಎಂಬ ಪದವಾಗಲಿ, 'ಗುಹೆ'ಎಂಬ ಶಬ್ದವಾಗಲಿ, ಅವುಗಳ ಅರ್ಥವಾಗಲಿ, ಆ ಅಂಕಿತದಲ್ಲಿ ಇಲ್ಲ

CC-0. Jangamwadi Math Collection. Digitized by eGangotri

ವೆಂಬುದು ಅಂಗೈಯ್ಯ ನೆಲ್ಲಿಯ ಕಾಯಿಯಂತೆ ಸುಸ್ಪಷ್ಟಗೊಂಡ ವಿಷಯ. ಮೇಲೆ ಕಾಣಿಸಿರುವ ಎರಡು ಅಂಕಿತಗಳೂ ಮೂಲವಚನಕಾರನ ಮತ್ತು ಅಧಿಕೃತ ಲಿಪಿಕಾರನ ಪಾಠದ್ವಯಗಳಾಗಿ ಉದ್ದಿಷ್ಟ ಶಿವನೊಬ್ಬನನ್ನೇ ಕುರಿತಿವೆ. ಆ ಶಿವನು ವಹಿಸಿಕೊಂಡಿರುವ ಎರಡು ಕಾರ್ಯಭಾರಗಳನ್ನು ಹೊತ್ತ ಪಾತ್ರಗಳ ಅರ್ಥವನ್ನು ಆ ಅಂಕಿತಗಳು ಒಳಗೊಂಡಿವೆ. "ಗುಹೇಶ್ವರ"ಎಂಬ ಪಾಠ ಅನ್ಯರಿಂದ ತಿದ್ದಿದಪಾಠವೇ ಹೊರತು ಪ್ರಭುದೇವರ ಮೂಲಪಾಠವಂತೂ ಅಲ್ಲ. ಹಾಗೆ ತಿದ್ದಿರುವುದು ಗ್ರಂಥಸಂಪಾದನೆಯ ನಿಯಮಕ್ಕೆ ಆಗಿರುವ ಲೋಪವೆಂಬುದು ಸುವಿದಿತ. ಈ ಸಂದರ್ಭದಲ್ಲಿ 'ಕಾವ್ಯಮಂ ನಡಸುವಾತಂ ತಪ್ಪುಗಲ್ಲದೆ ಕಾವ್ಯಕರ್ತೃ ತಪ್ಪುಗುಮೆ' ಎಂಬ ಕವಿವಾಣಿಯ ಎಚ್ಚರಿಕೆಯ ಗಂಟೆಗೆ ಕಿವುಡಾಗದಿರೋಣ.

ಗೋಸಾಲಪ್ರತಿಪಾದಿತ ಶೂನ್ಯಧ್ಯಾನಪರಂಪರೆಯನ್ನೇ ಹೊಂದಿ ಬಯಲಮೂರ್ತಿಯಾದ ಅಲ್ಲಮನು"ಚಿದಾತ್ಮಲೀಲೆ ಯಿಂದೆಸೆವ ಮಹಾತ್ಮ"ನೆಂದು ಸ್ತುತ್ಯನಾಗಿದ್ದರೆ ಆತನ ಬಯಲ ತತ್ತ್ವದ ಮೂಲ ಸೆಲೆಯಾಗಿದ್ದ ಮಸ್ಕರಿಗೋಸಾಲನು "ಉನ್ಮತ್ತವೇಷಶರಣ"("ccentric ascetic"- m. ವಿಚಿತ್ರವಿರಕ್ತ, ಸ್ವಾನುಭಾವೋನ್ಮಾದಮಗ್ನ)ನಾಗಿದ್ದವನುಎಂಬುದು ಆ ಯುಗದ ಮಾತಾಗಿದ್ದ ಸಂಗತಿ. ಆಕಾಲದ ಜೈನರಲ್ಲಿ ಕೆಲವರು, ವೀರಶೈವ ರಲ್ಲಿ ಕೆಲವರು ಅಪ್ರಾವರಣದ ಆಚರಣೆಯುಳ್ಳವರಾಗಿದ್ದರು.ಈ ಆಚರಣೆ ವಿಚಿತ್ರ(m. linga-ಕಾಶಕ್ಕ .ಪು.೨೭೮" ಆಕಾಶತತ್ತ್ವದ ಬಹುವರ್ಣಾಕೃತಿ")ಎಂದರೆ"ಲಿಂಗ" ಪೂಜಾಚರಣೆಯ ಮೂಲವು ಳ್ಳದ್ದು ಎಂಬುದನ್ನು ಆಂಧ್ರದ ಪೊಡವಿಡಿಯ ಮಹಮೂರ್ತಿ ಯು ಲೋಕವಿದಿತವಾಗುವಂತೆ ಮಾಡಿರುವ ಪ್ರಕಟನೆ (ನೋ: ದಾಸೋಹಸಿರಿ ಪು. 218) ಶರಣಸಂಕುಲಕ್ಕೆ ಅವರ ಆಧ್ಯಾತ್ಮಿಕ ಆಚರಣೆಯ ಮೂಲಸ್ಥಾನ ಮಗಧದ ಆಜೀವಕರ ಶೂನ್ಯಧ್ಯಾನಾ-ನುಸಂಧಾನದ ಉಗಮ[illegible] ಎಂಬುದನ್ನು ದೃಢಪಡಿಸಿದ[illegible]ಸಕಲ ಜೀವರಿಗೆ ಲೇಸನೇ ಬಯಸುವ [illegible] ಆತ್ಮಲೋಕ [illegible]ದಲ್ಲಿ.

CC-0. Jangamwadi Math Collection. Digitized by eGangotri
LIBRARY
Jangamawadi Math, Varanasi
Acc. No.

ಅಷ್ಟಾವರಣದ ಗುರುಲಿಂಗ ಪ್ರಸಾದಗಳಲ್ಲಿ ಪ್ರಭುದೇವರ ಮನಸ್ಸು ಮಗ್ನವಾಗಿದ್ದಿತೆಂಬುದಕ್ಕೆ ನೋಡಿ:

"ಅಮೃತದ ಸಾಗರದೊಳಗಿರ್ದು ಆಕಳ ಚಿಂತೆಯೇಕೆ? ಮೇರುಮಂದಿರದೊಳಗಿರ್ದು ಜಲಗ ತೊಳೆವ ಚಿಂತೆಯೇಕೆ?

ಶ್ರೀಗುರುವಿನೊಳಗಿರ್ದು ತತ್ತ್ವವಿದ್ಯೆಯ ಚಿಂತೆಯೇಕೆ? ಪ್ರಸಾದದೊಳಗಿರ್ದು ಮುಕ್ತಿಯ ಚಿಂತೆಯೇಕೆ?

ಕರಸ್ಥಲದೊಳಗೆ ಲಿಂಗವಿದ್ದ ಬಳಿಕ ಮತ್ತಿನ್ನಾವ ಚಿಂತೆ? ಏಕೆ? ಹೇಳಾ, ಗೋಗೇಶ್ವರಾ."

ಹುಟ್ಟುತ್ತಿದ್ದಂತೆಯೇ ಲಿಂಗದಲ್ಲಿ ನಟ್ಟನೋಟದಿಂದ ಹಿಗ್ಗಿ ಕಣ್ತೆರೆದವನೆಂದೂ,ಆ ಶಿಶುವಿಗೆ ಹೆಸರಿಡುವ ಸಮಯದಲ್ಲಿ ಗೊಗ್ಗೇಶ್ವರಾಲಯದಿಂದ ತಂದೆತಾಯಂದಿರು ತಂದುಣಿಸಿದ ಬೆಣ್ಣೆಯನ್ನು ಸವಿದವನೆಂದೂ ಹರೀಶ್ವರನಿಂದ ಲೋಕಕ್ಕೆ ಅಲ್ಲಮಪ್ರಭು ಪರಿಚಿತನಾದವನು ಎಂಬುದು ಪ್ರಸಿದ್ಧವಾಗಿದೆ. ಕರಸ್ಥಲಲಿಂಗದಲ್ಲಿ ಗಟ್ಟಿಗೊಂಡ ನಿಜನಿಷ್ಠ ಲಿಂಗವಂತ, ಲಿಂಗಾಯತ ಆತ ಎಂಬುದು ಮೇಲಿನ ವಚನದಿಂದ ಸಹಜವಾಗಿ ವೇದ್ಯವಾಗುವ ಸಂಗತಿ. ಕರಸ್ಥಲದಲ್ಲಿ ಧರಿಸಿದ್ದುದು ಮಾತ್ರವಲ್ಲ, ಲಿಂಗವನ್ನು ಬಿಟ್ಟು ಬೇರೊಂದಿಲ್ಲವೆಂಬ ಲಿಂಗಾನುಸಂಧಾನೈಕ ಲಿಂಗಾಚಾರನಿಷ್ಠೆ ಆತನದು. ಆತನೇ ಹೇಳುವಂತೆ "ಲಿಂಗವನಱಿಯದೇನನಱಿತೂ ಫಲವಿಲ್ಲ. ಲಿಂಗವನಱಿದ ಬಳಿಕ ಮತ್ತೇನನಱಿತೂ ಫಲವಿಲ್ಲ. ಸರ್ವಕಾರಣಲಿಂಗವೆಂದುದಾಗಿ, ಆ ಲಿಂಗವನೆ ಅಱಿದಱಿದು ಲಿಂಗಸಂಗವ ಮಾಡುವೆ. ಆ ಸಂಗಸುಖದಲೋಲಾಡುವೆ, ಗೋಗೇಶ್ವರಾ (ಪ್ರ.ಗೀ. ವ. 19). ಹೀಗೆ ಲಿಂಗಸಂಗಸುಖಿಯಾದ ಅಲ್ಲಮಪ್ರಭುವಾದರೂ ಜೈನಶಾಸ್ತ್ರೋಕ್ತ "ಲಿಂಗಜೀವಿ ಆಜೀವಕ ಮತ"ನಿಷ್ಠೆಯುಳ್ಳಾತ ಪ್ರಭುವೆಂಬುದು ತಿಳಿದುಬರುತ್ತದೆ.

ರಾಜೋತ್ತಮನಾದ ಸೋಮರಾಜ ಕವಿಯಿಂದ "ಆರ್ಯರಾಟ್ "ಉ.ಕಾ.(೧-೧೧) ಎನ್ನಿಸಿದ್ದನೆ "ಆರ್ಯರು,"ಜಂಗಮ, ಗಣ ಎಂದು ಸ್ತುತ್ಯನಾದವನು ಪ್ರಭುದೇವ. ಆ ತನ್ನ ಗುರೂತ್ತಮ

CC-0. Jangamwadi Math Collection. Digitized by eGangotri

ನಿಗೆ ಸೋಮರಾಜನು ತನ್ನ ಉದ್ಭಟಕಾವ್ಯ (ಕ್ರಿಶ.1222)ವನ್ನು ಭಕ್ತಿಭರದ ನಮ್ರಭಾವದಿಂದ ಸಮರ್ಪಿಸಿರುವ ಮಹತ್ತ್ವದ ಘಟನೆಯನ್ನು ಸ್ಮರಿಸುವ ಸೌಜನ್ಯ ನಮ್ಮದಾಗಬೇಕು. ಏಕೆಂದರೆ ರಾಜನ ಮನ್ನಣೆ, ಆತನ ಭಕ್ತಮಾತ್ರವಲ್ಲದೆ "ಸಕಲಸಮಯ ಪ್ರೀತ"ನೆಂದು ಪ್ರಭುದೇವ ಕೀರ್ತಿಗೊಂಡದ್ದು ಜನಜನಿತ ವಾಗಿದ್ದುದಕ್ಕೆ ನಿದರ್ಶನಗಳಿಲ್ಲದಿಲ್ಲ. ಶೈವ, ವೈಷ್ಣವ, ವೈದಿಕ ಮತ್ತು ಜೈನ ಈ ಎಲ್ಲ ಧರ್ಮಗಳ ಸಮರಸಸಂಗಮವಾದ ನಿಜಲಿಂಗಕ್ಷೇತ್ರನೇ ಪ್ರಭುವೆಂಬುದು ಇದರಿಂದ ಸುವ್ಯಕ್ತ. "ನಿಶ್ಶೂನ್ಯಲಿಂಗ"ವನ್ನು "ಶೂನ್ಯ"ನಾಗಿ ತನ್ನನ್ನು ಅರಿಯದ ಜಗತ್ತಿಗೋಸ್ಕರ ಎರಡೆಂಬತ್ತು/ ಎಂಬತ್ತು ಕೋಟಿವಚನಗಳಲ್ಲಿ ಹಾಡಿ ಮರ್ತ್ಯಲೋಕದ ಮಾನವರ ಮನದ ಕತ್ತಲೆಯನ್ನು ಕಳೆದು ಅವರಿಗೆ ಜೀವನ್ಮುಕ್ತಮಾರ್ಗವನ್ನು ತೋರಿದವನು, "ಭಕ್ತಕಾರಣ ಪ್ರಭುವೆಂಬ ಜಂಗಮನಾಗಿ."

ಕಾಮಾದಿ ಅರಿಷಡ್ವರ್ಗಗಳನ್ನು ಪ್ರತಿಜ್ಞಾಪೂರ್ವಕ ಧ್ವಂಸಮಾಡಿ, ಪಂಚಾಸ್ತ್ರಗಳಲ್ಲಿ ಒಂದಾದ "ಪಂಚಾಗ ಸನ್ಮಂತ್ರ"(ಪಂಚ+ ಆಗಸ+ ಸನ್ಮಂತ್ರ)ವನ್ನು ಎಂದರೆ ವ್ಯೋಮಾಸ್ತ್ರಮಂತ್ರಸಿದ್ಧಿಯನ್ನು ಪಡೆದಿದ್ದಾತನೆಂದು ಪ್ರಭುವನ್ನು ಷಡಕ್ಷರದೇವನು ಕೊಂಡಾಡಿರುವುದು ಆತನ ನಿರ್ದೇಹ, ನಿರಾಕಾರ ಶೂನ್ಯಸ್ವರೂಪವನ್ನು ಮನಗಂಡು ನುಡಿದ ನಿಜಾನುಭವದ ನಿರೂಪಣೆಯಾಗಿದೆ. ಆ ಅಲ್ಲಮವಿಭುವನ್ನು "ಎಮ್ಮಾಳ್ದನ್"(ಅಲ್ಲತೀತಿ ಆಳ್ದಪನೆಂಬುದು"-ಕಾಶಕ್ಯ, ಪು.೪೨) ಎಂದು ಸ್ಮರಿಸುತ್ತ ಆ ಪ್ರಭು ತಮಗೆ ವಿರತಿಶ್ರೀಯವನ್ನು ಅನುಗ್ರಹಿಸಲೆಂದು ಕೋರಿರುವ ಬಗೆಯನ್ನು ಕಂಡ ಯಾರಿಗಾದರೂ ಆ ಪ್ರಭುದೇವರ ಆತ್ಮಸಿದ್ಧಿಯ ಮಹೋನ್ನತ ಮಹಿಮಾ ಮಯ ಶುದ್ಧಚಾರಿತ್ರದ ವೀರವೈರಾಗ್ಯದ ಅದ್ಭುತದ ಅರಿವಾಗದಿರದು. "ಪ್ರಭುದೇವರ ನಿರಾಳವ ಕಂಡು ಬದುಕಿದೆನು ಕಾಣಾ, ನಿಜಗುರು ಶಂಕರದೇವಾ" ಎಂದು ಮನಬಿಚ್ಚ ಮಾತನಾಡಿದ ಶಂಕರದಾಸಿಮಯ್ಯಗಳ ಮೇಲೆ ಅಲ್ಲಮಪ್ರಭುವಿನ

CC-0. Jangamwadi Math Collection. Digitized by eGangotri

ಬಯಲಭಾವನೆಯ ಪ್ರಭಾವವೆಷ್ಟಿತ್ತು ಎಂಬುದು ಸ್ವಯಂವೇದ್ಯ. ಚನ್ನಸಂಗಯ್ಯನನ್ನಾದರೂ ಬಿಟ್ಟೇನು, ಪ್ರಭುದೇವರ ಪಾದವ ಬಿಡೆನೆಂದು ಪ್ರತಿಜ್ಞೆ ತೊಟ್ಟ ಚನ್ನಬಸವಣ್ಣನವರಂತಹ ಪರಮಜ್ಞಾನಿಗಳೂ ಇದ್ದರೆಂಬ ಸಂಗತಿ ನಟ್ಟಕಲ್ಲೆನಿಸದೆ ಸುಳಿವ ಶಾಸನವಾಗಿತ್ತು. ಕವಿ ಸೋಮರಾಜ, ಶಿವಕವಿ ಹರೀಶ್ವರರೇ ಮೊದಲಾದ ಕನ್ನಡನಾಡಿನ ಕವಿಪುಂಗವರಿಂದ ಸ್ತುತ್ಯನಾಯೂ ಸಕಲಸಮಯದವರ ಗೌರವಾದರಗಳಿಂದ ಲೋಕಪೂಜ್ಯನೆಂದು ಖ್ಯಾತನಾಮನಾಗಿದ್ದರೂ ದೇವಲೋಕದ ಕೆಲವರು ಅವರನ್ನು "ದೇವಲೋಕ ಮರ್ತ್ಯಲೋಕಕ್ಕೆ ಹೊಱಗು" ಎಂದುದಕ್ಕೆ ಕನಿಸುದೋರದೆ ನಗುನಗುತ್ತಲೆ ಅವರನ್ನು ಸದ್ಭಕ್ತರೆಂದು ಗಣಿಸಿ, "ದೇವಲೋಕದ ಗಣಂಗಳೆಲ್ಲ ಎನ್ನ ಹೊಱಗೆಂಬರು, ಅದು ದಿಟವೆ, ಹದಿನಾಲ್ಕು ಭುವನದೊಳಗೆ ಅವರು ತಾವಿರಲಿ, ನಾ ನಿಮ್ಮೊಳಗು, ಗೋಗೇಶ್ವರಾ." ಎಂದು ಹೇಳುವಲ್ಲಿ ಲೋಕ ಜೀವನದ ಲಾಲಸೆಯಲ್ಲಿ ಆ ಸದ್ಭಕ್ತರು ಮುಳುಗಿರಲಿ, ಆದರೆ ತಮಗೆ ಮಾತ್ರ ಜೀವನ್ಮುಕ್ತಾವಸ್ಥೆಯ ಶಿವಸುಖ-ತನ್ಮಯ ಭಾವಜೀವನವಿರಲಿ ಎಂಬ ಮಹದಾಶಯವನ್ನು ಪ್ರಕಟಿಸಿದ್ದಾರೆ.

"ಅಯ್ಯಾ, ಸಾತ್ವಿಕಶರಣರ ನುಡಿ ಹುಸಿಯೆ? ಅದು ದಿಟ, ಅದುದಿಟ. ಒಳಗೆಂಬುದೇ ದೇವಲೋಕ, ಹೊಱಗೆಂಬುದೇ ಮರ್ತ್ಯಲೋಕ. ಈ ಎರಡು ಲೋಕದೊಳಗೆಯು ತಾವೆ ಇರಲಿ, ನಾ ನಿಮ್ಮೊಳಗು, ಗೋಹೇಶ್ವರಾ" ಎಂದು ಪ್ರಭುದೇವರು ತಮ್ಮ ಇರವು ಇಹಪರವ ಮೀರಿದುದೆಂಬುದನ್ನು ಮಾರ್ಮಿಕವಾಗಿ ಮನ-ಮುಟ್ಟುವಂತೆ ತಿಳಿಸಿರುವರು. ಅವರನ್ನು ಇಲ್ಲಸಲ್ಲದ ಮಾತುಗಳಿಂದ ಅಲ್ಲಗಳೆವವರಿದ್ದಂತೆ "ಅಲ್ಲಮನನಂತಿಂತೆಂಬರ ಗಂಡ"ನೆಂಬ ಬಿರುದಿನಿಂದ ಕೂಡಿ ಕೊಂಡಾಡುತ್ತಿದ್ದ ಗಟ್ಟಿವಾಳನಂತಹ ಶರಣರೂ ಆ ಕಾಲದಲ್ಲಿಯೇ ಇದ್ದರೆಂಬುದೂ ನಮಗೆ ತಿಳಿದಿರಬೇಕಾದ ಸತ್ಯಸಂಗತಿ.

ಈಗ್ಗೆ ನಾಲ್ಕುನೂರು ವರ್ಷಗಳಿಗೂ ಹಿಂದೆ ಪಂಚವಣ್ಣಿಗೆಯ ಶಾಖಕ್ಕೆ ಸೇರಿದ ಬೆಳಗಾಂ ಜಿಲ್ಲೆಯ ಹೂಲಿಯ

CC-0. Jangamwadi Math Collection. Digitized by eGangotri

ಗುರುಮಠದ ಸಿದ್ಧನಂಜೇಶನ (ಸು. ಕ್ರಿ. ಶ. 1600) ಬಸವಶತಕ (ಪದ್ಯ ೩೩)ದಲ್ಲಿ"ಸದ್ಭಕ್ತಮುಕ್ತಿಯು ತನ್ನ ವಶವೆನಿಸಿ ಭೂಭಾಗದಿ ಸೊಗಯಿಸುವ ಪ್ರಭು" ಎಂದು ಸ್ತುತಿಸಿರುವುದನ್ನು ಗಮನಿಸಬಹುದು. ಆ ಪ್ರಭುವಿನ ಶಿವಯೋಗಮಾರ್ಗದ ಸ್ವರೂಪವನ್ನು ಕವಿ ಭಾವಿಸಿರುವ ಬಗೆಯಿದು:-

ಸಂಸಾರದೋಷಗಳಿಗೆ ಮೂಲಕಾರಣವಾಗಿ ಒಂದ-ಕ್ಕೊಂದು ಸಮವಿಲ್ಲದೆ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳಿಂದ ಹಗರಣ ಮಾಡುವ ಪಂಚೇಂದ್ರಿಯ ಗಳನ್ನು ನಿಗ್ರಹಿಸಿ, ಆ ತನುಮನಗಳ ಗುಣಗಳನ್ನು ಮೆಟ್ಟಿ ನಿಂತ ವೀರವೈರಾಗ್ಯಮೂರ್ತಿ ಪ್ರಭುವೆಂದು ಕವಿ ಸಾರಿದ್ದಾನೆ. ಸೂರ್ಯಚಂದ್ರ ನಾಡಿಗಳಲ್ಲಿ ಸೂರ್ಯನಾಡಿಯ ರೇಚಕಕ್ರಿಯೆ ಯನ್ನು ಬಂಧಿಸುತ್ತ, ಮೃಗಧರನ ಎಂದರೆ ಸಹಸ್ರಾರ ಮಂಡಲದ ಆ ಚಂದ್ರಬಿಂಬವನ್ನು ದರ್ಶನಮಾಡಿ ಸುಷುಮ್ನಾನಾಳ ಅರ್ಥಾತ್ ಕುಂಡಲಿನೀನಾಡೀ ರಂಧ್ರಾಂತದ ಆ ಶೇಷ-ದಾಸೋಹವೆನಿಸಿದ ಪರಶಿವಬ್ರಹ್ಮಾನಂದಾಮೃತರಸದಲ್ಲಿ ತಲ್ಲೀನನಾದ ಅಲ್ಲಮಪ್ರಭು ಸದ್ಭಕ್ತಮುಕ್ತಸುಖಸಾಕಾರ ನಾಗಿದ್ದಾತನು ಎಂದು ಸಿದ್ಧನಂಜೇಶ ಮನಗಂಡಿದ್ದಾನೆ. ಈ ಸಂದರ್ಭದಲ್ಲಿ ನಾವು ಮನಗಾಣಬೇಕಾದ ಒಂದಂಶವೆಂದರೆ ಗುರುಪೀಠದ ಆಚಾರ್ಯರು ಶೂನ್ಯಸಿಂಹಾಸನಾಧೀಶ್ವರರೂ ಶರಣಗಣಸಂಪ್ರದಾಯದ ವಿರಕ್ತಪೀಠದ ಆದ್ಯಕರ್ತರೂ ಆದ ಅಲ್ಲಮಪ್ರಭುವಿನ ಬಗೆಗೆ ಅಪಾರ ಗೌರವವನ್ನು ತೋರಿಸಿರುವರು ಎಂಬುದು. ಇದು ಗುರು-ವಿರಕ್ತರ ಸಾಮರಸ್ಯದ ದ್ಯೋತಕ.

ಹರದನಹಳ್ಳಿ ಶೂನ್ಯಸಿಂಹಾಸನದ ಗೋಸಲಸಿದ್ಧೇಶ್ವರ ಗುರುಪರಂಪರೆಗೆ ಸೇರಿದ ತೋಂಟದ ಸಿದ್ಧಲಿಂಗೇಶ್ವರರ ಶಿಷ್ಯರಲ್ಲಿ ಒಬ್ಬರಾದ ಸ್ವತಂತ್ರಸಿದ್ಧಲಿಂಗೇಶ್ವರರು(ಕ್ರಿ.ಶ.ಸು. 1480) ನಿರ್ವಯಲ ರಸಭರಿತದಾರೋಗಣೆಯ ಮಾಡಿ ನಿರ್ವಯಲಾದ "ಪ್ರಭುದೇವರಾರೋಗಿಸಿ ಮಿಕ್ಕಪ್ರಸಾದವ ಬಸವಣ್ಣ ಮೊದಲಾದ ಅಸಂಖ್ಯಾತ ಗಣಂಗಳು ಸ್ವೀಕರಿಸಿದರಾಗಿ ಶಿವನೊಳಗಾದರು" ಎಂದು ಪ್ರಭುವಿನ ಮಹಿಮೆಯನ್ನು ಕೊಂಡಾಡಿದ್ದಾರೆ.

CC-0. Jangamwadi Math Collection. Digitized by eGangotri

ಅವರು ಗೋಸಾಲಪ್ರವರ್ತಿತ ಆಜೀವಶಿವಧರ್ಮದ ಶೂನ್ಯಧ್ಯಾನಾನಂದ ತನ್ಮಯರಾಗಿ ಶಿವಸುಖರಾಶಿಯಾದ ಚೇತನರಾಗಿದ್ದರೆಂಬುದನ್ನು ಅವರ ಮುಂದಿನ ವಚನದಲ್ಲಿ ಕಾಣಬಹುದು:

"ಶಿವಧ್ಯಾನದ ಕಡೆಯಲ್ಲಿ ಒಪ್ಪಿ ತೋರುವ ಸಂವಿತ್ತಿನ ತೃಪ್ತಿಯಿಂದ ತನ್ನ ಮರೆದ ಶರಣನು ಪರಮಪ್ರಕಾಶರೂಪನಾದ ಶಿವನ ಕೂಡಿ, ಸರ್ವಜೀವರ ಹೃದಯದಲ್ಲಿದ್ದು, ಅವಕ್ಕೆ ಅರುಹಿಸಿಕೊಡುತ್ತಾ ಎಲ್ಲಾ ಕಡೆಯಲ್ಲಿ ಸುಖರಾಶಿಯಾದ ಚೈತನ್ಯಸ್ವರೂಪ ಪರಬ್ರಹ್ಮವೇ ತಾನಾಗಿಹನು, ಸ್ವತಂತ್ರ ಸಿದ್ಧಲಿಂಗೇಶ್ವರನ ಶರಣನು"॥ ೬೨॥ಶರಣಸ್ಥಲ॥

ಕರಸ್ಥಲಲಿಂಗವೇ ಬಯಲು ಆ ಬಯಲೇ ತಾನೆಂದರಿದು 'ಜೀವ'ನು ಆ ಲಿಂಗವೆಂಬ ಬಯಲೊಳಗೆ ಬಯಲಾಗುವನು ಎಂದು ವಿವರಿಸುವ ಬಗೆಯಲ್ಲಿ ಗೋಸಾಲನು ಬೋಧಿಸಿದ ಶೂನ್ಯಧ್ಯಾನಕ್ಕೆ ಮೂಲಸಾಧನವಾದ ಇಷ್ಟಲಿಂಗವು ಐಕ್ಯಸ್ಥಲದ ಶೂನ್ಯವೇ ಆಗಿರುವುದನ್ನು ಈ ವಚನ ಪ್ರಕಟಿಸಿದೆ:

"ಬಯಲಲ್ಲಿ ಹುಟ್ಟಿದ ಶಿಶುವಿಂಗೆ ಬಯಲ ತಾಯಿ ಬಂದು ಮೊಲೆ ಕೊಟ್ಟರೆ ಬಯಲಮೃತವನುಂಡು ತೃಪ್ತಿಯಾಗಿ ಬಯಲು ಸ್ವಯವೆಂದರಿದು ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ ನೆಂಬ ಬಯಲೊಳಗೆ ಬಯಲಾಯಿತ್ತು ನೋಡಾ!॥೬೧೩॥

ಆರುಹಿರಿಯರನ್ನು ಕುರಿತ ಐತಿಹಾಸಿಕ ಮಹತ್ವದ ಸಂಗತಿಗಳನ್ನು ಅವರ ಅಂಶೀಭೂತರಾದ ಗಣಂಗಳು ಅರಿಯ ಲೆಂದೇ ಪ್ರಭುದೇವರು ಹಾಗು ಚನ್ನಬಸವಣ್ಣನವರು ತಮ್ಮ ವಚನಗಳಲ್ಲಿ ಗೋಪ್ಯವಾಗಿರಿಸಿದ್ದರು. ಆ ವಚನಗಳಿಗೆ ಯಾರೂ ವ್ಯಾಖ್ಯಾನ ಮಾಡದಿದ್ದ ಕಾರಣ ಆ ಸತ್ಯಾಂಶವು ಗೂಢವಾಗಿಯೇ ಅಡಗಿಹೋದುದನ್ನು ಮನಗಂಡೋ ಏನೋ ಸ್ವತಂತ್ರ ಸಿದ್ಧಲಿಂಗೇಶ್ವರರು ತಮ್ಮ ವಂಶೀಭೂತ ಗಣಂಗಳು ಅರಿದು ಆನಂದಿಸಲೆಂಬ ಉದ್ದೇಶದಿಂದ ತಮ್ಮ ನಿಜಾನುಭಾವದ ಗೋಪ್ಯವಚನಗಳಿಗೆ ತಾವೇ ಕನ್ನಡದಲ್ಲಿ ವ್ಯಾಖ್ಯಾನವನ್ನು

CC-0. Jangamwadi Math Collection. Digitized by eGangotri

ಮಾಡಿದುದಾಗಿ ತಮ್ಮ ಮುಕ್ಯಂಗನೆಯ ಕಂಠಮಾಲೆಯಲ್ಲಿ ತಿಳಿಸಿರುವುದನ್ನು ಗಮನಿಸಬಹುದು. ಗೋಪ್ಯವಚನರಚನೆ ಬೆಡಗಿನ ವಚನಗಳೆಂಬ ಹೆಸರಿನಿಂದ ಮೊದಲಿನಿಂದಲೂ ಇದ್ದುದು11-12ನೆಯ ಶತಮಾನದ ಶರಣರ ವಚನಗಳಲ್ಲಿಯಲ್ಲದೆ ಕ್ರಿ.ಪೂ. 6ನೆಯ ಶತಮಾನದಲ್ಲಿ ಗಣಚಾರ್ಯ ಗೋಸಾಲನ ನುಡಿಯಲ್ಲಿಯೂ ಒಡಮೂಡಿದ್ದುದರ ವಿವರಕ್ಕೆ ಪ್ರಭುಗೀತೆಯ ಕನ್ನಡಪೀಠಿಕೆಯ(ಪು. 43ರ) ಉಲ್ಲೇಖದಲ್ಲಿ ಕಾಣಬಹುದು.

"ಗೋಗೇಶ್ವರನೆಂಬುದು ಹೆಸರಿಲ್ಲದ ಬಯಲು," ಎಂದೂ ಆ ಲಿಂಗವು ಶಕ್ತಿಗೊಳಗಾಯಿತ್ತಾಗಿ "ಬಚ್ಚ ಬಯಲೆಂಬುದಕ್ಕೆ ಉಪಮಾನವಿಲ್ಲ"ವೆಂದು ಪ್ರಭುದೇವರು ನಿಶ್ಶೂನ್ಯ ಇಲ್ಲವೆ ನಿರ್ಬಯಲನ್ನು ಬಚ್ಚಬಯಲು ಎಂದು ಹೇಳಿ ಹೋಲಿಸಲು ಅದಕ್ಕೆ ಸದೃಶವಾದುದು ಮತ್ತೊಂದಿಲ್ಲವಾದ ಕಾರಣ ಅದರ ಅನುಭವವನ್ನು ಅಂತಿಂತೆಂದು ಉಸುರುವಂತಿಲ್ಲವೆಂಬುದನ್ನು ಸ್ಪಷ್ಟಪಡಿಸಿದ್ದಾರೆ.

"ಬಟ್ಟ ಬಯಲ ಮಹಾಮನೆಯೊಳಗೊಂದು ಹುಟ್ಟದ ಹೊಂದದ ಶಿಶುವ ಕಂಡೆ. ಮುಟ್ಟಿ ಪೂಜಿಸಹೋದರೆ ನೆಟ್ಟನೆ ಆ ಶಿಶು ತನುವ ನುಂಗಿತ್ತು. ಮುಟ್ಟಲಿಲ್ಲ, ನೋಡಲಿಲ್ಲ. ಪೂಜೆಗೆ ಕಟ್ಟಳೆ ಮುನ್ನಿಲ್ಲ., ಗೋಗೇಶ್ವರ ಬಯಲು" (ಸ.ಪು.ವ. ೩೭)

ಬಟ್ಟಬಯಲ ಮಹಾಮನೆಯಾದ ಎಂದರೆ "ಆಬ್ರಹ್ಮ ಭವನ"ವೇ ಆದ, ಎಂದರೆ "ಬಯಲು ಬಲಿದೊಂದು ಬಿಂದು -ವಾದ" ನಿಜಚೈತನ್ಯಚೇತನನನ್ನು ಕಂಡು ಆ ಅಂತರಾತ್ಮನ ಘನತೇಜಸ್ಸು ತನುವನಾವರಿಸಿರಲು, ತಾನ ತನುವೆಂಟರವನಾದ ಬಳಿಕ ಇದಿರಿಟ್ಟು, ಮುಟ್ಟಿ, ಪೂಜಿಸಲು ಎಡೆಯಾದರೂ ಉಂಟೆ? ಪೂಜಿಸುವ ನಿಯಮಾಚರಣೆಯಂತೂ ಮೊದಲೇ ಇಲ್ಲವಷ್ಟೆ. ತನ್ನತಾನಾದ ಈ ಪರಿಯೇ ಬಯಲನಿಲವು ಎಂದು ಬಯಲ-ಸ್ವಸ್ವರೂಪಾನುಭವವನ್ನು ಪ್ರಭುವಿನ ಮೇಲಣ ವಚನ ಚಿತ್ರಿಸುತ್ತದೆ. ವಚನಸಾಹಿತ್ಯದ ಸಮಾಧಿಭಾಷೆಯ ಈ ಸತ್ಯಶೋಧನೆ ಭೌತವಿಜ್ಞಾನವಸ್ತುಸತ್ಯದೊಡನೆ ಸಮವಾಯ

CC-0. Jangamwadi Math Collection. Digitized by eGangotri

ಸಂಬಂಧವನ್ನು ಹೊಂದಿ ಆತ್ಮಾವಿಷ್ಕಾರದ ವಿಜ್ಞಾನ ಇಲ್ಲವೆ ಆತ್ಮವಿದ್ಯೆಯೆನಿಸಿ ವಾದವಿವಾದಕ್ಕೆಡೆಗೊಡದ ವಿಶ್ವಾತ್ಮತತ್ತ್ವದ ಗಾಢ ಚಿಂತನೆಯಿದು. "ಸಿಲುಕತ್ತು ಶೂನ್ಯದೊಳಗೆ ಗೋಗೇಶ್ವರ ನಿರಾಳ"ವೆಂಬ ಅನುಭಾವದನುವಿನ ನುಡಿಯಲ್ಲಿ ಬಯಲ ತತ್ತ್ವವೇ ಲಿಂಗತತ್ತ್ವವೆಂದು ಸಾರಿರುವುದನ್ನು ಕಾಣುತ್ತೇವೆ.

ಲಿಂಗತತ್ತ್ವ ಯಾವುದೋ ಒಂದು ಜನವರ್ಗಕ್ಕೆ ಮಾತ್ರ ವೇದ್ಯವಾಗವ ಅನುಭವವಲ್ಲ. ಇಡೀ ಸಮಸ್ತ ಜಗತ್ತಿನ ಅನುಭಾವಿಗಳ ಅಂತರಂಗದ ಐಶ್ವರ್ಯ ಅದು; ಆ ಆಕಾಶ ಪ್ರಕಾಶ ಎಲ್ಲರ ಸ್ವತ್ತು. ತಮ್ಮೊಳಗಣ ಈ ಬಯಲಬೆಳಗನ್ನು ತಾವೇ ಅಂತರ್ಮುಖಿಗಳಾಗಿ ತನ್ಮಯತೆಯಿಂದ ತಮ್ಮಲ್ಲಿ ಕಾಣಬೇಕಲ್ಲದೆ ಗುಡಿಗುಂಡಾರಗಳ ಬಹಿರ್ಮುಖವಾದ ಸಂಸ್ಕೃತಿಯ ಹಾದಿಯಲ್ಲಲ್ಲ. ಈ ಹಿಂದೆ ಅಲ್ಲಮಪ್ರಭುವೆ ತಮ್ಮದೇಹದಲ್ಲಿಯೇ ದೇಗುಲವನ್ನು ಕಂಡುಕೊಳ್ಳಬೇಕು; ಬೇರೊಂದು ಕಡೆಯಲ್ಲಲ್ಲ ಎಂದುಸ್ಪಷ್ಟಪಡಿಸಿದ್ದಾರೆ. ಬಸವಣ್ಣನವರೂ ಈ ಅಭಿಪ್ರಾಯವನ್ನು ತಮ್ಮದೇ ಆದ ಸೌಜನ್ಯದಿಂದ"ಉಳ್ಳವರು ಶಿವಾಲಯವ ಮಾಡುವರು ನಾನೇನು ಮಾಡುವೆ ಬಡವನಯ್ಯ" ಎಂದು, ಮಾರ್ಮಿಕವಾಗಿ ನನ್ನ ದೇಹವೇ ದೇಗುಲವೆಂದುಹೇಳಿ, ದೇಗುಲ ಸಿರಿವಂತರ ಧನಬಲದ ಸಂಕೇತವೆಂದು ಮೆಚ್ಚುವಂತಿದ್ದರೂ, ಆ ಭಾಗ್ಯಶಾಲಿಗಳು ತಮ್ಮ ಅಂತರಂಗದ ಕದವನ್ನು ತೆರೆದು ಅಲ್ಲಿ ಬೆಳಗುವ ಆತ್ಮೈಶ್ವರ್ಯದ ಜ್ಯೋತಿರ್ಲಿಂಗವನ್ನು ಕಾಣುವ ಭಾಗ್ಯದಿಂದ ವಂಚಿತರು; ಮಾತ್ರವಲ್ಲ, ತಾವು ಗಳಿಸಿದ ಐಶ್ವರ್ಯವನ್ನು ಎಂದಾದರೂ ಒಂದುದಿನ ಅಳಿದು ಹೋಗುವ ದೇವಾಲಯದ ಭವ್ಯ ಕಟ್ಟಡದಲ್ಲಿ ಕಂಡುಮೈಮರೆವ ಅವರ ಹೆಮ್ಮೆಯನ್ನು ಮಾರ್ಮಿಕ ವಾಗಿ ಮನಗಾಣಿಸುವಂತಿದೆ. ಇಷ್ಟಲಿಂಗ ನಿಷ್ಠೆಯ ಏಕೋ ಭಾವದ ಬಯಲತತ್ತ್ವಶಾಸ್ತ್ರ ಮತ್ತು ಆಚರಣೆ ಆಜೀವಕ ಮತದಲ್ಲಿ ಪ್ರತ್ಯೇಕವಾದುವುಗಳಲ್ಲ ಎಂಬುದನ್ನು ಜೈನಶಾಸ್ತ್ರ ಗ್ರಂಥಗಳೇ ಸಾರಿ ಮೆಚ್ಚಿರುವುದನ್ನು ಮರೆಯುವಂತಿಲ್ಲ. ನುಡಿ-ನಡೆ ಒಂದಾದ

CC-0. Jangamwadi Math Collection. Digitized by eGangotri

ನಿಲವನ್ನುಳ್ಳ ಲಿಂಗವಂತ ಧರ್ಮ ದೇಗುಲಸಂಸ್ಕೃತಿಗೆ ತಾತ್ತ್ವಿಕವಾಗಿ ವಿರೋಧಿ. ತನ್ನಲ್ಲಿ ಲೀನವಾಗಿರುವ ಅರ್ಥವನ್ನು, ಎಂದರೆ ಇದ್ದೂ ಇಲ್ಲದಂತಿರುವ ಬಯಲಮೂರ್ತಿಯಾದ ಆ = ಎಲ್ಲವನ್ನೂ ಒಳಕೊಳ್ಳುವ, ಜೀವ= ಪುರುಷನೇ ಆದ, ಪರವಸ್ತುವಿನ ಇರವಿನ ಅರಿವನ್ನು ತಂದುಕೊಡುವುದರಿಂದ "ಲಿಂಗ"ವೆಂದೆನಿಸಿ ಆ ಸರ್ವಕಾರಣ ಶೂನ್ಯತತ್ತ್ವವು ಶಾಸ್ತ್ರವಾಗಿ, ಆ ಲಿಂಗಧಾರಣೆಯೇ ಪ್ರಧಾನವಾದ ಆಚರಣೆಯಾಗಿ ಉಳ್ಳಮತವೇ ಲಿಂಗವಂತ, ಲಿಂಗಾಯತ, ವೀರಶೈವ ಮತವು; ಆತ್ಮದೊಳಗಣ ಅಣುಭಾವಿಗಳ ಅಂತಾರಾಷ್ಟ್ರೀಯ ಮತವು. ಅಪ್ಪುಬಲಿದು ಜಗಸಾಕಾರವಾದ ಪಂಚಭೂತಾತ್ಮಕ ದೇಹದ ಅಸ್ತಿತ್ವದ ಅವಧಿ ತನ್ನೊಳಗೆ ಆ ಪರವಸ್ತು ಇರುವತನಕ; ಆ ಚಜ್ಯೋತಿ ಬೆಳಗುವತನಕ ಎಂದ ಬಳಿಕ ಆ ಆಧ್ಯಾತ್ಮಿಕ 'ಜೀವ'ನ ಸ್ವಸ್ವರೂಪ ಜ್ಞಾನಸಾಧನೆಯೇ ಸಾರ್ಥಕಜೀವನದ ಗುರಿ. ನಮ್ಮ ಕಣ್ತೆರೆಯಿಸುವ ಶರಣರ ಬಾಳಿನ ಬೆಳಗು.

"ಆತ್ಮನೆ ಕಾರಣ ದೇಹ." "ಆ ದೇಹಕ್ಕೆ ಅಣುಮಾತ್ರ ದುಃಖವಿಲ್ಲದ ಸುಖವುಂಟು ನೋಡಾ, ಲಿಂಗಸಂಗಿಯಾದ ಕಾರಣ. ಲಿಂಗಸಂಗದಿಂದ ಅಖಂಡಸುಖಿ ತಾನಾಗಬೇಕಾದಡೆ ಪಿಂಡಾದಿ ಜ್ಞಾನಶೂನ್ಯಾಂತವಾದ ನೂರೊಂದು ಸ್ಥಳ ಕುಳವ ಕರತಳಾಮಳಕವಾಗಿ ತಿಳಿದು, ಮೇಲಾದ ಜ್ಞಾನಶೂನ್ಯಸ್ಥಲದಲ್ಲಿ ನಿಂದು, ಪಿಂಡಾದಿಜ್ಞಾನ ಗುರುಕುರುಣಂಗಳೆಂಬ ಮಾರ್ಗವು ತಪ್ಪದೆ, ನಡೆ ನುಡಿಸಂಪನ್ನರಾಗಿ ನಿಜಾಚರಣೆಯಲ್ಲಿ ನಿಂದು, ಆರುವೈರಿ, ಅಷ್ಟಮದ, ಸಪ್ತವ್ಯಸನವೆಂಬ ಮಾಯಾಪಾಶ-ಪರ್ವತಕ್ಕೆ ವಜ್ರಾಯುಧವಾಗಿ ನಿಂದರು ನಮ್ಮ ಶರಣ ಗಣಂಗಳು."(ಸವಸಂ.೨ ವ.೮೮೯) ತನ್ನ ತಾನಾಗಿದ್ದೇನೆಂಬ ಆ ಅರಿವೂ ಎಂದರೆ ತನುಭಾವದ ಅಹಂಭಾವವು ಬಯಲಾಗಿ ಹೋಗಿ ಷಟ್ಸ್ಥಲಾಂತರ್ಗತ ನೂರೊಂದು ಸ್ಥಲಾನುಭವದ ಚದ್ಗರ್ಭವನ್ನು ಹೊಕ್ಕ ಶರಣಮಾರ್ಗ ಬಲುಹಿಂದೆಯೇ ನೆಲೆಗೊಂಡಿದ್ದಿತು ಎಂಬ ಸಂಗತಿ ಪ್ರಭುದೇವರಿಂದ ಹೀಗೆ ದೃಢಪಟ್ಟಿದೆ.

CC-0. Jangamwadi Math Collection. Digitized by eGangotri

ಆತ್ಮವಿಕಾಸದ ಅರಿವು ಆಚರಣೆಗಳು ಎರಡೊಂದಾಗಿ ಜ್ಞಾನವೇಕ್ರಿಯೆ,ಕ್ರಿಯೆಯೇ ಜ್ಞಾನವಾಗಿ,ಶಿವನನ್ನು ಶರಣುವೊಕ್ಕ ಗಣಂಗಳ("ಗಣಃ- ಶಿವಶರಣಂ"(ಕಾಶಕೃ೨೪೨)ಜೀವನದ ಹಾಸು ಹೊಕ್ಕಾಗಿಹೋಗಿದ್ದುದನ್ನು ಮನಗಾಣಿಸುವ ವಚನವಿದು:

"ಸಾಗರದ ಉದಕದೊಳಗಣ ಕಚ್ಚನಂತೆ, ಸಸಿಯೊಳಗಣ ಫಲಪುಷ್ಪಗಳ ರುಚ-ಪರಿಮಳಗಳಂತೆ, ಮನದ ಮರೆಯ ಮಾತ ನೆನಹಿನಲ್ಲಿ ಅರಿದು ನಾಲಗೆಯಲ್ಲಿ ನುಡಿವಾಗಲಲ್ಲದೆ ಕಾಣಬಾರದು, ಕೇಳಬಾರದು. ಒಂದಂಗದೊಳಡಗಿದ ನೂರೊಂದರ ಪರಿ, ರಾಮನಾಥ"॥೩॥.

ಏಕಂ ಏಕವಾದ ಅವ್ಯಕ್ತ ಪರವಸ್ತು ರತ್ನದ ಮಣಿಗಳನ್ನು ಪವಣಿಸಿದ ದಾರದಂತೆ, ವಿಚಾರಮಾಡಿ ನೋಡಿದರೆ ತನುಗಳು ಬೇರೆ ಬೇರೆ, ಆತ್ಮನು ಒಬ್ಬನೆ. ಅಣುರೇಣು ಮಧ್ಯದಲ್ಲಿ ಗುಣಭರಿತನು ಆ ಪರಮಾತ್ಮನು ಎಂದು ಬೇರೊಂದೆಡೆ ಪರತತ್ತ್ವದ ಅಸ್ತಿತ್ವದ ಬಗೆಯನ್ನು ನಿರೂಪಿಸುತ್ತ ಮೇಲಿನ ವಚನದಲ್ಲಿ ವಿಶ್ವಚೈತನ್ಯಾತ್ಮನು ಪ್ರಕೃತಿಕಾಯದಲ್ಲಿ ಇದ್ದೂ ಇಲ್ಲದ ರೀತಿಯಲ್ಲಿ ಸನ್ನಿಹಿತನಾಗಿರುವುದನ್ನು ಉಪಮೆ, ದೃಷ್ಟಾಂತಗಳ ಮೂಲಕ ಮನದಟ್ಟಾಗುವ ಆಲಂಕಾರಿಕ ಭಾಷೆಯಿಂದ ವಿಶದೀಕರಿಸಿರುವುದನ್ನು ಗಮನಿಸಬಹುದು. ಸಾಗರದ ಉಪ್ಪುನೀರೊಳಗಣ ಕಚ್ಚನ್ನಾಗಲಿ(ಬಡಬಾನಲ) ಸಸಿಯೊಳಗಣ ಫಲಪುಷ್ಪಗಳ ರುಚ ಪರಿಮಳಗಳನ್ನಾಗಲಿ, ಮನದ ಮರೆಯಲ್ಲಿ ಅಡಗಿದ ಮಾತನ್ನಾಗಲಿ ನೆನಹಿನ ಅರಿವು ವಾಕ್ಶ್ರೀಯಲ್ಲಿ ನುಡಿವಾಗಲಲ್ಲದೆ ಕಾಣಬಾರದು; ಕೇಳಬಾರದು ಎಂದು ತಿಳಿಸಿಕೊಡುತ್ತ ಅದರ ಬಗೆಯನ್ನು "ಒಂದಂಗದೊಳಡಗಿದ ನೂರೊಂದರ ಪರಿ ರಾಮನಾಥ" ಎಂದು ತನ್ನ ಧ್ಯಾನಯೋಗದ ಬೆಡಗಿನ ನುಡಿಯಲ್ಲಿ ಆಧ್ಯಾತ್ಮಿಕ ಸತ್ಯವನ್ನೇ ಹೊರಗೆಡಹಿದ್ದಾನೆ. ಒಂದಂಗವೆಂಬುದು ಸರ್ವಾತ್ಮಕ ಅಖಂಡ ಪರವಸ್ತು.ಆ ಏಕಾತ್ಮನಲ್ಲಿ ಅಡಗಿದ ನೂರೊಂದಾದರೋ, ಆ ಅವ್ಯಕ್ತ ಪರಾತ್ಪರ ವಸ್ತುವಿನ ಪ್ರವೃತ್ತಿ(೪೪) ನಿವೃತ್ತಿ(೫೭)ರೂಪದ

CC-0. Jangamwadi Math Collection. Digitized by eGangotri

101 ಸ್ಥಲಾನುಭವದ ಜ್ಞಾನಶೂನ್ಯಸ್ಥಿತಿ. ಸೋऽಹಂಭಾವದ "ತಾನಾಗಿರ್ದೇನೆಂಬ ಜ್ಞಾನವು ಶೂನ್ಯವಾಗಿ ತಾನೆ ತನ್ನೊಳು ಮೃಮರ್ರ್ದೊರಗಿದ ನಿರಾಳ;" ನಿರೂಪ; ತನ್ನಲ್ಲಿ ತಾನೆ ತನ್ನ ತಾನಾದ ಏಕತ್ವದ ಬಚ್ಚಬಯಲ ನಿಲವು ಎಂಬುದನ್ನು ದೇವರ ದಾಸಿಮಾರ್ಯನ ವಚನ ದೃಢಪಡಿಸುತ್ತದೆ. ಈ ನಿತ್ಯ ನಿರಂಜನ ನಿರಾಕಾರ ಬಯಲತತ್ತ್ವದೊಳಗಡಗಿದ ವಸ್ತುವೆ ಶೂನ್ಯನಾಮ ಪರಶಿವಬ್ರಹ್ಮಘನಚೈತನ್ಯಕಾಯ. ಅದು "ಆಡಬಾರದ ಬಯಲು, ನೋಡಬಾರದ ಬಯಲು, ನುಡಿಯಬಾರದ ಬಯಲು, ಹಿಡಿಯ ಬಾರದ ಬಯಲು" ಎಂದು ಆ ವಚನಕಾರ ನಿರೂಪಿಸಿ ಅದರ ನಿಲವು ಗೂಢವಾದುದು ಎಂಬುದರ ಅರಿವನ್ನು ತಂದುಕೊಟ್ಟಿದ್ದಾನೆ. ಆತನ ಬಯಲ ಸ್ವಾನುಭವ ಬೋಧೆಯಾದರೂ ಸ್ವತಂತ್ರ ಕಾಯಕದ ಅನುಷ್ಠಾನದ ಅನುವಿನ ಆಚರಣೆಯಲ್ಲಿ ಅರ್ಥಾತ್ ಕ್ರಿಯಲ್ಲಿ ಸಿದ್ಧಿಸಿದೆ.

12ನೆಯ ಶತಮಾನದ ವಚನಕಾರರ ಸತ್ಯಶುದ್ಧ ಕಾಯಕ ತತ್ತ್ವದ ದೀಪಾಂಕುರಕ್ಕೆ ತಮ್ಮ ಆತ್ಮೋನ್ನತ್ಯದ ಘನತೆಯ ನವನೀತದ ಸ್ನೇಹಧಾರೆಯನ್ನೆರೆದು ಕಾಯಕಕ್ಕೆ ಆಧ್ಯಾತ್ಮಿಕತೆಯ ಸತ್ವವನ್ನಿತ್ತವರಲ್ಲಿ ಸದ್ಯಕ್ಕೆ ಜೇಡರ ದಾಸಿಮಯ್ಯನವರೆ ಮೊತ್ತ ಮೊದಲಿಗರೆಂಬುದು ಚರಿತ್ರಾರ್ಹವಾಗಿದೆ. ಜೀವನದ ಪರಮ ಪುರುಷಾರ್ಥವನ್ನು ಸಾಧಿಸುವ, ಈಗ್ಗೆ ಎಂಟುನೂರು ವರ್ಷಗಳಿಗಿಂತಲೂ ಬಲುಬಲು ಹಿಂದಿನ, ಈ ಕಾಯಕದ ಸಂದೇಶವು ಎಂದಿಗಿಂತಲೂ ಇಂದಿಗೆ, ಜಾಗತೀಕರಣದ ಆರ್ಥಿಕಶೋಷಣೆಯ ಹಾಗೂ ಪರಸಂಸ್ಕೃತಿಯ ಧಾಳಿಗೆ, ದಾಸ್ಯಕ್ಕೆಈಡುಮಾಡಿಕೊಂಡಿರುವ ಜನತೆಗೆ ಪ್ರಸ್ತುತವೆಂದು ಹೇಳಬೇಕಾಗಿಲ್ಲ. ಮಾನವಕುಲದ ಸಂಪತ್‌ಸಮೃದ್ಧಿಯ ಸುಖೀಸಮಾಜರಚನೆಯ ಸೂತ್ರಕಾರ ಮಾತ್ರನಲ್ಲ, ಸಮಾಜದ ಆತ್ಮಸಿದ್ಧಿಯ ಹಾದಿಯನ್ನು ತೋರಿಸಿ ಕೊಟ್ಟವನು ದಾರ್ಶನಿಕ ದಾಸಿಮಾರ್ಯನೆಂಬುದಕ್ಕೆ ನೋಡಿ:- "ಉಂಕಿಯ ನಿಗುಚಿ, ಸರಿಗೆಯ ಸಮಗೊಳಿಸಿ, ಸಮಗಾಲನಿಕ್ಕಿ, ಅಣಿಯೊಳು ಏಳ ಮೆಟ್ಟಿದೆ. ಹಿಡಿದ ಲಾಳಿಯ ಮುಳ್ಳು ಕಂಡಿಯ

CC-0. Jangamwadi Math Collection. Digitized by eGangotri

ನುಂಗಿತ್ತು. ಈ ಸೀರೆಯ ನೆಯ್ದುವ ನಾನೋ, ನೀನೋ ರಾಮನಾಥ!"

ಅಂಗಲಿಂಗದ ಸಮರಸಸಾಧನೆಯ ಏಕತ್ವದ್ಯೋತಕದನುಭಾವವೇ ಮೈದೋರಿರುವ ಶರಣರ ಬಗೆಯಿದು. ಪೂರ್ವಜರ ನಡೆದುಬಂದ ಕುಲಕಸುಬಿನೊಡನೆ ಸಾಗುತ್ತಬಂದ ನೂರೊಂದರ ಗಾಢವಾದ ಸ್ವಾನುಭವದ ರೋಚಕ ದೃಷ್ಟಾಂತವಿದು.

"ಅಕ್ಷಯ ಮುಚ್ಚದಲ್ಲಿ ಬಯಲು, ಬಿಟ್ಟಲ್ಲಿ ಒಡಲುಗೊಂಡಿತ್ತು."—ಇದು ಮಾದರ ಧೂಳಯ್ಯನ ಶೂನ್ಯದ ಅನುಭವವಾದರೆ, ಹಡಪದ ಅಪ್ಪಣ್ಣನಿಗೆ ಆ ಬಯಲು "ಇರದಿದ್ದರೆ ಅರಿವಿಂಗೆ ಆಶ್ರಯವೆಲ್ಲಿ? ಎಂದೆನಿಸಿದ ಉದ್ಗಾರದಲ್ಲಿ ಅರಿವೆ ಶೂನ್ಯಕ್ಕೆ ಒಡಲು ಎಂಬ ತತ್ತ್ವಜ್ಞಾನದ ನಿರೂಪಣೆಯಿದೆ. ''ಮುಟ್ಟಬಾರದ ಠಾವ ಮಱುಗೊಂಡಿಪ್ಪ ಮಮ ಕರ್ತ ಕೂಡಲ ಸಂಗಮದೇವ" (ಬ.ವ.೯೪೮) ಎಂಬ ಬಸವಣ್ಣನವರ ನುಡಿಯಲ್ಲಿ ಬಯಲ ಮರೆಯಲ್ಲಿ ಶಿವನಿದ್ದಾನೆಂಬುದು ಖಚಿತ.

ಯಾವ ಶೂನ್ಯವನ್ನು ಇಷ್ಟಪೂರ್ವಕ ಧ್ಯಾನಿಸಬೇಕೆಂದು ಉಪದೇಶಿಸಿದನೋ ಆ ಸರ್ವಪೂರ್ಣ ಶೂನ್ಯಸ್ವರೂಪವೇ "ಕರಸ್ಥಲದ ಲಿಂಗ;."ಅದು ಆಗಮಮೂಲವೆಂಬುದು ಬಸವಪೂರ್ವಯುಗದ ವಚನಕಾರನಾದ ಆದಯ್ಯನ ಒಂದು ವಚನದಲ್ಲಿ ಸುವ್ಯಕ್ತವಾಗಿರುತ್ತದೆ (ನೋ: ಪು. 211–ದಾಸೋಹ ಸಿರಿ).

"ಲಿಂಗವಂಗದೊಳಿರ್ದುದಕ್ಕೆ, ಲಿಂಗದ ಪರಿಯೆಂತೆಂದು ಅನ್ಯರ ಕೈಯಲು ಕೇಳಬೇಡ. ತನ್ನಲ್ಲಿ ತಾನೆ ನೋಡಿಕೊಂಬುದು. ಇದನರಿದು ಬೇರೆ ಮತ್ತೆ ಅರಸಬೇಡ. ಕಾಣೆನೆಂದು ಮನದಲ್ಲಿ ಮರುಗಬೇಡ. ಮುಂದೆ ಜನ್ಮವುಂಟೆಂದು ಮನದಲ್ಲಿ ನೋಯಬೇಡ. ಇದುಕಾರಣ ತನ್ನ ಕರಸ್ಥಲದೊಳಿರ್ದ ವಸ್ತುವ ತಾನರಿದಡೆ ತಾನೆ ಶಿವನು; ಇದು ಸತ್ಯ, ಶಿವನಾಣೆ. ಶಿವಬಲ್ಲ, ಶಿವನಾಣೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ"॥

(ಲಿಂ.ಸ್ತೋ.೨೧)

CC-0. Jangamwadi Math Collection. Digitized by eGangotri

ಲಿಂಗಧಾರಣೆಯ ಸ್ಥಲಗಳಲ್ಲಿ ಕರತಳವೂ ಒಂದು. ಇಷ್ಟಲಿಂಗವು ಧ್ಯಾನಯೋಗಸಾಧನವಾಗುವಲ್ಲಿ ತೆರೆದ ಅಂಗೈಯೆ ಅದರ ಸಿಂಹಾಸನ. "ಇಷ್ಟ"ಪುರಸ್ಸರವಾಗಿ ಶೂನ್ಯಧ್ಯಾನನಿರತ ನಾಗಬೇಕೆಂಬ ಗುರೂತ್ತಮನ ಬೋಧೆಯಿಂದ ಲಿಂಗಧಾರಣ ಪದ್ಧತಿಯು ಆಜೀವಮತಾಚರಣೆಯ ಅಂಗವಾಗಿದ್ದಿತೆಂಬುದು ಖಚಿತವಾದ ಸುಸ್ಪಷ್ಟ ಸಂಗತಿ. ಆ ಮತದಲ್ಲಿ ಲಿಂಗ ಮತ್ತು ಶಾಸ್ತ್ರ ಅರ್ಥಾತ್ ಸಿದ್ಧಾಂತ ಬೇರೆಬೇರೆಯಲ್ಲವೆಂದು ಸಾರಿರುವ ಜೈನಗ್ರಂಥಗಳ ನಿರೂಪಣೆಗೆ ಮೇಲಣ ವಚನ ಆಜೀವಕರ ಕರಸ್ಥಲ ಲಿಂಗಧಾರಣದ ಪೂಜಾಧ್ಯಾನಪದ್ಧತಿಯು ನಿದರ್ಶನ ವಾಗಿದೆ. ತನ್ನ ಕರತಳದ ಲಿಂಗದೊಳಗಿನ ವಸ್ತುವೇ ತಾನೆಂದು ಅರಿದಾತನೆ ಬಯಲುಗ ಶಿವನೆಂಬುದು ಉರಿಲಿಂಗ ಪೆದ್ದಿಯ ದೃಢವಿಶ್ವಾಸ.

ಪುರಾಣಗಳು ಶಿವನ ವರ್ಣನೆಮಾಡುವಾಗ ಕೆಲವೊಮ್ಮೆ ಬೀಭತ್ಸಹೇತುವೂ ವಿಕೃತವೂ ಆಗಿರುವಂತೆ ಚಿತ್ರಿಸಿದ್ದರೆ ಅದನ್ನೇ ಸೌಮ್ಯವೂ ಭಕ್ತಭಾವಸಂಪನ್ನವೂ ಆದ ಬಗೆಯಲ್ಲಿ ವಚನಕಾರರು ರೂಪಪರಾವರ್ತನೆ ಮಾಡಿರುವ ಬಗೆ ಯಥಾರ್ಥತೆಯ ನಿಜದರ್ಶನ.

"ಹಸಿಯ ಕಪಾಲದಲ್ಲಿ ಉಂಬನೆಂಬರು; ಅದು ಹುಸಿಯೆ, / ? ಭಕ್ತನ ಮುಖದಿಂದ ಉಂಬನಾಗಿ. / ?
ಅಸ್ಥಿಗಳ ತೊಟ್ಟಹನೆಂಬರು,
ಅದು ಹುಸಿಯೆ, ಭಕ್ತದೇಹಿಕನಾಗಿ. / ?
ಚರ್ಮವ ಹೊದ್ದಿಹನೆಂಬರು, ಅದು ಹುಸಿಯೆ, /
ಆ ಭಕ್ತನಲ್ಲಿ ಸದಾ ಸನ್ನಹಿತನಾಗಿಪ್ಪನಾಗಿ. / ?
ಅದೆಂತೆಂದಡೆ ಬ್ರಹ್ಮಾಂಡಪುರಾಣೇ:-
ನೈವೇದ್ಯಂ ಪುರತೋ ನ್ಯಸ್ತಂ ದರ್ಶನಾತ್ ಸ್ವೀಕೃತಂ ಮಯಾ।
ರಸಾನ್ಭಕ್ತಸ್ಯ ಜಿಹ್ವಾಗ್ರಾದಶ್ನಾಮಿ ಕಮಲೋದ್ಭವ ॥
ಎಂದುದಾಗಿ, ವಾತುಲೇ:-
ಯಾವನ್ನಿರ್ವಹತೇ ಯಸ್ತು ಯಾವಜ್ಜೀವಂ ಪ್ರತಿಜ್ಞಯಾ।
ಮುನುಷ್ಯ ಚರ್ಮಣಾ ಬದ್ಧಃ ಸ ರುದ್ರೋ ನಾತ್ರ ಸಂಶಯಃ॥

CC-0. Jangamwadi Math Collection. Digitized by eGangotri

ಎಂದುದಾಗಿ ಮಹಾಲಿಂಗ ಕಲ್ಲೇಶ್ವರಾ, ನಿಮ್ಮ ಸುಳುಹು ಪರಕಾಯಪ್ರವೇಶವಾಗಿಹುದು."

* ನೋ: ಅಡಿಟ.

ನನ್ನ ಮುಂದಿಟ್ಟ ಎಡೆಯನ್ನು ನೋಡಿ ಸ್ವೀಕರಿಸಿದೆ. ನನ್ನ ಭಕ್ತನ ನಾಲಗೆತುದಿಯಿಂದ ರಸವನ್ನು ಸವಿದೆ ಎಂದು ಬ್ರಹ್ಮಾಂಡಪುರಾಣದಲ್ಲಿಯೂ, ಹಾಗೆಯೇ ವಾತುಲಾಗಮದಲ್ಲಿ ಯಾವನು ಪ್ರತಿಜ್ಞಾಪೂರ್ವಕವಾಗಿ ಆಜೀವಪರ್ಯಂತ ಎಲ್ಲರನ್ನೂ ಕಾಯುವನೋ, ಆ ಚರ್ಮವೇಷ್ಟಿತ ಎಂದರೆ ಚರ್ಮ ಶರೀರಿಯಾದವನು ರುದ್ರನೇ ದಿಟ; ಈ ವಿಷಯದಲ್ಲಿ ಸಂಶಯವಿಲ್ಲ ಎಂಬ ಪುರಾಣಾಗಮೋಕ್ತ ದೃಷ್ಟಾಂತವಾಕ್ಯಸಹಿತ ಆತ್ಮರೂಪದಿಂದ ಇಡೀ ಜೀವರಾಶಿಯನ್ನು ಉದ್ಧರಿಸುವ ಶಿವನು ಬೇರೆಯಲ್ಲ, ಆ ಶಿವನ ಭಕ್ತರು ಬೇರೆಯಲ್ಲ ಎಂಬ ದೃಢಭಕ್ತಭಾವ ವನ್ನು ಹಾವಿನಹಾಳಕಲ್ಲಯ್ಯನ ಮೇಲಣವಚನದಲ್ಲಿ ಮನಗಾಣಬಹುದು.ಆತ್ಮನು ಪರಕಾಯ ಪ್ರವೇಶಮಾಡಬಲ್ಲ ಸಮರ್ಥ+«ಜಎಂದೆಂಬ ಗೋಸಾಲನ ಶೂನ್ಯತತ್ವಾ ಲೋಚನೆಯ ನಿಗೂಢ ಅರ್ಥದೃಷ್ಟಿಯ ಒಳನೋಟವೋ ಎಂಬಂತೆ ವಚನದ 'ವಾದ-ಸಂವಾದ'ರೂಪದ ವಿಷಯ-ನಿರೂಪಣೆಯಾದರೋ ಮಾರ್ಮಿಕವಾಗಿರುವುದು ಸುವಿದಿತ. ಮನುಮುನಿಗುಮ್ಮಟದೇವನ "ತೊಗಲಗುಡಿಯೊಳಗೇಕೆ ಅಡಗಿದೆ ಗುಮ್ಮಟನೊಡೆಯ ಅಗಮ್ಮೇಶ್ವರಲಿಂಗ? ಎಂಬ ಪ್ರಶ್ನಾರ್ಥಕ ಸಂಬೋಧೆಯೂ ಹಾವಿನಹಾಳ ಕಲ್ಲಯ್ಯನ ಹಾಗೂ ವಾತುಲಾಗಮದ ಶಿವನ ಸ್ವರೂಪವನ್ನೇ ಕುರಿತದ್ದಾಗಿದೆ.

---

* (ವಚನಕೃತಿಕಾರನ ಭಾವಗರ್ಭಿತ ಸ್ವರಘಾತದ ನಿಲವನ್ನು,ಅರ್ಥಾತ್ ಧಾಟಿಯನ್ನು ಅವಲಂಬಿಸಿದ ಅರ್ಥವನ್ನು ಮೂಡಿಸುವ ರಚನೆಯಿದು. ಹುಸಿಯೆಂದೂ ಹುಸಿಯಲ್ಲವೆಂದೂ ಎರಡೂರೀತಿಯಿಂದಲು ಉದ್ದಿಷ್ಟಾರ್ಥ ಗ್ರಹಿಕೆ ಒಂದೇ ಆಗಿ ಅವಿರುದ್ಧವಾಗಿರುವುದು ಇದರ ಓದಿನ ನಡೆಯಲ್ಲಿದೆ.)

+«ಜ (ಪ್ರಭುಗೀತಾ ಪೀಠಿಕೆ Lvi)

CC-0. Jangamwadi Math Collection. Digitized by eGangotri

ಆ ತೂಗಲ ಗುಡಿಯನ್ನೇ ಮೇಗೇರಿಯ ಮಠವೆಂದು ಶಿಶುನಾಳ ಷರೀಫರು ವರ್ಣಿಸುತ್ತ ಅಲ್ಲಿಗೆ ಏರಿಹೋಗುವ ವಾಹ್ಯವಾದರೋ ಯೋಗದ ಕುದುರೆ; ಅದು ಅವರ ಅನುಭಾವದ ಸವಿಯ ನುಡಿಯಲ್ಲಿ ಪ್ರಾಣಲಿಂಗವಾಗಿ, ಪ್ರಣವವೇ ಪ್ರಾಣಜ್ಯೋತಿ*↓ಯಾಗಿ ಮೈದೋರಿರುವುದನ್ನಿಲ್ಲಿ ಕಾಣಬಹುದು:

ಯೋಗದ ಕುದುರೆಯ ಬೇಗನೆ ಏಋುತ
ಮೇಗೇರಿಯ ಮಠಕ್ಹೋಗುವ ಬಾ
ನಡೆ ನಡೆ ಶಿಶುವಿನಾಳದೀಶನ
ಅಡಗಿಹ ಪ್ರಣಮವ ಗುಡಿಯೊಳು*↑ನೋಡುವ ಬಾ॥

ಭರತಖಂಡದ ಇತಿಹಾಸದಲ್ಲಿ 12ನಯ ಶತಮಾನವು ಬಸವೇಶ್ವರರಿಂದ ನಲೆಗೊಂಡ ಶೂನ್ಯಸಿಂಹಾಸನಾಲಂಕೃತ ಅನುಭವಮಂಟಪವೆಂಬ ಕಲ್ಯಾಣದ ಆಧ್ಯಾತ್ಮಿಕ ಕೇಂದ್ರದಿಂದ ಎಂದೆಂದಿಗೂ ಮರೆಯದಂತೆ ಸುವರ್ಣಾಕ್ಷರದಿಂದ ಕೆತ್ತಬೇಕಾದ ಬಸವಪ್ರಭುದಂಡೇಶಾದಿ ಶರಣಯುಗ. ಬಸವಣ್ಣನವರಿಗಿಂತಲೂ ಮೊದಲು ಕ್ರಿ.ಶ. 1100ರ ಸುಮಾರಿಗೆ ಇದ್ದ ಮರೆಮಿಂಡಯ್ಯಗಳೂ ಒಬ್ಬರು. ಅವರ ಒಂದು ವಚನದಲ್ಲಿ ಲಿಂಗವಂತ ಧರ್ಮದ ಆಚರಣೆಯ ಅನುಷ್ಠಾನದ ಮಾರ್ಗ ಅವರಿಗಿಂತಲೂ ಹಿಂದಿನಿಂಧ ನಡೆದು ಬಂದಿದ್ದಿತೆಂಬುದನ್ನು ಆ ವಚನದ ಪಾರಿಭಾಷಿಕ ಶಬ್ದಗಳೆ ಸೂಚಿಸುತ್ತವೆ.

"ಕ್ರೀಯ ತೆರನನರಿಯೆನೆಂದು ಬಿಡಬಹುದೆ ಆಚಾರವ?
ಆಚಾರದ ತೆರನನರಿಯೆನೆಂದು ಮರೆಯಬಹುದೆ ಮಾರ್ಗವ?
ಇಂತೀ ನಾನಾಭೇದಂಗಳಲ್ಲಿ ಅರಿದು ವಿಚಾರಿಸಿ,
ಮಣ್ಣನಲ್ಲಿ ಕೆಡಿಸಿ ಮಣ್ಣನಲ್ಲಿ ಅರಸುವಂತೆ,
ಮನೆಯಲ್ಲಿರಿಸಿ ಒಡೆಯ ಮರೆದು ನೆನೆವಂತೆ ಅರಿ,
ಇಷ್ಟಲಿಂಗದ, ಪ್ರಾಣಲಿಂಗದ ಗೊತ್ತೆಂಬುಭಯಭೇದ,
ಅದು ನಿಶ್ಚಯ. ಒಂದಲ್ಲದೆ ಬೇರೆ ನಾಮವಿಲ್ಲ,
ಐಘಟದೂರರಾಮೇಶ್ವರ ಲಿಂಗಕ್ಕೆ."

CC-0. Jangamwadi Math Collection. Digitized by eGangotri

"ಕ್ರೀಯೆ ತನು, ನಿಷ್ಕ್ರೀ ಪ್ರಾಣ, ತನುವೆ ಲಿಂಗ, ಪ್ರಾಣವೆ ಜಂಗಮು"ಎಂಬ ವಿವೇಚನೆಯನ್ನರಿಯೆನೆಂದು, ಅಂಗಲಿಂಗವೆಂಬ ಸಂದಳಿದುದು ಕ್ರೀ, ಲಿಂಗಜಂಗಮವೆಂಬ ಸಂದಳಿದುದು ಕ್ರೀ ಎಂಬ ಬಗೆಯನ್ನು, ಜ್ಞಾನ ಕ್ರಿಯಾಸಮಾ-ಯೋಗವೆಂಬಿವನ್ನು ಅರಿಯೆನು ಎಂದು, ಲಿಂಗಪೂಜಾಚರಣೆಯ ಕಟ್ಟುಕಟ್ಟಳೆಗಳನ್ನು ತಿಳಿಯೆನೆಂದು ಪೂರ್ವಪದ್ಧತಿಯ ಶಿವಯೋಗಮಾರ್ಗವನ್ನು ಮರೆಯಬಹುದೆ? ಹೀಗೆ ಷಟ್-ಸ್ಥಲೋಪಸ್ಥಲಗಳ ನೂರೊಂದು ಭೇದಗಳನ್ನು ಬುದ್ಧಿಪೂರ್ವಕವಾಗಿ ಅರಿತು ಅನುಭಾವದ ಅನುವಿನಲ್ಲಿ ತನ್ನಲ್ಲಿ ತಾನೆ ಕಂಡು-ಕೊಳ್ಳಬೇಕು. ಹೇಗೆಂದರೆ ಮಣ್ಣನಲ್ಲಿ ಬೀಳಿಸಿಕೊಂಡದ್ದನ್ನು ಮಣ್ಣನಲ್ಲಿಯೇ ಹುಡುಕುವಂತೆ; ಮನೆಯಲ್ಲಿ ಮರೆತ ವಸ್ತುವನ್ನು ಮನೆಯೊಡೆಯನು ನೆನಪುಮಾಡಿಕೊಂಡಂತೆ ಕರಸ್ಥಲದ ಇಷ್ಟಲಿಂಗದ ಹಾಗೂ ಅಂತರಂಗದ ಪ್ರಾಣಲಿಂಗದ ಕಟ್ಟು,ಗೊತ್ತು ಎಂಬ ಎರಡೂ ಅಭಿನ್ನ, ಏಕ, ಒಂದೆ. ಅದು ನಿಜನಿಶ್ಚಿತಜ್ಞಾನ. 'ಏಕ' ಎಂಬುದಲ್ಲದೆ ಅದಕ್ಕೆ ಬೇರೆ ಹೆಸರಿಲ್ಲ.

"ಪ್ರಾಣೇನ ನಿಕ್ಷಪೇತ್ ಲಿಂಗಂ ಪೃಥಕ್‌ಭಾವಂ ನ ಕಾರಯೇತ್" ಎಂಬ ಆಚಾರಸಂಹಿತೆಯುಂಟು. ಪ್ರಾಣನ ಒಡಬಂದಿ ಲಿಂಗ. ತನುವನೆ ಮನೆಯ-/ ಪಂಜರವ ಮಾಡಿ-ಕೊಂಡ ಲಿಂಗ. ಜ್ಞಾನವೆ ಒಡಲಾದ ಲಿಂಗವೆ ಕ್ರೀ. ಇಷ್ಟಲಿಂಗದ ನಿಷ್ಠೆ ಎಂದರೆ ಗಟ್ಟಿಗೊಂಡ ಅರಿವು ತನ್ನೊಳಗೆ ಇದ್ದೂ ಇಲ್ಲದಂತೆ ಅಡಗಿದ ಪರವಸ್ತುವನ್ನು ಸಾಕ್ಷಾತ್ಕರಿಸಿ ಕೊಡುವುದಾಗಿ ಆ ಅರಿವೆ ಕ್ರೀ. ಪ್ರಾಣದ ನಿಜನಿಧಿ ಲಿಂಗ. ಕಮಲಮಧ್ಯಮಂಟಪದ ಜ್ಞಾನಾರೂಢಪ್ರಾಣೇಶ್ವರ ಆ ಲಿಂಗದೇವ. ಇಷ್ಟ-ಪ್ರಾಣಗಳ ನೆಲೆ ಒಂದೆ. ಅದೇ ದಹರಾಕಾಶ, ಅಂತರಾತ್ಮಪ್ರಕಾಶ ಎಂಬ ಭಾವಗರ್ಭಿತ ವಚನದ ಹಿನ್ನೆಲೆಗೆ ಯುಗಾಂತರಗಳ ಸ್ವಾನುಭವ ಪರಂಪರೆ ಉಂಟೆಂಬುದಕ್ಕೆ ಕ್ರಿ. ಪೂ. ೬ನೆಯ ಶತಮಾನದ ಆಜೀವ ಶಿವಮತದ ಶೂನ್ಯಧ್ಯಾನೋಪದೇಶದ ಐತಿಹಾಸಿಕ ಸತ್ಯಸಂಗತಿಯೆ ಸಾಕ್ಷ್ಯ.

CC-0. Jangamwadi Math Collection. Digitized by eGangotri

ಮೆರೆಮಿಂಡದೇವನ ಈ ಲಿಂಗಾನುಭಾವದ ಆಳದಲ್ಲಿ ಶಿವಜ್ಞಾನವೇ ಸಾಕಾರವಾದ ಶರಣನ ಇರವು "ಅಗ್ನಿಯಲ್ಲಿ ಅರತ ಉದಕದಂತೆ, ಬಯಲೊಳಡಗಿದ ಶಬ್ದದಂತೆ" ಎಂದು ಕಾಣಿಸಿದೆ. ಅಗ್ನಿಯಲ್ಲಿಯೇ ಇಂಗಿಕೊಂಡಿರುವ ಜಲದಂತೆ, ಬಯಲೊಳಗೆ ಲೀನವಾದ ನಾದ ಇಲ್ಲವೆ ಶಬ್ದದಂತೆ ಎಂಬಲ್ಲಿ ಪಂಚಭೂತಗಳ ಪಂಚೀಕರಣ(Quintuplication-- elements in five, in fivefold) ತತ್ತ್ವರಹಸ್ಯಜ್ಞಾನ ಅಡಗಿರುವುದರ ಕಡೆಗೆ ವಚನಕಾರನು ತನ್ನ ಗಮನವನ್ನು ಹರಿಸಿರುವುದು ಸ್ಪಷ್ಟವಿದೆ. ಪರವಸ್ತುವಿನ ಇದ್ದೂ ಇಲ್ಲದ ಗೂಢ ಅಸ್ತಿತ್ವದ ಗಾಢವಾದ ಸತ್ಯಶೋಧನೆಯ ಸಕ್ಸೃದ್ದರ್ಶನದ ಅನುಭವ ವಾಣಿಯ ನುಡಿಗಡಣಗಳಿವು. ಇಲ್ಲಿ'ಅಗ್ನಿಯೊಳಗಿನ ಉದಕ' ಎನ್ನುವುದಕ್ಕೂ, 'ಅಗ್ನಿಯಲ್ಲಿಯೇ ಲೀನವಾಗಿರುವ ಉದಕ' ಎನ್ನುವುದಕ್ಕೂ ಇರುವ ಅರ್ಥದ ಅಂತರದಲ್ಲಿ ತತ್ತ್ವರಹಸ್ಯ ವಡಗಿದೆ. ಆದ್ದರಿಂದಲೇ ಮಗ್ಗೆಯ ಮಾಯಿದೇವರಂತಹ ಶಿವಾತ್ಮರು ಈ ಮೆರೆಮಿಂಡ ದೇವನ "ಬಯಲೊಳಡಗಿದ ಶಬ್ದದಂತೆ" ಎಂಬೀ ಅರ್ಥವನ್ನುಳ್ಳ ಪಾಠವನ್ನೇ, ಅಲ್ಲಮ ಪ್ರಭುವಿನ ಒಂದು ವಚನದ "ಶಬ್ದದೊಳ-ಡಗಿದ ನಿಶ್ಶಬ್ದದಂತೆ" ಎಂಬ ಪಾಠಾಂತರದ ಬದಲು, ಸ್ವೀಕರಿಸಿ,"ನಿಶ್ಶಬ್ದೇ ಶಬ್ದವತ್ ಸ್ಥಿತಃ" ಎಂದು ಅನುವದಿಸಿರುವುದನ್ನು ಕಂಡರೆ ಪ್ರಸ್ತುತ ಅನುಭಾವಿ ಮೆರೆಮಿಂಡದೇವನ ತತ್ತ್ವದರ್ಶನಜ್ಞಾನಾನುಭವದ ಹಾಗೂ ಆಧ್ಯಾತ್ಮಿಕ ಅಂತಃ ಸಂಪನ್ನತೆಯ ಆಳದ ಅರಿವಾಗದಿರದು. ಲಿಂಗವೆ ಘಟ ಎಂದರೆ ದೇಹ, ನಿಜದ ಅರಿವೆ ಆತ್ಮ. ಈ ಎರಡರ ಗುಣಸ್ವಭಾವಗಳನ್ನು ಅರಿತು ಆಚರಣೆಯ ಅಂಗಗಳಾಗಿಸಿ, ಕೂಡಿ ಮರೆತಾಗ ಎಂದರೆ ನಿಶ್ಶೇಷವಾಗಿ ಅಡಗಿಸಿದಾಗ ಆ ಲಿಂಗದ ಸ್ವರೂಪವೆ "ಬಚ್ಚ ಬಯಲು" ಎಂದು ಶೂನ್ಯವನ್ನು ಕುರಿತು ಮೆರೆಮಿಂಡದೇವನು ವಿವರಿಸಿರುವನು (ನೋ: ವ. ೮೨. ಪು. ೩೨).

"ಖಂತತ್ತ್ವ"ವನ್ನು "ನಿರ್ಲೀನ ನಿಶ್ಶಬ್ದ ನಿರವದ್ಯ ತಾತ್ತ್ವಿಕ ಮಹಾಲಿಂಗ"ವೆಂದು ಮನಗಂಡು, ಆ ಮಹಾಲಿಂಗವು

CC-0. Jangamwadi Math Collection. Digitized by eGangotri

ಅಂಗದಿಂದ ಧರೆಗೆ ಅವತರಿಸಿದ ಆದಿವೃಷಭ ಎಂದರೆ ಕೈಲಾಸದ ಪ್ರಮಥಗಣ ನಂದೀಶ್ವರನೇ ಆದ ಬಸವೇಶ್ವರನ ಚರಣಾಂಬುಜಕ್ಕೆ ಶರಣು ಎಂದು ಲಕ್ಕಣ್ಣ ದಂಡೇಶನು ಬಸವಣ್ಣನವರನ್ನು ಭಕ್ತಿಭಾವದಿಂದ ಕೊಂಡಾಡಿರುವುದನ್ನು ಈ ಸಂದರ್ಭದಲ್ಲಿ ಗಮನಿಸಬಹುದು.

ಜಗದಾದಿ ಪರಮಸತ್ಯಸ್ವರೂಪವಾದ ಮಹಾತತ್ತ್ವ ಅಥವಾ ಮಹತ್ತತ್ತ್ವವಾದ ಸರ್ವಕಾರಣ ಶೂನ್ಯಲಿಂಗಧ್ಯಾನಾಚರಣೆಯ "ಆಱು ಮೂಲ"ದ ಶಿವಮತದ "ಆರು ಹಿರಿಯರು" ಜನವರ್ಗಕ್ಕೆ "ಷಡ್ಲಿಂಗ"ದ ಸಾಮಾರ್ಥ್ಯ-[sic]- ಸಂಬಂಧ ಸಾಲದೆಂಬ ಕಾರಣಕ್ಕಾಗಿ ಅವರಿಗೆ ಕರಸ್ಥಲ ಲಿಂಗವಿತ್ತು ಆ ಮೂಲಕ ಆತ್ಮೋದ್ಧಾರ ಮಾಡಿ ಕಾಪಾಡಿದರು. ಈ ಅಂಶವನ್ನು ಇಷ್ಟಲಿಂಗದ ಮೂಲಕ ಶೂನ್ಯಧ್ಯಾನಮಾಡುವಂತೆ ಬೋಧಿಸಿದ ಮಾರ್ಗಾಚರಣೆಯ ಆರುಹಿರಿಯರಾದ ಗೋಸಾಲ ಗುರೂತ್ತಮನನ್ನು ಚನ್ನಬಸವಣ್ಣನವರ ಒಂದು ಐತಿಹಾಸಿಕ ಮಹತ್ವದ ವಚನದಲ್ಲಿ ಮನಗಾಣಿಸಿರುವ ಬಗೆಯನ್ನು ನೋಡಿ:

"ಪ್ರಾಣಲಿಂಗವ ಸುಯಿಧಾನವ ಮಾಡು ಮಗನೆ" ಎಂದು ಶ್ರೀಗುರು ಲಿಂಗವ ಕೊಟ್ಟನೇಕಾಂತದಲ್ಲಿ. ಕೊಟ್ಟ ಲಿಂಗವ ಮಱೆದು, ಪ್ರಾಣಲಿಂಗದಲ್ಲಿ ಪರಿಣಾಮವ ಮಾಡುವರಿಲ್ಲ. ಅಂಗದಿಂದ ಪ್ರಾಣಲಿಂಗ ಹಿಂಗಿದಡೆ ಆ ಲಿಂಗವ ಮುಟ್ಟಿ ಪೂಜಿಸುವರೆಲ್ಲ ಭಂಗಿತರಾಗಿ ಹೋದರು. ಆರು ಹಿರಿಯರು ಸಂಬಂಧ ಸಾಲದೆ ಎಲೆಯು ಮಱೆಯು ಕಾಯಂತೆ ಮಱೆಗೊಂಡು, ಕುರುಹ ತೋಱೆ, ನೆಱೆ ಜನವನಾಳಿಗೊಂಡ ಕೂಡಲ ಚನ್ನಸಂಗಮದೇವ."* (ಕವಿಪ್ರ)

ಕರಸಂಜಾತರಾಗಿ ಪುತ್ರರೆನಿಸಿದ ಶಿಷ್ಯರಿಗೆ ಶ್ರೀಗುರು ಏಕಾಂತದಲ್ಲಿ ದೀಕ್ಷಾಪೂರ್ವಕ ಲಿಂಗವನ್ನು ನೀಡಿ, ಪೂಜಿಸುವಂತೆ ಹೇಳಿ ಕೊಡುವರು. ಆದರೆ ಹಾಗೆ ಕೊಟ್ಟ

----

* ಚನ್ನಬಸವಣ್ಣನವರ ಪ್ರಾಣಲಿಂಗಿಸ್ಥಲದ(೯೨) ಸಂಪಾದಿತ ವಚನವಿದು.

CC-0. Jangamwadi Math Collection. Digitized by eGangotri

ಲಿಂಗವನ್ನು ಮರೆತು ಪ್ರಾಣಲಿಂಗಾನಂದದಲ್ಲಿ ತಲ್ಲೀನರಾಗುವವರನ್ನು ಕಾಣೆ. ದೇಹವನ್ನು ಬಿಟ್ಟು ಪ್ರಾಣಲಿಂಗಚೈತನ್ಯಪಕ್ಷಿ ಹಾರಿಹೋದ ಬಳಿಕ ಆ ಒಡಲ ಲಿಂಗವನ್ನು ಮುಟ್ಟುವುದಾಗಲಿ. ಅದನ್ನು ಪೂಜಿಸುವುದಾಗಲಿ ಮಾಡಿದರೆ ಹಾಗೆ ಮಾಡಿದವರು ಅವಹೇಳನಕ್ಕೆ ಗುರಿಯಾಗುವರು ಎಂದು ಎಚ್ಚರಿಸಿ ಶಿವನು ಶ್ರೀಗುರುವಿನ ರೂಪಿನಲ್ಲಿ ಮರೆಯಾಗಿದ್ದುಕೊಂಡು ಪ್ರಾಣಲಿಂಗದ ತನ್ನ ಕುರುಹನ್ನು, ಮತ್ತೆಯೂ ಇಷ್ಟಲಿಂಗವನ್ನು ತೋರಿ, ಆಶ್ರಿತಜನರೆಲ್ಲರನ್ನೂ ಆ ಸುಭದ್ರವಾದ ಕೋಟೆಯೊಳಗಿರಿಸಿ ಕೊಂಡು ಸಂರಕ್ಷಿಸುವನು ಎಂಬಲ್ಲಿ "ಆಶ್ರಿತಜನ ಪ್ರಾಕಾರನೆಂಬೊಂದು ನಾಣ್ಬರುದ"ನ್ನು ಶಿವನು ತೋರಿದ್ದಾನೆ ಎಂಬ ಇಂಗಿತವಿದೆ. ವಚನದಲ್ಲಿನ "ಜನವನಾಳಿಗೊಂಡ" (ಪ್ರ.ಕೈ.ಹೋ: ಉರಿಗೊಂಡ ಕರ್ಪುರ) ಎಂಬ ಪದಪ್ರಯೋಗದಲ್ಲಿನ "ಆಳಿ" (ಳಕರಾಂತ) ಪದಕ್ಕೆ (rampart, fort) 'ಕೋಟೆ'ಯೆಂಬ ಅರ್ಥವಿದ್ದು ಗುರುಲಿಂಗ ಜಂಗಮದ ರಕ್ಷೆಯ ಸಂಕೇತವೂ ಹೌದು. ಭಕ್ತನಾದವನಿಗೆ ಆ ರಕ್ಷೆ ಸದಾ ಹೇಗೆ ಲಭ್ಯವಿತ್ತು ಎಂಬುದನ್ನು ಮನಗಾಣಿಸುತ್ತದೆ. ಶ್ರೀಗುರುವಾಗಿ ಕರಸ್ಥಲ ಲಿಂಗವನ್ನಿತ್ತು ಪೂಜಿಸುವಂತೆ ಮಾಡುತ್ತಿದ್ದ ಗೋಸಾಲನೆ ಆ ಆರು ಹಿರಿಯರು ಎಂಬುದನ್ನು –ಹೀಗೆ ದಾಖಲಿಸಿದ ಯಶಸ್ಸು ಷಟ್‌ಸ್ಥಲಚಕ್ರವರ್ತಿ ಚನ್ನಬಸವಣ್ಣನವರಿಗೆ ಸಲ್ಲುತ್ತದೆ. ಅವರ ಲಿಂಗವಂತಧರ್ಮದ ಮೂಲಸೆಲೆಯ ಇತಿಹಾಸವನ್ನು ಬರೆದ ಈ ಸತ್ಯವಚನವನ್ನು ವಜ್ರದ ಚೌಕಟ್ಟಿನಲ್ಲಿ ರತ್ನದ ಸುವರ್ಣಾಕ್ಷರಗಳಿಂದ ಶರಣರು ಮನೆ ಮನೆಗಳಲ್ಲಿ ಮಾತ್ರವಲ್ಲ, ತಮ್ಮ ಹೃನ್ಮಂದಿರದಲ್ಲಿ ಸದಾ ಬೆಳಗುವಂತೆ ಜೋಪಾನಗೊಳಿಸಲೆಂಬುದೇ ಆಶಯ.

'ಆಳಿ'ಪದದ ಮೇಲಣ ಅರ್ಥಪುಷ್ಟಿಗೆ ಬೆಂಬಲವಾದ ಪ್ರಯೋಗಕ್ಕೆ "ನಮ್ಮ ಕೂಡಲಸಂಗನ ಶರಣರಿಗೆ ಪಾದವೇ ಪರುಷ"ಎಂಬ ಸ್ತೋತ್ರಕ್ಕೆ "ಶರಣರ ಪಾದವು ಶರಣುವೊಕ್ಕ ಜನಂಗಳಿಗೆ ಉತ್ಪತ್ತಿಸ್ಥಿತಿಲಯಗಳ ಕಳದು ನಿತ್ಯವಪ್ಪ ಶಿವ-

CC-0. Jangamwadi Math Collection. Digitized by eGangotri

ಪದವ ಕೊಡಿಸುತ್ತಿಹುದೀಗ ನಮ್ಮ ಕೂಡಲಸಂಗನ ಶರಣರಿಗೆ ಪಾದವೇ ಪರುಷ" ಎಂಬ ಶಬ್ದಕ್ಕರ್ಥವೆಂಬ ಟೀಕೆಯಿದೆ. ಚನ್ನಬಸವಣ್ಣನವರ'ಜನವನಾಳಿಗೊಂಡ'ಪದಪ್ರಯೋಗದ ಅರ್ಥ ವನ್ನೇ ಆಟೀಕೆ ಸಮರ್ಥಿಸಿದೆ."ಪಾದ" ಶಬ್ದದ "ಲಿಂಗ"ವೆಂಬ ಅರ್ಥಕ್ಕೆನೋ."ಮೂದೇವರ ಮುತ್ತಯ್ಯನ ಪಾದದ ಮುದ್ರೆಯ ಶರೀರದೊಳಂಕಿಸುತಂ। ಆದರದಿಂ ...ಮೋದಿಸುತಿಹೆ ನಾಂ ...ಶಂಕರಲಿಂಗಾ॥.೨೬॥"ನೋ: ಅರುಚಾ ೫.೭೧ ಶಿವನ ಸಾರೂಪ್ಯಪದವೆ'ಲಿಂಗ.'"ಕೈ ಕಾಲಿನಲ್ಲಿ ಕೊಂಡಡೇನು, ಬಾಯಿಗೆ ಬಂದಲ್ಲದೆ ಒಡಲೆಡೆ[ಯ]ಲ್ಲ" 'ಹಸ್ತವು ಕೊಂಡ ಲಿಂಗೋದಕವು ಬಾಯಿಗೆ ಬಂದಲ್ಲದೆ ಒಡಲಿಗೆ ಅರ್ಪಿತವಾಗದೆಂಬರ್ಥ.' ಇಲ್ಲಿ 'ಕಾಲು''ಲಿಂಗ'ಶಬ್ದದ ಪರ್ಯಾಯಪದ. "ಹಿರಿಯರು" ಎಂಬವರ ಬಗೆಗೆ ಬಹುರೂಪಿಚೌಡಯ್ಯನ ಮಾತುಗಳು:

"ಹಿರಿಯರೆಂತಿಪ್ಪರಯ್ಯಾ? -ಅಯ್ಯಾ, ದಿಟದ ರಾಶಿಗೆ ಅವರ ಘಟ- ಲಕ್ಷಣ. ನಿಸ್ಸೀಮರೆಂತಿಪ್ಪರಯ್ಯಾ? -ಅಯ್ಯಾ, ಸೀಮೆಗಡೆಗೊಡದ ಬಯಲನೊಳಕೊಂಡಿಪ್ಪರು... ರೇಕಣ್ಣ ಪ್ರಿಯ ನಾಗಿನಾಥನಂತಿಪ್ಪರು.""ಮಾಯಾ ತೋರಿಕೆಯ ಸಟೆಯೇನೂ ಇಲ್ಲದಿರ್ದ ಬಚ್ಚಬರಿಯ ಮಹಾಘನವೆಂಬ ನಿಜದ ನಿಧಿಯೆಲ್ಲಾ ತಾವೆಯಾಗಿರ್ಪರು, ಶರಣರು. ಅಂತಿರ್ಪ ಶರಣರೇ ಹಿರಿಯರು. ಆ ಶರಣರ ದೇಹ ನಿಜದ ನಿಧಿಗೆ ಇಕ್ಕದ ಮುದ್ರೆಯಾಗಿಪ್ಪುದು. ಅದೆಂತೆಂದೊಡೆ: ಭಕ್ತಲಿಂಗದ ರಾಶಿಗೆ ಇಕ್ಕದ ಮಣ್ಣ ಮುದ್ರೆ ಯಂತೆಇದ್ದಿತ್ತು"ಎಂಬಿದು ವಿಜಯನಗರದ ಕಲ್ಮಠದ ಪ್ರಭು ದೇವರ ಟೀಕೆ."ಘಟ" ಶಬ್ದಕ್ಕೆ- ಶರೀರ; ಮಣ್ಣಗಡಿಗೆ ಎಂಬ ಅರ್ಥವಿದ್ದು ಆಬಗ್ಗೆ ಶೇಕ್ಸ್‌ಪಿಯರ್ ಕವಿ ಹೇಳಿರುವ "Muddy vesture of decay"- ನಶಿಸುವ ಈ ಶರೀರ ಕೆಸರ ಮಣ್ಣನ ಕವಚ -ಎಂಬ ಮಾತು ಎಷ್ಟು ಅನ್ವರ್ಥಕ! ಆದರೂ ಆ ಕವಿಯದೃಷ್ಟಿ ಹೊರಗಣ್ಣನದು. ಶರಣರ ದೇಹದ ನಿರೂಪಣೆಯಲ್ಲಿ ಆ ಬಾಹ್ಯಲಕ್ಷಣದ ಸ್ಥೂಲರೂಪು ನಿತ್ಯಸತ್ಯಕ್ಕೆ ಹಾಕದ ಮುದ್ರೆಯೆಂಬಲ್ಲಿ ಆತ್ಮೈಶ್ವರ್ಯದ ಆಧ್ಯಾತ್ಮಿಕತೆಯುಂಟು.

CC-0. Jangamwadi Math Collection. Digitized by eGangotri

''ಬೀದಿಯಲ್ಲಿ ಕೊಡನೊಡೆದು ಬಯಲನುಡುಗಿದಡುಂಟೆ? ಹೇಳಾ. ಗೋಗೇಶ್ವರಲಿಂಗವ ಬೇಱುಮಾಡಿ ಅಱಿಸಲುಂಟೆ, ಬಸವಣ್ಣಾ?(ಪ್ರ.ಗೀ.654)ಎಂದು ಪ್ರಭುದೇವರು ಗಗನತತ್ತ್ವದ ಏಕತೆಯನ್ನು ಸಾರಿದ್ದಾರೆ. ಪ್ರಾಣಲಿಂಗಿಯಾದವನು ತಾನು ಪ್ರಾಣಲಿಂಗಿಯೆಂದು ಹೇಳಿಕೊಳ್ಳುವುದು ಹೇಗೆಂದರೆ: ತಾನು-ಬೇರೆ, ಲಿಂಗ-ಬೇರೆ ಎಂಬಭಿನ್ನಭಾವವನ್ನು ತಾಳಿದಂತೆ. ವ್ಯೋಮ-ಪೂರ್ಣ ಕುಂಭವನ್ನು ಒಡೆದುಬಿಟ್ಟು ಬಳಿಕ ಅದರೊಳಗಿದ್ದ ಬಯಲನ್ನು ಬಾಚತುಂಬಿಕೊಳ್ಳಲು ಸಾಧ್ಯವೆ? ತನ್ನೊಳಗಣ ಬಯಲ ಲಿಂಗವನ್ನು ಎಂದರೆ ನವಚಕ್ರಗಳಲ್ಲಿ ಒಂದಾದ ಶಿಖಾಚಕ್ರದಲ್ಲಿನ ಶೂನ್ಯಲಿಂಗವನ್ನು ತನ್ನಿಂದ ಬೇರ್ಪಡಿಸಿ ಕಾಣುವ ವಿಫಲಯತ್ನವನ್ನು ಬಿಟ್ಟು ಆ ಘನಶೂನ್ಯಲಿಂಗವನ್ನು ತಾನಿರುವಾಗಲೆ ಸಾಧಿಸಿಕೊಳ್ಳಬೇಕೆಂಬುದೇ ಪ್ರಭುದೇವರು ಬೋಧಿಸಿದ ಶಿವಾನುಭವಮಾರ್ಗ. ಎಲೆ-ಉದುರಿದ ಮರದಂತೆ ಉಲುಹಡಗಿದ ಶರಣನನ್ನು ನಿಶ್ಶಬ್ದಬ್ರಹ್ಮವೆಂದೇ ಭಾವಿಸಿ ಆ ಬಯಲಲಿಂಗವು ನಿಶ್ಚಲ, ನಿರ್ವಯಲ ಅಚಲವಪ್ಪ ಘನ ವೆಂಬುದನ್ನು ತನ್ನ ಜೀವನ್ಮುಕ್ತಸ್ಥಿತಿಯಿಂದಲೇ ಮನಗಾಣಿಸಿದ್ದಾರೆ. ಆ ಘನಲಿಂಗ ನೋಡಬಾರದ ಬೆಳಗು; ಕೂಡಬಾರದ ಮೂರ್ತಿ; ಅಖಂಡ, ಅಪ್ರತಿಮ. ಆ ಗೋಹೇಶ್ವರ ಲಿಂಗದ ಬೆಳಗಿನ ಮೂಲವನ್ನು ಲಿಂಗಸಂಗಿಗಳು ಮಾತ್ರ ಬಲ್ಲರೆಂದು ನುಡಿದಿದ್ದಾರೆ. "ಘಟವನೊಡೆದು ಬಯಲ ನೋಡಲದೇಕೆ? ಆ ಘಟದೊಳಗಿಪ್ಪುದೇ ಬಯಲೆಂದರಿದೊಡೆ ಸಾಲದೆ?(ಶರಣಸ್ಥಲ: ೧)ಎಂದು ಆ ಪ್ರಭುದೇವರಿಗಿಂತಲೂ ಪೂರ್ವದಲ್ಲಿ 11ನೆಯ ಶತಮಾನದವರಾದ ಜೇಡರದಾಸಿಮಯ್ಯ ಎಚ್ಚರಿಸಿರುವುದನ್ನಿಲ್ಲಿ ನೆನೆಯಬಹುದು."ಬಯಲ ಬಣ್ಣವಮಾಡಿ,ಸ್ವಯವ ನಿಲವಮಾಡಿ ಸುಳಿವಾತನ ಬೆಡಗಬಲ್ಲವನಾರೈ, ರಾಮನಾಥ॥ (ಪ.೬)ಎಂದುಆ ಬಯಲಮರೆಯ ಬ್ರಹ್ಮವೆ ಮಾನುಷವೇಷವನ್ನುಧರಿಸಿ, ಸ್ವಸ್ವರೂಪವನ್ನು ನಿಂದನಿಜದ ನಿಲವ/ ನರದೇವನ ಮಾಡಿದ ರಹಸ್ಯವನ್ನು ಯಾರುತಾನೆ ಬಲ್ಲರೆಂದು ಸೋಜಿಗಗೊಂಡಿದ್ದಾನೆ.

CC-0. Jangamwadi Math Collection. Digitized by eGangotri

ಯಾವ ಗೋಸಾಲ ಗುರೂತ್ತಮನು ಗಣಾಚಾರ್ಯನೆಂದೇ ಹಿಂದೆ ಪ್ರಸಿದ್ಧಿಯನ್ನು ಹೊಂದಿದ್ದನೋ ಅದರಂತೆ ಅಲ್ಲಮಪ್ರಭು ಹಾಗೂ ಬಸವಣ್ಣನವರು ತಮ್ಮನ್ನು ಗಣಂಗಳೆಂದೇ ಹೇಳಿಕೊಂಡಿರುವರು. ಭಕ್ತಕಾರಣ ಲೋಕಕ್ಕೆ ಬಂದವರು. "ಗಣಪ್ರಸಾದಿಯಾಗಿ ಮರ್ತ್ಯಲೋಕಕ್ಕೆ ಮಹವ ತಂದು ಶಿವಗಣಂಗಳ ಮಾಡಿದಾತ ಬಸವಣ್ಣ"ನೆಂದು ಮಡಿವಾಳ ಮಾಚದೇವನು ಸ್ಮರಿಸಿದ್ದಾನೆ. "ಸಮಸ್ತಧರ್ಮಾಕಾರನು" "ಗಣಕುಲಕೆ ಶೇಖರನು" ಎಂದು ಸ್ತುತ್ಯನಾದ ನಂದಿಕೇಶ್ವರನೆಂದೇ ಬಸವಣ್ಣನವರನ್ನು ಬೊಮ್ಮರಸನು ಭಾವಿಸಿದ್ದಾನೆ. ಗೋಸಾಲನ ಕಾಲದಲ್ಲಿದ್ದ ತೇರಸಗಣಂಗಳ ಗುಣ ವಿಶೇಷವನ್ನೇ ಹೊಂದಿದ ಆ ಪರಂಪರೆ ಬಸವಾದಿ ಪ್ರಮಥರ ಕಾಲದಲ್ಲಿಯೂ ಇದ್ದು ಗಣಸಹಸ್ರನಾಮದಲ್ಲಿ ಉಕ್ತರಾಗಿರುವುದನ್ನು ಕಾಣುತ್ತೇವೆ. ಆ ತೇರಸವೀರಗಣಾರ್ಚನೆ ಮಾಡುವ ಪದ್ಧತಿಯ ಉಲ್ಲೇಖ ಬಸವಪುರಾಣ(೧೩-೧೨)ದಲ್ಲುಂಟು. ಈ ತನಕ ಶರಣರು ಮನಗಂಡ ಗೋಸಾಲ ಪ್ರತಿಪಾದಿತ ಬಯಲತತ್ತ್ವದ ಬಹುಮುಖದ ಆನುಭಾವಿಕ ಸತ್ಯ ಸಂದರ್ಶನದ ಚಜ್ಯೋತಿಯ ಬೆಳಗನ್ನು ಅವರ ವಚನಗಳಲ್ಲಿ ಕಂಡಿದ್ದೇವೆ. ಗಗನಸಿದ್ಧಾಂತದ ಪ್ರತಿಪಾದನೆಯಲ್ಲಿನ ಬಳಕೆಯಾಗಿರುವ ಪರ್ಯಾಯಪದಗಳ ಪರಿಚಯವಾಗಿದೆ. ಶರಣರ ಘನಶೂನ್ಯವು ಏನೇನೂ ಇಲ್ಲದ, ಏನೂ ಅಲ್ಲದ ಪೊಳ್ಳಲ್ಲ. ಚರಾಚರವೆಲ್ಲಕ್ಕೂ ಅದೇ ಮೂಲ, ಅದೇ ಚೂಲ–ಮಹಾಲಿಂಗ; ಬಯಲೆನಿಸುವ ಪರಬ್ರಹ್ಮ, ಪಿಂಡಾಂಡ ವ್ಯಾಪಿ ಆಭು. ಆ ಜಗಜ್ಜೀವಸ್ವರೂಪಿ ಎಲ್ಲವನ್ನು ಒಳಕೊಂಡಿದ್ದರೂ ಎಲ್ಲಕ್ಕೂ ಅತೀತವಾಗಿ ಇದ್ದೂ ಇಲ್ಲದ ಪರಾತ್ಪರವಸ್ತು. ಸರ್ವಕಾರಣ ಮೂಲಚೈತನ್ಯಜ್ಯೋತಿ. ತನ್ನಲ್ಲಿ ತಾನೆ ಕಂಡುಕೊಳ್ಳುವ ಸಚ್ಚಿದಾನಂದಾನುಭವದ ಇಷ್ಟಲಿಂಗನಿಷ್ಠ ಶೂನ್ಯಧ್ಯಾನಾನುಷ್ಠಾನದ ಯಾವ ಆಜೀವಕ ಮತವುಂಟೋ ಅದನ್ನು "ಲಿಂಗಜೀವಿಮತ"ವೆಂದು ಜೈನಧರ್ಮದ ಮೌಲಿಕ ಇತಿಹಾಸ ಖಚಿತಪಡಿಸಿದೆ. ಆ ಶೂನ್ಯವೇ ಲಿಂಗ, ಆ ಲಿಂಗವೇ

CC-0. Jangamwadi Math Collection. Digitized by eGangotri

ಪ್ರಾಣವೆಂದು ಅರಿತು ಆಚರಿಸಿದ ದೃಢನಿಶ್ಚಿತರು ಶಿವಶರಣರು ಎಂಬ ವಸ್ತುಸತ್ಯಕ್ಕಿಂತ ಹೆಚ್ಚು ಹೇಳಲೇನುಂಟು?

ವಿಪುಲವಾದ ವಚನವಾಙ್ಮಯರಾಶಿ ಪ್ರಧಾನವಾಗಿ ಆತ್ಮನಿಷ್ಠ ಅಂತರವಲೋಕನದ ಅನುಭೂತಿಯ ಆವಿಷ್ಕಾರ; ಭಕ್ತಿಕಂಪಭರಿತ ದಿವ್ಯೋನ್ಮಾದದ ಉದ್ಗಾರ; ಇಷ್ಟಲಿಂಗ ಸಂಬೋಧೆ, ಜನಹಿತಕಾರಿಚಿಂತನೆ, ಸನ್ಮಾರ್ಗೋಪದೇಶ. ಆ ಕಾರಣ ಅನುಭಾವಿಕ ಚಿಂತನೆಯ ರಸಸ್ಯಂದಿ ಗೀತಮುಕ್ತಕ. ಹೀಗೆಂದ ಮುಕ್ತಕಂಠದಿಂದ ಸ್ತುತ್ಯವಾದ ವಚನಗಳಲ್ಲಿ ತತ್ಕಾಲದಲ್ಲಿ ನಡೆದ ಲೌಕಿಕ, ಐತಿಹಾಸಿಕ ಘಟನೆ ಹಾಗೂ ಪುರಾತನ ನೂತನಭಕ್ತರ ಮಹಿಮೆಯನ್ನು ನೆನೆಯುವ ಸಂಗತಿಗಳ ಆಯಾಪ್ರಸಂಗಗಳಲ್ಲಿ ಸಂಬಂಧಪಟ್ಟವರ ಹೆಸರುಗಳು ಉಕ್ತವಾಗಿರುವುದು ಸ್ವಾಭಾವಿಕ. ಉದಾಹರಣೆಗೆ: ಬಸವಣ್ಣನವರ ಲಿಂಗೈಕ್ಯವನ್ನು "ಬೆಳಗನುಟ್ಟು ಬಯಲಾಗಿ ಹೋದೆಯಲ್ಲಾ ಬಸವಣ್ಣಾ" ಎಂದು ಮಡಿವಾಳ ಮಾಚದೇವರು; "ಆದಿ ಅನಾದಿಯ ತತ್ತ್ವವ ಬೋಧಿಸಿಕೊಟ್ಟ ಗುರುವೆ,.... ನಿಮ್ಮ ಘನವ ಕಾಂಬ ಕಣ್ಣು ಕ್ರಮಗೆಟ್ಟಿತ್ತು. ಬಸವಯ್ಯನ ಪ್ರಭೆಯಲ್ಲಿ ಸಂಗಯ್ಯ ಅಡಗಿತ್ತೊ! ಎಂದು ನೀಲಲೋಚನೆಯೂ; "ಶಿವಾಚಾರದ ಬೆಳವಿಗೆಯನಹುದಲ್ಲವೆಂದು ಬಿಜ್ಜಳ ತರ್ಕಸಲು ಅನಂತಮುಖದಿಂದ ಒಡಂಬಡಿಸಿ ಅಹುದೆನಿಸಿದ. ಬಂದ ಮಣಿಹ ಪೂರೈಸಿತ್ತೆಂದು ಲಿಂಗದೊಳಗೆ ಬಗಿದು ಹೊಕ್ಕಡೆ, ಹಿಂದೆ ಲೋಕವರಿದು ಬದುಕಬೇಕೆಂದು ಸೆರಗ ಕೊಟ್ಟನು" ಎಂದು ಅಕ್ಕನಾಗಮ್ಮನವರೂ; "ಕಷ್ಟಕುಲದಲ್ಲಿ ಹುಟ್ಟಿದ ಕರ್ಮವನು ಕಳೆದು, ಮುಟ್ಟಿ ಪಾವನವಮಾಡಿ ಕೊಟ್ಟನಯ್ಯ ಎನ್ನ ಕರಸ್ಥಲಕ್ಕೆ ಲಿಂಗವ" ಎಂದೂ "ಬಸವಣ್ಣನ ಕರುಣದಿಂದ ಪ್ರಭುವಿನ ಪಾದವ ಕಂಡು ಬದುಕಿದೆನು ಕಾಣಾ ಅಭಿನವ ಮಲ್ಲಿಕಾರ್ಜುನಾ" ಎಂದೂ ಡೋಹರ ಕಕ್ಕಯ್ಯನೂ, "ಸಾಕಾರ ರೂಪನೆತಾಳಿ ಬಿಜ್ಜಳಗೆ। ಬೇಕಾದ ದೃಷ್ಟವನು ತೋರಿದ ಗುರುವೆ। ವಿಸ್ತರಿಸಿ ಜಗಕೆ ನೀನಾಗಿ ಎನ್ನುವನು। ತಪ್ಪಿಸಿಹೋದೆ ಎಲೆ

CC-0. Jangamwadi Math Collection. Digitized by eGangotri

ಪರಮ ಗುರುವೆ" ಎಂಬ ಚನ್ನಬಸವಣ್ಣನವರ ನಿರೂಪಣೆಯಲ್ಲಿ ಬಸವಣ್ಣನವರ ಐಕ್ಯವಾದ ಸಂಗತಿಯ ಜೊತೆಗೆ ಅವರ ಮಹತ್ತ್ವವನ್ನು ಸ್ಮ‌ರಿಸಿರುವುದು ಸ್ಪಷ್ಟವಿದೆ.

12ನೆಯ ಶತಮಾನದ ವಚನಕಾರರ ಸಮಕಾಲೀನ ಘಟನೆಯ ಒಂದು ಸನ್ನಿವೇಶವನ್ನು ಕುರಿತ ವಚನಗಳ ವಿವೇಚನೆ ಇದಷ್ಟೆ. ಆದರೆ ಸಾಸಿವೆಯಲ್ಲಿ ಸಾಗರವನ್ನು ಅಡಗಿಸಿದಂತೆ, ಕಂಡೂ ಕಾಣದಂತೆ, ಕೇವಲ ಸಮಾಧಿಭಾಷೆಯ ಬೆಡಗಿನ ನುಡಿಯಲ್ಲಿ ಚಿತ್ರಿಸಿದ ಪೂರ್ವೋಕ್ತ "ಧರೆಗಿರಿಯ ಮೇಲುಳ್ಳ ಆರು ಹಿರಿಯರ ಗೋಗೇಶ್ವರ ನಿಂದ ನಿಲವಿನ" ಅಲ್ಲಮಪ್ರಭುವಿನ ವಚನದಲ್ಲಿ ಶತಶತಮಾನಗಳ ಹಿಂದಿನ ಚಾರಿತ್ರಿಕ ಘಟನಾವಳಿಯ ಕುಂಡಲಿನೀ ಯೋಗದ ಶೇಷಪ್ರಸಾದದ ರಹಸ್ಯಾರ್ಥವು ತನ್ನ ಪೊರೆಯನ್ನು ಕಳಚಕೊಂಡು ಮೈದೋರುವಂತಹ ಲೋಕಾಶ್ಚರ್ಯಕರವಾದ ಅತ್ಯದ್ಭುತ ಶಬ್ದಾರ್ಥವೂ ನಿರ್ದಿಷ್ಟನೈಘಂಟುಸಮ್ಮತವು. ಅಂತಾಗಿ ಸಮಸ್ತ ವಚನಸಾಹಿತ್ಯರಾಶಿಯ ಇತಿಹಾಸದಲ್ಲಿಯೇ ಲಿಂಗವಂತ ಧರ್ಮದ ಬಯಲ ತತ್ತ್ವದ ಮೂಲಸೆಲೆಯ ವಿಚಾರೋದಯವೇ ಮೂರ್ತಿವೆತ್ತ ಪ್ರಭುದಂಡೇಶರ ಐತಿಹಾಸಿಕ ಪರಂಪರೆಯ ಪ್ರಜ್ಞೆ ಹಾಗೂ ಪ್ರತಿಭೆಯ ಫಲವಾಗಿ ಕಳೆದು ಹೋದಂತಿದ್ದ ಆಜೀವಕ ಶಿವಧರ್ಮದ ಸೆಲೆಯ ನೆಲೆಗೆ ಜೀವಂತಿಕೆಯ ಕಳಶವಿಟ್ಟಂತಾಗಿದೆ.

."The richness of life lies in the memories we have forgotten" --- CESARE PAVESE

ಗೋಸಾಲಗುರೂತ್ತಮನ ಕಾಲದಲ್ಲಿ ಅಜಾತಶತ್ರು ಏರ್ಪಡಿಸಿದ್ದ "ಪರಿಮಳ"-ನಿರ್ದಿಷ್ಟಾರ್ಥದ "ವಿದ್ವತ್‌ಸಭೆ"ಯಲ್ಲಿ ಆರು ಹಿರಿಯರೆಲ್ಲರನು ಸೇರಿಸಿ ಪರಿಯಾಯ ಪರೀಕ್ಷೆಯನ್ನು ನಡಸಿದ ಬಗೆಗೆ ಅಲ್ಲಮಪ್ರಭು ತಮ್ಮ ಒಂದು ವಚನದಲ್ಲಿ ಈ ಹಿಂದೆಯೇ ಮನಗಾಣಿಸಿರುವುದು ಸರಿಯಷ್ಟೆ. ಚನ್ನಬಸವಣ್ಣನವರ ಮುಂದಿನ ಸ್ವರವಚನವೂ ಆ ಘಟನೆಯನ್ನು ಕುರಿತು

CC-0. Jangamwadi Math Collection. Digitized by eGangotri

ಪ್ರಸ್ತಾಪಿಸಿರುವುದನ್ನು ನೋಡಬಹುದು:“ಸರವರದೊಳಗೊಂದು ಉರಿವ ಕಮಲವಿರ್ದು ಪರಿಮಳವೆಸೆವುತಲಿ, ಅರಳುತಿರಲು ಕೊಯ್ದು ಕರಡಿಗೆಯೊಳಗಿಟ್ಟು ಸುರಕ್ಷಿತವ ಮಾಡಲರಿದು॥ ಕರದ ಕೈಯಲಿ ಪುಷ್ಪ, ಉರದ ಕೈಯಲಿ ಲಿಂಗ ನೆರೆದು ಪೂಜೆಯಮಾಡಲಱಿದು, ಇರವ ಬೋನವ ಮಾಡಿ ಸರುವ ತೃಪ್ತಿಯಂಗೊಟ್ಟು ಭರಿತರಾಗಿರ್ಪವರಾರು ಹೇಳಾ...” ಕಠಿನಪಾಠವನ್ನುಳ್ಳ ಈ ಗೋಪ್ಯಸ್ವರವಚನದ ಅರ್ಥವಿವರಣೆಯ ರೂಪವಾದ ಅವರ ವಚನವನ್ನು ಉಲ್ಲೇಖಿಸುವ ಮೊದಲು ಈ ಸ್ವರವಚನದ ಪ್ರತಿಪದಾರ್ಥವನ್ನಿಲ್ಲಿ ಕೊಡಬಹುದು: ಸರವರದೊಳಗೆ-#ಪುಷ್ಪಪುಟದೊಳಗೆ# ಅರ್ಥಾತ್ ಏಕೋರಾಮಕ್ಷೇತ್ರವಾದ #ಚಂಪಾನಗರಿಯ ಆವರಣದೊಳಗೆ, ಉರಿವ-ಪರಮಜ್ಞಾನಜ್ಯೋತಿಸ್ಸ್ವರೂಪದ, ಕಮಲವಿರ್ದು- m. ಪರಬ್ರಹ್ಮವಿದ್ದು, ಪರಿಮಳವು- m. ವಿದ್ವಜ್ಜನಮಂಡಲಿಯು, ಎಸೆವುತಿರಲು-ಶೋಭಾಯಮಾನವಾಗಿರಲಾಗಿ, ಅದನ್ನು ಕಂಡವರು, ಅರಳುತಿರಲು-ಬೆಬ್ಬನೆ ಬೆರಗುಗೊಂಡಿರಲಾಗಿ, ಕೊಯ್ದು- ಆ ಪರವಸ್ತುವನ್ನು ಭೇದಿಸಿ, ಕರಡಿಗೆಯೊಳಗಿಟ್ಟು- ಲಿಂಗದ ಕಾಯಿಯಲ್ಲಿ ಹುದುಗಿಸಿಟ್ಟು, ಸುರಕ್ಷಿತವ ಮಾಡಲರಿದು -ಜೋಪಾನಮಾಡಲಸಾಧ್ಯವು. ಕರದ ಕೈಯಲಿ—ಪೂಜೆ ಮಾಡುವ(ಬಲದ)ಕೈಯಲ್ಲಿ ಪುಷ್ಪ- m. ಚಂಪಾ ನಗರಿಯು ಎಂದರೆ ಅಲ್ಲಿನ ಜನರು, ಉರದ ಕೈಯಲಿ, ಪ್ರಾಣದ ಕೈಯಲ್ಲಿ, ಲಿಂಗ ನೆರೆದು-ಲಿಂಗ ನೆಲೆಗೊಂಡು, ಪೂಜೆಯ ಮಾಡಲಱಿದು-ಪೂಜೆ ಯನ್ನು ಮಾಡಲು ತಿಳಿದಿರುವಲ್ಲಿ, ಇರವ ಬೋನವ ಮಾಡಿ- -ಸತ್ತುಚಿತ್ತಾನಂದನಿತ್ಯಪರಿಪೂರ್ಣ ವಸ್ತುವೆ ಆದ ತನ್ನಿರವನ್ನೇ ತೂರ್ಯಾನಂದಾಮೃತದುಣಸನ್ನಾಗಿ ಮಾಡಿ, ಸರುವ- ಪರಿವ್ರಾಜಕಾಚಾರ್ಯನು, ಚರಮೂರ್ತಿಯು ಅರ್ಥಾತ್ ಪರಮಜಂಗಮ ಗೋಸಾಲಗಣಾಚಾರ್ಯನು, ಮತ್ತೆಯೂ ಸರುವ-ಶಿವಯೋಗಮಾರ್ಗಾಚರಣೆಯು, ತೃಪ್ತಿಯಂಗೊಟ್ಟು- ಪರಮಾನಂದದ ತಣವಿತ್ತು, ಭರಿತರಾಗಿರ್ಪವರು- ಜೀವರ

CC-0. Jangamwadi Math Collection. Digitized by eGangotri

ಜೀವವಾಗಿ, ಪರಿಪೂರ್ಣರಾಗಿರುವವರು ಎಂದರೆ ಗುರು " "(sic) ('ಗೋಸಾಲಗಣಾಚಾರ್ಯನಲ್ಲದೆ') ಮತ್ತಾರು ಹೇಳಾ ಎಂದು ಸವಾಲು ಎಸೆದಿದ್ದಾನೆ.

ಮೇಲಿನ ಸ್ವರವಚನಭಾಗವು ಅವರ ವಚನದಲ್ಲಿ ನಿರೂಪುಗೊಂಡಿರುವ ಬಗೆ: "ಸರವರದೊಳಗೊಂದು ಹಿರಿದು ಕಮಳವು ಹುಟ್ಟಿ, ಪರಿಮಳವಡಗಿತ್ತನಾರೂ ಅರಿಯರಲ್ಲಾ! ಅರಳಲೀಯದೆ ಕೊಯ್ದು ಕರಡಿಗೆಯೊಳಗಿರಿಸಿ ಸುರಕ್ಷಿತವ ಮಾಡಲಾರೂ ಅರಿಯರಲ್ಲಾ! ಎಡದ ಕೈಯಲಿ ಲಿಂಗ, ಬಲದ ಕೈಯಲಿ ಪುಷ್ಪ–ಎರಡನೂ ಪೂಜೆಯ ಮಾಡಲರಿಯರಲ್ಲಾ! ಇವರಲೋಗರವ ಮಾಡಿ ಸರುವ ತೃಪ್ತಿಯ ಕೊಟ್ಟು ಭರಿತರಾಗಿಪ್ಪರಿನ್ನಾರು ಹೇಳಾ!"ಇಲ್ಲಿ ಅಡಿಗೀಟಿನ ಪದಗಳು ಬೆಡಗಿನ ನುಡಿಗಳು. ಈಹಿಂದೆಯೇ ಇವುಗಳ ಅರ್ಥವನ್ನು ವಿವರಿಸಿದೆ. ಈ ವಚನದ ಮುಂದಿನ ಭಾಗ"ಪರದೇಶಮಂಡಲ ವನಿರವನೊಂದನೆ ಮಾಡಿ ಪರಿಯಾಯ ಪರಿಯಾಯವ-ನೊರೆದು ನೋಡುತ್ತ ಕರುವಿಟ್ಟ ರೂಹಿನಂತೆ ಕಣ್ಣೆರಡು ಹಳಚದಂತೆ, ಧರೆಯ ಏರಿಯ ಮೇಲೆ ಮೆಟ್ಟಿ ನಿಂದು ನೋಡುತ್ತ ಹರಿವ ವೃಷಭನ ಹಿಡಿದು ನೆರೆದ ಸ್ವಾಮಿಯ ಕಂಡು ಜನನ ಮರಣವಿಲ್ಲದಂತಾದೆನಲ್ಲಾ! ಕರುಣ ಕೂಡಲ ಚೆನ್ನಸಂಗಯ್ಯಾ, ಬಸವಣ್ಣನ ಕರುಣ, ಪ್ರಭುವಿಗಲ್ಲದೆ ಇನ್ನಾರಿಗೂ ಅಳವಡದು." ಬ್ರಹ್ಮರಂಧ್ರಾಂತದ ಶೂನ್ಯತೇಜದ ಪ್ರಭು ಪರೀಕ್ಷಿಸಿ ಪರೀಕ್ಷಿಸಿ ನೋಡುತ್ತ ಬಂದು, ಬಸವ-ಪ್ರಭುಗಳ ದೃಷ್ಟಿಗಳೊಂದಾಗಿರಲು, ಪ್ರಭುಬಸವಣ್ಣನವರ ಕೃಪೆ ಪರಸ್ಪರರ ಮೇಲಲ್ಲದೆ ಇನ್ನಾರಿಗುಂಟು ಎಂಬ ಚನ್ನಬಸವಣ್ಣನವರ ಸ್ತುತಿ ಪ್ರಭುವಿನ "ಧರೆಗಿರಿಯ ಮೇಲುಳ್ಳ ಆರುಹಿರಿಯ"ರೆಂಬ ವಚನದ ಅರ್ಥವನ್ನು ನೆನಪುಮಾಡಿ ಕೊಡುವುದನ್ನಿಲ್ಲಿ ಕಾಣಬಹುದು.

ಮಹಾಶಿವಾನುಭಾವಿಗಳೂ ಅಸಾಧಾರಣಪಂಡಿತರೂ ಶ್ರೀಮಚ್ಚನ್ನೂಲಾದ್ರಿ ಶೂನ್ಯಪೀಠಾಧೀಶ್ವರರೂ ಆಗಿ ನಮ್ಮೆಲ್ಲರ ನಡುವೆ ಇದ್ದ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳ

CC-0. Jangamwadi Math Collection. Digitized by eGangotri

ಅನುಗ್ರಹ ಭಾಷಣದ(ದಿನಾಂಕ ೧೫ . ೧೦ ೧೯೬೧ ರ)ಲ್ಲಿ ಪ್ರಕಟಿಸಿದ ಬಯಲತತ್ತ್ವದ ಸ್ವರೂಪಾನುಭವದ ಮಾತುಗಳನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ.

"ಶೂನ್ಯತತ್ತ್ವದ ಬಗೆಗೆ ಶರಣರ ಭಾಷೆಯೇ ಬೇರೆ. ಪೂರ್ಣ, ಪರಿಪೂರ್ಣ ಪರತತ್ತ್ವದ ಸಂಕೇತವಾಗಿ ಶೂನ್ಯಪದ ವನ್ನು ಉಪಯೋಗಿಸಿದ್ದಾರೆ." "ಘಟವನೊಡೆದು ಬಯಲ ನೋಡುವ ವಿಶ್ಲೇಷಣಾತ್ಮಕ ದೃಷ್ಟಿ ಅವರದಲ್ಲ. ಘಟದೊಳಗಿ ಪ್ಪುದೇ ಬಯಲು ಎಂದು ಸಂಶ್ಲೇಷಣಾತ್ಮಕವಾಗಿ ವಿಚಾರಿಸುವ ವಿಶಾಲದೃಷ್ಟಿ ಅವರದು. ಶರಣರು ಒಮ್ಮೊಮ್ಮೆ ಮೂಲತತ್ತ್ವ ವನ್ನು ಪ್ರತಿಪಾದಿಸುವಾಗ ಹಾಗಲ್ಲ, ಹೀಗಲ್ಲ-ಎಂದು ಎಲ್ಲವನ್ನು ಅಲ್ಲಗಳೆದು ಹೇಳುವುದೂ ಉಂಟು. ಉದಾಹರಣೆಗಾಗಿ ಪ್ರಭುದೇವರ ಒಂದು ವಚನಃ-"ಅಯ್ಯಾ ನಿರವಯ ಶೂನ್ಯಲಿಂಗ ಮೂರ್ತಿಯ ನಿಲುಕಡೆ ಎಂತೆಂದೊಡೆ, ಸಾಕಾರನಲ್ಲ, ನಿರಾಕಾರ ನಲ್ಲ, ನೋಡಾ. ನಿರವಯಶೂನ್ಯಲಿಂಗಮೂರ್ತಿ ಆದಿಯಲ್ಲ, ಅನಾದಿಯಲ್ಲ, ಇಹದವನಲ್ಲ, ಪರದವನಲ್ಲ, ಸುಖದವನಲ್ಲ, ದುಃಖದವನಲ್ಲ; ನಿರವಯುವ ಶೂನ್ಯಲಿಂಗಮೂರ್ತಿ ಪುಣ್ಯ-ಪಾಪದವನಲ್ಲ, ಕರ್ತೃ-ಭೃತ್ಯನಲ್ಲ, ಕಾರ್ಯ- ಕಾರಣನಲ್ಲ, ಧರ್ಮಿ-ಕರ್ಮಿಯಲ್ಲ, ಪೂಜ್ಯ-ಪೂಜಕನಲ್ಲ; ಇಂತು ಉಭಯವಳಿದು ಬೆಳಗುವ ನೋಡಾ, ನಮ್ಮ ಗೋಹೇಶ್ವರ ಲಿಂಗವು!"

'ಈ ವಚನದಲ್ಲಿ, ನಿರವಯುವ ಶೂನ್ಯಲಿಂಗ ಮೂರ್ತಿಯ ನಿಲುಕಡೆಯನ್ನು ಸಾಕಾರನಲ್ಲ, ನಿರಾಕಾರನಲ್ಲ ಮೊದಲಾಗಿ ನಿರೂಪಿಸಿರುವದು ಸ್ಪಷ್ಟವಿದೆ. ಇಲ್ಲಿ ಸಾಕಾರನಲ್ಲ, ನಿರಾಕಾರನಲ್ಲ ಎಂದರೆ ಸಾಕಾರನಾಗಿಲ್ಲ, ನಿರಾಕಾರನಾಗಿಲ್ಲ ಎಂಬುದು ಅದರ ಅರ್ಥವಲ್ಲ. ನಿರವಧಿಕ ನಿರುಪಾಧಿಕ ಚೈತನ್ಯವನ್ನು ನಿರ್ದಿಷ್ಟ ಶಬ್ದಗಳಿಂದ ಇತಿಮಿತಿಗೊಳಿಸಿ ಹೇಳುವುದು ಸೂಕ್ತವಲ್ಲವೆಂಬುದು ಅದರ ಅಭಿಪ್ರಾಯ. ಉಭಯವಳಿದು ಬೆಳಗುವ ತತ್ತ್ವವನ್ನು ಉಭಯಾತ್ಮಕವಾಗಿ ವಿವರಿಸುವುದು ಸಾಧ್ಯವೇ? ಹಾಗೆ ಸಾಧ್ಯವಿಲ್ಲವೆಂಬುದನ್ನೇ ಅವರು ಆ ವಿಧವಾಗಿ ಹೇಳಿದ್ದಾರೆ. "ನೇತಿ, ನೇತಿ"ಎಂದರೂ,

CC-0. Jangamwadi Math Collection. Digitized by eGangotri

''ಚಿಕ್ಕಯ್ಯಪ್ರಿಯಸಿದ್ಧಲಿಂಗ ಇಲ್ಲ ಇಲ್ಲ"=+* ಎಂದರೂ ಅದೇ ಅಭಿಪ್ರಾಯ. ಮುಖ್ಯವಾಗಿ, ನಿತ್ಯನಿರಂಜನ, ಸತ್ಯ ಸನಾತನ ತತ್ತ್ವದ ಸ್ವರೂಪ ಸ್ವಭಾವಗಳನ್ನು ಸಾಧ್ಯವಿದ್ದಮಟ್ಟಿಗೆ ಶೂನ್ಯ ಶಬ್ದದಿಂದ ಪ್ರಕಟಿಸುವುದೇ ಶರಣರ ಉದ್ದೇಶ."

(ನೋ.ವೈಚಿಗ್ರಂ.೩೧೯೬೫.ಪು.xl-xli).

ನಿತ್ಯನಿರಂಜನ ಬಯಲತತ್ತ್ವಸ್ವರೂಪವೇ ಜೀವನ್ಮುಕ್ತಾತ್ಮನ ನಿಲವು, ಅದೇ ಲಿಂಗೈಕ್ಯವೆಂದು ವೀರಶೈವ ಸಿದ್ಧಾಂತರೂಪವಾದ ವೇದಸಂಜೀವಿನಿಯಲ್ಲಿ ನಿರೂಪಿಸಿರುವ ಬಗೆಯಿದು:

"ಅನೇಕಜನ್ಮಸಂಚಿತ ಕರ್ಮ ಸಮುದು ಗುರುಕರುಣ ನೆಲೆಗೊಂಡಲ್ಲಿ ಗಗನಾಂಗಿಯಾಗಿ, ಆ ಮನಕ್ಕೆ ತಾನೇ ಆಧಾರಮಾಗಿ, ತಾನೇ ಪರಮನಾಗಿ.... ಆ ಲಿಂಗವೇ ಪ್ರಾಣವಾಯಿತ್ತು, ಆ ಪ್ರಾಣವೇ ಪರಮಾತ್ಮಸ್ವರೂಪಮಾಗಿ ತತ್ತ್ವಮಸಿ ಪದದಿಂದತ್ತತ್ತ ಹಮ್ಮನಳಿದು ಸುಮ್ಮನೆಯಾದುದ ಲಿಂಗೈಕ್ಯವು ॥ ವ ೧ ॥

"ಅರ್ಥವಂ ತಿಳಿದಾನಂದಿಸುವಾಗಕ್ಷರವಂ ಮರೆವಂತೆ ಲಿಂಗವಂ ತಿಳಿದಾನಂದಿಸಿ ತನ್ನಂ ಮರೆದಿರ್ಪುದೇ ಲಿಂಗೈಕ್ಯ ಕಾಣಾ ಮಹಾ ಘನ ದೊಡ್ಡದೇಶಿಕಾರ್ಯಗುರು ಪ್ರಭುವೆ॥ವ.೮೫ ॥

ಮುಮ್ಮಡಿ ಕಾರ್ಯೇಂದ್ರ ರಾಜನ (ಸು.1700)ಈ ವಚನದ ಅಂಕಿತದಲ್ಲಿ ದೊಡ್ಡದೇಶಿಕರು # ಕಾರ್ಯ#ದ ಗುರುವಾಗಿರುವಂತೆ, "ದೇಶಿಕ+ ಆರ್ಯಗುರು"/ "ಆರ್ಗುರು" ಇಲ್ಲವೆ "ಆರುಹಿರಿಯರು" ಎಂಬ ನಿರ್ದೇಶನವನ್ನೂ ಪೂರ್ವಜರ ಗೂಢರಚನಾ ಪರಂಪರೆಯ ಪರಿಪಾಲನೆಯನ್ನೂ ನೆನೆಪುಮಾಡಿಕೊಡುವುದನ್ನು ತಪ್ಪದೆ ಗಮನಿಸುವುದಗತ್ಯ.

ಸತ್ಯಮೇವ ಜಯತೇ

ಸತ್ಯಂ ಶಿವಂ ಸುಂದರಂ

....

=+* "ಇಲ್ಲ ಇಲ್ಲ"ಎಂಬ ಬಗೆಗೆ ಪ್ರಸ್ತುತಗ್ರಂಥಕರ್ತರ ಅರ್ಥಸೂಚನೆ: [=+ two negatives make a positive--**+ "ಇಲ್ಲವೆಂಬುದುಇಲ್ಲ.:/ ಇರವಿನಇರವು:ಆಶ್ರಯದಆಶ್ರಯ:ಪರಮಪದ.UltimateResort. ನೋ:ಇಲ್ m.ಮನೆ. ಇಲ್ಲ+ (ಅ)ಣ> ಇಲ್ಲಣ m.ಮನೆಯಜೀವಿ.'ಜಾಡ'] # ಚಾಮರಾಜನಗರಜಿಲ್ಲೆ ನಂಜನಗೂಡುತಾಲ್ಲೂಕಿನ ಗ್ರಾಮದ ಹೆಸರು.

CC-0. Jangamwadi Math Collection. Digitized by eGangotri

ಆಜೀವ ಮಧುಸ್ಮೃತಿ
ಟಿಪ್ಪಣಿ

1. 'ಆಜೀವಕರಿಗೆ ಲಿಂಗ ಮತ್ತು ಶಾಸ್ತ್ರ ಪ್ರತ್ಯೇಕವಾದುವುಗಳಲ್ಲ' ಜೈನಗ್ರಂಥಗಳ ಈ ಹೇಳಿಕೆಯ ಹಿನ್ನೆಲೆಯಲ್ಲಿ ಗಮನಿಸಬೇಕಾದ ಅಲ್ಲಮ ಪ್ರಭುದೇವರ ವಚನವಿದು:

"ವೇದ ಪ್ರಮಾಣವಲ್ಲ, ಶಾಸ್ತ್ರ ಪ್ರಮಾಣವಲ್ಲ; ಶಬ್ದ ಪ್ರಮಾಣವಲ್ಲ ಕಾಣಭೋ ಲಿಂಗಕ್ಕೆ! ಅಂಗಸಂಗದ ಮಧ್ಯದಲ್ಲಿದ್ದು ಬೈಚಟ್ಟು ಬಳಸಿದ, ಗೋಗೇಶ್ವರಾ, ನಿಮ್ಮ ಶರಣಾ."

ಅಂತರಾತ್ಮಮಧ್ಯದ ಶೂನ್ಯಲಿಂಗದ ಸ್ವಸ್ವರೂಪಾನುಭವಕ್ಕೆ ಅರ್ಥಾತ್ ತನ್ನ ತಾನರಿವುದಕ್ಕೆ ತಾನೇ ಪ್ರಮಾಣವಲ್ಲದೆ ವೇದ ಶಾಸ್ತ್ರ ಪುರಾಣಗಳಲ್ಲವೆಂಬ ಪ್ರಭುವಿನ ಮತವನ್ನು ಮಗ್ಗೆಯ ಮಾಯಿದೇವರು ಪ್ರಕಟಿಸಿರುವ ಬಗೆ:

ವೇದ ಶಾಸ್ತ್ರಪುರಾಣಾನಿ ನ ಪ್ರಮಾಣಾನಿ ಸರ್ವದಾ।
ಸ್ವಾತ್ಮಸ್ಥವಸ್ತುವಿಜ್ಞಾನೇ ಪ್ರಮಾಣಂ ಸ್ವಯಮೇವ ಹಿ॥

2. ಆಱು/ಅಱು ಹಿರಿಯುರು/ ಅರುಹಿರಿಯುರು— ಸಕಾರನಕಾರೋಭಯಾರ್ಥ ಸಂಬಂಧಿ ಪದಪುಂಜವಿವು.

೧. "ಆಱುಹಿರಿಯರು" ಎಂಬ ನುಡಿಗಟ್ಟಿನಲ್ಲಿ (idiom) ಆಱು> ಆರು< ಅರು< ಅಱು(six) ಎಂಬ ಸಂಖ್ಯಾವಾಚಕದ ಪ್ರಯೋಗವಾಗಿದೆ. "ಆರ್ವರು" + "ಹಿರಿಯರು" ಎಂಬ ಎರಡು ಪದಗಳು ಕೂಡಿ "ಆಱುಹಿರಿಯರು" ಎಂದು ಸಂಕ್ಷಿಪ್ತಗೊಂಡು ಸಂಖ್ಯಾವಿಶೇಷ್ಯವಾಗಿದೆ.

೨. "ಅರುಹಿರಿಯರು"— "ಅರಿದಪ್ಪ + ಹಿರಿಯರು" ಈ ಪದದ್ವಯಗಳ ಅಡಕ ನುಡಿಗಟ್ಟಿನಲ್ಲಿ ಕನ್ನಡದ "ಅರಿದು" ಪದದ ಅನಿರ್ವಚನೀಯ, ಅಭೇದ್ಯ, ಅದ್ಭುತ, ಅಸಾಧ್ಯ, ಉದಾತ್ತ, ಗಹನ ಎಂಬೀ ಅರ್ಥಗಳು ಹುದುಗಿವೆ. ಮಹೋದಾತ್ತ ಘನತೆವೆತ್ತ ಗುರುವರ್ಯರಾದವರು ಎಂಬ ಭಾವವಿದೆ. "ಕೊಂಕಣ ದ್ವೀಪದಲ್ಲಿ ಒಂದು ಕಪಿ ಹುಟ್ಟಿತ್ತು ..." ಎಂದು ಆರಂಭವಾಗುವ ಅಲ್ಲಮ ಪ್ರಭುವಿನ ಶರಣಸ್ಥಲದ ವಚನ (ಮಹಾಲಿಂ. 61) ಹಾಗೂ ಅದರ ಟೀಕೆಯಲ್ಲಿ ಬರುವ

CC-0. Jangamwadi Math Collection. Digitized by eGangotri

"ಅರುಹಿರಿಯರು" ಎಂಬ ಶಬ್ದಕ್ಕೆ ಮಹಾಲಿಂಗದೇವರು "ಶಿವನನರಿದು ಮುಕ್ತರಾದೆಹೆವೆಂಬ ಜ್ಞಾನಿಗಳು"(ಪು.೧೬೦) ಎಂದೂ " ಕೋಳಿ ಅರ್ಕಜದ ಅಱಿವನಱಿವ ಅರುಹಿರಿಯರು ಅನುಭಾವಿಗಳೆಂದು ನಿರೂಪಿಸುತ್ತ, ಸತ್ಪ್ರಣವದ ಅರಿವುವಿಡಿದು ಪ್ರಣವಬ್ರಹ್ಮವಾದಿಗಳೆಂಬ ಆ ಅನುಭಾವಿಗಳು"ಸುಜ್ಞಾನಿ" ಗಳೆಂದು ಮನಗಾಣಿಸಿರುವುದನ್ನು ಗಮನಿಸಿದಾಗ ಆ ಆರು ಹಿರಿಯರ ಗೋಸಾಲ ಗುರೂತ್ತಮನ ಶೂನ್ಯಧ್ಯಾನವಿಧಾನ ಪ್ರಣವಾತ್ಮಕವಾದುದೆಂಬುದು ದೃಢಪಡುತ್ತದೆ.

"ಆರು" (அரு) ಎಂಬ ತಮಿಳು ಶಬ್ದಕ್ಕೆ ಎಣಿಕೆಯ ಆರು(six) ಎಂಬ ಸಂಖ್ಯಾರ್ಥವಲ್ಲದೆ ಅಣು, ಅಱಿವು, ಕಡವುಳ್ (ದೈವ) ಪರಮಾತ್ಮ, ನಿರಾಕಾರ, ಅಕಾಯ, ಅಧ್ಯಾತ್ಮವೆಂಬೀ ಹಲವು ಅರ್ಥಗಳುಂಟು. ತಮಿಳಿನ ಅರುಂದವರ್ "அருந்தவர்"ಪದಕ್ಕೆ முனிவர் (("rare ascetics") ಕಠಿನ ತಪೋವ್ರತನಿರತ ಮುನಿ ಇಲ್ಲವೆ ಗಣಂಗಳೆಂದೇ ಅರ್ಥವಿರುವುದನ್ನು ಗಮನಿಸಬಹುದು. ಅಜಾತಶತ್ರುವಿನ ಕಾಲದ "ಆರು ಹಿರಿಯರು" ಅಸಾಧಾರಣ ತಪಸ್ವಿಗಳೆಂಬ ಖ್ಯಾತಿಗೆ ಪಾತ್ರರಾಗಿದ್ದವರು. ಗೂಢತತ್ತ್ವಜ್ಞಾನಿಗಳಾದಂತಹ ಗುರುಗಳು ಎಂಬ ಅರ್ಥದಿಂದ ಗಣ್ಯರಾಗಿದ್ದವರು. ಅರುಹಿರಿಯರು, ಆರುಹಿರಿಯರು –ಈ ಪದಗಳು ಪ್ರಾಚೀನ ಕಾಲದಲ್ಲಿ ಆದ ಆರುಗುರುಗಳ ಸತ್ವಪರೀಕ್ಷಾ ಸಂಬಂಧದ ಒಂದು ಐತಿಹಾಸಿಕ ಸಂಗತಿ ಎಂಬುದನ್ನು ನೆನಪುಮಾಡಿ ಕೊಡುವ ಪದಪ್ರಯೋಗಗಳೆಂದು ಮರೆಯದಿರುವುದಗತ್ಯ.

ಮಗಧ ದೇಶದ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಇತಿಹಾಸದಲ್ಲಿ ಧರ್ಮಗುರುಗಳೆಂದು ವ್ಯಕ್ತಿಶಃ ಹೆಸರಿಸಲ್ಪಟ್ಟು ಪ್ರಸಿದ್ಧರಾಗಿದ್ದ ತತ್ತ್ವಜ್ಞಾನಿಗಳು ಆರ್ವರೊಳಗೆ ಒಬ್ಬರಾದ ಗೋಸಾಲ ಗುರುವನ್ನು ಮಗ್ಗೆಮಾಯಿದೇವರು ಆರ್ಯರಾದ ಮಹಾಪುರುಷರೆಂದು ಸ್ಮರಿಸಿರುವುದನ್ನು ಹಿಂದೆ ಗಮನಿಸಿದ್ದೇವೆ. ಪುರಾತನ ಕಾಲದ ಆ ಆರು ಮೂಲಗುರುಗಳ ತಂಡದ ನೆನಪು ಆಂಧ್ರ ದೇಶದ ಜನಬಳಕೆಯ ಮಾತಿನಲ್ಲಿ"ಆಱು ಗುರು"/

CC-0. Jangamwadi Math Collection. Digitized by eGangotri

'ಆರ್ಗುರು" ಎಂಬ ಪದಗಳಲ್ಲಿ ಅಡಗಿಕೊಂಡಿದ್ದರೂ ಕಾಲ, ದೇಶ, ಸಂಪರ್ಕಗಳ ದೂರದ ಕಾರಣ ಕ್ರಮೇಣ ಆ ಪದಗಳ ಮೂಲಾರ್ಥ ಮಸುಕು ಮಸುಕಾಗಿಹೋಗಿ ದೇಶೀಯ ಸರ್ವನಾಮ ರೂಪದಿಂದ ಆರು ಮಂದಿ, ಆರು ಪುರುಷರು ಎಂಬ ರೂಢ್ಯರ್ಥದಿಂದ ಉಳಿದುಕೊಂಡು ಬಂದಿರುವುದು ಕಂಡು ಬರುತ್ತದೆ (ನೋಡಿ: ತೆಲುಗು ಶಬ್ದಾರ್ಥದೀಪಿಕೆ).

ನಕಾರಾರ್ಥ ಸಂಬಂಧದ ಆ ಪದಪ್ರಯೋಗಗಳಿಗೆ ನೋಡಿ:

೧. "ಆಶೆಯೆಂಬ ಶೂಲದ ಮೇಲೆ ವೇಷವೆಂಬ ಹೆಣನ ಕುಳ್ಳಿರಿಸಿ, ಧರೆಯ ಮೇಲುಳ್ಳ ಅರುಹಿರಿಯರು ಈಹಿಂಗೆ [ಅರ್ಥಾತ್ ಮನದ ಬಯಕೆಗೆ] ಸವೆದರು ನೋಡಾ! ಆಸೆಯ ಮುಂದಿಟ್ಟುಕೊಂಡು ಸುಳಿವ ಹಿರಿಯರ ಕಂಡು ಹೇಸಿಕೆಯಾಯಿತ್ತು, ಗೋಗೇಶ್ವರಾ(ನೋ: ವ.372 ಪ್ರ.ಗೀ; 466ವ.ಚಂ.).

೨. ವಾರಿ ಬಲಿದು ವಾರಿಕಲ್ಲಾದಂತೆ, ಶೂನ್ಯವೇ ಸ್ವಯಂಭುವಾಯಿತ್ತು ಮೂರ್ತಿವೆತ್ತು. ಆ ಮೂರ್ತಿಯಿಂದಾಯಿತ್ತು ವಿಶ್ವೋತ್ಪತ್ತಿ. ಆ ವಿಶ್ವೋತ್ಪತ್ತಿಯಿಂದಾಯಿತ್ತು ಸಂಸಾರ. ಆ ಸಂಸಾರದಿಂದಾಯಿತ್ತು ಮಱವೆ. ಆ ಮಱವೆಯೆಂಬ ಮಹಾಮಾಯೆ ವಿಶ್ವವ ಮುಸುಕದಲ್ಲಿ, ನಾ ಬಲ್ಲೆ ಬಲ್ಲಿದರೆಂಬ ಅಱುಹಿರಿಯರೆಲ್ಲ ತಾಮಸಕ್ಕೊಳಗಾಗಿ ಮೀನಕೇತನನ ಬಲೆಗೆ ಸಿಲುಕ, ಮಾಯೆಯ ಬಾಯ ತುತ್ತಾದರಲ್ಲಾ, ಗೋಹೇಶ್ವರ (ವಶಾಸಾ ಪು 40; ವ.ಚಂ 746).

೩. ನಾನೆಂಬಹಂಕಾರ ತಲೆದೋಱದಲ್ಲಿ ಅಟಮಟಕುಟಿಲ ಕುಹಕವೆಂಬ ಬಿಱುಗಾಳಿ ಹುಟ್ಟಿತ್ತು. ಆ ಬಿಱುಗಾಳಿ ಹುಟ್ಟಲೊಡನೆ ಜ್ಞಾನಜ್ಯೋತಿ ಕೆಡಲೊಡನೆ ನಾ ಬಲ್ಲೆ ಬಲ್ಲಿದರೆಂಬ ಅಱುಹಿರಿಯರೆಲ್ಲರು ತಾಮಸಕ್ಕೊಳಗಾಗಿ ಸೀಮೆ-ಗೆಟ್ಟರು ಕಾಣಾ ಗೋಗೇಶ್ವರಾ(ವ.ಚಂ 747)."

ಈ ಉದ್ಧೃತ ವಚನಗಳಲ್ಲಿ ಮನಸ್ಸಿನಲ್ಲಿ ಹುದುಗಿಕೊಂಡಿರುವ ವಿಷಯಾಭಿಲಾಷೆಗೆ ಮನಸೋತು ಕಪಟವೇಷವನ್ನು ಧರಿಸಿ ಆಸೆಯ ಪೂರೈಕೆಗಾಗಿ ಹೆಣಗುತ್ತ, ಸೊರಗುತ್ತ ದೇಶಸಂಚಾರ ಮಾಡತೊಡಗುವ ದೇಶಿಕರಂತಹ

CC-0. Jangamwadi Math Collection. Digitized by eGangotri

ಅರುಹಿರಿಯರು ತಾಮಸಚರಿತ್ರರು, ಕಾಮಿಗಳು. ಜ್ಞಾನವಿಹೀನರಾಗಿ ಎಲ್ಲವನ್ನೂ ಬಲ್ಲೆವೆಂಬ ಗರ್ವದಿಂದ ಬೀಗಿ ಎಲ್ಲೆಮೀಱಿದ ನಡೆಯಿಂದ ಕೆಟ್ಟುಹೋದರೆಂಬುದು ಪ್ರಭುವಿನ ಮನಕ್ಕೆ ತಾಕಿ ಅದಕ್ಕಾಗಿ ಅವರು ಮರುಗಿದರೆಂಬುದನ್ನು ಕಾಣಬಹುದು. ಕೇವಲ ಮೈಮೇಲಿನ ಬಟ್ಟೆಯನ್ನು ಬಿಟ್ಟು ನಗ್ನರಾದ ಮಾತ್ರದಿಂದ ಸರ್ವವನ್ನೂ ತ್ಯಜಿಸಿದ ವಿರಾಗಿಗಳೆಂದುಕೊಂಡು, ತಾವೆ ಜ್ಞಾನಿಗಳೆಂದು ಮೆರೆಯುವಂತಹ ಅರುಹಿರಿಯರಾದವರಿಗೆ ಜೀವನ್ಮುಕ್ತಿಯಿಲ್ಲವೆಂಬುದನ್ನು ಪ್ರಭುದೇವರು ಮನಗಾಣಿಸಿರುವ ಬಗೆಯಿದು:-

"ನಾಣ ಮಱೆಯನಾಚಕೆ ಒಂದು ನೂಲಮಱೆಯಲಡಗಿತ್ತು. ಬಲ್ಲೆನೆಂಬ ಅಱುಹಿರಿಯರೆಲ್ಲಾ ಅಲ್ಲಿಯೇ ಮರುಳಾದರು. ನೂಲ ಮಾಱಿ ಹತ್ತಿಯ ಬೆಲಿಯಹೋದರೆ ಅದು ಅತ್ತಲೆ ಹೋಯಿತ್ತು, ಗೋಗೇಶ್ವರಾ." ಪ್ರಭುವಿನ ಈ ಬೆಡಗಿನ ನುಡಿ ಮಗ್ಗೆಯ ಮಾಯಿದೇವರ ಕವಿವಾಣಿಯಲ್ಲಿ ಮಿಡಿದಿರುವ ಸತ್ಯಸ್ವರೂಪದ ನಿಜದ ನಿಲವಿದು:

ಲೋಕೋ ಲಜ್ಜಾವಹಂ ಕಂಚತ್ತಂತುಮಾತ್ರಂ ತಿರಸ್ಕೃತಂ।
ಅಸ್ತಿ ತತ್ರ ತಿರೋಭೂತಾಃ ಸರ್ವೇ ಜ್ಞಾನಾಭಿಮಾನಿನಃ॥
ಜ್ಞಾನವಿಕ್ರಯಿಣಾಂ ತೇಷಾಂ ದೂರಸ್ಥಂ ಹಿ ಪರಂ ಪದಮ್।

೩. ಭರಿತ: ಭೃತ, ಭರಿತ-ಇವು ಸಮಾನಾರ್ಥಕಗಳು.ಪಾಲಿಸು, ಭರಿಸು ಎಂಬರ್ಥದ'ಭರಿ'ಶಬ್ದಮೂಲದ 'ಭರಿತ'ಪದಕ್ಕೆ ಅರಸ ಎಂಬ ಅರ್ಥವಿದೆ."ಧರೆಯ ಮೇಲೊಂದು ಅರಿದಪ್ಪ ರತ್ನ ಹುಟ್ಟಿರಲು, ಅದನರಸಲರಸಹೋಯಿತ್ತು." ಭೂಮಿಯ ಮೇಲೆ ಜನ್ಮವೆತ್ತ"ಅರಿದಪ್ಪ ರತ್ನ" ಎಂದರೆ ಗಹನತತ್ತ್ವಜ್ಞಾನಿಯೂ ಕಠಿನವ್ರತಿಯೂ ಆದಾತನನ್ನು ಅರಸ(ನು)ಹುಡುಕುತ್ತ ಹೋಗಲಾಗಿ"ಅ-ರಸಹೋಯಿತ್ತಯ್ಯ"ಆಪುರುಷರತ್ನವಾದರೂ ಬ್ರಹ್ಮಾನಂದರಸ-ಮಗ್ನವಾಗಿ ಬಿಟ್ಟಿತ್ತು ಎಂಬಲ್ಲಿ ದೂರದ ಆ ಸರವರದ ಪುಷ್ಪಪುರಿ ಚಂಪಾನಗರಿಯ ವಿದ್ವತ್ಸಭೆಯ ಪರೀಕ್ಷೆಯಲ್ಲಿ ಪರಬ್ರಹ್ಮವನ್ನು ಮೀರಿದವನಾದ ಆರ್ಯಗುರು ಗೋಸಾಲನನ್ನು ಸ್ಮರಿಸಿಕೊಂಡಿರುವರೆಂಬುದಕ್ಕೆ ಪ್ರಭುದೇವರ ಈ ಬೆಡಗಿನ ನುಡಿ ದುರ್ಬಿನನ್ನು ಹಿಡಿದಂತಿದೆ.

CC-0. Jangamwadi Math Collection. Digitized by eGangotri

ಅನುಬಂಧ: ೧

ಆಜೀವಶಿವ ಕಾಯವೇ ಕೈಲಾಸ

ಹನ್ನೊಂದು ಹನ್ನೆರಡನೆ ಶತಮಾನಗಳ ಹಿಂದಿನಿಂದಲೂ ಶಿವಶರಣರ ಸಾಮಾಜಿಕ, ಧಾರ್ಮಿಕ ಹಾಗೂ ರಾಜಕೀಯ ಪರಿಸ್ಥಿತಿಯಲ್ಲಿನ ಆಧ್ಯಾತ್ಮಿಕ ಸಾಧನೆಯ ಪಥದಲ್ಲಿ ಕಾಯಕದ ತತ್ತ್ವಾಚರಣೆಯ ನಿಷ್ಠೆ ನೆಲೆಗೊಂಡಿದ್ದಿತು. ಆ ಕಾಯಕ ತತ್ತ್ವದ ಮೂಲವೋ 'ಪ್ರಸಾದಕಾಯ'ವನ್ನು ಆಧರಿಸಿದ್ದಿತು. ಜೀವನದ ಪರಮೋದ್ದೇಶ ಸಾಧನೆಯೇ ಗುರಿಯಾದ ಕಾಯವಾದರೋ ಆತ್ಮತತ್ತ್ವವನ್ನು ಆಶ್ರಯಿಸಿದ್ದಿತಾದ ಕಾರಣ ಅದರ ಕಾರ್ಯವೂ ಆತ್ಮಸಂಸ್ಕೃತಿಗೆ ದಾರಿಯಾಯಿತು. ತನ್ಮೂಲಕ ಸಮರಸ ಸಮಾಜರಚನೆಯ ಸಂದೇಶವನ್ನು ಸಾರಿತು. ಆ ಕಾಯ ಇಲ್ಲವೆ ಶರೀರ ಜಡವಲ್ಲ, ಕೀಳಲ್ಲ, ಹೀನವಲ್ಲ, ತುಚ್ಛವೂ ಅಲ್ಲ. ಕಾಯವೊಂದು ದೇವಾಗಾರ. ಜೀವದೇವನ ನಿವಾಸಸ್ಥಾನ. ಶಿವನ ಅನುಗ್ರಹದಿಂದ ತಾನಾಗಿ ಬಂದ ಈ ದೇಹವನ್ನು ಕೆಡಿಸಲಾಗದು.ಪ್ರಸಾದಕಾಯವೆಂದು ಪರಿಭಾವಿಸಿ ಭಾವಿಸಿ, ಶಿವನ ಆ ದೇಹದೇವಾಲಯವೇ ಕೈಲಾಸವೆಂಬ ದೃಷ್ಟಿ ಧ್ಯೇಯಗಳು ಶರಣರ ಬಾಳಿನಲ್ಲಿ ಬೇರೂರಿದ್ದಿತು.

ಪರಾತ್ಪರ ಪರವಸ್ತುವಾದ ವಿಶ್ವಾತ್ಮನ ಮಹಿಮೆಯನ್ನು ಮನಗಂಡು ಆ ಚೈತನ್ಯದ ಅಂತಃಸತ್ತ್ವವಾದ ಸೌಂದರ್ಯವೇ ಶಿವವೆಂದು ಆರಾಧಿಸುವ ಬಯಕೆ ಮಾನವನ ವಿಶಿಷ್ಟಗುಣಗಳಲ್ಲಿ ಒಂದು. ಆತ್ಮಸಂಸ್ಕೃತಿಯ ಈ ಲಕ್ಷಣ ಸ್ಥೂಲದೇಹಕ್ಕೆ ಸೀಮಿತಗೊಳ್ಳದೆ ಸೂಕ್ಷ್ಮದೃಷ್ಟಿಯ ಅಂತರಂಗ ಜೀವನಕ್ಕೆ, ಮಾನಸಿಕ ನೆಮ್ಮದಿಗೆ, ಆತ್ಮಸೌಖ್ಯಕ್ಕೆ ಕಾರಣವಾದ ಪ್ರೀಯುವೇ ಆತ್ಮೀಯತೆಯೆನಿಸಿ ದೈವೀಭಾವದ ರಸಲೇಪನದ ಚೈತನ್ಯ-ಸ್ವರೂಪವನ್ನುಳ್ಳದ್ದಾಯಿತು. ಆ ಆತ್ಮ ಜೀವಾತ್ಮ, ಅಂತರಾತ್ಮ, ಪರಮಾತ್ಮವೆಂದು ತ್ರಿವಿಧಾತ್ಮಕ. ಆತ್ಮನೇ ಅಂಗನೆನಿಸಿ ನಿರಂಗ, ನಿರಾಕಾರವಾದದ್ದು ಸಾಕಾರ, ಸಾಂಗವಾಗುತ್ತದೆ. ಸತ್ ಚಿತ್ ಆನಂದಸ್ವರೂಪವೇ ತಾನಾದ'ಆತ್ಮ'ನು ಜನ್ಮಧಾರಣೆ ಮಾಡಿದಾಗ ವಿಶ್ವಜೀವನೆನಿಸಿ 'ಪಿಂಡ'ವಾಗುತ್ತಾನೆ. ಸತ್-ಶಕ್ತಿಯ ಪೀಠವಾಗಿ, ಚಿತ್-ಶಕ್ತಿಯ ಜ್ಯೋತಿಯಾಗಿ ಆನಂದಾಮೃತದ ಕಡಲಾಗಿ ಈ ಪಿಂಡವಿರುತ್ತದೆ. ಸತ್ಯಶುದ್ಧ ಕಾಯಕದಲ್ಲಿ ಆತ್ಮ-ಸಾಧನೆ ಹಾಗೂ ಎಲ್ಲರೊಳು ಒಂದಾಗುವ ಆತ್ಮೀಯತೆಯೇ ಚರಮಗುರಿ. ಜಂಗಮ-ದಾಸೋಹ ಭಕ್ತಿ, ಸದ್ಭಕ್ತರ ಆಶ್ರಯವೇ ಅದರ ಅಡಿಗಲ್ಲು ಎಂಬುದನ್ನು ಮನಗಾಣಿಸುವ ವಚನವಿದು:

CC-0. Jangamwadi Math Collection. Digitized by eGangotri

"ಆಶೆಯರತ ಬಾಚಯಲ್ಲಿ ಭವಪಾಶವಿಲ್ಲದ ಜಂಗಮಕ್ಕೆ ತೆತ್ತ. ರೋಷವಿಲ್ಲದ ಉಳಿಯಲ್ಲಿ ನಿಜವಾಸವ ನೋಡಿ ಹುಗಿಲುದೆಗೆವುತ್ತ ಭಾಷೆಗೆ ಊಣಯವಿಲ್ಲದ ಸದ್ಭಕ್ತರ ಆಶ್ರಯಕ್ಕೆ ನಿಜವಾಸವ ಮಾಡುವ ಕಾಯಕ.ಈ ಗುಣ ಬಾಚಯ ಬಸವಣ್ಣನ ನೇಮ. ಇದು ಸಂಗನ ಬಸವಣ್ಣಪ್ರಿಯ ವಿಶ್ವಕರ್ಮಟಕ್ಕೆ ಕಾಳಿಕಾವಿಮಲ ರಾಜೇಶ್ವರಲಿಂಗವನರಿವುದಕ್ಕೆ."

ಜಡದಲ್ಲಿ ಚೇತನವನ್ನು ಕಾಣುವ, ಆ ವಿಶ್ವಚೈತನ್ಯ ಚೇತನದಲ್ಲಿ ಕರುಣೆ ಕಂಗೊಳಿಸುವುದನ್ನು ಇಲ್ಲಿ ಕಾಣುತ್ತೇವೆ. ತನುಗುಣವಡಗಿದ ನಿಜದ ನಿಧಿಯಾದ ಲಿಂಗಾರ್ಚನ ಕ್ರೀಯೇ ಕಾಯಕದ ಲಕ್ಷಣವೆಂಬುದರ ಅರಿವಾಗದಿರದು. ಲಿಂಗವನ್ನು ಅರಿಯುವುದಕ್ಕೆ ಕಲ್ಯಾಣದ ಬಸವಣ್ಣ ಕೊಟ್ಟ ಕಾಯಕದ ಆಚಾರಾಂಗವೇ ಆಧ್ಯಾತ್ಮಿಕ, ಧಾರ್ಮಿಕ ಹಾಗೂ ಸಾಮಾಜಿಕ ಸುವ್ಯವಸ್ಥೆಯ ನೀತಿ ನಿಯಮವೆಂಬುದನ್ನು ಆತ್ಮಾಲಂಕಾರಿಕ ನುಡಿಯ ಬೆಡಗಿನಿಂದ ಮನಗಾಣಿಸಿರುವ ವಚನಕಾರನ ಪ್ರಜ್ಞಾ ವಿಶೇಷವನ್ನೂ ಸ್ವೋಪಜ್ಞತೆಯನ್ನೂ ಎಷ್ಟು ಕೊಂಡಾಡಿದರೂ ಸಾಲದು. ಆಜೀವಕ ಮತತತ್ತ್ವಪ್ರಸಾರವನ್ನು ಗೋಸಾಲ ಗುರೂತ್ತಮನು ಆರಂಭಿಸಿದುದು ಶ್ರಾವಸ್ತಿಯ ಕುಂಭಕಾರ ಕಾಯಕಕ್ಷೇತ್ರದಲ್ಲಿ ಎಂಬುದನ್ನೂ ಇಲ್ಲಿ ಸ್ಮರಿಸಬಹುದು.

"ಕಾಯವಳಿದು ಜೀವ ನಿಮ್ಮಲ್ಲಿಗೆ ಬಂದಡೆ ಎನ್ನಿಂದ ವ್ರತಗೇಡಿಗಳಿಲ್ಲ ಗೋಗೇಶ್ವರಾ" ಎಂಬ ಪ್ರಭುವಾಣಿಯಲ್ಲಿ ಜೀವನ್ಮುಕ್ತ ಕಾಯವೇ ಶಿವನ ನಿವಾಸವೆಂಬುದರ ಅರಿವಾಗದಿರದು. "ಕಾಯದೊಳಗಣ ಜೀವವ ಮೀಟಿ ಹೋಹ ಕಳ್ಳನ ಸಂಗಬೇಡ. ನಿಮ್ಮ ನಿಮ್ಮ ವಸ್ತುವ ಸುಯಿಧಾನವ ಮಾಡಿಕೊಳ್ಳಿ. ಗೋಗೇಶ್ವರನೆಂಬ ಕಳ್ಳನ ಕೊಂದರೆ ಅಳುವವರಾರೂ ಇಲ್ಲ."(ವ.೧೦೧ ಪ್ರ.ಗೀ.)

ಗೋಸಾಲಪ್ರತಿಪಾದಿತ ಶೂನ್ಯನಾಮ ಅಂತರಾತ್ಮ ಧ್ಯಾನೋಪದೇಶವೇ ಆಗಿರುವ ತಾತ್ಪರ್ಯ ಪ್ರಭುದೇವರ ಮೇಲಣ ವಚನದ ಆಡುಮಾತಿನ ಧಾಟಿಯಿಂದ ಜನಮನದಲ್ಲಿ ನೇರ ನಾಟಿ ನಿಂದಿರುತ್ತದೆ. ಗೋಗೇಶ್ವರ ನಿರಾಳ ಶೂನ್ಯದೊಳಗೆ ಸಿಲುಕಿತ್ತಯ್ಯ ಎಂಬಲ್ಲಿ ಬಯಲುಗ ಶಿವನೇ ಜೀವನು, ಜೀವದೇವನ ಕಾಯವೇ ಕೈಲಾಸವೆಂಬುದು ಸುಸ್ಪಷ್ಟ.

CC-0. Jangamwadi Math Collection. Digitized by eGangotri

ಅನುಬಂಧ: ೨

ಜೈನ-ವೀರಶೈವ ಸಮಯಸಮಾಗಮ

ಜೀವದಯಾ ಧರ್ಮವೇ ಸದ್ಧರ್ಮ

ಪ್ರಾಗೈತಿಹಾಸಿಕ ಕಾಲದಿಂದಲೂ ಅಸ್ತಿತ್ವವನ್ನು ಹೊಂದಿದ್ದ ಧರ್ಮಗಳಲ್ಲಿ ಜೈನ ಹಾಗೂ ಶೈವ ಮತ-ಸಂಪ್ರದಾಯಗಳು ಭಾರತದ ಸಂಸ್ಕೃತಿಯ ಇತಿಹಾಸಕ್ಕೆ ಜೀವಂತವಾದ ಕಳೆಯನ್ನು ಕೊಟ್ಟು ಇಂದಿಗೂ ಆದರ್ಶ-ಪ್ರಾಯವಾಗಿವೆ. "ಅಹಿಂಸಾ ಪರಮೋ ಧರ್ಮಃ" ಪ್ರಾಣಹಿಂಸೆ ಮಾಡದಿರುವುದೇ ಆತ್ಮನ ಉದಾತ್ತವಾದ ವರ್ತನೆ, ಧರ್ಮಾಚರಣೆ ಎಂಬುದನ್ನು ನಡೆಯಲ್ಲಿ ತಂದು ಯಜ್ಞಯಾಗಾದಿ ಕರ್ಮಾಚರಣೆಯೇ ಸ್ವರ್ಗಪ್ರಾಪ್ತಿಗೆ ಸಾಧನವೆಂದು ಭಾವಿಸಿ, ಪ್ರಾಣಹಿಂಸೆಯನ್ನು ಮಾಡುತ್ತಿದ್ದ ವೈದಿಕಮತದ ಆಚರಣೆಯನ್ನು ಖಂಡಿಸಿ ದಯಾಧರ್ಮವನ್ನು ಎತ್ತಿಹಿಡಿಯಲು ಯತ್ನಿಸಿದ ಧರ್ಮಗಳಲ್ಲಿ ಆದ್ಯತೆಯನ್ನು ಪಡೆದ ಕೀರ್ತಿ ಜೈನ ಧರ್ಮಕ್ಕೆ ಸಲ್ಲುತ್ತದೆ. ಜೀವಾತ್ಮನು ಮಹಿಮಾನ್ವಿತ. ಆ ಕಾರಣ ಕೊಲಬಾರದೆಂಬ ಜೈನಮತ ತನ್ನ ತಲೆಯಮೇಲಿರಲಿ ಎಂದು ಸಾರಿ ಸರ್ವಜ್ಞನು ಜಗತ್ತಿಗೆ ಜೈನಮತದ ಮಹತ್ವವನ್ನು ಮನಗಾಣಿಸಿದ್ದಾನೆ. ಜೀವದಯಾಧರ್ಮವೇ ಸದ್ಧರ್ಮವೆಂಬುದನ್ನೂ, ಜ್ಞಾನಕ್ರಿಯಾಚರಣೆಯೇ ಜೈನಧರ್ಮದ ಸಾರವೆಂಬುದನ್ನೂ ಸಮ್ಯಗ್‌ದರ್ಶನಜ್ಞಾನ ಚಾರಿತ್ರವೆಂಬ ರತ್ನತ್ರಯವು ಎತ್ತಿಹಿಡಿದಿದೆ.

ಜಗತ್‌ಸೃಷ್ಟಿಕರ್ತನೂ, ನಿಯಾಮಕನೂ ಆದ ದೇವನೊಬ್ಬನಿದ್ದಾನೆಂದು ನಂಬದಿದ್ದರೂ ಜೈನದರ್ಶನವು ಶುದ್ಧಾತ್ಮತತ್ತ್ವವನ್ನು ಅಂಗೀಕರಿಸಿದೆ. ದೇವನಿದ್ದಾನೋ ಇಲ್ಲವೋ ಶೂನ್ಯ(m ಲಿಂಗ) ಧ್ಯಾನವನ್ನು ಮಾಡಲಿಕ್ಕೇಬೇಕೆಂದು ಬೋಧಿಸಿದ ಗೋಸಾಲನೆಂಬವನು ಸು.2600 ವರ್ಷಗಳ ಹಿಂದೆ ಆತ್ಮತತ್ತ್ವ ಇಲ್ಲವೆ ಪಿಂಡಸ್ಥ ಜ್ಞಾನನಿಷ್ಠೆಯಿಂದ ಜ್ಞಾನಿಯೆಂದು ಪ್ರಸಿದ್ಧನಾಗಿದ್ದವನು. ಬುದ್ಧನ ಹಿರಿಯ ಸಮಕಾಲೀನರಾದ ಆರು ಹಿರಿಯರಲ್ಲಿ।ಒಬ್ಬನಾಗಿ ಗಣಾಚಾರ್ಯನೆಂದೂ, ಸಾಧುವೆಂದೂ, ಬಹುಜನ ಸಮ್ಮತನೆಂದೂ, ಯಶಸ್ವಿಯೆಂದೂ ಗಣಂಗಳಿಗೆ ಆಚಾರವನ್ನು ಕಲಿಸಿದವನೆಂದೂ ಹೆಸರಾಂತು ನಿರ್ವಾಣನಾಯಕನಾದ ಗೋಸಾಲನು ದಿಗಂಬರನಾಗಿದ್ದು-

CC-0. Jangamwadi Math Collection. Digitized by eGangotri

ದರಿಂದ ಜೈನದಿಗಂಬರನೆಂದೇ ಈಚಿನ ಜೈನರು ಭಾವಿಸಿರುವುದಾದರೂ ಆತನ ಸಮಕಾಲೀನರಿಗೆ ಆತನು ಜೈನ, ಬೌದ್ಧ ಹಾಗೂ ಬ್ರಾಹ್ಮಣಧರ್ಮಗಳಿಗಿಂತ ಭಿನ್ನವಾದ ಆಜೀವಕ ಪೂರ್ವ ಮತಧರ್ಮವನ್ನು ಬೋಧಿಸುತ್ತಿದ್ದನೆಂಬುದು ಇತಿಹಾಸಜ್ಞರ ದೃಢನಿರ್ಣಯ. ಭಗವಾನ್ ಮಹಾವೀರನ ಮಿತ್ರನಾಗಿದ್ದು ಜೈನಸಮಯದ।ಪೂರ್ವಗತ ಆಗಮಗಳ(Old Text) ಅಭ್ಯಾಸದಲ್ಲಿ ನಿಷ್ಣಾತನಾಗಿ ಜೈನರಂತೆ ದಿಗಂಬರನಾಗಿದ್ದು ಆಜೀವಕ ಮತಪ್ರವರ್ತಕನಾಗಿ ಶೂನ್ಯಧ್ಯಾನವನ್ನು ಬೋಧಿಸುವ ಮೂಲಕ"ಮಣ್ಣಬಿಟ್ಟು ಮಡಕೆಯಿಲ್ಲ, ತನ್ನಬಿಟ್ಟು ದೇವನಿಲ್ಲ" ವೆಂಬ ತತ್ತ್ವವನ್ನು, ಬೇರೊಬ್ಬ ದೇವನಿದ್ದಾನೆ, ಇಲ್ಲವೇ ಇಲ್ಲವೆಂಬ ವಾದದ ಗೋಜಿಗೆ ಸಿಲುಕದೆ,ಶೂನ್ಯತತ್ತ್ವ ಚಿಂತನೆಯನ್ನು ಪ್ರತಿಪಾದಿಸುವ ಮೂಲಕ, ಆತ್ಮವನ್ನು ಪರಮಾತ್ಮನನ್ನಾಗಿ, ಎಲ್ಲವನ್ನೂ ಒಳಕೊಳ್ಳುವ ಲಿಂಗವನ್ನಾಗಿ ಭಾವಿಸಿರುವುದನ್ನು ಕಾಣಬಹುದು. ಆತ್ಮನೆ ಶಿವನು, ಅವನೇ ಶಂಕರನು, ಅವನೇ ವಿಷ್ಣುವು,ಅವನೇ ರುದ್ರನು, ಅವನೇ ಬುದ್ಧನು, ಅವನೆ ಜಿನನು, ಅವನೆ ಈಶ್ವರನು, ಅವನೆ ಅನಂತನು, ಅವನೆ ಸಿದ್ಧನೆಂದು ತಿಳಿಯಿರಿ ಎಂದು ಯೋಗೀಂದುದೇವನ ಉಪದೇಶವಿದೆ. ದೇವನೊಬ್ಬ ನಾಮಹಲವು ಎಂಬ ಬಸವಣ್ಣನವರ ಮಾತೂ ಇದೇ.

"ಆ ದೇವನ ಪದಪದ್ಮವನಾವಗ।ಮಭಿವಂದಿಸುವೆನು ಮೂದೇವರ ನಾಮಕ್ರಿಯೆ ರೂಪುಗಳಳಿದುಳಿದ" 2 ಎಂಬ ಸರ್ಪಭೂಷಣ ಶಿವಯೋಗಿಗಳ ಈ ಪ್ರಾರ್ಥನೆಯಲ್ಲಿ 'ಶೂನ್ಯ' ಪದ ಅರ್ಥಾತ್ ಲಿಂಗಕರಣವೆ 'ದೇವ' ವಾಚ್ಯವಾಗಿ ಪ್ರಯೋಗವಾಗಿರುವುದನ್ನು ಕಾಣಬಹುದು.'ಏಕೋ ದೇವ ನ ದ್ವಿತೀಯಾಯ ತಸ್ಥೇ ಎನಿಸುವ ಇಂತೀ ಮಹಲಿಂಗವೆಲೆ ಮಗನೆ ನಿನ್ನ ಬಾಹ್ಯಾ। ಭ್ಯಂತರದೊಳಿಹುದೆಂದು ತಿಳಿ" ಎಂದಲ್ಲಿ ಶ್ರುತಿ: "ಸಬಾಹ್ಯವಾಭ್ಯಂತರಂ ಸಾಕ್ಷಾತ್ ಎನಲ್,"ಆ ಮಹಾಲಿಂಗವು ಮನೋಗ್ರಾಹ್ಯವು. ಹೀಗೆಂಬ"ಗ್ರಾಹ್ಯಕಂ ಅಂತರ್ಬಹಿಶ್ಚ ಲಿಂಗಂ ಚ"ಎಂಬುದರಿಂದ ಸರ್ವಾಂಗಲಿಂಗವೆಂದರಿತು ಅವಿರಳ ಜ್ಞಾನಕ್ರಿಯಾಚರಣೆಯಿಂದ ಎಲೆ ಆತ್ಮನೆ ನಿಜಗುರು ಸಿದ್ಧಶಾಂತನನ್ನು ಮರೆಯದೆ ಅರ್ಚಿಸು ಎಂದು ಮರುಳದೇವರು ತಮ್ಮ ಸ್ವರವಚನದಲ್ಲಿ 3 ಎಚ್ಚರಿಸಿದ್ದಾರೆ.

CC-0. Jangamwadi Math Collection. Digitized by eGangotri

"ಕಾಯವೆ ಸಕಲ, ಪ್ರಾಣವೆ ಸಕಲ-ನಿಷ್ಕಲ, ಭಾವವೆ ನಿಷ್ಕಲಲಿಂಗವಾಗಿರ್ದ ಮತ್ತೆ, ಬೇಱೆ ಆಯತ, ಸ್ವಾಯತ, ಸನ್ನಿಹಿತವೆಂಬುದಿಲ್ಲ ನೋಡಾ, ಶಿವಶಕ್ತಿ ಸಂಬಂಧವೆ ದೇಹ-ದೇಹಿಂಗಳಾಗಿದ್ದ ಬಳಿಕ, ಗೋಹೇಶ್ವರ ಲಿಂಗದಲ್ಲಿ ಬೇಱೊಂದು ಕುಱುಹುವಿಡಿದು ಅಱಿಯಲೇಕಯ್ಯ, ಚನ್ನಬಸವಣ್ಣ"— ಅಲ್ಲಮಪ್ರಭುವಿನ ಈ ವಚನದಲ್ಲಿನ ಶಿವಶಕ್ತಿಸಂಬಂಧವೆ ದೇಹಿ-ದೇಹಗಳಾಗಿರುವಾಗ ಬೇರೆ ಕುರುಹಿನ ಅಗತ್ಯವಾದರೂ ಏನು ಎಂಬುದನ್ನೂ ಶೂನ್ಯಧ್ಯಾನಪ್ರತಿಪಾದಕನಾದ ಗೋಸಾಲಗುರುವಿನ ನಿರ್ವಾಣಸ್ಥಿತಿಯು("ಧರಗಿರಿಯಮೇಲುಳ್ಳ ಆರುಹಿರಿಯರು" ಎಂಬ ವಚನವನ್ನು ಪುಟ34ರಲ್ಲಿ ನೋಡಿ.) ಸ್ವಯಂಭುಲಿಂಗವೆ ತಾನೆಂಬುದನ್ನು ಮಾನವಕುಲ ಮನಗಾಣಬೇಕೆಂಬುದರ ಅಗತ್ಯತೆಯನ್ನು ಪ್ರಕಟಿಸುವುದಾಗಿದೆ

'ಜಂಗಮವೆನ್ನ ಪ್ರಾಣಲಿಂಗ ಕಂಡಯ್ಯ' ಎಂಬ ಬಸವಣ್ಣನವರ ದೃಷ್ಟಿಯಲ್ಲಿ ಲಿಂಗ ಬೇರೆಯಲ್ಲ, ಜಂಗಮ ಬೇರೆಯಲ್ಲ. ಲಿಂಗದಲ್ಲಿ ದಿಟ(ನಿಜ)ವನಱಿಸುವರೆ ಜಂಗಮವ ನೆಱೆ ನಂಬುವುದು.'ಯತ್ರ ಮಹೇಶ್ವರಸ್ತತ್ರ ಸನ್ನಿಹಿತ'ನಾಗಿ ಜಂಗಮ ಮುಖದಿಂದ ಕೂಡಲ ಸಂಗಮದೇವನು ಉಣ್ಬ, ಉಡುವನೆಂದಿರುವುದರಿಂದ ಜಂಗಮವನ್ನು ಬಿಟ್ಟು ಜಗದ ದೇವ ನೆಂಬುವ ನಿಲ್ಲವೆಂಬುದೇ ಶಿವಶರಣರ ನಿಲವು ಕೂಡ. ಮಂಖಲಿ ಗೋಸಾಲನ ದೇವನಿದ್ದಾನೋ ಇಲ್ಲವೊ ಅಂತರಾತ್ಮವಾದ ಶೂನ್ಯ(ಲಿಂಗ)ಧ್ಯಾನವನ್ನು ಮಾಡಲಿಕ್ಕೇಬೇಕೆಂಬ ನಿಲವನ್ನೇ ಸಮರ್ಥಿಸುತ್ತದೆ ಎಂಬುದಕ್ಕೆ ಸರ್ಪಭೂಷಣರ ಶಿವಕಾರುಣ್ಯದ ಪ್ರಾರ್ಥನೆಯ ಪಲ್ಲವಿಯೇ ನಿದರ್ಶನ. ಶಿವ, ಶಿವಗಣಂಗಳು ಹೇಗೆ ಶಿವಮತದ ಉತ್ಪತ್ತಿ ಹಾಗೂ ಪ್ರಸಾರಕ್ಕೆ ಆದಿಕಾರಣರೊ ಹಾಗೆ ಜೈನಮತದ ಪರಂಪರೆಯು ಋಷಭದೇವನಿಂದ ಉತ್ಪತ್ತಿಯಾಗಿ ಆಲನಂತರದ೨೩ ಜನತೀರ್ಥಂಕರರು ಮಾಡಿದ ಧರ್ಮೋಪದೇಶದಿಂದ ಭಾರತದ ನಾನಾಭಾಗಗಳಲ್ಲಿ ಜಿನಧರ್ಮವು ವ್ಯಾಪಿಸಿತು. ಆದಿತೀರ್ಥಂಕರನಾದ ಋಷಭ ದೇವನಿಗೆ ಮುಕ್ತಿಸ್ಥಾನವಾದ ಕೈಲಾಸವು ಶಿವನ ನಿವಾಸವೆಂದೇ ಹೆಸರಾದುದು. ಹಲರ ಹೆಸರ ದೇವನೆಂದೇ ಖ್ಯಾತನಾದ ಶಿವನೆಂಬ ನಾಮವು ಜಿನಪರ್ಯಾಯ ನಾಮವಾಗಿ ಅಂಗೀಕೃತ

CC-0. Jangamwadi Math Collection. Digitized by eGangotri

ವಾಗಿರುವುದು ಅವನ ವ್ಯಾಪಕತೆಗೂ ಲೋಕಪ್ರಿಯತೆಗೂ ನಿದರ್ಶನವಾಗಿದೆ. ಶಿವನ ಕೈಲಾಸದಲ್ಲಿನ ಪ್ರಮಥಗಣಂಗಳು ಮುಕ್ತಜೀವರು. ಶಿವನ ಸರ್ವಸ್ವವೇ ಆದವರು. ಗಣವೆಂಬ ಹೆಸರಿನಿಂದ ಪೂಜ್ಯರಾದವರು. ಲೋಕಪ್ರಸಿದ್ಧರಾದ ಪುರಾತನ ಗಣ, ರುದ್ರಗಣ, ದಶಗಣ, ತೇರಸಗಣ, ಷೋಡಶಗಣ, ಅಮರಗಣ ಗಳಲ್ಲಿ ಕೆಲವು ಐತಿಹಾಸಿಕ ವ್ಯಕ್ತಿಗಳು. ಗಣಸಹಸ್ರನಾಮಾವಳಿ ಯಲ್ಲಿ 'ಗಣ' ಶಬ್ದಕ್ಕೆ ಶಿವಭಕ್ತರೆಂದೇ ಅರ್ಥ.

ಶಿವಗಣ ಮತದ ಆಚಾರ್ಯರು ಹೇಗೋ ಹಾಗೆ ಜೈನಮತದಲ್ಲಿ ಗಣಧರರು ಮುಖ್ಯರು. ಶಿವನಿಗೆ ವೃಷಭವು ವಾಹನವಾದಂತೆ, ಆದಿತೀರ್ಥಂಕರನ ಧ್ವಜದ ಚಿಹ್ನೆಯು ವೃಷಭವೇ ಆಗಿರುವುದು. ಶ್ರಾವಕರಿಗೆ ತ್ರಿಷಷ್ಟಿಶಲಾಕಾ ಪುರುಷ ಪುರಾಣ ಅಥವಾ ತ್ರಿಷಷ್ಟಿಲಕ್ಷಣ ಪುರಾಣವು ವೃಷಭ ಜಿನೇಂದ್ರಾದಿ ಚತುರ್ವಿಂಶತಿ ಜಿನರನ್ನೂ, ಮುನಿಸಂತತಿಯನ್ನೂ ಕುರಿತ ಚಾರಿತ್ರ ಹಾಗೂ ಸ್ತುತಿರೂಪವಾದ ಪುರಾಣವಾಗಿರುವಂತೆ ಶೈವ ಮತ್ತು ವೀರಶೈವರಿಗೆ ತ್ರಿಷಷ್ಟಿಪುರಾತನರ ಚಾರಿತ್ರವು ತಮಿಳು ದೇಶದ ಶಿವಭಕ್ತಾಗ್ರೇಸರ ಕಥನದಿಂದ ಸ್ಮರಣೀಯವಾಗಿದೆ. ಪುರಾತನರ ರಗಳೆ, ಪುರಾತನ ತ್ರಿವಿಧಿ, ಗಣಸಹಸ್ರ ನಾಮಾವಳಿ ಹಾಗೂ ವೀರಶೈವ ಪುರಾಣಗಳಲ್ಲಿ ಅರುವತ್ತುಮೂವರ ಪ್ರಸಂಗಗಳು ಆದರ್ಶಭಕ್ತ-ನಿಷ್ಠೆಗೆ ನಿದರ್ಶನವಾಗಿ ಸ್ತುತ್ಯವಾಗಿ ರುವುದನ್ನು ಕಾಣಬಹುದು.

ಜಾತಿ-ಮತ, ಗಂಡು-ಹೆಣ್ಣು, ಉಚ್ಚ-ನೀಚ, ಬ್ರಾಹ್ಮಣ-ಶೂದ್ರ ಎಂಬ ಭೇದವನ್ನು ತೊಡೆದುಹಾಕಿ ಹಿಂದೂಸಮಾಜದ ಕಳಂಕವಾಗಿ ಪರಿಣಮಿಸಿದ್ದ ಮಾನಸಿಕ ಸಂಕೋಲೆಗಳನ್ನು ಬಿಡಿಸಿ ಉತ್ತಮವಾದ ಭಾವನೆಯಿಂದ ಶುದ್ಧಆತ್ಮಭಾವದಿಂದ ಭಗವದ್ಭಕ್ತಮಾರ್ಗದಲ್ಲಿ ನಡೆದಲ್ಲಿ ಆಧ್ಯಾತ್ಮಿಕ ಹಾಗೂ ತನ್ಮೂಲಕ ಸುಸಂಸ್ಕೃತಸಾಮಾಜಿಕ ಪ್ರಗತಿಯನ್ನು ಸಾಧಿಸಬಹುದೆಂದು ಜೀವನಾದರ್ಶನವನ್ನು ಲೋಕಕ್ಕೆ ತೋರಿಸಿದ ಪುರಾತನರ ಬಾಳು ಇಂದಿಗೂ ದಾರಿದೀಪವಾಗಲಿದೆ. ಈ ಪುರಾತನರ ಹಾಗೂ ಶಲಾಕಾಪುರುಷರ ಸಂಖ್ಯೆ ಜೈನ ಹಾಗೂ ಶೈವ ಈ ಉಭಯ ಧರ್ಮದವರಿಗೂ ಒಂದೇ ಆಗಿ ಸಮಾನವಾಗಿರುವುದು ಈ ಎರಡೂಸಂಸ್ಕೃತಿಗಳ ನಿಕಟ ಹಾಗೂ ಸಹವರ್ತಿ ಸಂಬಂಧ ಸೂಚಕವಾಗಿರುವುದು.

CC-0. Jangamwadi Math Collection. Digitized by eGangotri

ಜೈನ ದರ್ಶನದಲ್ಲಿ ಸಮ್ಯಗ್ದೃಗ್ಬೋಧಚಾರಿತ್ರ ತ್ರಿತಯವು ಮುಕ್ತಿಕಾರಣವಾಗಿದ್ದರೆ ವೀರಶೈವದಲ್ಲಿ ಗುರು-ಲಿಂಗ-ಜಂಗಮ ತ್ರಯವು ಸದ್ಭಕ್ತನಿಗೆ ಸದಾಚರಣೆಯ ಮಾರ್ಗವನ್ನು ತೋರಿಸುವುವು. ಶಿವನಿಗಿಂತ ಶಿವಶರಣರೇ ಅಧಿಕರೆಂದು, ಅರುವತ್ತುಮೂವರ ತ್ರಿವಿಧಿ ಸಾರಿದರೆ, ಸರ್ವಸಂಗಪರಿತ್ಯಾಗಿಗಳಾಗಿ, ರಾಗದ್ವೇಷರಹಿತರಾಗಿ ಜಿನರೆನಿಸಿದ ಮಾನವಶ್ರೇಷ್ಠರೆ ದೇವರೆಂದು ಭಾವಿಸಿರುವುದನ್ನು ಶ್ರುತಕೇವಲಿಗಳ ಮಾತಿನಲ್ಲಿ ಕಾಣಬಹುದು. "ಜಿನದೇವನಾದರೂ ದೇಹವೆಂಬ ದೇವಾಲಯದದಲ್ಲಿರುತ್ತಾನೆ" ಎಂದು ಶ್ರುತಪಡಿಸಿದ್ದರೆ "ದೇಹೋ ದೇವಾಲಯಃ ಪ್ರೋಕ್ತೋ ಜೀವೋ ದೇವಃ ಸನಾತನಃ"ಎಂಬುದು ಶರಣರ ಮತ. "ಉಳ್ಳವರು ಶಿವಾಲಯವ ಮಾಡುವರು, ನಾನೇನ ಮಾಡುವೆ, ಬಡವನಯ್ಯಾ. ಎನ್ನ ಕಾಲೇ ಕಂಬ, ದೇಹವೇ ದೇಗುಲ, ಶಿರವೆ ಹೊನ್ನಕಳಸವಯ್ಯಾ. ಸ್ಥಾವಕ್ಕಳಿವುಂಟು, ಜಂಗಮಕ್ಕಳಿವಿಲ್ಲ" ಎಂಬ ಬಸವಣ್ಣನವರ ವಚನ ಉಭಯ ಧರ್ಮಗಳಲ್ಲಿನ ಸಾಮ್ಯವನ್ನು ಸಾರುವುದು. "ಜಂಗಮದಲ್ಲಿ ಕುಲವುಂಟೆ?" ಎಂಬುದನ್ನು ಅರುವತ್ತುಮೂವರು ಪುರಾತನರ ಹಾಗೂ ತ್ರಿಷಷ್ಟಿಶಲಾಕಾಪುರುಷರ ಪುರಾಣವು ಈ ಎರಡೂ ಧರ್ಮದ ಪುರಾಣಗ್ರಂಥಗಳು ಸಾರಿರುವುದನ್ನು ಕಾಣಬಹುದು.

ದರ್ಶನ-ಜ್ಞಾನ-ಚಾರಿತ್ರಸಂಪನ್ನನೇ ಪರಮಾತ್ಮ. ರಾಗದ್ವೇಷಾದಿಗಳನ್ನು ಬಿಟ್ಟು ಆತ್ಮನಲ್ಲಿ ಲೀನರಾಗಿ ಸ್ವಯಂ ಆನಂದಾಮೃತಪಾನ ಮಾಡುವುದೇ ಎಂದರೆ ಆತ್ಮಸ್ವರೂಪದಲ್ಲಿ ನಿಜನಿಷ್ಠನಾಗಿರುವುದನ್ನೇ ಜಿನೇಶ್ವರರು ಧರ್ಮವೆಂದು ಉಪದೇಶಿಸಿದ್ದಾರೆ. ರಾಗಾದಿ ಅರಿಷಡ್ವರ್ಗಗಳಿಂದ ಕೂಡಿದ ಅಂಗಗುಣಗಳನ್ನು ಕಳೆದು ನಿಜಲಿಂಗಸ್ವರೂಪದಿಂದ ಸತ್ಯ ಶುದ್ಧ ಮನ ವಚನ ಕಾಯದಿಂದ, ನಯ ವಿನಯ ವಿಜ್ಞಾನದ ನಡೆನುಡಿಗಳೊಂದಾದ ಸದ್ಭಕ್ತನ ನಿಜಾಚರಣೆಯೇ ಪರಮಾತ್ಮನನ್ನು ಮೆಚ್ಚಿಸುವ ಮಾರ್ಗ. ಹರನೆಂಬುದೇ ಸತ್ಯ, ಸತ್ಯವೆಂಬುದೆ ಹರನು, ಎರಡಿಲ್ಲವೆಂದು ವೀರಶೈವ ಕವಿಗಳು ಸಾರಿದರೆ, "ಸತ್ಯವೇ ಲೋಕದಲ್ಲಿ ಸಾರಭೂತವಾದುದು"("ಸಚ್ಚಂ ಲೋಗಮ್ಮಿ ಸಾರಭೂಯ") ಎಂದು ಜಿನಧರ್ಮವು ಘೋಷಿಸಿದೆ.

ಭಗವಾನ್ ಮಹಾವೀರನು ಬೋಧಿಸಿದ ಪಂಚಮಹಾವ್ರತಗಳಾದ ಅಹಿಂಸೆ, ಸತ್ಯ, ಅಸ್ತೇಯ,

CC-0. Jangamwadi Math Collection. Digitized by eGangotri

ಬ್ರಹ್ಮಚರ್ಯ, ಅಪರಿಗ್ರಹಗಳನ್ನು ಶ್ರಾವಕರು ಪಾಲಿಸಿದರು. "ಕಳಬೇಡ, ಕೊಲಬೇಡ, ಹುಸಿಯ ನುಡಿಯ ಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ, ತನ್ನ ಬಣ್ಣಿಸಬೇಡ ಇದಿರ ಹಳಿಯಲು ಬೇಡ. ಇದೆ ಅಂತರಂಗ ಶುದ್ಧಿ, ಇದೆ ಬಹಿರಂಗ ಶುದ್ಧಿ, ಇದೇ ನಮ್ಮ ಕೂಡಲಸಂಗಮ ದೇವರ ನೊಲಿಸುವ ಪರಿ" ಎಂಬ ಬಸವಣ್ಣನವರ ವಚನದಲ್ಲಿ ದೇವರನ್ನು ಒಲಿಸಿಕೊಳ್ಳಲು ಇರುವ ದಾರಿ ಸದ್ಗುಣ, ಸಚ್ಚಾರಿತ್ರ, ಸದ್ಭಾವ ಶುದ್ಧಿಯೆಂಬುದು ಜಿನಮತದ ಪಂಚಮಹಾವ್ರತಗಳ ಆಶಯವೇ ಆಗಿದೆ. ಉಭಯಸಮಯಗಳ ಸಾರಸವಿಯೇ ಇದಾಗಿದೆ. ಸರ್ವಸಮ ಭಾವವೇ ಸಮಾಜದ ಸಾಮರಸ್ಯಕ್ಕೆ, ಸುಖಶಾಂತಿಯ ಬಾಳುವೆಗೆ ಮಾರ್ಗವೆಂಬುದನ್ನೂ, ಕೊಲುವುದಿರಲಿ, ಸಂಕಲ್ಪ ಹಿಂಸೆಯೇ– ಕೊಲುವ ಭಾವನೆಯೇ –ಪಾಪಹೇತುವೆಂಬುದನ್ನು ಜಿನಧರ್ಮವು ಸಾರಿರುವುದನ್ನು ಕಾಣುತ್ತೇವೆ. ಸಕಲ ಜೀವಾವಳಿಯ ಲೇಸನೇ ಬಯಸುವ ಶಿವಶರಣರ ಜೀವಕಾರುಣ್ಯ ತತ್ತ್ವವು."ಶನ್ನೋ ಅಸ್ತು ದ್ವಿಪದೇ ಶಂ ಚತುಷ್ಪದೇ" ಎಂಬ ಪುರುಷಸೂಕ್ತದ ಮಂತ್ರವಾಣಿಗಿಂತ ವಿಶ್ವವ್ಯಾಪಿಯಾದ ಹೃದಯವೈಶಾಲ್ಯವನ್ನೂ ಜೀವಕಾರುಣ್ಯದ ಸೀಮೆಯನ್ನೂ ವಿಸ್ತರಿಸಿರುವುದು ಸ್ವಯಂ ಸ್ಪಷ್ಟವೇ ಆಗಿದೆ.

ಜೈನಮತವು ಕರ್ಮಗಳ ತಾರತಮ್ಯದಿಂದ ಜೀವರಲ್ಲಿ ಭೇದಗಳಿರುವುದನ್ನು ಗಣಿಸಿದರೂ ಜೀವರಲ್ಲಿ ಚೈತನ್ಯವನ್ನು ಒಪ್ಪಿ ಜಡವಾದವನ್ನು ನಿರಾಕರಿಸಿರುವರು. ಆತ್ಮನನ್ನು ಜೈನ ಮತವು ಮನ್ನಿಸಿದರೆ, ಬೌದ್ಧಮತವು ಆತ್ಮನು ನಿತ್ಯನಲ್ಲ, ಕ್ಷಣಿಕ ತತ್ತ್ವದ ಸಂತಾನವೆಂದು ಗ್ರಹಿಸಿದೆ. ರಾಗಾದಿಜ್ಞಾನ ಸಂತಾನ ವಾಸನಾ ಛೇದದಿಂದ ಸಂಭವವಾದುದೆ ಮೋಕ್ಷವೆಂಬುದು ಬೌದ್ಧರಮತ. ಮಾನವನು ತನ್ನ ನಿರ್ಮಲಾತ್ಮಧ್ಯಾನದಿಂದ ದಯಾಸಾಗರನೂ, ಶಾಂತಿ ಸಹನೆಗಳುಳ್ಳವನಾಗಿ ಮಾನವಮೇರುವಾದ ತೀರ್ಥಂಕರ ನಾಗಬಲ್ಲವನೆಂದು ಜೈನಧರ್ಮವು ಬೋಧಿಸಿದೆ. ಸದ್ಭಕ್ತನು ಷಟ್ಸ್ಥಲಾಚರಣೆಯಿಂದ ಜೀವನ್ಮುಕ್ತನಾಗಿ ಜೀವ-ಪರಮರೊಂದಾದ ಐಕ್ಯಸ್ಥಿತಿಯಲ್ಲಿ ನಿತ್ಯನಾಗಬಲ್ಲನೆಂಬುದು ಶರಣರ ಆಚರಣೆಸಂಬಂಧದ ಜ್ಞಾನಕ್ರಿಯೆಯಾಗಿದೆ.

CC-0. Jangamwadi Math Collection. Digitized by eGangotri

'ಶರಣರನ್ನು ಮರಣದಲ್ಲಿ ಕಾಣು' ಎಂಬ ಲೋಕೋಕ್ತಿಯುಂಟು. 'ಮರಣವೇ ಮಹಾನವಮಿ' ಎಂಬ ಭಾವವನ್ನು ಸಂಕೇತಿಸುವ 'ಲಿಂಗೈಕ್ಯವಾದರು' 'ಬಯಲಾದರು' ಎಂಬ ಪದಗಳು ವೀರಶೈವರಲ್ಲಿ ರೂಢಿಯಲ್ಲಿರುವ ಪಾರಿಭಾಷಿಕಪದಗಳು. ಲೋಕಸಂಬಂಧವಾದ ಬಾಹ್ಯವೃತ್ತಿಯಿಂದ ದೂರಗೊಂಡು ಶಿವಸಮಾಧಿಸ್ಥಿತಿಯಲ್ಲಿ ಇದ್ದಾರೆ ಎಂಬುದೇ ಈ ಪದಗಳ ಆಶಯ.ಈ ಎಣಿಕೆಯಲ್ಲಿ ಅಳಿದುಹೋಗಿದ್ದಾರೆ ಎಂಬ ನಷ್ಟಭಾವ ವಿಲ್ಲ. ಗದ್ದುಗೆಯಾದ ಗುರುಗಳಲ್ಲಿಟ್ಟ ಭಕ್ತರ ದೃಢನಿಷ್ಠೆಯೇ ಇದಕ್ಕೆ ನಿದರ್ಶನ. ಲಿಂಗೈಕ್ಯದ ಪೂರ್ವದಲ್ಲಿ ಆಚರಿಸುವ ವಿಭೂತಿ ವೀಳ್ಯದ 4 ಪದ್ಧತಿಗೆ ಉದಾಹರಣೆ: ಚತುರಾಚಾರ್ಯ ಪುರಾಣದ ಕರ್ತೃ ಸಂಪಾದನೆ ಪರ್ವತೇಶ (1698) ತನ್ನ ಗುರುಪರಂಪರೆ ಯನ್ನು ಪ್ರಕಟಿಸುತ್ತ "ತೋಂಟದ ಸಿದ್ಧ; ಆತನ ಶಿಷ್ಯನು" ಗುರುವಿನನುಪಮ ವೀಟಿಕಾಪ್ರಸಾದದ ಮಹಿಮ ಸರಸಾ-ನುಭವ"ನಾದ ಬೋಳಬಸವ"ಎಂಬೀ ವಿವರದಲ್ಲಿ ವೀಟಿಕಾ -ಪ್ರಸಾದದ ಪದ್ಧತಿಯು ಉಲ್ಲೇಖಿತವಾಗಿರುವುದನ್ನು ಕಾಣಬಹುದು. ಸಮಾಧಿಯ ಪದ್ಧತಿಯ ಪ್ರಕ್ರಿಯೆಗಳಲ್ಲಿ ವಿಭೂತಿವೀಳ್ಯದ ಆಚರಣೆ ಇಂದಿಗೂ ಇರುವುದನ್ನು ಗಮನಿಸ ಬಹುದು. ಮೂಲತಃ ಗುರುಗಳು ಗದ್ದುಗೆಯಾಗುವ ಮೊದಲು ಆಚರಿಸುತ್ತಿದ್ದ ವಿಭೂತಿವೀಳ್ಯದ ಪದ್ಧತಿ ಪೂರ್ವದಲ್ಲಿ ಬಹುಮಟ್ಟಿಗೆ ಜೈನಸನ್ಯಾಸಿಗಳ ಸಲ್ಲೇಖನವ್ರತಕ್ಕೆ ಹತ್ತಿರವಾಗಿ ಪ್ರಾಚೀನ ಹಿಂದೂಧರ್ಮದ ವಾನಪ್ರಸ್ಥಾಶ್ರಮದ ಜೀವನ-ಕ್ರಮದ ಆಶಯವನ್ನು ಹೊಂದಿದಂತೆ ಕಾಣಬರುತ್ತದೆ.4

ವೀರಶೈವ ಮತದ ಷಟ್ಸ್ಥಲಾಚರಣೆಯ ಅಂಗವಾದ ಗುರು, ಲಿಂಗ, ಜಂಗಮ, ವಿಭೂತಿ, ರುದ್ರಾಕ್ಷಿ, ಪಂಚಾಕ್ಷರೀಮಂತ್ರ, ಪ್ರಸಾದ ಮತ್ತು ಪಾದೋದಕಗಳನ್ನು ಕುರಿತ "ಅಷ್ಟಾವರಣತಿಲಕ"ವೆಂಬ 'ಗ್ರಂಥವೊಂದನ್ನು ಬರೆದಿರುವಂತೆ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಹಸ್ತಪ್ರತಿಗಳ ವರ್ಣನಾ ಸೂಚಿ(೧-೧೧೫)ಯಿಂದ ತಿಳಿದುಬರುತ್ತದೆ. ಪೂರ್ವದಲ್ಲಿ ಜೈನರಲ್ಲಿ ಕೆಲವರೂ ವೀರಶೈವ ಮತಸ್ಥರು ಕೆಲವರೂ ಅಷ್ಟಾವರಣಗಳ ಸಾಧನದಿಂದ ಅವುಗಳ ಮಹತ್ತ್ವವನ್ನು ಆಚರಿಸಿ ಮನಗಾಣಿಸಿದ್ದಾರೆಂಬ

CC-0. Jangamwadi Math Collection. Digitized by eGangotri

ಹೇಳಿಕೆಯ ಮುಖಾಂತರ ತೆಲುಗು ಭಾಷೆಯಲ್ಲಿ, ಬಹುಶಃ ಸಂಗ್ರಹಕಾರರಿಂದ, ಆ ಗ್ರಂಥವನ್ನು ಕುರಿತ ಪ್ರಸ್ತಾಪವಿದೆ. ಜೈನ-ವೀರಶೈವರು ಕೆಲವರ ಆಚರಣೆಯಲ್ಲಿ ಕಂಡುಬಂದ ಈ ಏಕರೂಪತೆ ಉಭಯ ಧರ್ಮಗಳ ಸಮಾಗಮವನ್ನು ಎತ್ತಿಹಿಡಿದಂತಾಗಿದೆ."ವೀರಶೈವ ಚಿಂತಾಮಣಿ" ಯೆಂಬ ವಚನ ಸಂಕಲನ ಗ್ರಂಥಕಾರನಾದ "ಮಹದ್ದೇವಯೋಗಿ"ಯೇ ಈ ಅಷ್ಟಾವರಣತಿಲಕದ ಕರ್ತೃವಾದ ಮಹಮೂರ್ತಿಯಿಂದ ಭಿನ್ನನೆಂದು ತೋರುತ್ತದೆ. ಮತ್ತೆ ಕೆಲವರಲ್ಲಿ ರಾಜರೂ, ರಾಜರ ಬಂಧು ಬಾಂಧವರೂ ಆಚರಿಸಿಕೊಂಡು ಬಂದ ವಿಚಿತ್ರ -ಮೂಲವನ್ನುಳ್ಳದ್ದೆಂದು ಹೇಳಿರುವುದಂತೂ ಅಷ್ಟಾವರಣದ ತಾಯಿಬೇರು ಬಹುಪ್ರಾಚೀನ ಕಾಲಕ್ಕೆ ಎಂದರೆ ಬುದ್ಧ, ಮಹಾವೀರರ ಸಮಕಾಲೀನನೂ ಶೂನ್ಯಧ್ಯಾನ ಪ್ರತಿಪಾದಕನೂ, ವಿಚಿತ್ರಚರಿತ್ರನೂ ಆದ ಗುರು ಗೋಸಾಲನ ಕ್ರಿ.ಪೂ. ಆರನೆಯ ಶತಮಾನದಷ್ಟೇ ಪ್ರಾಚೀನವೆಂಬುದನ್ನು ಪ್ರಸ್ತುತ "ಆಜೀವ ಮಧುಸ್ಮೃತಿ"ಸಾದರಪಡಿಸಿದೆ. ವೀರಶೈವರಂತೆ ಜೈನರೂ ಜಗನ್ಮಿಥ್ಯಾವಾದವನ್ನು ಒಪ್ಪರು(ನೋ: ಮೈಸೂರ್ ಸ್ಟಾರ್ ೧೮೮೨ ಪು.೧೨೩).ಅದ್ವೈತಸಿದ್ಧಾಂತವನ್ನಂತೂ ಜೈನರು ವಿರೋಧಿಸಿದ್ದಾರೆಂಬುದಕ್ಕೆ ಗ್ರಂಥಾಧಾರವಿಲ್ಲದೆಯಿಲ್ಲ. ಇಮ್ಮಡಿನಾಗವರ್ಮನ ಕಾವ್ಯಾವಲೋಕನದ ಒಂದು ಕಂದ (೧೮೮)ದಲ್ಲಿ"5 ಸ್ಯಾದ್ವಾದಾಚಲಸಿಂಹನಾದ ವಾದಿರಾಜನು ಅದ್ವೈತವಾದಿನಿವಹವು।ದದ್ವಿರದಘಟಾವಿಪಾಟನೈಕ ಪಟಿಷ್ಠಂ" ಎಂಬ ವಿದ್ವಾಂಸರ ಹೊಗಳಿಕೆಗೆ ಪಾತ್ರನಾಗಿ ಪ್ರಸಿದ್ಧನಾಗಿದ್ದನೆಂಬುದೆ ಸಾಕ್ಷ್ಯ.

ಹೀಗೆ ಈ ಜೈನ-ವೀರಶೈವ ಸಮಯಗಳ ಧಾರ್ಮಿಕ ದೃಷ್ಟಿ, ಮತಾಚರಣೆ ಹಾಗೂ ಆಧ್ಯಾತ್ಮಿಕ ಚಿಂತನೆಗಳ ಸಾದೃಶ್ಯಮಾತ್ರವಲ್ಲದೆ ಸಾಮಾಜಿಕವಾದ ಸಂಬಂಧವನ್ನು ಕುರಿತ ಒಂದೆರಡು ಪ್ರಸ್ತಾಪಗಳನ್ನಿಲ್ಲಿ ಮಾಡಬಹುದು. ಶಿವನ ವಾಹನವೂ ಪ್ರಮಥನಾಯಕನೂ ಆದ ಆದಿಮ ನಂದಿನಾಥನು ಶಿವನ ಅನುಮತಿಯಿಂದ ಭೂಲೋಕದಲ್ಲಿ ಶಿವಭಕ್ತಿಯನ್ನು ಹಬ್ಬಿಸುವುದಕ್ಕಾಗಿ ಅವತರಿಸಿದನಷ್ಟೆ ಬಸವ ನಾಮವ ತಾಳಿ. ಆ ಕಲ್ಯಾಣದ ಬಸವೇಶ್ವರ- ಬಿಜ್ಜಳ, ಜಯಸಿಂಹ-ಸುಗ್ಗಲೆ,

CC-0. Jangamwadi Math Collection. Digitized by eGangotri

ಕೌಶಿಕ- ಅಕ್ಕ ಇವರ ಜೀವನ ಚರಿತ್ರೆಯಲ್ಲಿ ಜೈನ ಹಾಗೂ ಲಿಂಗವಂತ ಮತಸಂಬಂಧದ ಬಾಂಧವ್ಯವನ್ನು ಗುರುತಿರುವುದು ಕಾಣಬಂದದ್ದೆ. ಕನ್ನಡ, ತೆಲುಗು-ಈ ಉಭಯ ಭಾಷೆಗಳನ್ನಾಡುವ ವೀರಶೈವ ಲಿಂಗಾಯತರು ಅನಂತಪುರ ಜಿಲ್ಲೆಯ ಪಶ್ಚಿಮಭಾಗದಲ್ಲಿ ಬಹುಸಂಖ್ಯೆಯಲ್ಲಿದ್ದರೆಂಬುದಕ್ಕೆ ಆ ಜಿಲ್ಲೆಯ ಸರ್ಕಾರಿ ದಾಖಲೆಗಳೇ ನಿದರ್ಶನ. (ನೋ: ಆಂಧ್ರಪ್ರದೇಶದ ಜಿಲ್ಲಾ ಗೆಜಟಿಯರ್ ಅನಂತಪುರ ಮುದ್ರಣ 1970.) ಆಂಧ್ರಪ್ರದೇಶದ ವೀರಶೈವ ಲಿಂಗಾಯತರಲ್ಲಿ ಬಹು ಮುಖ್ಯವಾದ ಒಳಪಂಗಡಗಳೆಂದರೆ ಜೈನ, ಪಂಚಾಚಾರ, ಸ್ಥಲಿಕ ಸಜ್ಜನ, ಲಾಳಿಗೊಂಡ, ಗಂಡ್ಲ ಸಜ್ಜನ ಹಾಗೂ ಪೆದ್ದಕರ್ಣಗಳು. ವೀರಶೈವ ಜಂಗಮರು ಅರ್ಚಕವರ್ಗದವರು. ಅವರಲ್ಲಿ ಗುಂತಕಲ್ಲಿನಲ್ಲಿರುವ ಗಣಾಚಾರಿಗಳೂ ಲಿಂಗಾಯತರೆ. ಸಾಮಾನ್ಯವಾಗಿ ಧಾರ್ಮಿಕ ವ್ಯಾಜ್ಯಗಳನ್ನು ಅವರು ತೀರ್ಮಾನಿಸುವರು. ಲಿಂಗಾಯತರ ವೃತ್ತಿ ಕೃಷಿಯಾದರೂ, ವ್ಯಾಪಾರವೇ ಮುಖ್ಯವಾದ ಕಸುಬಾಗಿದೆ.

ಕಲ್ಯಾಣದ ಶೂನ್ಯಸಿಂಹಾನಾಧೀಶ್ವರರಾದ ಅಲ್ಲಮಪ್ರಭುವನ್ನು ಉತ್ತಮ ಶೈವರು ಶಿವನೆಂದೂ ವೈಷ್ಣವರು ಕಮಲನೇತ್ರನೆಂದೂ ಭೂಸುರರು ಹವಿರನ್ನಪ್ರಿಯನಾದ ಅಗ್ನಿದೇವನೆಂದೂ ಜೈನರು ತಮ್ಮ ಜಿನಸ್ವಾಮಿಯೆಂದೂ ಹೀಗೆ ಎಲ್ಲಧರ್ಮೀಯರಿಂದಲೂ ಅರ್ಚಿಸಲ್ಪಟ್ಟ ಕಾರಣ ಸಕಲ ಸಮಯಪ್ರೀತನೆಂದೇ ವೀರಶೈವ ಕವಿಗಳಿಂದ 6,7 ಸ್ತುತ್ಯನಾದ ಅಲ್ಲಮಪ್ರಭುವು ವಿಶ್ವಪ್ರೇಮದ ಪ್ರತಿಮೂರ್ತಿಯಾಗಿದ್ದಾನೆ. ಪ್ರಾಗೈತಿಹಾಸಿಕ ಕಾಲದ ಭಾರತೀಯ ಸಂಸ್ಕೃತಿಯ ದ್ಯೋತಕವೋ ಎಂಬಂತೆ ಈ ಜೈನ ವೀರಶೈವ ಸಮಯಗಳ ಸಾಮಾಜಿಕ ಸಾಮರಸ್ಯದ ಸಾಧನೆಯ ಜೀವನವಿಧಾನವಿರುವುದನ್ನು ಅಲ್ಲಮನಂತಹ ವಿಶ್ವಮಾನವತಾಪ್ರೇಮಿಯಲ್ಲಿ ಕಾಣಬಹುದು.

ಹೀಗೆ ಎಲ್ಲರಿಂದ ಇವ ನಮ್ಮವನೆಂದೆನಿಸಿಕೊಂಡಾತ ಅಲ್ಲಮನಾದರೆ ಬಸವಪುರಾಣದ ಕರ್ತೃವಾದ ವೇಮುಲವಾಡ ಭೀಮಕವಿಯನ್ನು ಆಂಧ್ರದಲ್ಲಿ ಜೈನನೆಂದೇ ಭಾವಿಸಿರುವುದನ್ನು ಗಮನಿಸಿದರೆ ವೀರಶೈವರಲ್ಲಿ ಜೈನವೂ ಒಂದು ವರ್ಗವೆಂಬುದು

CC-0. Jangamwadi Math Collection. Digitized by eGangotri

ದೃಢಪಡುತ್ತದೆ. ಕೊಂಡಕುಂದ ಚರದ ಮನೆತನದ ಅಸ್ತಿತ್ವದ ಪ್ರಸ್ತಾಪ ಪ್ರಾಚೀನ ತಾಡಪ್ರತಿಯೊಂದರ ಪತ್ರವ್ಯವಹಾರದಿಂದ ಜೈನವೀರಶೈವ ಕುಟುಂಬಗಳಲ್ಲಿ ಜಂಗಮವರ್ಗವೂ ಇದ್ದಿತೆಂಬುದು ತಿಳಿದುಬರುತ್ತದೆ. ಲಿಂಗಾಯತರಲ್ಲಿ ಜೈನಬಣಜಿಗರೆಂಬ ವರ್ಗವೇ ಇದೆ. ಉಡುಪಿಯಲ್ಲಿ ಲಿಂಗಾಯತ ಮಠಕ್ಕೆ ಇರುವ ಜೈನಜಂಗಮ 8 ಮಠವೆಂಬ ಹೆಸರು ಉಭಯ ಸಮಯಗಳ ಸಮಾಗಮದ ವಸ್ತುಸ್ಥಿತಿಯನ್ನೇ ಪ್ರತ್ಯಕ್ಷೀಕರಿಸಿದೆ.

ಧರ್ಮಸ್ಥಳದ ಮಂಜುನಾಥ ಶಿವಲಿಂಗಪೂಜೆಯ ನಿರ್ವಹಣೆಯು ಜೈನ- ಧರ್ಮೀಯರಾದ ಸನ್ಮಾನ್ಯ ಹೆಗ್ಗಡೆಯವರ ಗಣ್ಯಸಂತತಿಯ ಯಾಜಮಾನ್ಯದಲ್ಲಿದೆ. ಇವೆಲ್ಲ ಐತಿಹಾಸಿಕ ಹಾಗೂ ಸಾಮಾಜಿಕ ಸಂಗತಿಗಳ ವಾಸ್ತವಿಕ ಸ್ಥಿತಿ-ಗತಿಗಳ ಅವಲೋಕನದಿಂದ ಜೈನ-ವೀರಶೈವ ಸಂಸ್ಕೃತಿಗಳ ಸಹಜ ಸಮ್ಮಿಳನವು ದೇಶದ ದೀನ ದಲಿತರ, ಶ್ರೀ ಸಾಮಾನ್ಯನ ಆಧ್ಯಾತ್ಮಿಕ ಉನ್ನತಿಗಾಗಿಯೇ ನಿರ್ಮಿತವಾದ ಒಂದೇ ಭೂಮಿಕೆಯ ವೇದಿಕೆಯಲ್ಲಿ ಒಡಮೂಡಿದ್ದೆಂಬುದನ್ನು ಯಾರೂ ಮರೆಯಲಾಗದು. ಜಿನಭಕ್ತ-ಶಿವಭಕ್ತಗಳೆರಡೂ ಸತ್ಯನಿಷ್ಠೆ, ತ್ಯಾಗಜೀವನ ಹಾಗೂ ವಿಶ್ವಪ್ರೇಮದ ಸಂದೇಶವನ್ನು ಸಾರಿ ಭಾರತದ ಸಮಗ್ರತೆಗೆ ಹಾಗೂ ಜನ-ಜನಾಂಗಗಳ ಸಮರಸವೂ ಸುಮಧುರವೂ ಆದ ಸಮಾಜದ ನಿರ್ಮಾಣಕ್ಕೆ ಕಾರಣಗಳಾಗಿವೆ. ಈ ಉಭಯ ಧರ್ಮಗಳ ಆದರ್ಶವು ಹಗೆತನವನ್ನು ಹುಟ್ಟಿಸುವ ಧರ್ಮಾಂಧರ ಒಳಗಣ್ಣನ್ನು ತೆರೆಯಿಸುವಂತೆ ಮಾಡಿ ಪರಧರ್ಮ ಸಹಿಷ್ಣುತೆಯ ಸಂದೇಶವನ್ನು ಬೀರಿ ನಾನಾ ಕಾರಣಗಳಿಂದ ತಳಮಳಗೊಂಡ ವಾತಾವರಣದಿಂದ ಸಮಾಜವನ್ನು ದೂರಗೊಳಿಸಿ ಮನುಜಕುಲವೊಂದೆ ಕುಲವೆಂದು ಎಚ್ಚರಿಸುವಂತಾಗಲಿ. ಜೀವದೇವೇಶನ ಧರ್ಮಕ್ಕೆ ಜಯವಾಗಲೆಂಬುದೇ ಗುರಿಯಾಗಲಿ.

ಶ್ರೀಶ್ರೀಶ್ರೀ

CC-0. Jangamwadi Math Collection. Digitized by eGangotri

ಆಕರಗಳು

1 ನೋಃ ಪ್ರಬುದ್ಧ ಕರ್ನಾಟಕ ದೀಪಾವಳಿ ಸಂಚಿಕೆ ಪುಟ ೧೩-೧೬.

2 ಕೈವಲ್ಯ ವಲ್ಲರಿಃ ಪು ೩.

3 ಶ್ರೀ ಮರುಳದೇವರ ಸ್ವರವಚನ : ಸಂ:-

ಪ್ರೊ. ಜಿ. ಎಂ. ಉಮಾಪತಿ ಶಾಸ್ತ್ರಿ (ವೀರಶೈವ 1964 ಸಂಪುಟ 5)

4 A hand book of Virasaivism: IV. Virasaiva Rites. pp 82-86.

5 ಸ್ಯಾದ್ವಾದಃ

According to Jaina sources, however, Jainism is not a purely ethical system, but also a philosophy based on the doctrine of many possibilities, known as Anekanta or Syadvada. The doctrine looks at two aspects of everything, the eternal and the non-eternal. The soul undergoes migration according to good or bad deeds. As Jainism regards the existence of jiva in everything , it enjoins such behaviour as does not cause injury to jiva. The soul becomes impure and is engulfed by samsara if it is subjected to the influence of sense objects. In order to keep the soul pure from their contamination, and to secure its release, it is necessary to practice restraint. To achieve this one must resort to or acquire right knowledge, faith and conduct.-- Page 16, "2500 Years of Buddhism," ed. prof. P.V. Bapat , The Publication division, Ministry of information and Broadcasting , Govt. of india.

6/7 ಸೋಮರಾಜ ವಿರಚಿತ ಉದ್ಭಟ ಕಾವ್ಯ; ಪ್ರಭುಲಿಂಗಲೀಲೆ.

8 ಶರಣ ಸಾಹಿತ್ಯ ಸಂಪುಟ ೧೭ ಸಂಚಿಕೆ ೧೦ ಪುಟ ೫೪

ಶ್ರೀ ಶಿವಯೋಗಿ ಶಿವಾಚಾರ್ಯ ವಿರಚಿತಃ ಸಿದ್ಧಾಂತ ಶಿಖಾಮಣಿಃ ಸೋಸಲೆ ಶ್ರೀ ರೇವಣಾರಾಧ್ಯವಿರಚಿತ ಸಿದ್ಧಾಂತಬೋಧಿನೀ ಕನ್ನಡ ವ್ಯಾಖ್ಯಾಸಹಿತ. ಸಂ. ಪಂಡಿತ ಡಿ. ಸಿದ್ಧಗಂಗಯ್ಯ ಎಂ.ಎ.

ಶ್ರೀ

CC-0. Jangamwadi Math Collection. Digitized by eGangotri

ಉದೆಗ

ಉದೆಗ
ಉದಯಾದಿತ್ಯ
ನಿನ್ನ ಪೆಸರ್, ಈ ಕವನದುಸಿರ್.
'ಚಿತ್ತಮಂ ಹರ, ನಿನ್ನುಜ್ಜ್ವಳ ತೇಜಮಂ
ಬೆಳಗು ನೀನ್'–ಎಂಬ ಈ ನಿನ್ನ ನುಡಿಯ ಬೆಡಗಂ
ನೆನೆದು ನಲಿದೊಲಿದು ತಂದಿಹೆನು ಕಡೆಗಂ
ಈ ಕವನ ಮಣಿಮಾಲೆಯನು ಇಂದು,
ಅಂದಿನಾ ನಿನ್ನಾತ್ಮವಿಶ್ವಾಸವೇ ಸಂದು.
ಬೀರಿಹುದು ಜಗಕೆ ಪರಿಮಳವ ನಿಂದು,
ವಿಶ್ವರೂಪನೆ ಮೃಡನೆ ತಾಂ ವಿಶ್ವಾತ್ಮ-
ನೆಂದೆಂಬ ವಿಶ್ವಾಸದಿಂದಾ ಚರಿಪ ಸಂಕಲ್ಪ
ಕಲ್ಪಾಂತರಸ್ಥಾಯಿ ತಾನಲ್ತೆ ಉದಯರವಿ!
ಜೀವಲೋಕದ ತಮವನೋಡಿಪಾ ಲೋಕಗುರು
ಪರತತ್ತ್ವ ಚಿದ್ರೂಪ ಆದಿತ್ಯ ಸದ್ರೂಪ
ಸದ್ಭಕ್ತ ಚೈತನ್ಯಮೂರ್ತಿ ಚೂಡಮಣಿ ಹೃತ್-
        ಕಮಲ ಮಧ್ಯದೊಳ್
ನಿಂದು ಪಾರ್ದಂಗೆ ನಿನ್ನ ಕೃತಿ ಕಲ್ಪತರು;
ಮಿಂದು ಆಳ್ದಂಗೆ ಸಂಧ್ಯಾನ ಚಂದ್ರಶಾಲೆ!

ಒಡಲು ಜೀವ ಆತ್ಮ ಎಲ್ಲ
ಮೃಡನೆ ಎಂಬ ಕಾಣ್ಕೆ ತನಗೆ,
        ಸುಖಿಯ ಕೂಡೆ ಆಡಿ ಒಲಿದು
        ನಲಿದ ಜೀವ ಕಾವ್ಯವು;
ಭುಕ್ತಿ ಮುಕ್ತಿರೂಪ ಸುಖದ
ಮೃಡನ ಕರುಣೆ ಪಡೆದ ಭಾಗ್ಯವು!.

ಮಣ್ಣುಬಿಟ್ಟು ಮಡಕೆಯುಂಟೆ,
ತನ್ನ ಬಿಟ್ಟು ದೇವನುಂಟೆ?
ಒಡಲ ನಚ್ಚೆ ಕೊಚ್ಚಿ ಕೆಡೆವ
ಇಚ್ಛೆಯಿಂದ ಬೆಚ್ಚಿ ಬೀಳುವೆ
ಮೃಡನ ನೀನು ಬಿಡದೆ ಕೂಡೆ
ಮೃಡನೆಯಾಗುವೆ!

ಆಜೀವಮಧುಸ್ಮೃತಿ

C-0. Jangamwadi Math Collection. Digitized by eGangotri

ಕವಿಯ ನೋಡೆ ಚೂಡಮಣಿಯು
ಚಂದ್ರಚೂಡ ಗಡಣೆಗಿಲ್ಲ
ಅರ್ಥಭೇದವು! ಇಂತು
ಇದ್ದು ಇಲ್ಲದಂತೆ ಕವಿಯು
ನೀನು "ಇಂದುಶೇಖರ."
ವಚಸಿ ವಚಸದಂತೆ ರಚಿಸಿ
ಕೊಟ್ಟ ಕೃತಿಯ ನೋಡೆ ಗೂಢ-
ಕಾವ್ಯವು !
ಕರ್ತನಾಗಿ
ಕಡೆಗೆ ಜೀವನ್ಮುಕ್ತನಾಗಿ
ನಾಟ ನಿಂತೆ ಸ್ಥಾಣುವೋಲು
ಮಿಟುಕ ನೋಡೆ ಹಿಡಿದುದಾಯ್ತು
ನಾಗವರ್ಮ ಕೃಕರ ಕೂರ್ಮ.
ಚೂಡಮಣಿಯೆ ಮತ್ತೆ ಮುಡಿಯ
ಸೂಡೆ ಬಂದನಿಂದುಶೇಖರ!

ಕಡೆಗೊಮ್ಮೆ ಮೃಡನ ಕಾರುಣ್ಯದಲಿ
ಕಂಗೊಳಿಸಲಿರ್ಪ ಲೋಕ ಕವಿ ನೀಂ
ಕರತಳದ ಪರುಷಮಣಿ ಹೊಳೆಹೊಳೆವೆ
ತಮದ ವಿಷವನು ಹರಿಸೆ ಜಗಕೆ!!

2

ಎಂಟ್ನೂರು ಮೇಲೊಂದು ವರ್ಷಗಳ
ಹಿಂದಾಂಧ್ರಧರಣೀತಳದ ತೆಂಕ
ಪೆನ್ನ ಪರಿನಾಡ ರಾಜಾಶ್ರಯದ
ನೆಲವೀಡು ಎನಿಸಿರ್ದ, ಪೆನ್ನನದಿ* ಬಳಸಿ ಕಂಗೊಳಿಸಿರ್ದ,
ತಾಟಪಾರ**ಪುರ ರಾಜಧಾನಿಯೊಳು ತಾಂ ಮೆರೆದು
ಪೆನ್ನಾರ್ ನದಿಯ ತೀರದೊಳಂದು
ಜ್ಞಾನಸಾರಾಂಭೋಧಿಯಲಿ ಮುಳುಗಿ
ಮರೆಯಾಯ್ತು ಕೃತಿ ಚಮತ್ಕೃತಿಸಾರ.
ಮತ್ತೆ ತಾಂ ಶಿವಜ್ಞಾನ ಸಾರತರ
....

ಕವಿತಾರಚನೆ 1.12.1978/ ಪರಾಮರ್ಶೆಯ ವರ್ಷ 1998
* ಪೆನ್ನೇಱು-ಪೆನ್ನಾರ್ :ಪಿನಾಕಿನೀ ನದಿ, ಬೆಣ್ಣನದಿ (பெண்ணை நதி).
** ತಾಡಪತ್ರಿ, ಅನಂತಪುರ ಜಿಲ್ಲಾ, ಈಗ ಆಂಧ್ರಪ್ರದೇಶ.

CC-0. Jangamwadi Math Collection. Digitized by eGangotri

ಧವಳ ಕಾವ್ಯಾಕಾಶದಂಗಳದಿ
ಮೂಡಿ ಮೈದೋರಲಿರ್ಪುದು ಕಣ್ಗೆ
ಜಗದ ಕತ್ತಲೆ ಕಳೆವ ಕಾವ್ಯರವಿ ತಾನೆ ಎಂಬವೊಲು!

ಅಂದಿನುದಯಾದಿತ್ಯ ಕವಿ
ಇಂದು ತನ್ನೀ ಕೃತಿರೂಪದಲಿ
ಮನ್ಮನವನಾವರಿಸಿ, ಆತ್ಮನಂ
ತನ್ನತ್ತ ಸೆಳೆದು ಗೂಢಕಾವ್ಯ-
ರಚನಾರಹಸ್ಯಮಂ ದಿವ್ಯಪ್ರ-
ಜ್ಞಾನಾಂತರಂಗಮಂ ಬೋಧಿಸಲ್
ಶಬ್ದಬಹುಮುಖ ವಜ್ರದರ್ಪಣದಿ
ತನ್ನ ತಾಂ ತನ್ನಿಂದ ಕಾಣ್ಬವೊಲ್
ಸತ್ಯದಾವಿಷ್ಕಾರವನೆ ಶ್ಲಿಷ್ಟಪದ
ಸಂಯೋಗರಚನಾ ವಿಶೇಷದಿಂ

ಅರ್ಥಸಂಧಾನಮಂ ಭಾವಮಂ,
ಸ್ವಾತ್ಮೈಕ ದೃಷ್ಟಿಯಂ ಸೃಷ್ಟಿಯಂ,
ಪದದೊಲ್ಮೆ ನಲ್ಮೆಯಂ, ಸಲುಗೆಯಿಂ
ನುಡಿಯ ಬೆಡಗಿಂ ನಡಸೆ ಕೈ ಹಿಡಿದು
ಕನ್ನಡವ ಸಂಸ್ಕೃತಕೆ ದೊರೆಯೆನಿಸಿ–ನಾರಮತಿ ನೀನಲ್ಲ!
ಕನ್ನಡವು ಏನಲ್ಲ! ಎಂದೆನಿಸಿ ದಯೆಗೆಯ,
ಉದಯಮನು ನೀನಲ್ತೆ!

ಉದಯಂಗೆ ಭೂಮಂಡಲಾಧಿಪಗೆ ಕವಿರತ್ನ
ಶೇಖರಗೆ ರಾಜಸುಕವಿರತ್ನಾಭರಣಂಗೆ
ಕಾವ್ಯಂ ದಿಟ ಸೇವ್ಯಂ; ಆತ್ಮಂ ಅನಾತ್ಮವೆರ-
ಡಕ್ಕಂ ಶಿವ, ನೀನೆ ಹಸ್ತಾವಲಂಬಕಮೆಂದು
ಪೊಗಳುತೆ ನಿಜಪೂಜಾಭಕ್ತಿಯಿಂ ನಿಜನಿಷ್ಕ-
ಲಾಸ್ಪದಮನತ್ಯಾನಂದದಿಂ ಧ್ಯಾನಿಸುತೆ ಶಿವ-
ನುಂಬಂ ಶಿವನೂಡುಗು, ಶಿವನೆ ಪೂಜ್ಯಂ ಪೂಜೆ-
ಯಂ ಮಾಳ್ಪನುಂ ಶಿವಂ, ಆಪ್ತನುಂ ಶಿವಂ, ಆ-
ಗಮಸ್ಥಿತ ಶಿವಜ್ಞಾನಂ ಶಿವಜ್ಞಾನಿಯುಂ
ಶಿವಂ, ಇಷ್ಟಂ ಶಿವಂ, ಇಷ್ಟಸಿದ್ಧಿಯನೊರ-
ಲ್ದೀವಂ ಶಿವಂ, ಸರ್ವನುಂ ಶಿವಂ ಎಂದು ಶಿವ
ನಿಮ್ಮನೆಯ್ದೆ ತಿಳಿದಂ ಎಂದಂಗೆ,

ಆನ್ ಅಡಿಗೆ
ನಿಮ್ಮನ್ನಂ ಬದು ಎನ್ನ ಇಮ್ಮನಾಂ ಬಿಡೆ, ನೀಂ

ಅಜೀವಮಧುಸ್ಮೃತಿ

CC-0. Jangamwadi Math Collection. Digitized by eGangotri

ಇರ್ದು ಎಡೆಗೆ ಒಯ್ ಭವ, ಅಂಬುಧಿಯನೆ ಎತ್ ತಂ-
ಪೊಯ್ಸು ನೀಂ, ಎನ್ನ ಆವ ಎಡೆಯೊಳ್ ಒಳಕೊಳ್ಳ-
ದೀಶ ದಯೆಯಿಂ ಎಂದ ನಿಜಭಕ್ತನಿಷ್ಕಂಗೆ
ಶಿವಜ್ಞಾನ ಚಂದ್ರಂಗೆಯಾದಿವ್ಯ ಭಾಷಾ-
ಪ್ರೌಢಂಗೆ ಒಡಲಿಂಗವಾದಂಗೆ ಪೆನ್ನಪರಿ-
ನಾಡ ನಿರ್ವಾಹ ತಾನಾಗಿ ಪೆನ್ನಾಕಾರ-
ಮಂ ತಾಳ್ದು ಬಾಳ್ದಂಗೆ ಏನಿಲ್ಲ ಪೊದಳ್ದೊದ-
ವಿದ ಕಾವ್ಯದೊಳ್! ಗೂಢಪದಮೊ ಪದಸಂಯೋಗ-
ವಾಕ್ಯಮೋ, ಅರ್ಥಮೋ ಅರ್ಥಸಂಧಾನದಾ-
ಮಂತ್ರಮೋ, ನಾದಮೋ ಭಾವಮೋ ಭಾವಸ-
ಮ್ಮೋದದಾರತಿಯೊ-ಪೇಳ್-ಭಾರತಿಯೊ, ಮಸಿಯೋ-ದಿಟ-
ಕೂರಸಿಯೊ, ಭೋಗಮೋ-ಯೋಗಾಮೃತಾಸ್ಪದಮೊ
ಲೋಕದಾಲೋಕಮೊ ಶಿವತತ್ತ್ವಾಲೋಕನಮೊ-
ಓ! ಚದ್ಗಗನವಿಹಾರಿ ತದ್ವಿಶ್ವವಿಲಾಸಿ
ಮನಮೊ ವಿದ್ಯುತ್ಸಮಜ್ಞಾನ ಲಾಂಛನಮದೇಂ
ಮಹಾಘನಮೈಸೆ! ಭಾವಿಪೆನ್ನಿನ್ನಾತ್ಮದಾವಿಷ್ಕಾರ
ಘನಸಾರಸಂಪನ್ನದೀಪ್ತಿಯಂ.

ಉದೆಗ ಉದಯನುಮಾಗಿ ಉದಯಾದ್ರಿ
ಶಿಖರದಲಿ ಶೇಖರನೆ ತಾನಾಗಿ,
#ಚೋಳೋದಯಾದಿತ್ಯನೆನಿಸಿ ನಿ-
ನ್ನಿಂದುದಿತಮಾದಲಂಕೃತಿಯೊಳು
ಮುನ್ನ ನಿನ್ನುದಯಮನಲಂಕರಿಸಿ
ಚಿತ್ರಿಸಿದೆ; ಬಿತ್ತರಿಸಿ ನಿನ್ನಾತ್ಮ
ವೃತ್ತಮಂ; ಕನ್ನಡಿಸಿ ಕಂದದಿಂ.

3

ಜಗಕೆ ಸೋಮಮಹೀಧರ ಸುತನೇಂ ಅರಸನೇ?
ಪುಸಿ; ರತಿ ಕಳತ್ರ ಚೈತ್ರ! ಮಂದಾನಿಲ!! ಇಂದು!!!
—ಇದು ನಿನ್ನ ನೀಂ ಪೊಗಳ್ದ ರಸವಾಣ. ಸರಸಂಗೆ
'ಅರಸ'ನೆಂದೆಂಬ ನುಡಿ ಸಹಜದಿಂ ಸಲ್ಲ. ದಿಟ.
ಸರಸದಿಂ ಸೊಲ್ಲಿಸಲದ – ದಿನಕಾಂತಕುಲ ಕೇಳ್ –
ಸೊಗಯಿಸದೆ? ಭಿನ್ನಭಾವದೊಳಭಿನ್ನ ನೀನೆಲೆ:

....

sol, the sun

CC-0. Jangamwadi Math Collection. Digitized by eGangotri

ದಿನಕ ಅಂತಕ ಕುಲವೆ ವಿನತಾಂತಕುಲವು, ಎಲೆ
ದಿನಕಾಂತ='ಸೋಮ'ಕುಲ ಜನಪಸಂಕುಲನೇ,
ದಿನರಾಜಕುಲರಮಣ ದಿನಕಾಂತ ಸೋಮನೇ,
ಭಾಸ್ಕರದ್ಯುತಿ ರಮ್ಯಜನಪದದ್ಯುಮಣಿಯೆ,
ಭಾಸ್ವತ್ತಮಃಕಾಂತ ರಾಜಕುಲಜಾತನೆ,
ಆದಿತ್ಯ ಸಮತೇಜ ಕುಲಭವಾಬ್ಧಿಪನೇ
ಭವತಾಪ ಹರರೂಪ ಕುಲರುದ್ರ ಸೌಮ್ಯ-
ನೀಂ!
ಕೈಯ್ಯೊಳ್ಪಿಡಿದ ಖಡ್ಗಜಲವರಾತಿಬಲಮಂ
ಸುಡುವುದೆನೆ ಚಿತ್ರಂ ಧರೆಗೆ!

ತತ್ಪ್ರತಾಪಮಂ
ಪಡೆದ ಉದಯಾದಿತ್ಯನೆ ರಾಜರವಿ! ರಣದೊಳ್
ಇದಿರಾದ ಮದವದಹಿತ ಮಹೀಭೃತಸತಿಯರ
ವದನವನಜಕ್ಕೆ ಅದವಳಲ ಮಾಡುವಂದಂ
ಬಿಸವಂದವನೆ ತೋರ್ದ ತೇಜಃಪ್ರತಾಪಮಂ ತಾಳ್ದವಂ!
ಕೈಯ್ಯಾಂತ ಧರೆಗೆ ಪೊಣ್ಪುದಯನೃಪ
ಬಿಡದೀವ ಗುಣದಿ ನಿನ್ನಯ ಧನಂ ಸದ್ಧನಂ!
ಮೇಣ್ ನಿನ್ನಯ ಮನಂ ಘನಕೆ ಘನವು!!
ಇಂತೀವ, ಕಾವ ಬಗೆಯಿಂ ಉದಾರಕಾವ್ಯನ್,
ಕಾದಿರಿವ ಬಲ್ಮೆಯೊಳ್ ನೀಂ ವಿಕ್ರಮವಿಭಾಷಿ
ಮಾರಭಸಿತವಿಭೂಷಿ! ಮೈದಾಳ್ದ ಮಾರ್ತಂಡ!

——೪——

"ಆ ಉದೆಗನೊಳಾರಾಂಪರ್? ಮುಳಿದೊಡಂತಕನ್!
ಆಂತೊಡೆ ಅವರ ಕಂಡದಿಂಡೆಯಂ ಕೆದರುವನ್
ರಣದೊಳೊಡ್ಡಿದಾನೆಗಳನಿರ್ಕಡಿಮಾಡುವನ್
ಆತನೊಳ್ಪಸ ಆರ ಬೆದರಿಸದು? ಓಡಿಸದು
ಅದಾರ? ಉದಾತ್ತದೈನ್ಯದೊಳಾರ ಪುದಿಯಿಸದು?
ಆರನಾಗಿಸದು ತಾಪಸವೃತ್ತಿಯನ್"ಎಂಬ
ಕೀರ್ತಿವಾರ್ತೆಯಿಂ ಘನಮಹಿಮನೆಂದೆನಿಸಿ ನೀಂ
ಪ್ರಚ್ಛನ್ನ-ಪ್ರಕಟಾರ್ಥದಿಂ ಗುಪ್ತಾತ್ಮ
ಪ್ರಹೇಳಿಕೆಯ ಕವಿಮಾರ್ಗದಿಂ ಪೇಳ್ದು ನಿಗೂಢ
ಮೂರ್ತಿಯನು ಇಂತು ನೀಂ ಚಿತ್ರಿಸಿಹೆ ಉದೆಗ- ನೃಪ-
ಈಶ್ವರಂ ತಾನಾದ ಮರ್ಮಮಂ ಚಿತ್ತದಲಿ:-

CC-0. Jangamwadi Math Collection. Digitized by eGangotri

ಕುಂದಿನಿತು ಬಾರದಿಹ ನಿರ್ಮಲದಕಾಂತಿಯಿಂಸಮತೆಯಿಂ.
ಸೌಕುಮಾರ್ಯದಿನಾತ್ಮಭಾವದಿಂ ಮನವೆತ್ತ ನೋಟದಿಂ
ಸಕಲಭೋಗದಿನುಜ್ವಲ ರೂಪದೆ ಕಣ್ಗೆಡ್ಡಮಾಗಿ ಮೈ-
ಗೊಂಡ ಕಾವ್ಯದಿಂ ಕವಿಯಾಗಿ, ಉದೆಗ ನರ
ಕವಿಶಿಖಾಮಣಿಯಾದ ಕಾರಣದಿ ನೃಪನಾದ ನೆನೆ:
ಕವಿ "ಪುಷ್ಪ"ದೃಷ್ಟಿಯಿಂ:
ಉದೆಗ ನರಪತಿಯಾದನದು ಕಾವ್ಯಕುಸುಮದರ್ಶನಭಾಗ್ಯ!
ಔದುಂಬರಾಭರಣನಾ ನೃಪಂ—"ಶಿಖಾಮಣಿ"ಯಾದನನೆ:—

ಚೋದ್ಯಮೇಂಸಾಧ್ಯಂಗೆ? ರಣಧೀರ ಭುಜಪರಾಕ್ರಮದೊಳಂ
ಅಗ್ರಣಿಯುಮಾಂತ ನೃಪರಿಂ ನೃಪೇಶ್ವರನೆಂಬ ಕೀರ್ತಿಯಂ
ಮತ್ತೆ ಉದೆಗನರೇಶ್ವರ ಕವಿಶಿಖಾಮಣಿಯಾದ ಭಾವದಿಂ
ಆದಿತ್ಯಕರೀಟಾಲಂಕೃತಂ ನೃಪೇಶ್ವರ ಸತೇಜಂ!
ಆಉದೆಗ ನೃಪೇಶ್ವರನೊ, ಕವಿಗಳ ಮಾರ್ಗಮಣಿದೀಪನೋ
ಈಶ್ವರನೆ ತಾನಾದನ್ಯೆ ಪರಮಪರಂಜ್ಯೋತಿಃಪ್ರಕಾಶ
ಮಣಿಲಿಂಗಮಂ ಜಟಾಜೂಟದೊಳಿರಿಸಿ,ಕವಿಸಿ:"ಚೂಡಮಣಿ"
ಚಂದ್ರಚೂಡಂ ಮೇಣು ಚೋಳ ಕವಿ ರಾಜಶೇಖರನಾದ
ಉದೆಗ ಭೂಪೇಶ್ವರಂ ಕವಿಶಿಖಾಮಣಿಯಾದ ಕಾರಣದಿ:
ನೃಪಕವೀಶ್ವರರಿಂದೆ "ಆದನಿಂತು ಕವಿರಾಜಶೇಖರಂ."
ಈ ಪ್ರಹೇಳಿಕಾ ಲಕ್ಷ್ಯದಿಂ ಉದಯಾದಿತ್ಯ ಗೂಢಕಾ-
ವ್ಯಾತ್ಮೋರ್ಣನಾಭನೀ ತಂತುವ ಬಿಡಿಸಿ ಬೀರಿದ್ಯೆ ಮನಕೆ
ಸ್ವಾತ್ಮನಿಂದರಿವಂತೆ ಸುಜ್ಞಾನಕರಣಮಂ ಜಗಕೆ!!

——ಜ——

ಸದಾ-
ಶಿವಾಗಮಸಾರದಿಂ ಪೂರ್ಣಚಂದ್ರಾದಿತ್ಯ
ಖಮಣಿ ನೀನಾಗಿ ಮೆರೆದ್ಯೆ ಜ್ಞಾನಸಾರದಿಂ:
ತಾಂ ರಾಜಸುಕವಿರತ್ನಾಭರಣನೆಂದೆಣಿಸಿ
ಅದೆ ಬರೆದಲಂಕೃತಿಯ ನಿನ್ನುಕ್ತಿ ಇಕೊ ಸಾಕ್ಷ:-

"ಸಂಧಿಸಿ ಮೂಱಾಕಾಶದ
ಪಿಂದೊರ್ವಂ ನಿಂದನಾ ಸದಾಶಿವನಿಂದಂ।
ಬಂದುದು ಲೆಕ್ಕಂ ಸಾಸಿರ-
ಮೆಂದೊಡವಂತವನನಱಿವೊಡಾಗಮವಱಿವಂ॥"

ಉದೆಗ

CC-0. Jangamwadi Math Collection. Digitized by eGangotri

ಆ ದೈತ್ಯಜಲಂಧರನಂ ವಧಿಸೆ ಪಾದದಂ-
ಗುಷ್ಠದಿಂ ಚಕ್ರಮಂ ಬರೆದು ತಾಂ ಪ್ರತಿನಿತ್ಯ
ಲೆಕ್ಕ ಸಾವಿರದಿಂದೆ ಲೇಸಾದ ಕಮಲದಿಂ
ತನ್ನ ತಾಂ ಬಿಡದೆ ಪೂಜಿಸುತಿರಲು ಒಂದುದಿನ-
ವಾ ಸದಾಶಿವಂ ತಾಮರೆಯಲೊಂದನೂನಂ
ಮಾಡೆ ದೈತ್ಯಾರಿ ಕಂಡು ನಿಜನೇತ್ರವೊಂದಂ.
ಕೂಡೆ ಭಕ್ತಿಯಿಂದಾ ಸದಾಶಿವಗೆ ಪೂಜೆಗೆ
ನೀಡೆ ನಿಷ್ಠೆಯಂ ಕಂಡೊಲಿದು ಕಮಲಾಕ್ಷಂಗೆ
ಚಕ್ರದಾನಂಗೈದ ಸದಾಶಿವನಂ ಶೈವ
ಸೂಕ್ತಾಗಮಸ್ತುತ್ಯ ನಿಜಯೋಗಮೂರ್ತಿಯಂ
ಬಿಂದು ಮೂರರ ಹಿಂದೆ ನಿಂದೊರ್ವನಂ ಸಂದ
ಸಾಸಿರದ ಪುರುಷನಂ ಸಾವಿರದ ಲೆಕ್ಕದಿಂ
ಪದ್ಮಾಸನಂ ಕುಳಿತು ಪರಮ ಪ್ರಸನ್ನನಂ
ತದ್ದಿವ್ಯಲಿಂಗಮಂ ಕೋಟ್ಯರ್ಕತೇಜನಂ
ಅಮೃತಘನಸತ್ವನಂ ಆತ್ಮೈಕ ಸೇವ್ಯನಂ

ಶಕ್ತಿರಂಜಿತ ತ್ರೈಮೂರ್ತಿಹೃತ್ಕಮಲದೊಳ್
ನಿಂದನಂ ಚತ್ಕಲಾನಂದದೊಳ್ ಮಿಂದನಂ
ಐಕ್ಯನಂ ಆತ್ಮ- ಆಕಾಶಮಂ ಒಂದನೊಂ
ದರೊಳ್ ನೆರೆದು ಆತ್ಮ - ಆಕಾಶಮಯವಾ
ಜ್ಯೋತಿಃಸ್ವರೂಪ ಪರತತ್ತ್ವೈಕರೂಪನಂ
ಓಹೋ ನಮಶ್ಶಿವಾಯ ಮಹದಾಕಾಶದಾ
ಮರೆಯಲಿಹ ಶಾಂತಾರ್ಕನಂ ಓಂಪ್ರಕಾಶನಂ

ದೇಹದೇವಾಲಯದ ಜೀವದೇವನೆಯಾಗಿ
ಆ ದೇವನಂ ಮಹಾನುಭಾವದಿ ನೆನೆವನಂ
ತನುಮೂರರೊಳ್ಸಂದು ಸುಟ್ಟ ಅರಿವೆಯ ತೆರದಿ-
ಅನುವಿನಿಂದುಳಿಮೆಯೊಳ್ ಉಳಿದನಂ, ಉಳಿದು ತಾ-
ನಾದನಂ, ನಿಷ್ಠೆ ತಾಂ ಬಲಿದ ಮಾಹೇಶನಂ
ಅವಿದ್ಯಾವಿಹೀನಾತ್ಮ ವಿಜ್ಞಾನಮೂರ್ತಿಯಂ
ಮಮಕಾರಜೂರ್ತಿಯಂ ಮಾಯಾವಿದೂರನಂ
ಮೋಹಾಂಧಸೂರ್ಯನಂ ಜ್ಞಾನೇಂದುಕಾಂತನಂ
ಪರಮೇಶನಾ ಒಲುಮೆ ನಲುಮೆ ತಾಂ ಮೈದಾಳ್ದನಂ
ಮನವರಳ್ದು ದಿಂಡುದುಂಡುಮಲ್ಲಿಗೆಯಾದನಂ
ಸಕಲಮಂ ಈಶನೆನ್ನುತ ಮನಂಗಂಡು ಆ
ಸಕಲ ಜೀವಾತ್ಮರೊಳಖಿಲಾತ್ಮಾವಸ್ಥೆಯಿಂ

CC-0. Jangamwadi Math Collection. Digitized by eGangotri

ಸಕಲೇಶಭಾವದಿಂ ಸರ್ವರೂಪಸ್ಸದಾ-
ಶಿವನಾದ ಆ ಪ್ರಾಣಪರಮೇಶಸಕಲನಂ,
ನಿಷ್ಕಲನ, ಸಕಲ - ನಿಷ್ಕಲ ರೂಪು ನಿರೂಪುಂ
ನಿಜರೂಪದೊಳ್ಸಂದು ನಿಂದ ನಿಜನಿತ್ಯನಂ
ನಿಜಲಿಂಗ ರೂಪನಂ ಮೈಯೆಲ್ಲ ಕಣ್ಣಾಗಿ
ತನ್ನ ತಾನರಿದು ತನ್ನಿಂದ ತಾನಾದನಂ
ಮುಕ್ತಮಣಿಧವಳನಂ ಶಿವಶಕ್ತಿಯಾಳ್ವನಂ

ಶರಣನಂ ಮರಣಭಯವಳಿದ ನಿರ್ಭೀತನಂ
ಕರುಣನಂ ವೀತರಾಗಿಯಂ ಶಿವಯೋಗಿಯಂ
ನಿಜವುಂಡ ನಿರ್ಮಲದ ಮಹಿಮಾಂತರಂಗನಂ
ನಿಸ್ಸಂಗ ನಿರ್ಲಿಪ್ತ ನಿಜಾನಂದೈಕ್ಯನಂ
ದಕ್ಷಿಣಾಮೂರ್ತಿಯಂ ಸಿದ್ಧವಟದೇವನಂ
ಶ್ರೀಪಾದ ಪದ್ಮನಂ ಕವಿತಾಕಲಾನಿಲಯ-
ನೀ ಚೂಡಮಣಿಯಾ ಕಲಾನಿಲಯ ಯಶಶ್ರೀ
ಚಂದ್ರಚೂಡಾಮಣಿಯ ನೆನೆದನೀ ಶತಕದೊಳ್
ಭಕ್ತಿಯಿಂ:

ಈಶಾನ ಶರಣ್ಯಂ. ನಿಜಶಿವ
ಶ್ರೀಪಾದ ಪಂಕೇರುಹಸ್ಮರಣಪ್ರಾಪ್ತಿ ತ-
ಲ್ಲೀಯಮಕ್ಕೆ ಮನದೊಳ್. ನಿಮ್ಮನೇ ಚಿತ್ತದೊಳ್
ನಿಲಿಸುವೆಂ: ನಿಮ್ಮೊಳೆನ್ನಯ ಮನಂ ನಿಲ್ಕೆ ಚಿ -
ತ್ತಮಂ ಹರ ನಿನ್ನುಜ್ವಳತೇಜಮಂ ಬೆಳಗು.
ಮನೋರಾಗಂ ತಾಂ ಮನದೊಳ್ಪತ್ತಿರದಂತೆ
ಕರ್ಚಕಳೆ. ದಿವ್ಯಜ್ಞಾನಸುಧಾಂಶುರಾಹುವೆನಿ
ಪಾ ದ್ವೇಷಮಂ ಹರನೆ ನೀಂ ಸಂಹರಿಸಾ. ಕ
ರ್ಮವಾರ್ಗೆ ಹಿತಮೋ? ಮೃತ್ಯುಸಂಹರಣಕ್ಕೀಶ
ನಿಜಾಂಘ್ರಿಯೊಂದೆ ಶರಣುಂ ಎಂದೆನುತೆ ಕಡೆಗೆ
"ಭವಾರಾತಿಗಂ ನೆರಮಾಗಲ್ ತುದಿಗೆಯ್ದಿ"ಸಿ
'ನೆರೆಯೆ ತಾಂ ಸಾಮಾರ್ಥ್ಯ(sic)ರಿಲ್ಲ' 'ಇಂದು - ಶೇಖರ-
ನೇಂದ(sic) ಆಂ, ಶರಣಾರ್ಥಿಯಾಗಿ ನಿನ್ನ ಮರೆಯಂ
ಪೊಕ್ಕಂ ದಿಟಂ' ಜನ್ಮಜಲಧಿಯಿಂ ಪೊರಗಿಕ್ಕು
ನೀಂ ಕರುಣದಿಂ ಚಂದ್ರಚೂಡಾಮಣೀ ಎಂಬ
ಮೊರೆಯಿಂದ ಕೃತಿಗರ್ಭದೊಳ್ನಿನ್ನನರಪಂಗೆ
ಕಾಣಿಸಿದೆ ಕಾಲ್ತೊಡರ್ದಬಳ್ಳಿಯವೊಲ್. 'ಇಂದು -

CC-0. Jangamwadi Math Collection. Digitized by eGangotri

ಶೇಖರಂ' ನಿನ್ನಣ್ಣನೀ ಕಾವ್ಯನಾಮಮಂ
ನಿನ್ನಲಂಕೃತಿಯೊಳಂ ಕಂಡೆ 'ರಾಜಶೇಖರ'
ಕವಿನಾಮ ಪರ್ಯಾಯದಿಂ. ಆ 'ಶಿಖಾಮಣಿ'ಯೆ
ತಾಂ ಶತಕಾಂತದ "ಇಂತೀ 'ಚೂಡಮಣಿ' " ಕವಿಯ
ಪೆಸರ್. ಕೋಟ್ಯರ್ಕಸಂಪದದ ತೇಜೋನಿಧಿ
ಶ್ರೀಚಂದ್ರಚೂಡಾಮಣಿಯೆ ತನ್ನ ಅಲಂಕೃತಿಯ
ರಾಜಶೇಖರಂ ತಾನಲ್ತೆ? ತಾನುಭಯಕೃತಿ
ಕರ್ತನೆಂಬುದಕೆ ಸಂದಯಮದಿನ್ನುಂಟೆ ? ಪೇಳ್
ರಾಜಂ ಶಶಿಪದಂಗಳವೊಲ್ ಗೂಢರೂಪಂ
ವಿಕ್ರಮ ವಿಭಾಷಿ, ಉದಗಂ ದಾನವರಿಪುವೊಲ್
ರಾಜರವಿ ತಾನ್ ಅಲ್ಲಿ : ರವಿರಾಜತಾನ್ ಇಲ್ಲಿ :
ವೀರವಿಕ್ರಮಿ ಅಲ್ಲಿ, ಮಾರಮರ್ದನನಿಲ್ಲಿ
ಶಂತಾರ್ಕಶಿಖಾಮಣಿ! ಮೃಗಲಿಂಗಿ ಚೂಡಮಣಿ
ಶಿವಯೋಗಿ !! ದಿಟಂಗಂಡಂಗೆ ಸೋಜಿಗಮುಂಟೆ?
ನೂತ್ನರಜತಗಿರಿರಾಜಮೌಳಿಗುದಯಾದ್ರಿಗೆ
ಆದಿತ್ಯನು, ಗಿರಿಜಾಧವನ ಜೂಟಕೆ 'ಇಂದು'-
ತಾನಾಗಿ-ಶೇಖರನು.'ರಾಜಶೇಖರ' 'ಶಿಖಾ-
ಮಣಿ' ಮೇಣ್ 'ಚೂಡಮಣಿ'ಯೆಂಬ ತನ್ನುಭಯ
ಕಾವ್ಯನಾಮಂಗಳಿಂ ಸಂದೆ ನೀಂ ಪೇಳ್ದ ಕೃತಿಲೋಕದೊಳ್,
ನಿಂದೆ ನೀನಲ್ಲಿ ಸಂಕೇತದಿಂ, ಗುಪಿತದಿಂ.
'ಜ್ಞಾನಸಾರ'ವು ನಿನ್ನ ಕೃತಿಮೂರ್ತಿ: ನಿಶ್ಚಿತಂ
ಅರಿದಂಗೆ, ಅರಿವಂಗೆ, ನಿಜದರಿವಿನಿರವಿಂಗೆ.
ಅಂದು, ಇಂದು ಸಲೆ ಮುಂದೆಂದೆಂದು ಸಂದ"ಉದ-
ಯಾದಿತ್ಯನ ಪೇಳ್ದೀ ಜ್ಞಾನಸಾರಂ"ತಾನೆ
ಸುಖಿಕೆ ತಾಣಮದಾಗಿ ಭುಕ್ತಿಯಂ ಮೇಣ್ ಮುಕ್ತಿ-
ಫಲಮನೊಲ್ದೀವುದುಗೆಂಬೀ ಕವಿಯ ಕಾಂಕ್ಷೆ, ತಾಂ
ಈಡೇರುತಿರ್ಕೆ ಸತತಂ. ಇಂತು ಕೃತಿರೂಪ-
ಕೃತಂದ ಕವಿಕಾವ್ಯ ಮಹಿಮೆಯಂ ಮನದಣಿಯೆ
ಸವಿಗಂಡು, ಶಿಲೆಯುಲಿಯೆ ಕವಿಗೊಟ್ಟು ಲಾಲಿಸಿದೆ;
ಮೇಳಿಸಿದೆ ನಿನ್ನ ನುತಿಯೊಳು ಮನವ;
ನಮಿಪೆನಿದೊ
ಭುವನಪ್ರಖ್ಯಾತ ಸೋಮಾನ್ವಯಜನಿತ ಮಹಾರಾಜರೊಳ್
ಸಿಂಹಾನಾರೂಢ ಅತ್ತಿರಾಜ ಪ್ರ-ಪ್ರಪೌತ್ರಂಗೆ

CC-0. Jangamwadi Math Collection. Digitized by eGangotri

ಅತ್ಯರಸ ಪುತ್ರನಾಹವಮಲ್ಲ ದೇವನಾದಿತ್ಯಸಮ
ಪ್ರತಾಪನಿಧಿ, ತತ್ಸತಿ ಬಾಗಲಾದೇವೀ ಪ್ರಪೌತ್ರಂಗೆ
ಕಲಿಗಂಗಮಹೀಪನೆನಿಪ ಗಂಗಾವನೀಪಾಲ ಪೌತ್ರಂಗೆ
ಸೋಮದೇವಕ್ಷಿತೀಶಸತಿ ಕಂಚಲದೇವಿ ತನುಜಂಗೆ
ಸತೀ ಸೌಭಾಗ್ಯ ರಾಜಲದೇವಿ ತನ್ಮನೋರಮಣಂಗೆ
ಶ್ರೀ ಮಂಡಲೇಶ್ವರ ತ್ರೈಲೋಕ್ಯಮಲ್ಲ ಭುಜಬಲ ವೀರ
ನಾರಾಯಣಪ್ರತಾಪಕುಮಾರ ಮಹಾರಾಜನೆನಿಪಗೆ
ಕ್ಷತ್ರಿಯ ಪವಿತ್ರ ಭುವನತ್ರಿಣೇತ್ರಂಗೆ , ಔದುಂಬರಾ-
ಭರಣಂಗೆ, ಪಾಂಡ್ಯಗಜಕೇಸರಿಗೆ! ಕಲುಕಡೆ ಪುರಾಧಿಪಗೆ
ಸಿದ್ಧವಟ¶-ದೇವ ದಿವ್ಯಶ್ರೀಪಾದಪದ್ಮಾರಾಧಕಗೆ
ಆರಾತಿರಾಜತಿಮಿರಧ್ವಂಸ ಚಂಡಮಾರ್ತಂಡಂಗೆ
ತನ್ನ ಸಿಂಹಾಸನದುದಯಾದ್ರೀಂದ್ರಕೆ ಬರ್ಪ ಪೆರ್ಮೆಯಂ
ಮೆರೆವಂಗೆ, ಸತ್ಕವಿ ಪ್ರೋಲ್ಲಸದ್ವದನವನಜಸಖಂಗೆ
ಪೊದಳ್ದೊದವಿದ ಕಾವ್ಯದಿಂ ಕವಿ "ಶಿಖಾಮಣಿ"ಯಾದಂಗೆ
ಮುನ್ನ ಉದಯಮತ್ಯತಿರತ್ನದೊಳ್ ಸಂದ ತನ್ನುದಯದಿಂ
ರಾಜಸುಕವಿರತ್ನಾಭರಣನಾದಂಗೆ, ಭೋಜರಾಜಂ
ಮುಂಜ ಹರ್ಷಾದಿ ಕವಿರಾಜರೊಲು ಸುಖ್ಯಾತನಾದಂಗೆ
ಸೌಖ್ಯಾಸ್ಪದ ಜ್ಞಾನಮಣಿದೀಪಿಕಾ ಶತಕಕರ್ತಂಗೆ
ಸತತ ಉದಯಾದಿತ್ಯನ ಪೇಳ್ದೀ ಜ್ಞಾನಸಾರಾತ್ಮಂಗೆ

ಓಂ ನಮೋ ಎಂಬೆ
ಓಂ ಕವಯೇ ನಮಃ
ಓಂ ಲೋಕಗೂಢಾಯ ನಮಃ

1.12. 78/98 ಇಂತೀ

ಸಿ.ಮಹಾದೇವಪ್ಪ

....

¶ಸಿದ್ಧವಟ ಕ್ಷೇತ್ರವು ಆಚಾರ್ಯಮರುಳಾಧ್ಯರ ಜನ್ಮಸ್ಥಾನ. ಸಿದ್ಧೇಶ್ವರಲಿಂಗವಿರುವ ಶ್ರೀಕ್ಷೇತ್ರವು ಮಾಳವದ ಉಜ್ಜಯಿನಿಗೆ ನಾಲ್ಕುಮೈಲಿ ದೂರದಲ್ಲಿದೆ. ಈ ಕವನದ ಹಿನ್ನೆಲೆಗೆ ಮುಂದಿನ ಪುಟಗಳನ್ನು ನೋಡಬಹುದು.

CC-0. Jangamwadi Math Collection. Digitized by eGangotri

ಹಿನ್ನಲೆ

ಚಂದ್ರಚೂಡಾಮಣಿ ಶತಕದ ಕರ್ತೃವಿನ ಬಗೆಗೆ ಕರ್ನಾಟಕ ಕವಿಚರಿತೆಕಾರರ ಹಾಗೂ ವಿಮರ್ಶಕರ ನಡುವೆ ವಾದವಿವಾದ ಸಾಕಷ್ಟು ನಡೆದು ಗೊಂದಲವೆದ್ದದ್ದು ಪಂಡಿತಮಂಡಲಿಗೆ ತಿಳಿದ ಸಂಗತಿಯೇ ಆಗಿದೆ. ಆ ಬಗೆಗೆ ರಂ.ಶ್ರೀ.ಮುಗುಳಿಯವರು ತಮ್ಮ ಕನ್ನಡಸಾಹಿತ್ಯ ಚರಿತ್ರೆಯಲ್ಲಿ ೧೧ನೆಯ ಶ.ದ ಉತ್ತರಾರ್ಧದಲ್ಲಿ ಸುಮಾರು ಇದೇ ಕಾಲದಲ್ಲಿ ನಾಗವರ್ಮನು ಚಂದ್ರಚೂಡಾಮಣಿ ಶತಕಇಲ್ಲವೆ ಜ್ಞಾನಸಾರ ಎಂಬುದನ್ನು ಬರೆದಿದ್ದಾನೆ. ಇವನು ಉದಯಾದಿತ್ಯನ ಸಂಧಿವಿಗ್ರಹಿಯಾಗಿದ್ದಾನೆಂದು ಶತಕದಲ್ಲಿ ಹೇಳಿದೆ. ಚಾಲುಕ್ಯ ಭುವನೈಕಮಲ್ಲನಲ್ಲಿ(೧೦೬೮ -೧೦೭೬) ಹಿರಿಯ ಸಂಧಿವಿಗ್ರಹಿಯಾದ ಉದಯಾದಿತ್ಯನೊಬ್ಬನ ಕಾಲದಲ್ಲಿ ಅದ್ವೈತಿ ನಾಗವರ್ಮಾಚಾರ್ಯನೆಂಬವನು ಇದ್ದನೆಂದೂ ಕವಿಚರಿತಕಾರರು ಊಹಿಸಿದ್ದಾರೆ.ಇದು ಸರಿಯಾದುದಲ್ಲವೆಂದು ಡಾ. ವೆಂಕಟಸುಬ್ಬಯ್ಯನವರು ವಾದಿಸಿದ್ದಾರೆ.ಈವಿಷಯದಲ್ಲಿ ಸಂಶೋಧನೆ ನಡೆಯಬೇಕು(ಪು.೧೨೨-೩).ಸದ್ಯದವರೆಗೆ ಶಾಸನದಲ್ಲಿ ವರ್ಣಿತನಾದಅದ್ವೈತಿನಾಗವರ್ಮಾಚಾರ್ಯನೇ ಈ ವೈರಾಗ್ಯಬೋಧಕ ಶತಕವನ್ನು ಬರೆದಿರುವ ಸಂಭವ ಹೆಚ್ಚಾಗಿದೆ ಎನ್ನಲುಅಡ್ಡಿಯಿಲ್ಲ. ಕನ್ನಡದಲ್ಲಿ ಇದು ಮೊದಲನೆಯಶತಕವಾಗಿದೆ (ಪು.೧೨೩) ಎಂಬಅಭಿಪ್ರಾಯವುಳ್ಳ ಅವರು ಕವಿಬ್ರಾಹ್ಮಣಯೆಂಬ ಇಂಗಿತವನ್ನು ಹೇಳಿ ಯೂ ಹೇಳದಂತೆ ತೇಲಿಸಿದ್ದಾರೆ. "ನಾಗವರ್ಮಾಚಾರ್ಯನ 'ವೈರಾಗ್ಯ ಶತಕ'ದ ತರುವಾಯ ಕನ್ನಡಕ್ಕೆ ಇವೇ(ಪಂಪಾರಕ್ಷಾ)ಶತಕಗಳು ದೊರೆತಿವೆ ಎಂಬ ನಿಲವನ್ನು ತಮ್ಮ ಕ.ಸಾ.ಚ.ಯಲ್ಲಿ (ಪು.೧೭೨) ತಳೆದಿದ್ದಾರೆ.

ಇಲ್ಲಿ ಕಂಡುಬರುವುದು ರಾ.ನರಸಿಂಹಾಚಾರ್ಯರ ಕವಿವಿಷಯಕ ಊಹೆ (1).ನಾಗವರ್ಮಾಚಾರ್ಯನೇ ಈ ವೈರಾಗ್ಯಬೋಧಕ ಶತಕವನ್ನು ಬರೆದಿರುವ ಸಂಭವ ಹೆಚ್ಚೆಂಬ ನಿಲವಿನ ಜೊತೆಗೆ ಶತಕದ ಕವಿ ಬ್ರಾಹ್ಮಣ ಎಂಬ,ಅಲ್ಲದೆ ಚಂದ್ರಚೂಡಾಮಣಿ ಇಲ್ಲವೆ ಜ್ಞಾನಸಾರ ಕನ್ನಡದ ಮೊದಲನೆ ಶತಕ ಎಂಬ ರಂ.ಶ್ರೀ. ಮುಗುಳಿಯವರ ನಿಲವು(2,3, 4)—ಈ ನಾಲ್ಕು ಅಂಶಗಳು. ಈ ಇಬ್ಬರು ಮಹನೀಯರ ಬಳಿಕ 1989ರ ವೇಳೆಗೆ ಜ್ಞಾನಸಾರದ ಪೀಠಿಕೆಯಲ್ಲಿರುವಎಂ.ವಿ.ಸೀ.ಅವರ ವಿಚಾರಸರಣಿಯನ್ನು ಇಲ್ಲಿ ಪ್ರಸ್ತಾಪಿಸುವ ಅಗತ್ಯವಾಗಲಿ, ಔಚಿತ್ಯವಾಗಲಿ ಇಲ್ಲವೆಂದು ಬೇರೊಂದೆಡೆಗೆ ಮೀಸಲಾಗಿರಿಸಿದೆ.

ಹೀಗೆ ಜ್ಞಾನಸಾರದ ಕರ್ತೃವಿನ ಬಗೆಗೆ ಹುಟ್ಟಿಕೊಂಡ ಜಿಜ್ಞಾಸೆಗೆ ಕಾರಣವಾದ ಪ್ರಮಾದವನ್ನು ಅರ್ಥಾತ್ ತಪ್ಪುಗ್ರಹಿಕೆಯನ್ನು ಮನಸ್ಸಿನಿಂದ ಹೊರದೂಡಿಸಿದ ಶಾಸನ ಮತ್ತು ಕಾವ್ಯೋಕ್ತಿಗಳ ಮಹತ್ವ-ಪೂರ್ಣ ಲಿಖಿತಾಧಾರದ ವಸ್ತುನಿಷ್ಠ ಪ್ರಜ್ಞಾವಿಶೇಷದಿಂದ ಮನಗಂಡ ಸಂಶೋಧನೆಯ ಸತ್ಯಸಂಧಾನದ ತನ್ಮಯತೆಯಿಂದ ಮೈಗೊಂಡ ಕವಿತೆಯಿದು. ಜ್ಞಾನಸಾರದ ಸೂಕ್ತಿಮುಕ್ತಾವಳಿಯಿಂದ ಮನಮುದ

CC-0. Jangamwadi Math Collection. Digitized by eGangotri

ಗೊಳಿಸುವ ಮೂಲಕ ಜೀವಲೋಕದ ತಮವ ಪರಿಹರಿಪ ತತ್ತ್ವಚಿಂತನೆಯ ಸಾರಸರ್ವಸ್ವದಿಂದ ಪೊದಳ್ದೊದವಿದ ಕಾವ್ಯದಿಂ ಕವಿ 'ಶಿಖಾಮಣಿ' ಯಾದುದರಿಂ ತನ್ನ ಅಲಂಕಾರಕೃತಿಯಲ್ಲಿ'ರಾಜಶೇಖರ'/'ಇಂದುಶೇಖರ' ನೇಂದು(sic)ಕೊಂಡ ತಾನು ಶರಣಾರ್ಥಿಯಾಗಿ ನಿನ್ನ ಮರೆಯಂ ಪೊಕ್ಕೆ ನೆಂದು, ಅದು ದಿಟವೆಂದು ಘೋಷಿಸಿರುವುದನ್ನು ಜ್ಞಾನಸಾರಶತಕದಲ್ಲಿ ಗಮನಿಸಬಹುದು.'ರಾಜಶೇಖರ'ಮತ್ತು'ಶಿಖಾಮಣಿ'/'ಚೂಡಮಣಿ' ಯೆಂಬ ತನ್ನಉಭಯಕಾವ್ಯನಾಮಂಗಳಿಂದ ಪ್ರಸಿದ್ಧನಾದ ಕವಿ ಉದಯಾದಿತ್ಯ ನೆಂಬುದನ್ನು ಪ್ರಸ್ತುತ ಲೇಖಕನಿಂದ ಸಂಪಾದಿತವಾಗಿ (1996ರಲ್ಲಿ) ಪ್ರಕಟಿತ ವಾಗಿರುವ ಉದಯಾದಿತ್ಯಾಲಂಕಾರ ಗ್ರಂಥದಲ್ಲಿನ ಕಾವ್ಯಾಲಂಕಾರಸಾರಾದಿ ಲೇಖಗಳಲ್ಲಿನ ಹೆಚ್ಚಿನ ವಿಷಯಗಳಿಂದ ಮನಗಾಣಬಹುದು. ಈ ಹಿಂದೆಯೇ ಈ ಅಲಂಕಾರಗ್ರಂಥಕಾರ ಉದಯಾದಿತ್ಯನೆಂದೂ ಆತನು ವೀರಶೈವನೆಂದೂ ಸಮರ್ಥಿಸಿರುವ ಡಾ.ಕೆ.ಕೃಷ್ಣಮೂರ್ತಿಯವರು ಹಾಗೆಯೇ "ಉದಯಾದಿತ್ಯಾ ಲಂಕಾರದಲ್ಲಿದ್ದ ಕೆಲವುಸಮಸ್ಯೆಗಳನ್ನು ನೀವು ಬಿಡಿಸಿ ಸ್ಪಷ್ಟಪಡಿಸಿದ್ದೀರಿ." ಎಂದು, ಪ್ರೊ. ಜಿ. ವೆಂಕಟಸುಬ್ಬಯ್ಯನವರು ತಮ್ಮ ಖಚಿತವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ಎಂಬುದನ್ನು ಕಂಡಿದ್ದೇವೆ.

ಈಸಂದರ್ಭದಲ್ಲಿ ಸಂಶೋಧಿತ ಗ್ರಂಥಗಳನ್ನು ಕಷ್ಟಪಟ್ಟು ಓದಿ ತಮ್ಮ ಅಭಿಪ್ರಾಯವನ್ನಾಗಲಿ, ತಮ್ಮ ಅಧ್ಯಯನದ ಫಲವಾಗಿ ಗಳಿಸಿಕೊಂಡ ಹೆಚ್ಚಿನ ಜ್ಞಾನದ ಕೊಡುಗೆಯನ್ನಾಗಲಿ ನೈಜವಾದ ಸಂಶೋಧನಾಸಕ್ತಿಯ ಒಲವನ್ನಾಗಲಿ ತೋರದಿರುವ, ಅಂತಹ ಇಂದಿನನಾಡಿನ ಪ್ರಸಿದ್ಧ ವಿದ್ವಾಂಸರ ನಡುವೆ ಮರುಭೂಮಿಯ ಮಂದಾಕಿಯಂತೆ ಕೆಲವರಾದರೂ ನಿಷ್ಕರು ಇರುವುದು ಒಂದು ಭಾಗ್ಯವಿಶೇಷ. ಸದಾ ಜ್ಞಾನಕ್ಕೆ ಮನದ ಬಾಗಿಲನ್ನು ಎಲ್ಲ ಕಡೆಯಿಂದಲೂ ತೆರೆದು ಹಾತೊರೆವ ವಿಶಾಲಮನಸ್ಕತೆ ಹಾಗೂ ಸಹೃದಯತೆಯಿಂದ ಎಲ್ಲವರ್ಗದ ಸಾಹಿತ್ಯಧರ್ಮಾಮೃತವನ್ನು ಹೀರಿ ಅವರಿವರೆನ್ನದೆ ಎಲ್ಲರಿಗೂ ಮಾರ್ಗದರ್ಶನ ಮಾಡುತ್ತಲಿರುವ ವಾಚಸ್ಪತಿ, ವೇದರತ್ನ ಪ್ರೊ. ಡಾ.ಸಾ.ಕೃ ರಾಮಚಂದ್ರರಾವ್ ಅವರು ರಾಷ್ಟ್ರದ ಪಾಂಡಿತ್ಯ ಘನತೆಗಳ ಮೂರ್ತಿವೆತ್ತವರೆಂದು ಹೇಳಲು ಹೆಮ್ಮೆಯಾಗುತ್ತದೆ.

Ref.Kannada Inscriptions of Andrapradesh Govt series No 3 South Indian Inscriptions II Vol iv P 269 --271

ನೋಡಿ:

ಕನ್ನಡಸಾಹಿತ್ಯಪರಿಷತ್ತಿನ "ವೀರಶೈವಸಾಹಿತ್ಯ ಮತ್ತು ಇತರ ಲೇಖನಗಳು." ಕ್ರಿ.ಶ. 2000ದ ಪ್ರಕಟನೆಯಲ್ಲಿನ"ಕನ್ನಡ ಶತಕಸಾಹಿತ್ಯದ ಆದ್ಯಪ್ರವರ್ತಕರು"(ಪು.೮೦–೧೧೬-)"ಪ್ರಭುದೇವರ ರಗಳೆ ಹಾಗೂ ವಚನಾಂಕಿತ"(ಪು.೧೧೭ - ೧೩೮)"ಹಂಪೆಯ ಹರಿಹರದೇವನ ಶತಕಗಳು" (ಪು.೧೩೯-೧೫೪) "ಚಂದ್ರಚೂಡಾಮಣಿ ಶತಕದಲ್ಲಿ ಆಂಧ್ರಭಾಷಾಪ್ರಭಾವ--ಶಬ್ದಾರ್ಥವಿವೇಚನೆ"(ಪು.೨೧೧ - ೨೨೫) —ಈ ಲೇಖನಗಳನ್ನಲ್ಲದೆ ಆದರ "ಲೇಖಕರ ನುಡಿ"ಯನ್ನು(ಪು. v - vii)ದಯವಿಟ್ಟು ಗಮನಿಸಿ.

CC-0. Jangamwadi Math Collection. Digitized by eGangotri

ಉದಯಾದಿತ್ಯ ವಿರಚಿತ ಜ್ಞಾನಸಾರ
-ಸೂಕ್ತ ಮುಕ್ತಾವಳಿ

೧.ತನುವಾನೆಂಬುದಸತ್ಯಮಲ್ಲದುದೆ ಸತ್ಯಂ.

('ತನುವಾನೆಂಬುದು ಅಸತ್ಯಂ. ತನುವಾನಲ್ಲದುದೆ ಸತ್ಯಂ'—ವಾಕ್ಯದೊಳಗಣ ವಾಕ್ಯರಚನಾವೈಶಿಷ್ಟ್ಯವನ್ನುಳ್ಳ ಸೂಕ್ತಿಯಿದು).

೨.ಸತ್ಯಮಂ ನಿತ್ಯಮಾಗಿನಿತಂ ನಂಬುಗೆ ನಿನ್ನೊಳೆನ್ನಯ ಮನಂ.

೩.ಮುಟ್ಟುವಡಾನೊಲ್ಲೆನಿದಕ್ಕೆ ತತ್ತನುವನಾಂ.

೪.ಈ ತನುವೇಂಗಂಡು ಮರಳ್ವುದೆನ್ನಯ ಮನಂ?!

೫.ಒಡಲೊಳ್ತಾಂ ನೆಲಸಿರ್ಪಿನಂ ನಿಲುವುತಾಹಾರಾದಿಯಂ ಸಾಲ್ವುದು.

೬.ಸಂಸ್ಥಿತಿವಿಘಾತಾವಸ್ಥೆಯೊಳ್ ಭೂರುಹಾವಳಿಗಳ್ ಪಾವನವಾದುವು.

೭. ಬೀಜಮೆಂತಂತೆ ತತ್ಫಲಮಕ್ಕುಂ.

೮. ತನಗೆಂತುಟಾ ತನುವಿನಾಗುಂ ಪೋಗುಂ!

೯. ತನು ದೇಹಾಸ್ಪದಮೋಕ್ಷಸಾಧನದುಪಾದಾನಾರ್ಥಂ.

೧೦. ಭವಾತತ್ತ್ವವಮಂ ಮನದೊಳ್ ನಂಬುವುಪಾಯಮುಳ್ಳೊಡೆ ಶರೀರಂ ಬಾರ್ತೆ

೧೧.ಅನಿಳಂ ಪೋಗಲ್ಕೆ ತದ್ಪ್ರೌತಿಕೋತ್ಕರಮುಂ ಪೋಕುಂ.

೧೨.ಈತನುವನಾಂ ನೀನಿಪ್ಪಮೋಕ್ಷಾಂಗನಾಸುಖಮಂ ಮಾಡು.

೧೩.ಮನಮಂ ತದ್ದೇಹಮಂ ನೀಗಿ ಮುಕ್ತನೆನಿಕ್ಕುಂ.

೧೪.ತಿನಲೇನಕ್ಕುಮೆ ಪಾವುಗಾರುಡಿಗನಂ ತಾನೆಂತು ಸುತ್ತಿರ್ದೊಡಂ.

CC-0. Jangamwadi Math Collection. Digitized by eGangotri

೧೫.ಮೃಡ ನಿನ್ನಂ ಸಲೆ ನಂಬುಗೆನ್ನಯ ಮನಂ.

೧೬.ಆತ್ಮಾರಾಮನಾಗಿರ್ದ ತತ್ತ್ವವಿಚಾರಂ
ಸಱಿಕೂಡುಗೆನ್ನ ಮನದೊಳ್.

೧೭.ಜನ್ಮಸಾಗರದಿಂದಂ ಪೊಱಗಿಕ್ಕು ನೀಂ ಕರುಣದಿಂ.

೧೮.ಹರ ನಿಮ್ಮೊಳ್ಳೆಲಸಿಪ್ಪುದಕ್ಕಱುವುದೇ ಮನ್ಮನಂ?

೧೯.ಕಾಳವ್ಯಾಳನಂ ತಿಂಬಗುರ್ವಿನ ಮೇರ್ಮಾಲಿ ಯನಾವನೆ-
ತ್ತಲಱಿವಂ.

೨೦. ಕೋಟಲೆಗೆ ಪಕ್ಕಾಗಿರ್ದ ಮಚ್ಚಿತ್ತಮಂ ಶಿವನೇ
ನಿನ್ನಡೆಗೂಡು.

೨೧. ನಿಮ್ಮ ನಿಶ್ಚಿತ್ತಮಿಪ್ಪೆಡೆಯಂ ಧ್ಯಾನಿಸುವಂತೆಮಾಡು
ದಯೆಯಿಂ.

೨೨.ಮುಳಿಸಾರಾರನದಿರ್ಪದಾರಱಿತಮಂ ಕೀಳ್ಮಾಡದು?

೨೩.ತನುತ್ಯಾಗಮಂ ಮನಳ್ಮಾಡದದೆಂತು ಮೋಕ್ಷಪದಮಕ್ಕುಂ.

೨೪.ದಾನಂ ಪೊಱಗಾಗಿ ದೇವಗತಿಯೆಂತಕ್ಕುಂ?

೨೫.ತನು ತಾನೆಂದರೆ ರನ್ನ ಪೋಪದೆಸೆಗಂದೇಕಾರಣಂ ಪೋಗದು?

೨೬.ನಿಮ್ಮನು ಮೋಕ್ಷಂಬೆರಸೊಯ್ಯುಗೆನ್ನಯ ಮನಂ.

೨೭.ತೃಷ್ಣಾಬ್ಧಿಯಂ ಕಟ್ಟಲೊಂದೆ ಸಮರ್ಥಂ ನಿಜಯೋಗ -
ವಜ್ರಕುಧರಂ.

೨೮.ತೃಷ್ಣಾಗ್ನಿಯಂಕೂಡೆ ಮಗ್ಗಿಸಲಕ್ಕುಂ ನಿಜತತ್ತ್ವವೆಂಬಮೃತದಿಂ.

೨೯.ಸೂಡರಿಪ್ಪನ್ನೆಗರಂ ತಮಂ ಪೆಣರುಗುಂ.

೩೦.ನಿಜಶಿವಃಶ್ರೀಪಾದಪಂಕೇರುಹಸ್ಮರಣಪ್ರಾಪ್ತಿ
ಜಗಿಲ್ತು ನಿಲ್ಕೆ ಮನದೊಳ್.

೩೧.ಆದಿಜನ್ಮಾಮಹೀಜಜ ಬೀಜಂಗದನಿಕ್ಕುಂ [SIC]

೩೨.ಮಚ್ಚಿತ್ತಮಂ ಹರ ನಿನ್ನುಜ್ಜ್ವಳ ತೇಜಮಂ ಬೆಳಗು ನೀಂ

CC-0. Jangamwadi Math Collection. Digitized by eGangotri

೩೩.ಎಲೆ ಸಂಸಾರದ ಸಾರಸೌಖ್ಯರುಚ ಜಿಹ್ವೋಪಸ್ಥಯುಗ್ಮಂ.

೩೪. ಭೋಗೋಪಭೋಗಕ್ಕೆ ಪೇಳ್ಮನಮಂ ತಪ್ಪುದಿದೇಂ
ವಿಚತ್ರತರಮೋ!

೩೫.ಅಳಿಪೆಂತ್ತುಂ ಪೋಗದಾ ಕುತ್ತಮಂ ಹರಿಪೊಂದೌಷಧಿಮಂ
ಸಮಂತು ದಯೆಗೆಯ್.

೩೬.ಈ ರಾಗಮಂ ಮನ್ಮನೋಂತರದೊಳ್ ಪತ್ತಿರದಂತೆ
ಕರ್ಚ ಕಳೆ.

೩೭.ಪರಮ ಜ್ಞಾನಸುಧಾಂಶುರಾಹುವೆನಿಕ್ಕುಂ ದ್ವೇಷಂ.

೩೮.ಕರ್ಮದಾ ತೃಷ್ಣೆಯಂ ಕೆಡಿಸಲ್ ನೀನೆ ಸಮರ್ಥನ್.

೩೯.ಆರ್ಗಂ ನೆಟ್ಟನುಂಡಲ್ಲದೇಂ ಕೆಡಿಸಲ್ಬಕ್ಕುಮೆ ಗೆಯ್ದ
ಕರ್ಮಫಲಮಂ.

೪೦. ಪರಮಾರಾಧ್ಯರುಮಂ ಪೆರಳ್ಚಿದುದು ಕರ್ಮಂ.

೪೧. ಕುರುಡಂ ಕಾಣದೆ ಬೀಳ್ವವೊಲ್ ಪಗದೊಳಂ
ಕಣ್ಣುಳ್ಳವಂ ಬೀಳ್ವನೇ?

೪೨. ಕರ್ಮವಾರ್ಗೆ ಹಿತಮೋ!

೪೩. ಜ್ಞಾನಿ ಕರ್ಮಕ್ಕೆ ಮೈದರಲೇನಾರ್ಪನೆ?

೪೪. ಪರಿವಂ ನಿಲ್ಲನೆ? ವಾರ್ಧಿಯೊಳ್ ಮುಳುಗಿದಂ ಬೆಂಡೇಳನೇ?
ಸುಪ್ತನೆಚ್ಚರನೆ?

೪೫. ಮಱುಗವೇಡಾ ಕರ್ಮಿ ಕರ್ಮದ್ವಯಂ ಪಱಿವನ್ನಂ
ನಿಜಯೋಗವಜ್ರಹತಿಯಿಂ?

೪೬. ಮೃತ್ಯುವದೊಂದುವಂ ಕಳೆಯಲಾರ್ಗಂ ಬಾರದು;
ಒಂದುಂಟು, ಅಂಬಿಸದೀಶಾನ ಶರಣ್ಯಮೆಂಬ ಬಗೆ.

CC-0. Jangamwadi Math Collection. Digitized by eGangotri

೪೭. ಆ ಮೃತ್ಯುಸಂಹರಣಕ್ಕೀಶನಿಜಾಂಘ್ರಿಯೊಂದೆ ಶರಣುಂ.
೪೮. ಜನ್ಮಸಾಗರದಿಂದಂ ಪೊಱಗಿಕ್ಕು ನೀಂ ಕರುಣದಿಂ.
೪೯. ಉದಬಿಂದುದ್ವಯಮಂ ವಧೂಜಠರದೊಳ್ ಪೊಕ್ಕಾರೋ
ರೂಪಾಗಿ ಮಾಡಿದರಂಗಾವಲಿಯಂ.
೫೦.ಅತ್ತೀ ತತ್ವದೀಯಿಚ್ಛೆಯಿಂದುದಯಿಕ್ಕುಂ ತನುಭೃದ್ಘನಕ್ಕಪಘನಂ
೫೧.ತನ್ನಿಚ್ಛೆಯಾದಲ್ಲಿ ಪುಟ್ಟನೆ ಜೀವಂ,
೫೨.ಬಗೆದಲ್ಲಿ ದೇಹಿಂಗೆ ದೇಹ ತನ್ನ ವಶಮೇ?
೫೩.ಕರ್ಮಬಂಧನಕೃತಂ ದಾನಾರ್ಥಮಾಗಿರ್ದುದು.
೫೪.ಜೀವಕೃತವ್ಯಾಪ್ತಿಗೆ ಸಾಕ್ಷಿ ನೀಂ.
೫೫.ಆಂ ಜನಿತಾಸಂಗಸುಖಸ್ವರೂಪಂ.
೫೬.ಮನದಿಂದ ಕೋಟಲೆ ಕೆಡಲ್ ಸೌಖ್ಯಾತ್ಮನಕ್ಕುಂ.
೫೭.ಸೌಖ್ಯಾತ್ಮಕನಾಗಿ ನೀನೆನಿಸುಗುಂ.
೫೮.ಆಂನೀನೆನುತ್ತಿಪ್ಪ ಸಂಸ್ಮರಣವ್ಯಾಪ್ತಿ ಜಿಗುಲ್ತುನಿಲ್ಕೆ ಮನದೊಳ್.
೫೯.ಯೋಗಮುಕ್ತಮ ಸೌಖ್ಯದಿ ಸುಯೋಗಮಂ ನೆರಪುಗುಂ.
೬೦.ಭುವನಕ್ಕೀಶ್ವರ ನೀನೆ ಮತ್ತೆ ಪೆಱರಾರ್.
೬೧.ವಿಪುಳಜ್ಞಾನಂ ತದಾತ್ಮಂಗೆ ತಾಂ ದೊರೆಕೊಳ್ಳುಂ.
೬೨.ಶಿವ ನಿಮ್ಮಂ ಸಲೆ ವಾಸಿಸಲ್ ಪರಮತತ್ವಜ್ಞಾನಮೀಶಾನ
ನಿನ್ನವೊಲಕ್ಕುಂ.
೬೩.ಆಂ ಶಿವ ನಿಮ್ಮನೆಯ್ದೆ ತಿಳಿದೇಂ; ಭಕ್ತ ಇಂ ಮೃಡ ನಿಮ್ಮಂ
ಸಲೆ ಕೂಡುತಿರ್ಕೆ; ಜಗದೊಳ್ ಮತ್ತನ್ಯರಾರ್?
೬೪.ಚುಂಬಕಕ್ರಿಯೆಯಿಂ ಬಿಟ್ಟಡೆ ಬಿಟ್ಟನಾವುದುಮನ್.
೬೫.ಗುರುವಾಕ್ಯಂ ಮೊದಲಾಗಲಂಪ್ಯಂ.
೬೬.ಓರಂತೆ ತನ್ನಂತೆ ತಾಂ ಪೆಱರಂ ಭಾವಿಸೆ ತತ್ವಂ.

CC-0. Jangamwadi Math Collection. Digitized by eGangotri

೬೭.ಆಶ್ರಿತಜನಪ್ರಾಕಾರನೆಂಬೊಂದು ನಾಣ್ಣುರುದಂ
ತೋಱುನಗಾಶ್ರಿತಂಗೆ ದಯೆಯಿಂ.

೬೮.ಏಕೀಭಾವದೊಳ್ನಿಂದು ನೆಟ್ಟನೆ ಬಿಲ್ಲಂಬೆಱಗಾಗೆ ನಿಮ್ಮೊಳೆ ಮನಂ

೬೯.ಸತ್ಯಂ ಸುರರಾಜಮೋಕ್ಷವಿದು ತಾಂ ಮಾರ್ಗಕ್ಕೆ ಸೋಪಾನಂ

೭೦.ಸರ್ವ ಪ್ರಾಣಿಯೊಳ್ಮಾಡಿ ತಾಂ ಪರಮಪ್ರೀತಿಯನೋವುದಾವ
ದೆಸೆಯಿಂ.

೭೧.ನಿಮ್ಮನಱಿದಾಂ 'ನೀವಾದೆನೆಂದಿರ್ಪ ಬುದ್ಧಿಯನೆ
ಬೇಡಿದನಿದಂ.

೭೧.ಎಲ್ಲಮಂ ಸರಿಯಾಗಲ್ಸಲೆ ಕಾಣ್ಬನಕ್ಕೆ ಮನದೊಳ್.

೭೨."ಬಗೆಯಲ್ಲನ್ನಿಜಯೋಗಮಕ್ಕೆ, ನುಡಿಯಲ್ಲನ್ನಿಮ್ಮ ಮಂತ್ರಾಕ್ಷರಂ
ತಗಳಿಕ್ಕೆ."

(ಇಲ್ಲಿನ ಉದ್ಧರಣಚಹ್ನೆಗಳು ತಾಡೋಲೆಯ ಮೂಲಲಿಖಿತ ಪಾಠ
ಸೂಚಕವೆಂಬುದರ ನಿರ್ದಿಷ್ಟ ನಿರ್ದೇಶನ.)

೭೩.ನೆಗಳ್ದಾಲೋಕನಮೆಲ್ಲಮಯ್ಯ ಶಿವತತ್ತ್ವಾಲೋಕಮಕ್ಕೆ.

೭೪ ಈ ಜ್ಞಾನಸಾರಂ ಸುಖಾಸ್ಪದಮೊಲ್ದೋದುಗೆ
ಭುಕ್ತಿಮುಕ್ತಿ ಫಲಮಂ.

ಓಂ

CC-0. Jangamwadi Math Collection. Digitized by eGangotri

ಜಗಜ್ಜೀವದೇವಾಂತರಂಗ

ಜೀವಲೋಕದ ಪ್ರತಿಯೊಂದು ಜೀವಿಯ ಶರೀರದ ಕಣಕಣದಲ್ಲಿಯೂ ಇರುವ ಜೀವಾಣುವಿನ ತ್ರಾಣಪ್ರಾಣಗಳಲ್ಲಿ ಜಗದೀಶ್ವರನ ಅಷ್ಟತನುಗಳೇ "ನಿಜನಿಧಿ"ಯಾಗಿವೆ. ಸಮಸ್ತ ಚರಾಚರದ ಜೀವದುಸಿರಾಗಿರುವ ಆ ಶಿವಚೈತನ್ಯ ವಸ್ತುಸತ್ಯದ ಇರವಿನ ಅರಿವೇ ಆನಂದಮಯಿ. ತಾನರಿಯದಂತೆಯೇ ತನಗೆ ಲಭ್ಯವಾದ ಈ ಮಾನುಷ ಜನ್ಮ, ಇದ್ದಕ್ಕಿದ್ದಂತೆಯೇ ಬಂದುದಲ್ಲ. ಅದರ ಇತಿಹಾಸವು ಯುಗಯುಗಾಂತರಗಳ ಹಿಂದಿನದು; ಮಾತ್ರವಲ್ಲ, ಹೋರಾಟದ ಸಾಹಸದ ಕಥನವದು.

ಜೀವಜಗದುದಯದ ಅರುಣೋದಯ ಕಾಲದ ಮೊದಮೊದಲು ಸೂಕ್ಷ್ಮಜೀವಾಣುಗಳು ಕೇವಲ ಜೈವಿಕ ವಸ್ತುವನ್ನೇ ತಿನ್ನುತ್ತಿದ್ದು ಕಾಲಚಕ್ರ ಉರುಳುತ್ತ ಬಂದಂತೆ ಆ ಜೈವಿಕವಸ್ತುಗಳ ವಿಪುಲವಾದ ರಾಶಿ ಕ್ರಮೇಣ ಕರಗುತ್ತ ಬಂದು ಇನ್ನೇನು ತಾನು ಉಳಿವುದೋ ಅಳಿವುದೋ ಎಂಬಪ್ರಶ್ನೆ ಉದ್ಭವಿಸಿದಾಗ ಉಳಿದೇ ತೀರುವೆನೆಂಬ ಜೀವಾಣು ತನ್ನ ಮಹಾಸಂಕಲ್ಪಬಲದಿಂದ ನಿರ್ಜೀವವಸ್ತುವನ್ನು ತನ್ನೊಳಗಣ ಜೀವರಸಲೇಪನದಿಂದ ಬಲೆ ಹೆಣೆದ ಇಲ್ಲಣ/ ಜೇಡರ ಹುಳು ತನಗೆ ಬೇಕಾದ ಆಹಾರವನ್ನು ಹುಡುಕಕೊಂಡಂತೆ, ಆ ಜೀವಾಣುವಿನ ಅಂದಿನ ಸಂಕಲ್ಪಸಿದ್ಧಿಯಿಂದ ಮನುಷ್ಯಜನ್ಮ ಭೂಮಿಯ ಚಾತುರ್ಯುಗದ ಒಂದು ದಶಲಕ್ಷವರ್ಷಗಳಿಂ ದೀಚೆಗೆ ಮಾತ್ರ ಕಾಣಸಿಕೊಂಡಿತೆಂಬುದು ಜೀವವಿಜ್ಞಾನ ಜಗತ್ತಿನಿಂದ ತಿಳಿದುಬರುವ ಸಂಗತಿ.

"ನೀನಿಂತು
ಭಾವಿಸುತೆ ಕಟ್ಟದ ಮಹಾಕಲ್ಪನೆಯನಾಂತು
ತಿರುಗುತಿರ್ದಪೆನಖಿಳ ಘೋರಸಂಸಾರದೊಳು
ಅಂತಂತೆ ಮೈಯೊಡ್ಡಿಕೊಂಡೆನು ಯಾತನೆಗೆ
ಕಲ್ಲಾಗಿ ಮಣ್ಣಾಗಿ ಕುಳಿಯಾಗಿ ತೆವರಾಗಿ
ಹುಲ್ಲಾಗಿ ಲತೆಯಾಗಿ ಗಿಡುವಾಗಿ ಮರನಾಗಿ

CC-0. Jangamwadi Math Collection. Digitized by eGangotri

ಪುಳುವಾಗಿ ಖಗವಾಗಿ ಕಪೆಯಾಗಿ ಮೃಗವಾಗಿ
ಬಳಸಿ ಬಂದಾವಾವ ಯೋನಿಗಂ ತನುವಾಗಿ
ಬೇಳಾಗಿ ಬೆಂಡಾಗಿ ಹಾಳಾಗಿ ಕಾಳಾಗಿ
ಗೋಳುಂಡೆಗೊಂಡು ಬಂದೆಂತಕ್ಕೆ ಪಶುವಾಗಿ"

."ಎಲ್ಲ ಜನನಂಗಳೊಳು ಜನಿಸಿ ಬಳಲಿದೆ ಭವನೆ ನಿನ್ನ ಪೊನ್ನಡಿಗಂಡು, ನಿಜನೆ, ಇಂದು ಮುಕ್ತಕಂಡೆ"

"ನಿಮ್ಮೊಂದಿರವನಂತಿಂತೆಂತುಟೆಂದೇನುವನಱಿ-ಯದೆ ।ಕಲ್ಲಾಗಿ ಮಣ್ಣಾಗುತಂ 2 ದರ್ದುರ 3 ಗುಲ್ಮಂ 4 ಭೂರಿಭೂಜಂ 5 ಪುಳು 6 ಖಗ 7 ಮೃಗವಾಗುತ್ತಮೆಂತಕ್ಕೆ ಬಂದೆಂ ನರಜನ್ಮಕ್ಕಯ್ಯ ಪಂಪಾಪುರದರಸ ವಿರೂಪಾಕ್ಷ ರಕ್ಷಿಪ್ಪುದೆನ್ನಂ॥"ಎಂಬೀ ಕವಿಯ ಅನುಭವವಾಣಿಯಲ್ಲಿ ಜಗತ್ತಿನ ಹುಟ್ಟು, ಜೀವದ ಸಹಜಜಾಗ್ರತ್ ಪ್ರಜ್ಞಾವಿಶೇಷವನ್ನು ಕುರಿತ ಸೃಷ್ಟಿ ತತ್ತ್ವದ ಚಿಂತನೆಯಿದೆ. ಅದರಲ್ಲಿ ಕವಿಯ ವೈಜ್ಞಾನಿಕ ಪ್ರಜ್ಞೆಯೊಡನೆ ಆಧ್ಯಾತ್ಮಿಕ ಸುಜ್ಞಾನವೂ ಅಡಗಿರುವುದನ್ನು ಮನಗಾಣಬಹುದು.

''ದೇಹೋ ದೇವಾಲಯಃ ಪ್ರೋಕ್ತಃ ಜೀವಸ್ತತ್ರ ಶಿವಃ ಸ್ಮೃತಃ" ಎಂಬ ಸೂಕ್ತಿಯ ಘನಸಾರವು ಕ್ರಿಸ್ತಪೂರ್ವ 6ನೆಯ ಶತಮಾನದ ಆರುಹಿರಿಯನೆಂದು ಪ್ರಖ್ಯಾತನಾದ ಗುರು ಗೋಸಾಲ ಗಣಾಚಾರ್ಯನಿಗಿಂತಲೂ ಹಿಂದಿನಿಂದ ಅವರಿವರೆಂಬ ಭೇದಭಾವವಾಗಲಿ ತಾರತಮ್ಯವಾಗಲಿ ಹೆಣ್ಣು ಗಂಡೆಂಬ ಅಂತರವಾಗಲಿ ಸುಳಿಯದ ಅನುಭಾವಿಗಳ ಅಂತರಂಗದಲ್ಲಿ ಚಿಜ್ಜ್ಯೋತಿಪ್ರಕಾಶ ರೂಪದಿಂದ ಇಂದಿನವರೆಗೂ ಬೆಳಗುತ್ತ ಬಂದಿರುವುದು ಆಜೀವಕ ಶಿವಧರ್ಮದ ಬಯಲ ತತ್ತ್ವದ ಗೂಢವೂ ಗಾಢವೂ ಆದ ಪ್ರಭಾವಕ್ಕೆ ಹಿಡಿದ ಕನ್ನಡಿಯಾಗಿದೆ.

---

1)ಕೋಟ್ಯನುಕೋಟಿ ವರ್ಷಗಳಲ್ಲಿ 2) ೫೦೦ದಶಲಕ್ಷವರ್ಷ 3) ೨೫೦ ದಶಲಕ್ಷವರ್ಷ4) ೨೨೫ದಶಲಕ್ಷವರ್ಷ 5)೬೦ದಶಲಕ್ಷವರ್ಷ 6) ೩೫ ದಶಲಕ್ಷವರ್ಷ 7) ೧ ದಶಲಕ್ಷವರ್ಷ.

ಓಂ ತತ್ ಸತ್

CC-0. Jangamwadi Math Collection. Digitized by eGangotri

ಸಂಬಂಧಗ್ರಂಥಸೂಚಿ

ಅನುಭವ ಮಂಟಪದ ಐತಿಹಾಸಿಕತೆ -ಪ್ರ.1951 ರೆ.-ಚನ್ನಪ್ಪ ಉತ್ತಂಗಿ
Anubhava Mantapa By Rev. Uttangi - 1955
ಅನುಭವಸೂತ್ರ -ಮಗ್ಗೆಯ ಮಾಯಿದೇವ- ಬೆಂಸಂಕೋ.ಓಲೆ
ಅನುಭಾವಜ್ಞಾನಸಾರಾಮೃತಸಂಪಾದನೆಯ ಸ್ತೋತ್ರಶ್ರೀ.ಜತೋಂಗದಗ
ಅರುವತ್ತುಮೂವರ ಚಾರಿತ್ರ (ಈತನಕ ಬೆಳಕು ಕಾಣದಿದ್ದ ಕೃತಿ)
ಆರಾಧ್ಯದೇವವಿರಚತ ಪ್ರ. 2004
ಸಂ: ಪ್ರೊ. ಸಿ. ಮಹಾದೇವಪ್ಪ, ಬೆಂಗಳೂರು ಸಂಶೋಧನ ಕೋಟ.
ಅಲ್ಲಮಪ್ರಭುವಿನ ವಚನಗಳು–
ತಾಡೋಲೆ: ಕಟ್ಟಿಗೆಹಳ್ಳಿ ಸಿದ್ದಲಿಂಗದೇವರ ಸಂಕಲನ: ಬೆಂಸಂಕೋ.
ಮುದ್ರಿತ: ಫ.ಗು. ಹಳಕಟ್ಟಿ-೧೯೩೧
ಅಲ್ಲಮಪ್ರಭುದೇವರ ವಚನ-ನಿರ್ವಚನ-ಸಂಪುಟ ೧. ೧೯೯೮
ಶ್ರೀ ಸಿದ್ದೇಶ್ವರಸ್ವಾಮಿಗಳು. ಪ್ರ. ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು.
ಅಶೋಕನ ಶಿಲಾಶಾಸನಗಳು-- ಕೋ. ಚೆನ್ನಬಸಪ್ಪ-
ವಯಸ್ಕರ ಶಿಕ್ಷಣ ಸಮಿತಿ, ಮೈಸೂರು. ಪ್ರ. 1959
Inscriptions of Asoka- 1967
Govt.of India Publication, Delhi.
ಅಷ್ಟಾವರಣ ತಿಲಕ
ಆಂಧ್ರದನಂದ್ಯಾಲಮಂಡಲದ ಪೊಡವಿಡಿಯ ಮಹಮೂರ್ತಿ ವಿರಚಿತ.
ಆದಯ್ಯನ (ಕ್ರಿ.ಶ. 665) [?] ವಚನಗಳು ನೋ: ಸಾಹಿತ್ಯ ಸಮಿತಿ ಪತ್ರಿಕೆ ಲಿಂ.ವಿ, ಧಾರವಾಡ ಸಂಪುಟ ೭, 1947.
ಉದಯಾದಿತ್ಯಾಲಂಕಾರ-ಪ್ರ.1996 ಕವಿ ಉದಯಾದಿತ್ಯ(ಕ್ರಿ.ಶ.1200)
ಆಂಧ್ರದ ತಾಡಪತ್ರಿಯ ರಾಜ. ಸಂ. ಪ್ರೊ. ಸಿ. ಮಹಾದೇವಪ್ಪ.
ಉದ್ಭಟಕಾವ್ಯ -ಸೋಮರಾಜಕವಿಕೃತ((ಕ್ರಿಶ.1222)
ಕರಣಹಸಿಗೆ-- ಕರ್ತೃ : ಚನ್ನಬಸವಣ್ಣನವರು
ಟೀಕಾಸಹಿತ ತಾಡೋಲೆ, ಬೆಸಂಕೋ.
ಕರ್ನಾಟಕ ಕವಿಚರಿತ್ರೆ-ಸಂಪುಟ: 1, 2, 3 ಆರ್. ನರಸಿಂಹಾಚಾರ್
ಕಾಶಕೃತ್ಸ್ನ ಶಬ್ದಕಲಾಪಧಾತುಪಾಠಃ ಕೆಳದಿ ಷಡ್ದೇಶ ಕಾಶೀಕಾಂಡ
ಚನ್ನವೀರ ಕವಿವಿರಚತ. ಸಂ. ಡಾ। ಎ.ಎಫ್. ನರಸಿಂಹಯ್ಯ, ಮೈವಿ.
ಗಣಭಾಷಿತರತ್ನಮಾಲೆ--ಗುಬ್ಬಿ ಮಲ್ಲಣ್ಣಕೃತ ಸಂ. ಪ್ರಭುಸ್ವಾಮಿಗಳು.
ಪ್ರ. ಮುರುಘಾಮಠ, ಧಾರವಾಡ.

CC-0. Jangamwadi Math Collection. Digitized by eGangotri

ಗಣಸಹಸ್ರ ನಾಮಾವಳೀ ಸ್ತೋತ್ರ- ಪಿ. ಆರ್. ಕರಿಬಸವಶಾಸ್ತ್ರಿ
ಗುಮ್ಮಟಶತಕ -(ಸು.ಕ್ರಿ. ಶ. ೧೩೫೦) ಗುಮ್ಮಟಾರ್ಯವಿರಚಿತ:
1) ಓಲೆ-ಬೆ.ಸಂ.ಕೋ; 2) ಕನ್ನಡ ಸಾಹಿತ್ಯ ಸಂಘ, ಬಸವೇಶ್ವರ ಕಾಲೇಜ್, ಬಾಗಲಕೋಟೆ. ಪ್ರ. ೧೯೫೭
ಗೋರಕ್ಷಶತಕಂ –ಕರ್ತೃ: ಗೋರಕ್ಷನಾಥ
ಸಂ. ಪ್ರೊ. ಸಿ. ಮಹಾದೇವಪ್ಪ ಪ್ರ. 1996
ಚನ್ನಬಸವಣ್ಣನವರ ವಚನಗಳು ಕ.ವಿ. ಧಾರವಾಡ: ೧೯೬೫
ಚನ್ನಬಸವಣ್ಣನವರ ವಚನಸಂಪುಟ-ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
ಛಂದೋಂಬುಧಿ – ಇಮ್ಮಡಿ ನಾಗವರ್ಮ (ಕ್ರಿ. ಶ. ಸು.1200)
ಸಂ. ಕುಕ್ಕಿಲ ಕೃಷ್ಣಭಟ್ಟ. ಪ್ರ. ಡಿ.ವಿ.ಕೆ ಮೂರ್ತಿ ಮೈಸೂರು. ೧೯೭೫
ಜೈನ ಧರ್ಮಕಾ ಮೌಲಿಕ ಇತಿಹಾಸ್ (ಪ್ರಥಮ ಭಾಗ)
ಕರ್ನಾಟಕ ಜೈನ ಸ್ವಾಧ್ಯಾಯ ಸಂಘ, ಬೆಂಗಳೂರು.
ತೋಂಟದ ಸಿದ್ಧೇಶ್ವರ ಪುರಾಣ – ಗುಬ್ಬಿ ಶಾಂತೇಶ ವಿರಚಿತ
ಸಂ. ಪ್ರೊ. ಸಿ. ಮಹಾದೇವಪ್ಪ
ದಾಸೋಹ ಸಿರಿ –1997 ಸಿದ್ಧಗಂಗಾ ಮಠ.(ಪು.195- 229 ಗೋಸಲ, ಗೋಸಲಸಿದ್ಧೇಶ್ವರರು–ಒಂದುಅಧ್ಯಯನ-ಪ್ರೊ. ಸಿ. ಮಹಾದೇವಪ್ಪ)
ದೇವರ / ಜೇಡರ ದಾಸಿಮಾರ್ಯರ ವಚನಗಳು
ಸಂ. ಲಿಂ. ರಾ. ಬ॥ ಫ. ಗು. ಹಳಕಟ್ಟಿ. ಪ್ರ.೧೯೬೬
ದೀಕ್ಷಾಬೋಧೆ --ಕೆರೆಯ ಪದ್ಮರಸ
1) ತಾಡೋಲೆ : ಬೆ.ಸಂ.ಕೋ. 2) ಕ.ವಿ. ಧಾರವಾಡ ೧೯೭೩
ನಾಸದೀಯ ಸೂಕ್ತ – 1964 ಟಿ. ಎನ್. ಮಲ್ಲಪ್ಪ
ನಿರಂಜನವಂಶರತ್ನಾಕರ ಭಾಗ ೨. 1930 ಸದ್ಧರ್ಮದೀಪಿಕೆ ಪ್ರಕಟನೆ.
ನಿರಂಜನವಂಶರತ್ನಾಕರ ಶಿವಾನುಭವ ಗ್ರಂಥಮಾಲಾ 1932
ಪದ್ಮರಾಜಪುರಾಣ–೧೩೮೫ ಪದ್ಮಣಾಂಕ ವಿರಚಿತ. ಪ್ರ.ಕ.ವಿ.ಧಾರವಾಡ.
ಪರಮಯೋಗ ಮಂತ್ರಗೋಪ್ಯ ಪ್ರಭುದೇವಕೃತ. ವಿಜಯನಗರದ ಕಲ್ಮಠದ ಪ್ರಭುದೇವರ ಟೀಕಾಸಹಿತ,.೧೯೩೨ ಪ್ರ.ಚೆನ್ನಮಲ್ಲಿಕಾರ್ಜುನ
ಪರಮರಹಸ್ಯ ಉಪದೇಶಸಂಗ್ರಹ- ಶ್ರೀ.ಜ.ರಂ.ಗ್ರಂ 40. ಬಾಳೆಹಳ್ಳಿ.
ಸಂ. ಜಿ.ಎ. ಶಿವಲಿಂಗಯ್ಯ, ಮೈಸೂರು.
ಪ್ರಭುಗೀತಾ –(ದೇವ ನಾಗರಿಲಿಪಿ; ಆಂಗ್ಲಭಾಷಾಪೀಠಿಕೆ ಪ್ರ. 2001)
ಪ್ರೊ. ಸಿ. ಮಹಾದೇವಪ್ಪ
ಪ್ರಭುಗೀತಾ –(ಕ) 2002 ಶಿವಾತ್ಮಾ ಮಗ್ಗೆಯ ಮಾಯಿದೇವ - ವ್ಯಾಖ್ಯಾತಾ. ಸಂ. ಪ್ರೊ. ಸಿ. ಮಹಾದೇವಪ್ಪ
ಪ್ರಭುದೇವರ ರಗಳೆ- ಹರಿಹರಕವಿ ಫ. ಗು. ಹಳಕಟ್ಟಿ. ಪ್ರ. 1968
ಪ್ರಭುದೇವರ ಪುರಾಣ–ಎಳಂದೂರ ಕವಿಹರೀಶ್ವರಕೃತ. ಸಂ.ಬುದ್ಧಯ್ಯ

CC-0. Jangamwadi Math Collection. Digitized by eGangotri

ಸ್ವಾಮಿ ಪುರಾಣಿಕ, ಧಾರವಾಡ. ಪ್ರ. 1940
ಪ್ರಭುದೇವರ ಷಟ್‌ಸ್ಥಲಜಂಗಮಸ್ಥಲನಿರ್ದೇಶ.ವೀ.ಅ.ಸಂ.ಗದಗ.೧೯೪೯
ಬಸವಣ್ಣನವರ ವಚನಗಳು ೧೯೬೨ ಸಂ. ಪ್ರೊ. ಬಸವನಾಳ
ಶಿವಲಿಂಗಪ್ಪ, ಧಾರವಾಡ.
ಬಸವಪುರಾಣ –ಭೀಮಕವಿ ವಿರಚಿತ (೧೩೬೯) ಲಿಂ.ವಿ.ಸಂ. ಧಾರವಾಡ
ಬಸವಶತಕ-- ಹೂಲಿ ಸಿದ್ಧನಂಜೇಶಕೃತ. ಸಂ. ಎಸ್. ಶಿವಣ್ಣ
ಪ್ರ. ಜ. ತೋಂ. ಸಂ. ಮಠ, ಗದಗ. ಪ್ರ. 2001
ಬಸವಸ್ತೋತ್ರದ ವಚನ
ವೈರಾಗ್ಯ ಚೆನ್ನಬಸವಸ್ವಾಮಿ ಗ್ರಂಥಮಾಲಾ 3. ರಾಯಚೂರು ೧೯೬೫
ಭಗವದ್ಗೀತಾ ವೀರಶೈವಭಾಷ್ಯ- ವಿದ್ವಾನ್ ಡಾ। ಟಿ.ಜಿ.ಸಿದ್ದಪ್ಪಾರಾಧ್ಯ.
ಭಾವಚಿಂತಾರತ್ನ- ಗುಬ್ಬಿ ಮಲ್ಲಣಾರ್ಯ (ಕ್ರಿ.ಶ.1513)
ಸಂ. ಪ್ರೊ. ಸಿ. ಮಹಾದೇವಪ್ಪ. ಪ್ರ. 1954/1963
ಮಹಾಯಾತ್ರ-- ಡಾ। ಆರ್. ಸಿ. ಹಿರೇಮಠ 1997
ಮರೆಮಿಂಡಯ್ಯನ ವಚನ. ಸರ್ಪಭೂಷಣ ಗ್ರಂಥಮಾಲಾ.ಪ್ರ. ೧೯೪೧
ಸಂಗ್ರಾಹಕಃ ಜಗದೀಶ್ ಶ್ರೀ ವಿರಕ್ತಮಠ, ಸೋಮವಾರಪೇಟೆ.
ರಾಜಶೇಖರವಿಲಾಸ (ಕ್ರಿ.ಶ, 1655) ಷಡಕ್ಷರದೇವಕೃತ.
ಸಂ. ಆಸ್ಥಾನ ವಿದ್ವಾನ್ ಪಿ. ಆರ್. ಕರಿಬಸವಶಾಸ್ತ್ರಿ. ಪ್ರ. 1930
ಲಿಂಗಲೀಲಾವಿಲಾಸಚಾರಿತ್ರ ಪ್ರ.1956 –ಕಲ್ಮಠದ ಪ್ರಭುದೇವರು
ಮುರುಘಾ ಮಠ, ಧಾರವಾಡ.
ವಿಭೂತಿ–೧೯೬೧ (ಪು. ಕನ್ನಡ ಸಾಹಿತ್ಯದಲ್ಲಿ ಸತ್ಯವಿಮಾರ್ಗ –ಲೇಖನಃ
ಪು. ಸಿ. ಮಹಾದೇವಪ್ಪ.) ಗ್ರಂಥ ಪ್ರಕಟನಶಾಖೆ, ಗಿರಿಯಾಪುರ
ವಿವೇಕಚಿಂತಾಮಣಿ ೧೯೬೩ ನಿಜಗುಣ ಶಿವಯೋಗಿ ವಿರಚಿತ.
ವೀರಶೈವಚಿಂತಾಮಣಿ –ಮಹತ್ತುದೇವಕೃತ. ಕ.ವಿ. ಧಾರವಾಡ. ೧೯೭೦
ವೀರಶೈವ ಧರ್ಮದ ಕೈಪಿಡಿ. 1996. ಅನುಃ ಪ್ರೇಮಾದೇವಿ ಮಳಿಮಠ
ori."A hand book of Virasaivism" 1941by Dr. S.C. Nandimath
ವೀರಶೈವ ಷಟ್‌ಸ್ಥಲಸಿದ್ಧಾಂತ– ಮೈಸೂರು ಹೊಸಮಠದ ಪ್ರಕಟನೆ.
ವೀರಶೈವಾಂತ್ಯೇಷ್ಟಿ ವಿಧಿಯು ಸಟೀಕಾ–ಪ್ರ. 1904
ಎಸ್.ಜಿ.ಎನ್‌ಪ್ರೆಸ್ ಬೆಂಗಳೂರು.
ಶತಕತ್ರಯವು ಪ್ರ. 1925 ಮಗ್ಗೆ ಮಾಯಿದೇವ ವಿರಚಿತ.
ವೈ. ವಿರೂಪಾಕ್ಷಯ್ಯ, ಮೈಸೂರು.
ಶಬ್ದಾರ್ಥ ದೀಪಿಕೆ 1956. ತೆಲುಗು ನಿಘಂಟು
ಶಿವತತ್ವ ಚಿಂತಾಮಣಿ –ಲಕ್ಕಣ್ಣದಂಡೇಶ ವಿರಚಿತ.
ಪ್ರಾಚ್ಯ ಸಂಶೋಧನಾಲಯ ಪ್ರ. ೧೯೬೦

CC-0. Jangamwadi Math Collection. Digitized by eGangotri

ಶಿವಯೋಗ ಪ್ರದೀಪಿಕಾ -ಪ್ರ. 1976 -ಕ.ಅ .ಕ.ವಿ. ಧಾರವಾಡ
ಶ್ರೀ ಸಿದ್ಧೇಶ್ವರ ಪುರಾಣ -ವಿರಕ್ತತೋಂಟದಾರ್ಯ (ಸು. 1530)
ಸಂ. ಪಿ. ಆರ್. ಕರಿಬಸವಶಾಸ್ತ್ರಿ ಪ್ರ. ೧೯೬೫
ಷಟ್ ಖಂಡಾಗಮಃ -ಭಗವತ್ ಪುಷ್ಪದಂತ-ಭೂತಬಲಿ ಆಚಾರ್ಯ-ವಿರಚತಃ.
ಸಂ.ಸುಬ್ಬಯ (ಸುವ್ರತ) ಶಾಸ್ತ್ರೀ ಪ್ರ.1967
ಸಮಗ್ರ ವಚನ ಸಂಪುಟ ೨ ಪ್ರ. ೧೯೯೩
ಸರ್ವಪುರಾತನವಚನ.1959 ಸದ್ಧರ್ಮದೀಪಿಕೆ ೯
ಹರಿಹರನ ರಗಳೆಗಳು ಪ್ರ.1968 ಸಂ. ಡಾ। ಫ.ಗು. ಹಳಕಟ್ಟಿ.

2500 YEARS OF BUDDHISM 1956
Govt.of India publication.
Development of Psychological Thought in India 1962
by Prof. S. K. Ramachandra Rao
History and doctrines of Ajivikas Pub. 1981
by A. L. BASHAM
Lord Mahavira Dr. Bool Chand. Jaina cultural Research Society, Banaras Hindu University. Pub. 1948
JAINA LITERATURE IN TAMIL by Prof. A chakravarti Pub.1941 by Jaina Siddhanta Bhavana, Arra.
"The Ajivikas" by Benimadhava Barua. see Journal of the Dept. of letters Uni. of calcutta, Vol. II 1920
The Glory of Kashi Jangamawadi math
(The seat of Veerashaiva faith)
by Shivananda Shivacharya swamiji.
The Unknown Pages in the History of Kannada Literature I Pub. 1960
By prof. C. Mahadevappa.

***

CC-0. Jangamwadi Math Collection. Digitized by eGangotri

ಗ್ರಂಥಪಾಠಕ/ಪೋಷಕರ ಹೆಸರು..

ವಯಸ್ಸು: ವಿದ್ಯಾಪರಿಣತಿ ....

ಹುಟ್ಟಿದ ಊರು; ....

ವೃತ್ತಿ ....

ತಾಯಿ / ....

ತಂದೆಯವರ ಹೆಸರು..

ಒಡಹುಟ್ಟಿದವರು ....

....

ಗ್ರಂಥವನ್ನು ಕೊಂಡ ದಿನಾಂಕ ....

ಗ್ರಂಥದಾನಿಗಳ /ಬಹುಮಾನ..

ಕೊಟ್ಟವರ ಹೆಸರು ....

ಅಭಿರುಚಿ..

ಜೀವನದ ಗುರಿ ....

ಮತ್ತು ಸಾಧನೆ ....

ರಾಷ್ಟ್ರಕ್ಕೆ ಸಲ್ಲಿಸಿದ/ ....

ಸಲ್ಲಿಸಬಯಸುವ ಸೇವಾಕ್ಷೇತ್ರ ....

ಸದ್ಯದ ವಿಳಾಸ ....

....

ಮತ್ತು ....

ದೂರವಾಣಿ ....

SRI JAGADGURU VISHWARADHYA
JNANA SIMHASAN JNANAMANDIR
LIBRARY
Jangamawadi Math, Varanasi
Acc. No. 7464

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

ಪ್ರಸ್ತುತ ಗ್ರಂಥಕರ್ತರ ಇತರ ಪ್ರಮುಖ ಪ್ರಕಟನೆಗಳು

1) ಗುಬ್ಬಿ ಮಲ್ಲಣಾರ್ಯ ವಿರಚಿತ ಭಾವಚಿಂತಾರತ್ನ
2) ಹಂಪೆಯ ಹರಿಹರ ಕವಿಯ ಮನುಚೋಳ ರಗಳೆ
3) ಚೆನ್ನಂಜೇದೇವರು ಸೇರಿಸಿದ ಶಂಕರದೇವರ ಕಂದ
4) ಚಂದ್ರಕವಿಯ ಶಂಕರಶತಕ (ಶತಕ ಸಾಹಿತ್ಯದ ಒಂದು ಹೊಸ ಅಧ್ಯಾಯ – ಸಂಶೋಧನಾತ್ಮಕ ಅಜ್ಞಾತ ಶತಕಗಳ ಉದ್ಧೃತ ವೃತ್ತಗಳ ಸಹಿತ)
5) ಮುಕ್ತಿಸೋಪಾನ ಗೋರಕ್ಷಶತಕ
6) ಉದಯಾದಿತ್ಯಾಲಂಕಾರ
7) ಕಾವ್ಯಸಮರ್ಥನೆ – ಕವಿ ಷೆಲ್ಲಿಯ "A Defence of Poetry" ಎಂಬ ವಿಮರ್ಶಗ್ರಂಥದ ಕನ್ನಡ ಅನುವಾದ.
8). ಪ್ರಭುಗೀತಾ – ಆಂಗ್ಲಭಾಷಾ ಪೀಠಿಕೆಯೊಡನೆ ದೇವನಾಗರಿಲಿಪಿಯಲ್ಲಿ.
9) ವೀರಶೈವ ಸಾಹಿತ್ಯ ಮತ್ತು ಇತರ ಲೇಖನಗಳು (ಕ.ಸಾ.ಪ.ಪ್ರ)
10) ಪ್ರಭುಗೀತಾ – ಕನ್ನಡ ಲಿಪಿ ಹಾಗೂ ಪೀಠಿಕೆ ಸಹಿತ.
11) ಅರುವತ್ತು ಮೂವರ ಚಾರಿತ್ರ – ಆರಾಧ್ಯದೇವ ವಿರಚಿತ.
12) College Translation
13) The unknown Pages in the History of Kannada Literature
14) Srishaila nathankita Pancaratnam (Mythic Society Pub)

ಬರಲಿರುವ ಗ್ರಂಥಗಳು

೧) ತೋಂಟದ ಸಿದ್ಧೇಶ್ವರ ಪುರಾಣ
೨) ಜ್ಞಾನಸಾರ – ಉದಯಾದಿತ್ಯ ವಿರಚಿತ
೩) ಕಲ್ಯಾಣ ಶತಕ

* * *

CC-0. Jangamwadi Math Collection. Digitized by eGangotri